ಸೋಮವಾರ, ಮೇ 8, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಇ-ಕೋರ್ಸ್‌ನಲ್ಲಿ 'ಎಐ' ಕೋರ್ಸ್ ಪರಿಚಯ



ಬೆಂಗಳೂರು ದಕ್ಷಿಣ ಮರು ಆಯ್ಕೆಗೆ ಅಭ್ಯರ್ಥಿಗಳ ವೈಯಕ್ತಿಕ ವರ್ಚಸ್ಸಿನ ಮೇಲಾಟ; ಕೈಗೆ ಸಿಗದವರನ್ನು ಜನರು ಎಂದಿಗೂ ಒಪ್ಪಿಕೊಂಡಿಲ್ಲ

ಕಾಂಗ್ರೆಸ್–ಬಿಜೆಪಿ 'ಹ್ಯಾಟ್ರಿಕ್ ವೀರ'ರ ಸೆಣಸಾಟ

• ಆರ್. ಮಂಜುನಾಥ್

ಬೆಂಗಳೂರು: ಪಕ್ಷಗಳ ಸಿದ್ಧಾಂತಕ್ಕಿಂತ ಅಭ್ಯರ್ಥಿಗಳ ವೈಯಕ್ತಿಕ ವರ್ಚಸ್ಸೇ ಅತ್ಯಂತ ಪ್ರಮುಖವಾಗಿರುವ ಬೆಂಗಳೂರು ದಕ್ಷಿಣ ಭಾಗದ ವ್ಯಾಪ್ತಿಯಲ್ಲಿ ಗೆದ್ದ ವ್ಯಕ್ತಿಯ 'ಅಭಿವೃದ್ಧಿ ಸಾಧನೆ' ಇಲ್ಲಿ ಮಣೆ. ಹೀಗಾಗಿಯೇ ಇಲ್ಲಿ ಹ್ಯಾಟ್ರಿಕ್ ವೀರರೇ ಅಧಿಕ. ಈ ವ್ಯಾಪ್ತಿಯ 11 ಕ್ಷೇತ್ರಗಳಲ್ಲಿ ಏಳು ಮಂದಿ ಸತತವಾಗಿ ಮೂರು ಬಾರಿ ವಿಜಯ ಸಾಧಿಸಿ ನಾಲ್ಕನೇ ಬಾರಿ ವಿಧಾನಸಭೆ ಮೆಟ್ಟಿಲೇರಲು ಅಣಿಯಾಗಿದ್ದಾರೆ. ಇನ್ನುಳಿದ ನಾಲ್ಕು ಕ್ಷೇತ್ರದಲ್ಲಿ ಗೆಲುವಿನ ಸಾಧನೆಯನ್ನು ಮರು ಸ್ಥಾಪಿಸಲು ಸೆಣಸಾಟ ನಡೆಸಿದ್ದಾರೆ.

ಕಾಂಗ್ರೆಸ್‌ನ ರಾಮಲಿಂಗಾರೆಡ್ಡಿ, ಎಂ. ಕೃಷ್ಣಪ್ಪ, ಬಿಜೆಪಿಯ ಆರ್. ಅಶೋಕ, ರವಿ ಸುಬ್ರಮಣ್ಯ, ಸತೀಶ್ ರೆಡ್ಡಿ, ಎಂ.ಕೃಷ್ಣಪ್ಪ, ಮುನಿರತ್ನ ಅವರು ಹ್ಯಾಟ್ರಿಕ್ ಜಯ ಪಡೆದಿದ್ದು, ಆಯಾ ಕ್ಷೇತ್ರದಲ್ಲಿ ಮತ್ತೆ ಕಣದಲ್ಲಿದ್ದಾರೆ. ಅವರಿಗೆ ಪೈಪೋಟಿ ನೀಡಲು, ಹೊಸ ಮುಖಗಳು ಕಣಕ್ಕೆ ಬಂದಿರುವುದು ಗಮನಾರ್ಹ.

ಬೆಂಗಳೂರು ನಗರದಲ್ಲಿ ಪಕ್ಷಗಳ ಬೆಂಬಲ ಒಂದು ತೂಕವಾದರೆ, ವೈಯಕ್ತಿಕ ವರ್ಚಸ್ಸು ಮತ್ತೊಂದು ತೂಕ. ಒಂದು ಹಂತದಲ್ಲಿ ಕಾಂಗ್ರೆಸ್ ಅಥವಾ ಬಿಜೆಪಿಯ ಕೆಲವು ಅಭ್ಯರ್ಥಿಗಳಿಗೆ ವೈಯಕ್ತಿಕ ವರ್ಚಸ್ಸು ಹಾಗೂ ಕ್ಷೇತ್ರದ ಮತದಾರರೊಂದಿಗಿನ ಒಡನಾಟವೇ ಬಂಡವಾಳ. ಹೀಗಾಗಿ, ಸತತವಾಗಿ ತಮ್ಮ ಗೆಲುವಿನ ನಗೆ ಬೀರಲು ಸಾಧ್ಯವಾಗಿದೆ.

ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಬೆಂಗಳೂರಿನಲ್ಲಿ ವಿಜಯ ಸಾಧಿಸುವ ಶಾಸಕರಲ್ಲಿ ನಾಲ್ಕಾರು ಮಂದಿ ಸಚಿವರಾಗುವ ಪರಂಪರೆ ಹಿಂದಿನಿಂದಲೂ ನಡೆದುಬಂದಿದೆ. ರಾಜಧಾನಿಯ ಅಭಿವೃದ್ಧಿಯ ಜೊತೆಗೆ ಪ್ರಮುಖ ಖಾತೆಗಳನ್ನೂ ಇಲ್ಲಿನ ಶಾಸಕರು ಹೊಂದಿದ್ದಾರೆ. ಹೀಗಾಗಿಯೇ ಇಲ್ಲಿ ಜಯಕ್ಕಾಗಿ ಹಂಬಲಿಸುವ ಮನಗಳು ಅತಿಹೆಚ್ಚು. ಆದರೆ, ಪ್ರಭಾವಳಿ ಬೆಳೆಸಿಕೊಳ್ಳದ, ಜನರಿಗೆ ಸಿಗದವರನ್ನು ಜನರು ಎಂದಿಗೂ ಒಪ್ಪಿಕೊಂಡಿಲ್ಲ ಎಂಬುದು ಅಷ್ಟೇ ಸತ್ಯ.

ಬೆಂಗಳೂರು ದಕ್ಷಿಣ ಲೋಕಸಭೆ ಕ್ಷೇತ್ರದಲ್ಲಿ ಎಚ್. ಎನ್. ಅನಂತಕುಮಾರ್ ಕಾಲದಿಂದಲೂ ಬಿಜೆಪಿ ಜಯ ಗಳಿಸುತ್ತಲೇ ಬಂದಿದೆ. ಕಾಂಗ್ರೆಸ್‌ನ ಎಂ.ಕೃಷ್ಣಪ್ಪ, ಕೃಷ್ಣ ಬೈರೇಗೌಡ, ಬಿ.ಕೆ. ಹರಿಪ್ರಸಾದ್ ಅವರೂ ಇಲ್ಲಿ ಗೆಲುವು ಕಾಣಲಿಲ್ಲ. ಆದರೆ, ಇಲ್ಲಿನ ವಿಧಾನಸಭೆ ಕ್ಷೇತ್ರಗಳ ಚಿತ್ರಣ ವಿಭಿನ್ನ.

ಬಿಟಿಎಂ ಲೇಔಟ್‌ನಲ್ಲಿ ರಾಮಲಿಂಗಾರೆಡ್ಡಿ ಅವರು ಕಾಂಗ್ರೆಸ್‌ನಿಂದ ಮೂರು ಬಾರಿ ಗೆದ್ದಿದ್ದಾರೆ. ಅದಕ್ಕೂ ಮೊದಲು ಜಯನಗರದಿಂದ ನಾಲ್ಕು ಬಾರಿ ಗೆದ್ದಿದ್ದ ಅವರಿಗೆ ಕ್ಷೇತ್ರ, ಮತದಾರರು ಚಿರಪರಿಚಿತ. ಬಿಜೆಪಿ ಹಾಗೂ ಜೆಡಿಎಸ್ ಪ್ರತಿಬಾರಿಯೂ ಇಲ್ಲಿ ಅಭ್ಯರ್ಥಿಯನ್ನು ಬದಲಿಸುತ್ತಿವೆ. ಇದು ಕಾಂಗ್ರೆಸ್‌ಗೆ ಭದ್ರನೆಲೆಗೆ ಕಾರಣವಾಗಿದೆ. ಇನ್ನು ವಿಜಯನಗರದಲ್ಲೂ ಎಂ. ಕೃಷ್ಣಪ್ಪ ಅವರು ಕಾಂಗ್ರೆಸ್‌ನ ಭದ್ರಕೋಟೆ ಕಟ್ಟಿದ್ದಾರೆ. ಒಂದು ಕಾಲದ ಸ್ನೇಹಿತ ವಿ. ಸೋಮಣ್ಣ ಅವರನ್ನೂ ಕೃಷ್ಣಪ್ಪ ಮಣಿಸಿದ್ದರು. ಕಳೆದ ಬಾರಿ ಬಿಜೆಪಿಯಿಂದ ಎಚ್. ರವೀಂದ್ರ ಅತ್ಯಲ್ಪ ಮತದಿಂದ ಸೋತಿದ್ದರು. ಈ ಬಾರಿಯೂ ಕೃಷ್ಣಪ್ಪ ಅವರಿಗೆ ರವೀಂದ್ರ ಎದುರಾಳಿಯಾಗಿದ್ದು ತೀವ್ರ ಸ್ಪರ್ಧೆಯಿದೆ.

ಪದ್ಮನಾಭನಗರದಲ್ಲಿ ಬಿಜೆಪಿ ಆರ್. ಅಶೋಕ, ಈ ಬಾರಿ ಕನಕಪುರದಲ್ಲಿ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧವೂ ಸ್ಪರ್ಧಿಸಿದ್ದು, ಪದ್ಮನಾಭನಗರವನ್ನೂ ಉಳಿಸಿಕೊಳ್ಳುವ ಕಾತುರದಲ್ಲಿದ್ದಾರೆ. ಉತ್ತರಹಳ್ಳಿಯಂತಹ ಬೃಹತ್ ಕ್ಷೇತ್ರದಲ್ಲಿ ಮೂರು ಬಾರಿ ಗೆಲುವು ಸಾಧಿಸಿದ್ದ ಅಶೋಕ ಪದ್ಮನಾಭನಗರದಲ್ಲಿಯೂ ಮೂರು ಬಾರಿ ಗೆದ್ದು, 'ಡಬಲ್ ಹ್ಯಾಟ್ರಿಕ್' ಸಾಧಿಸಿದ್ದಾರೆ. ಇದೀಗ ಮತ್ತೊಂದು ಬಾರಿ ವಿಧಾನಸಭೆ ಪ್ರವೇಶಿಸಲು ಕಣದಲ್ಲಿದ್ದು, ಕಾಂಗ್ರೆಸ್‌ನಿಂದ ರಘುನಾಥ ರೆಡ್ಡಿ ತೀವ್ರ ಸ್ಪರ್ಧೆ ನೀಡಿದ್ದಾರೆ. ಶಿವಕುಮಾರ್ ತಾವೇ ಇಲ್ಲಿಯ ಅಭ್ಯರ್ಥಿ ಎಂದು ಹೇಳಿಕೊಂಡಿರುವುದು ಹೆಚ್ಚಿನ ಸ್ಪರ್ಧೆಗೆ ಕಾರಣವಾಗಿದೆ.

ಬಸವನಗುಡಿಯಲ್ಲಿ ರವಿ ಸುಬ್ರಮಣ್ಯ, ಬೊಮ್ಮನಹಳ್ಳಿಯಲ್ಲಿ ಸತೀಶ್ ರೆಡ್ಡಿ, ಬೆಂಗಳೂರು ದಕ್ಷಿಣದಲ್ಲಿ ಎಂ. ಕೃಷ್ಣಪ್ಪ ಅವರು ಬಿಜೆಪಿಯಿಂದ ಮೂರು ಬಾರಿ ಗೆಲುವು ಸಾಧಿಸಿದ್ದಾರೆ. ರವಿ ಸುಬ್ರಮಣ್ಯ, ಸತೀಶ್ ರೆಡ್ಡಿ, ಎಂ. ಕೃಷ್ಣಪ್ಪ ಅವರಿಗೂ ಪ್ರತಿ ಬಾರಿ ಎದುರಾಳಿಗಳು ಬದಲಾಗುತ್ತಿದ್ದಾರೆ. ಮೂರೂ ಕ್ಷೇತ್ರದಲ್ಲಿ ಕಾಂಗ್ರೆಸ್ ಹೆಚ್ಚಿನ ಪ್ರತಿರೋಧ ತೋರಿದ್ದರೂ, ಜೆಡಿಎಸ್ ಮತಗಳನ್ನು ಸೆಳೆಯುತ್ತಿದ್ದವು. ಈ ಬಾರಿಯೂ ಈ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪ್ರಮುಖ ಎದುರಾಳಿಯಾಗಿದೆ. ಬಿಜೆಪಿಯಿಂದ ಕ್ಷೇತ್ರವನ್ನು ಕಸಿದುಕೊಳ್ಳಲು ಅಭ್ಯರ್ಥಿಗಳು ಕಸರತ್ತು ನಡೆಸುತ್ತಿದ್ದಾರೆ. ಬಸವನಗುಡಿಯಲ್ಲಿ ಯು.ಬಿ. ವೆಂಕಟೇಶ್, ಬೊಮ್ಮನಹಳ್ಳಿ ಚಿತ್ರ ನಿರ್ಮಾಪಕ ಉಮಾಪತಿ ಗೌಡ, ಬೆಂಗಳೂರು ದಕ್ಷಿಣದಲ್ಲಿ ಆರ್.ಕೆ. ರಮೇಶ್ ಕಾಂಗ್ರೆಸ್‌ನಿಂದ ಪೈಪೋಟಿ ನೀಡುತ್ತಿದ್ದಾರೆ. ಆರ್.ಕೆ. ರಮೇಶ್ ಅವರಿಗೆ ಬಂಡಾಯ ಅಭ್ಯರ್ಥಿ ರಾಜಗೋಪಾಲರೆಡ್ಡಿ ಅವರದ್ದೇ ಸಮಸ್ಯೆಯಾಗಿದೆ. ಜೆಡಿಎಸ್ ಎಂದಿನಂತೆ ಹೆಚ್ಚಿನ ಮತಗಳನ್ನು ಸೆಳೆದು, ಅಚ್ಚರಿ ಮೂಡಿಸುವ ಕಾತುರದಲ್ಲಿದೆ.

ಗೋವಿಂದರಾಜನಗರದಲ್ಲಿ 'ವಿ. ಸೋಮಣ್ಣ ನಾಮಬಲ'ವನ್ನೇ ಬಿಜೆಪಿಯ ಉಮೇಶ್ ಶೆಟ್ಟಿ ಅವಲಂಬಿಸಿಕೊಂಡಿದ್ದಾರೆ. ಕಾಂಗ್ರೆಸ್‌ನ ಪ್ರಿಯಕೃಷ್ಣ ಅವರು ಈ ಬಾರಿ ಏನಾದರೂ ಸರಿ ಕ್ಷೇತ್ರವನ್ನು ಮತ್ತೆ ಗೆಲ್ಲಬೇಕೆಂಬ ಉತ್ಸಾಹದಲ್ಲಿದ್ದಾರೆ. ಇದಕ್ಕೆ ಅವರ ತಂದೆ, ಪಕ್ಷದ ಕ್ಷೇತ್ರದ ಅಭ್ಯರ್ಥಿ ಎಂ. ಕೃಷ್ಣಪ್ಪ ಅವರು ಬೆನ್ನೆಲುಬಾಗಿದ್ದಾರೆ. ಕ್ಷೇತ್ರದಲ್ಲಿ ಉತ್ತಮ ಹಿಡಿತ ಹೊಂದಿದ್ದ ಸೋಮಣ್ಣ ಇಲ್ಲಿಗೆ ಬಂದು ಪ್ರಚಾರ ಮಾಡಲೂ ಬಿಡುವಿಲ್ಲದಿರುವುದು ಕಾಂಗ್ರೆಸ್‌ಗೆ ಹೆಚ್ಚಿನ ಬಲ ಬಂದಂತಾಗಿದೆ.

ಮತದಾರರ ಗುರುತಿನ ಚೀಟಿ ವಿವಾದದಲ್ಲಿ ಚುನಾವಣೆಯೇ ತಡವಾಗಿದ್ದ ಹಾಗೂ ಬೇಕಿಲ್ಲದ ಅಭಿವೃದ್ಧಿಯ ವಿಷಯದಲ್ಲಿ ಸದಾ ವಿವಾದದಲ್ಲಿರುವಂತೆ ಮಾಡಿರುವ ಮುನಿರತ್ನ ರಾಜರಾಜೇಶ್ವರಿ ನಗರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ. ಎರಡು ಬಾರಿ ಕಾಂಗ್ರೆಸ್‌ನಿಂದ, ಒಂದು ಬಾರಿ ಬಿಜೆಪಿಯಿಂದ ಗೆಲುವು ಸಾಧಿಸಿರುವ ಮುನಿರತ್ನ ಅವರನ್ನು ಮಣಿಸಲು ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್ ಅಭ್ಯರ್ಥಿ ಕುಸುಮಾ ಅವರಿಗೆ ಬೆನ್ನೆಲುಬಾಗಿ ನಿಂತಿದ್ದಾರೆ. 2019ರಲ್ಲಿ ಕಾಂಗ್ರೆಸ್ ತೊರೆದು ಬಿಜೆಪಿಯಿಂದ ಸ್ಪರ್ಧಿಸಿದ್ದ ಮುನಿರತ್ನಗೆ ಕುಸುಮಾ ಪ್ರತಿಸ್ಪರ್ಧಿಯಾಗಿದ್ದರು. ಈ ಬಾರಿ ಡಿ.ಕೆ. ಸುರೇಶ್ ಜೊತೆಗಿರುವುದರಿಂದ ಪೈಪೋಟಿ ಹೆಚ್ಚಾಗಿದೆ.

ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರದಲ್ಲಿ ಎರಡನೇ ಬಾರಿ ವಿಜಯ ಸಾಧಿಸಬೇಕೆಂದು ಬಿಜೆಪಿಯ ಉದಯ್ ಗರುಡಾಚಾರ್ ಹಾಗೂ ಕಾಂಗ್ರೆಸ್‌ನ ಆರ್.ವಿ. ದೇವರಾಜ್ ಮತ್ತೆ ಸೆಣಸುತ್ತಿದ್ದಾರೆ. 2013ರಲ್ಲಿ ಆರ್.ವಿ. ದೇವರಾಜ್ ಜಯ ಸಾಧಿಸಿದ್ದರೆ, 2018ರಲ್ಲಿ ಉದಯ್ ಗರುಡಾಚಾರ್ ಗೆದ್ದಿದ್ದರು. ಮೂರನೇ ಬಾರಿಗೆ ಇಬ್ಬರೂ ಸ್ಪರ್ಧಿಗಳಾಗಿದ್ದು, ಜಿದ್ದಾಜಿದ್ದಿಯ ಸ್ಪರ್ಧೆ ಇದೆ. ಕಾಂಗ್ರೆಸ್‌ನಿಂದ ಸ್ಪರ್ಧೆ ಬಯಸಿದ್ದ ಕೆಜಿಎಫ್ ಬಾಬು ಸ್ವತಂತ್ರವಾಗಿ ಕಣದಲ್ಲಿರುವುದು ದೇವರಾಜ್ ಮತ ಸೆಳೆಯುವ ಲಕ್ಷಣಗಳಿವೆ.


ಜಯನಗರದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಮತ್ತೆ ಕ್ಷೇತ್ರವನ್ನು ಮರುಪಡೆಯಲು ಪೈಪೋಟಿಯಲ್ಲಿವೆ. ಎರಡು ಬಾರಿ ಕ್ಷೇತ್ರ ಗೆದ್ದಿದ್ದ ಬಿಜೆಪಿ, ವಿಜಯಕುಮಾರ್ ನಿಧನದಿಂದ ಕಳೆದ ಬಾರಿ ಕಾಂಗ್ರೆಸ್‌ನ ಸೌಮ್ಯ ರೆಡ್ಡಿ ಅವರಿಂದ ಸೋಲು ಅನುಭವಿಸಿತು. ಅಪ್ಪ ರಾಮಲಿಂಗಾರೆಡ್ಡಿ– ಮಗಳು ಸೌಮ್ಯ ರೆಡ್ಡಿ ಹಾಗೂ ಜೆಡಿಎಸ್ ಒಂದಾಗಿದ್ದರಿಂದ ಬಿಜೆಪಿಗೆ ಸೋಲಾಯಿತು ಎನ್ನುತ್ತಿರುವ ಕಾರ್ಯಕರ್ತರು, ಸಿ.ಕೆ. ರಾಮಮೂರ್ತಿಯ ಜೊತೆಗಿದ್ದು ಬಿಜೆಪಿ ತೆಕ್ಕೆಗೆ ಮತ್ತೆ ಕ್ಷೇತ್ರವನ್ನು ತೆಗೆದುಕೊಳ್ಳುವ ಉತ್ಸಾಹದಲ್ಲಿದ್ದಾರೆ.

ಒಟ್ಟಾರೆ 11 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿಯ ವಿಭಿನ್ನ ಲೆಕ್ಕಾಚಾರಗಳಿದ್ದು, ವ್ಯಕ್ತಿಯ ವರ್ಚಸ್ಸು, ಪಕ್ಷಗಳ ಸಿದ್ಧಾಂತ ಹಾಗೂ ಸ್ಥಳೀಯ ಸಮಸ್ಯೆಗಳೇ ಕೇಂದ್ರೀಕೃತವಾಗಿವೆ. 11ರಲ್ಲಿ 7 ಬಿಜೆಪಿ, 4 ಕಾಂಗ್ರೆಸ್ ಶಾಸಕರಿದ್ದು, ಅವುಗಳನ್ನು ಉಳಿಸಿಕೊಳ್ಳುವ ಜೊತೆಗೆ ಇನ್ನಷ್ಟು ಗೆಲ್ಲುವ ಉತ್ಸಾಹ ಎರಡೂ ರಾಷ್ಟ್ರೀಯ ಪಕ್ಷಗಳಲ್ಲಿದೆ.

ಪಕ್ಷಗಳ ಬಲಾಬಲ

ಕ್ಷೇತ್ರ	2013	2018
ರಾಜರಾಜೇಶ್ವರಿನಗರ	ಕಾಂಗ್ರೆಸ್	ಕಾಂಗ್ರೆಸ್/ ಬಿಜೆಪಿ
ಬೆಂಗಳೂರು ದಕ್ಷಿಣ	ಬಿಜೆಪಿ	ಬಿಜೆಪಿ
ಆನೇಕಲ್	ಕಾಂಗ್ರೆಸ್	ಕಾಂಗ್ರೆಸ್
ಗೋವಿಂದರಾಜನಗರ	ಕಾಂಗ್ರೆಸ್	ಬಿಜೆಪಿ
ವಿಜಯನಗರ	ಕಾಂಗ್ರೆಸ್	ಕಾಂಗ್ರೆಸ್
ಬಸವನಗುಡಿ	ಬಿಜೆಪಿ	ಬಿಜೆಪಿ
ಪದ್ಮನಾಭನಗರ	ಬಿಜೆಪಿ	ಬಿಜೆಪಿ
ಬಿಟಿಎಂ ಲೇಔಟ್	ಕಾಂಗ್ರೆಸ್	ಕಾಂಗ್ರೆಸ್
ಜಯನಗರ	ಬಿಜೆಪಿ	ಕಾಂಗ್ರೆಸ್
ಬೊಮ್ಮನಹಳ್ಳಿ	ಬಿಜೆಪಿ	ಬಿಜೆಪಿ
ಚಿಕ್ಕಪೇಟೆ	ಕಾಂಗ್ರೆಸ್	ಬಿಜೆಪಿ

ರಾಜರಾಜೇಶ್ವರಿನಗರ ವಿಧಾನಸಭೆ ಕ್ಷೇತ್ರದಲ್ಲಿ 2018ರಲ್ಲಿ ಕಾಂಗ್ರೆಸ್‌ನಿಂದ ಗೆದ್ದಿದ್ದ ಮುನಿರತ್ನ, 2019ರಲ್ಲಿ ರಾಜೀನಾಮೆ ನೀಡಿದ್ದರು. ನಂತರ ನಡೆದ ಉಪ ಚುನಾವಣೆಯಲ್ಲಿ ಮುನಿರತ್ನ ಬಿಜೆಪಿಯಿಂದ ಸ್ಪರ್ಧಿಸಿ ವಿಜಯ ಸಾಧಿಸಿದ್ದರು.




ರಾಮಲಿಂಗಾರೆಡ್ಡಿ | ಆರ್. ಅಶೋಕ | ಎಂ. ಕೃಷ್ಣಪ್ಪ | ರವಿ ಸುಬ್ರಮಣ್ಯ | ಎಂ. ಕೃಷ್ಣಪ್ಪ | ಮುನಿರತ್ನ | ಸತೀಶ್ ರೆಡ್ಡಿ

ಬೆಂಗಳೂರು ಉತ್ತರ 'ರಾಜಕೀಯ ಸಮೀಕರಣ' ಬದಲಿಸಿದ ಪಕ್ಷಾಂತರ

'ಆಪರೇಷನ್ ಕಮಲ'ದ 'ಫಲ' ಕಿತ್ತುಕೊಳ್ಳಲು 'ಕೈ' ಛಲ

• ರಾಜೇಶ್ ರೈ ಚಟ್ಲ

ಬೆಂಗಳೂರು: ಒಂದು ಕಾಲಕ್ಕೆ ಕಾಂಗ್ರೆಸ್ಸಿನ ಭದ್ರಕೋಟೆಯಾಗಿದ್ದ ಬೆಂಗಳೂರಿನ 'ಉತ್ತರ' ಭಾಗ, ವಿಧಾನಸಭಾ ಕ್ಷೇತ್ರಗಳ ಮರುವಿಂಗಡಣೆ ಬಳಿಕ ಜಾತಿ ಸಮೀಕರಣ, ಕ್ಷೇತ್ರಗಳ ಸ್ವರೂಪ, ರಾಜಕೀಯ ಪಲ್ಲಟಗಳ ಕಾರಣಕ್ಕೆ ಸಂಪೂರ್ಣ ಬದಲಾಗಿದೆ.

2018ರ ಚುನಾವಣೆಯಲ್ಲಿ ಈ ಭಾಗದ ಎಂಟು ಕ್ಷೇತ್ರಗಳ ಪೈಕಿ, ಐದರಲ್ಲಿ ಕಾಂಗ್ರೆಸ್ (ಕೆ.ಆರ್. ಪುರ, ಯಶವಂತಪುರ, ಬ್ಯಾಟರಾಯನಪುರ, ಹೆಬ್ಬಾಳ, ಪುಲಕೇಶಿನಗರ), ಎರಡರಲ್ಲಿ ಜೆಡಿಎಸ್ (ಮಹಾಲಕ್ಷ್ಮಿ ಲೇಔಟ್, ದಾಸರಹಳ್ಳಿ), ಒಂದರಲ್ಲಿ ಬಿಜೆಪಿ (ಮಲ್ಲೇಶ್ವರ) ಗೆಲುವು ಸಾಧಿಸಿತ್ತು. ಆ ಬಳಿಕ 'ಆಪರೇಷನ್ ಕಮಲ'ಕ್ಕೆ ಬಲಿಯಾಗಿ ಕೆ.ಆರ್. ಪುರ, ಯಶವಂತಪುರ ಮತ್ತು ಮಹಾಲಕ್ಷ್ಮಿ ಲೇಔಟ್‌ನ ಶಾಸಕರು ಬಿಜೆಪಿಗೆ ಜಿಗಿದಿದ್ದರು. ಹೀಗಾಗಿ, 2019ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಈ ಮೂರೂ ಕ್ಷೇತ್ರಗಳು 'ಕಮಲ' ಪಾಲಾಗಿವೆ.

ಬದಲಾದ ರಾಜಕೀಯ ಚಿತ್ರಣದ ಹಿನ್ನೆಲೆಯಲ್ಲಿ, ಈ ಬಾರಿ ಪುಲಕೇಶಿನಗರದಲ್ಲಿ ಬಿಎಸ್‌ಪಿ–ಕಾಂಗ್ರೆಸ್, ಯಶವಂತಪುರ ಮತ್ತು ದಾಸರಹಳ್ಳಿಯಲ್ಲಿ ಜೆಡಿಎಸ್–ಬಿಜೆಪಿ, ಉಳಿದ ಐದು ಕ್ಷೇತ್ರಗಳಲ್ಲಿ ಕಾಂಗ್ರೆಸ್ – ಬಿಜೆಪಿ ನಡುವೆ ನೇರ ಗುದ್ದಾಟವಿದೆ.

ಕಾಂಗ್ರೆಸಿನಿಂದ ಬಿಜೆಪಿಗೆ ಜಿಗಿದು, ಉಪಚುನಾವಣೆಯಲ್ಲಿ ಮರು ಆಯ್ಕೆಯಾದ ಬೈರತಿ ಬಸವರಾಜು ಕೆ.ಆರ್. ಪುರದಲ್ಲಿ ಮತ್ತೆ ಬಿಜೆಪಿ ಹುರಿಯಾಳು. ಅವರು ಸುಲಭ ಗೆಲುವಿನ ನಿರೀಕ್ಷೆಯಲ್ಲಿದ್ದಾರೆ. ಮಾಜಿ ಸಚಿವ ಎ. ಕೃಷ್ಣಪ್ಪ ಅವರ ಅಣ್ಣನ ಮಗ, ಕೆ.ಆರ್. ಪುರ ಪುರಸಭೆ ಮಾಜಿ ಅಧ್ಯಕ್ಷ ಡಿ.ಕೆ. ಮೋಹನ್ ಕಾಂಗ್ರೆಸ್ ಅಭ್ಯರ್ಥಿ. ಬೈರತಿ ಬಸವರಾಜು ವಿರುದ್ಧದ ಭ್ರಷ್ಟಚಾರ ಆರೋಪ, ಪಕ್ಷದ ಸಾಂಪ್ರದಾಯಿಕ ಮತಗಳು ಕೈಹಿಡಿಯಬಹುದು ಎನ್ನುತ್ತಾರೆ ಡಿ.ಕೆ. ಮೋಹನ್.

ಮಲ್ಲೇಶ್ವರದಲ್ಲಿ 2004ರಲ್ಲಿ ಕಾಂಗ್ರೆಸ್‌ನ ಎಂ.ಆರ್. ಸೀತಾರಾಂ ವಿರುದ್ಧ ಸೋತಿದ್ದ ಬಿಜೆಪಿಯ ಡಾ.ಸಿ.ಎನ್. ಅಶ್ವತ್ಥನಾರಾಯಣ, 2008ರಲ್ಲಿ ಎಂ.ಆರ್. ಸೀತಾರಾಂ ಅವರನ್ನು ಮಣಿಸಿ ಮೊದಲ ಬಾರಿಗೆ ಆಯ್ಕೆಯಾಗಿದ್ದರು. ನಂತರದ ಎರಡೂ ಚುನಾವಣೆಗಳಲ್ಲಿ ಜಯಭೇರಿ ಬಾರಿಸಿರುವ ಅಶ್ವತ್ಥನಾರಾಯಣ, ನಾಲ್ಕನೇ ಬಾರಿಗೆ ಕಣದಲ್ಲಿದ್ದಾರೆ. ಆಡಳಿತ ವಿರೋಧಿ ಭಾವನೆ ಮತ ಪರಿವರ್ತಿಸಬಹುದು ಎನ್ನುತ್ತಾರೆ ಕಾಂಗ್ರೆಸ್ ಅಭ್ಯರ್ಥಿ, ಯುವ ಉದ್ಯಮಿ ಅನೂಪ್ ಅಯ್ಯಂಗಾರ್. ಜೆಡಿಎಸ್‌ನಿಂದ ಯುವ ಮುಖಂಡ ಎ. ಉತ್ಕರ್ಷ ಇದ್ದಾರೆ.

2016ರವರೆಗೂ ಬಿಜೆಪಿ ಭದ್ರಕೋಟೆಯಾಗಿದ್ದ ಹೆಬ್ಬಾಳವನ್ನು 2018ರಲ್ಲಿ ಕಾಂಗ್ರೆಸ್ ತೆಕ್ಕೆಗೆ ತಂದಿರುವ ಬೈರತಿ ಸುರೇಶ್, ಮತ್ತೊಂದು ಗೆಲುವಿನ ನಿರೀಕ್ಷೆಯಲ್ಲಿದ್ದಾರೆ. ಕೊಳೆಗೇರಿ ಪ್ರದೇಶದ ಜನರಿಗೆ ಸಹಾಯ, ಕೋವಿಡ್ ಆಸ್ಪತ್ರೆ, ಉಚಿತ ಡಯಾಲಿಸಿಸ್ ಆಸ್ಪತ್ರೆ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಗಳ ಮೂಲಕ ಕ್ಷೇತ್ರದ ಜನರನ್ನು ಸೆಳೆದಿದ್ದಾರೆ. ಅವುಗಳ ಜೊತೆ ಸರ್ಕಾರದ ಆಡಳಿತ ವಿರೋಧಿ ಅಲೆಯೂ ಸೇರಿ ಮತ್ತೊಮ್ಮೆ ಆಯ್ಕೆಯಾದರೆ ಯಾವುದೇ ಅಚ್ಚರಿಯಿಲ್ಲ. ಬಿಜೆಪಿಯಿಂದ ಸತತವಾಗಿ ಆಯ್ಕೆಯಾಗಿದ್ದ ಕಟ್ಟಾಸುಬ್ರಹ್ಮಣ್ಯನಾಯ್ಡು ಪುತ್ರ ಜಗದೀಶ್ ಕಟ್ಟಾ, ಸುರೇಶ್ ಎದುರಾಳಿ. ಮುಸ್ಲಿಂ ಮತಗಳ ಮೇಲೆ ಕಣ್ಣಿಟ್ಟು ಜೆಡಿಎಸ್‌ನ ಸಯ್ಯದ್ ಮೊಹಿದ್ ಅಲ್ತಾಫ್ ಕಣದಲ್ಲಿದ್ದಾರೆ.


'ಉತ್ತರ'ದ ಕ್ಷೇತ್ರಗಳ ಪೈಕಿ ಕುತೂಹಲವಿರುವುದು ಪರಿಶಿಷ್ಟ ಜಾತಿಗೆ ಮೀಸಲಾದ ಪುಲಕೇಶಿನಗರದಲ್ಲಿ. 2008ರಲ್ಲಿ ಕಾಂಗ್ರೆಸ್ಸಿನ ಬಿ. ಪ್ರಸನ್ನಕುಮಾರ್, ಜೆಡಿಎಸ್‌ನ ಅಖಂಡ ಶ್ರೀನಿವಾಸಮೂರ್ತಿಯನ್ನು ಸೋಲಿಸಿದ್ದರು. 2013ರಲ್ಲಿ ಜೆಡಿಎಸ್‌ನಿಂದ, 2018ರಲ್ಲಿ ಕಾಂಗ್ರೆಸ್‌ನಿಂದ ಗೆಲುವು ಕಂಡ ಅಖಂಡ ಶ್ರೀನಿವಾಸಮೂರ್ತಿಗೆ ಕೆ.ಜಿ. ಹಳ್ಳಿ, ಡಿ.ಜಿ. ಹಳ್ಳಿಯಲ್ಲಿ 2020ರಲ್ಲಿ ನಡೆದ ಗಲಭೆ ನೆಪವಾಗಿಟ್ಟು ಕಾಂಗ್ರೆಸ್ ಟಿಕೆಟ್ ನೀಡಿಲ್ಲ. ಹೀಗಾಗಿ, 'ಆನೆ' (ಬಿಎಸ್‌ಪಿ) ಏರಿರುವ ಅವರು ಕ್ಷೇತ್ರ ಕಿತ್ತುಕೊಳ್ಳುವ ಉಮೇದಿನಲ್ಲಿದ್ದಾರೆ. ಕಾಂಗ್ರೆಸ್‌ನಿಂದ ಎ.ಸಿ. ಶ್ರೀನಿವಾಸ್ ಕಣದಲ್ಲಿದ್ದಾರೆ. ಬಿಜೆಪಿಯಿಂದ ಎ. ಮುರುಳಿ, ಜೆಡಿಎಸ್‌ನಿಂದ ಅನುರಾಧಾ ಕಣದಲ್ಲಿದ್ದಾರೆ.

2008ರ ಚುನಾವಣೆಯಲ್ಲಿ ಕಾಂಗ್ರೆಸ್ಸಿನಿಂದ ಕಣಕ್ಕಿಳಿದಿದ್ದ ಎಸ್.ಟಿ. ಸೋಮಶೇಖರ್ ವಿರುದ್ಧ ಕೇವಲ 1,082 ಮತಗಳ ಅಂತರದಿಂದ ಬಿಜೆಪಿಯ ಶೋಭಾ ಕರಂದ್ಲಾಜೆ ಗೆಲುವು ಕಂಡಿದ್ದರು. 2013 ಮತ್ತು 2018ರಲ್ಲಿ ಮತ್ತೆ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಎಸ್.ಟಿ. ಸೋಮಶೇಖರ್, ಜೆಡಿಎಸ್‌ನ ಟಿ.ಎನ್. ಜವರಾಯಿಗೌಡ ವಿರುದ್ಧ ಜಯ ಸಾಧಿಸಿದ್ದರು. 'ಆಪರೇಷನ್ ಕಮಲ'ದ ಬಲೆಗೆ ಬಿದ್ದ ಸೋಮಶೇಖರ್ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿ, 2019ರ ಉಪಚುನಾವಣೆಯಲ್ಲಿ ಬಿಜೆಪಿಯಿಂದ ಗೆದ್ದು ಸಚಿವರಾದರು. 'ಹ್ಯಾಟ್ರಿಕ್' ಸೋಲಿನ ಅನುಕಂಪ ಈ ಬಾರಿ ಗೆಲುವಿನ ದಡ ಸೇರಿಸಬಹುದು ಎನ್ನುವುದು ಜವರಾಯಿಗೌಡರ ಲೆಕ್ಕಾಚಾರ.

ದಾಸರಹಳ್ಳಿ ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಶಾಸಕ ಆರ್. ಮಂಜುನಾಥ್ ಮತ್ತು ಬಿಜೆಪಿಯಿಂದ ಮಾಜಿ ಶಾಸಕ ಎಸ್. ಮುನಿರಾಜು ಅಖಾಡದಲ್ಲಿದ್ದಾರೆ. ಕಾಂಗ್ರೆಸ್ಸಿನಿಂದ ಸ್ಥಳೀಯ ಮುಖಂಡ ಜಿ. ಧನಂಜಯ ಕಣದಲ್ಲಿದ್ದಾರೆ. 2008 ಮತ್ತು 2013ರ ಚುನಾವಣೆಯಲ್ಲಿ ಆಯ್ಕೆಯಾಗಿದ್ದ ಎಸ್. ಮುನಿರಾಜು ಅವರ 'ಹ್ಯಾಟ್ರಿಕ್' ಕನಸಿಗೆ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಗನ್‌ಮ್ಯಾನ್ ಆಗಿದ್ದು, ಸರ್ಕಾರಿ ಕೆಲಸಕ್ಕೆ ರಾಜೀನಾಮೆ ನೀಡಿ ರಾಜಕೀಯ ಪ್ರವೇಶಿಸಿದ್ದ ಆರ್. ಮಂಜುನಾಥ್ 2018ರಲ್ಲಿ ತಡೆ ಒಡ್ಡಿದ್ದರು. ಭೂ ಹಗರಣ ಸೇರಿದಂತೆ ಹಲವು ಹಗರಣಗಳು ಆಗ ಮುನಿರಾಜುಗೆ ಕಂಟಕವಾಗಿತ್ತು. ಈ ಬಾರಿ ಆಡಳಿತ ವಿರೋಧಿ ಅಲೆಯ ಮೇಲೆ ತೇಲಬಹುದು ಎನ್ನುವುದು ಮಂಜುನಾಥ್ ನಿರೀಕ್ಷೆ.

ಬ್ಯಾಟರಾಯನಪುರದಲ್ಲಿ 'ಹ್ಯಾಟ್ರಿಕ್' ಗೆಲುವು ಕಂಡಿರುವ ಕಾಂಗ್ರೆಸ್ಸಿನ ಹೊಸ ತಲೆಮಾರಿನ ನಾಯಕ ಕೃಷ್ಣ ಬೈರೇಗೌಡರ ನಾಗಾಲೋಟಕ್ಕೆ ಕಡಿವಾಣ ಹಾಕಲು ಬಿಜೆಪಿ ಕಸರತ್ತು ನಡೆಸಿದೆ. ಪಕ್ಷದ ವರ್ಚಸ್ಸಿಗಿಂತ, ವೈಯಕ್ತಿಕ ವರ್ಚಸ್ಸನ್ನೇ ಮುಂದು ಮಾಡಿಕೊಂಡಿರುವ ಅವರು, ಅಭಿವೃದ್ಧಿ ಕಾರ್ಯಗಳನ್ನೇ ನೆಚ್ಚಿದ್ದಾರೆ. ತಮ್ಮ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಎಚ್.ಸಿ. ತಮ್ಮೇಶ್ ಗೌಡರಿಗೆ ಬಿಜೆಪಿ ಟಿಕೆಟ್ ಕೊಡಿಸುವಲ್ಲಿ ಬಿ.ವೈ. ವಿಜಯೇಂದ್ರ ಯಶಸ್ವಿಯಾಗಿದ್ದಾರೆ. ಆದರೆ, ಹೊರಗಿನವರಾದ ತಮ್ಮೇಶ್ ಗೌಡ ಅಭ್ಯರ್ಥಿಯಾಗಿರುವುದು ಸ್ಥಳೀಯ ಬಿಜೆಪಿ ನಾಯಕರಿಗೆ ಅಸಮಾಧಾನ ಉಂಟು ಮಾಡಿದೆ. ಈ ಒಳ ಏಟು ಬಿಜೆಪಿಗೆ ಮುಳುವಾಗುವ ಸಾಧ್ಯತೆಯೇ ಹೆಚ್ಚು. ಜೆಡಿಎಸ್‌ನಿಂದ ನಾಗರಾಜ್ ಕಣದಲ್ಲಿದ್ದಾರೆ.

ಮಹಾಲಕ್ಷ್ಮಿ ಲೇಔಟ್ ಕ್ಷೇತ್ರದಲ್ಲಿ 'ವ್ಯಕ್ತಿ'ಬಲಕ್ಕೆ ಹೆಚ್ಚು ಮಣೆ. 2008ರಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿ ಮೂರನೇ ಸ್ಥಾನ ಗಳಿಸಿದ್ದ ಕೆ. ಗೋಪಾಲಯ್ಯ, 2013 ಮತ್ತು 2018ರಲ್ಲಿ ಮತ್ತೆ ಜೆಡಿಎಸ್‌ನಿಂದ ಕಣಕ್ಕಿಳಿದು ಆಯ್ಕೆಯಾದರು. 'ಆಪರೇಷನ್ ಕಮಲ'ದಿಂದಾಗಿ ಬಿಜೆಪಿಗೆ ಜಿಗಿದ ಅವರು 2019ರ ಉಪ ಚುನಾವಣೆಯಲ್ಲಿ ಮರು ಆಯ್ಕೆಯಾಗಿ ಸಚಿವರೂ ಆದರು. ಗೋಪಾಲಯ್ಯ ವಿರುದ್ಧ ಸ್ಪರ್ಧಿಸಲು ಅಂದು ಕಾಂಗ್ರೆಸ್, ಜೆಡಿಎಸ್‌ನಲ್ಲಿ ಪ್ರಬಲ ಅಭ್ಯರ್ಥಿಗಳೇ ಇರಲಿಲ್ಲ. ಆಡಳಿತ ವಿರೋಧಿ ಅಲೆ ಮತ ತಂದುಕೊಡಬಹುದೆಂಬ ಭಾವನೆ ಕಾಂಗ್ರೆಸ್ ಅಭ್ಯರ್ಥಿ, ಮಹಾಲಕ್ಷ್ಮಿಪುರ ವಾರ್ಡ್‌ನ ಪಾಲಿಕೆ ಸದಸ್ಯರಾಗಿದ್ದ ಕೇಶವಮೂರ್ತಿ ಅವರದ್ದು. ಜೆಡಿಎಸ್‌ನಿಂದ ಸ್ಥಳೀಯ ನಾಯಕ ಕೆ.ಸಿ. ರಾಜಣ್ಣ, ಎಎಪಿಯ ರಾಜ್ಯ ನಾಯಕಿ ಶಾಂತಲಾ ದಾಮ್ಲೆ ಕಣದಲ್ಲಿದ್ದಾರೆ.




ಬೈರತಿ ಸುರೇಶ್ | ಎಸ್. ಟಿ. ಸೋಮಶೇಖರ್ | ಅಖಂಡ ಶ್ರೀನಿವಾಸಮೂರ್ತಿ | ಎಸ್. ಮುನಿರಾಜು | ಕೆ.ಗೋಪಾಲಯ್ಯ | ಕೃಷ್ಣ ಬೈರೇಗೌಡ | ಡಾ. ಸಿ.ಎನ್. ಅಶ್ವತ್ಥನಾರಾಯಣ

ಪಕ್ಷಗಳ ಬಲಾಬಲ

ಕ್ಷೇತ್ರ	2008	2013	2018	2019 ಉಪಚುನಾವಣೆ
ಕೆ.ಆರ್. ಪುರ	ಕಾಂಗ್ರೆಸ್	ಕಾಂಗ್ರೆಸ್	ಕಾಂಗ್ರೆಸ್	ಬಿಜೆಪಿ
ಮಲ್ಲೇಶ್ವರ	ಬಿಜೆಪಿ	ಬಿಜೆಪಿ	ಬಿಜೆಪಿ	–
ಹೆಬ್ಬಾಳ	ಬಿಜೆಪಿ	ಬಿಜೆಪಿ	ಕಾಂಗ್ರೆಸ್	–
ಪುಲಕೇಶಿನಗರ	ಕಾಂಗ್ರೆಸ್	ಜೆಡಿಎಸ್	ಕಾಂಗ್ರೆಸ್	–
ಯಶವಂತಪುರ	ಬಿಜೆಪಿ	ಕಾಂಗ್ರೆಸ್	ಕಾಂಗ್ರೆಸ್	ಬಿಜೆಪಿ
ದಾಸರಹಳ್ಳಿ	ಬಿಜೆಪಿ	ಬಿಜೆಪಿ	ಜೆಡಿಎಸ್	–
ಬ್ಯಾಟರಾಯನಪುರ	ಕಾಂಗ್ರೆಸ್	ಕಾಂಗ್ರೆಸ್	ಕಾಂಗ್ರೆಸ್	–
ಮಹಾಲಕ್ಷ್ಮಿ ಲೇಔಟ್	ಕಾಂಗ್ರೆಸ್	ಜೆಡಿಎಸ್	ಜೆಡಿಎಸ್	ಬಿಜೆಪಿ

ಸಾಕ್ಷಾತ್ ಸಮೀಕ್ಷೆ

'ಯಥಾಸ್ಥಿತಿ' ಮುರಿಯಲು ಕೈ-ಕಮಲ ಪೈಪೋಟಿ

ಬೆಂಗಳೂರು ಕೇಂದ್ರ ಹಲವು ಕ್ಷೇತ್ರಗಳಲ್ಲಿ ಶಾಸಕರದೇ ಪ್ರಾಬಲ್ಯ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಆಡಳಿತದ ಶಕ್ತಿಕೇಂದ್ರ ವಿಧಾನಸೌಧದ ಸುತ್ತ ವ್ಯಾಪಿಸಿಕೊಂಡಿರುವ ಬೆಂಗಳೂರು ಕೇಂದ್ರ ಭಾಗದ ವ್ಯಾಪ್ತಿಯಲ್ಲಿರುವ ಎಂಟು ವಿಧಾನಸಭಾ ಕ್ಷೇತ್ರಗಳು ದೀರ್ಘಕಾಲದಿಂದಲೂ ಯಥಾಸ್ಥಿತಿಯ ಫಲಿತಾಂಶಕ್ಕೆ ಅಂಟಿಕೊಂಡಿವೆ. ಈ ಬಾರಿ ಯಥಾಸ್ಥಿತಿಯನ್ನು ಮುರಿದು ಬಲ ಹೆಚ್ಚಿಸಿಕೊಳ್ಳಲು ಕಾಂಗ್ರೆಸ್ ಮತ್ತು ಬಿಜೆಪಿ ಹಣಾಹಣಿ ನಡೆಸುತ್ತಿವೆ.

ಕ್ಷೇತ್ರ ಪುನರ್ವಿಂಗಡಣೆಯ ನಂತರ ನಡೆದಿರುವ ಮೂರು ಲೋಕಸಭಾ ಚುನಾವಣೆಗಳಲ್ಲೂ ಇಲ್ಲಿ ಬಿಜೆಪಿ ಜಯಭೇರಿ ಬಾರಿಸಿದೆ. 2008ರಿಂದ ನಡೆದ ಮೂರು ವಿಧಾನಸಭಾ ಚುನಾವಣೆಗಳಲ್ಲೂ ಬಿಜೆಪಿ ಮೂರು ಕ್ಷೇತ್ರಗಳಲ್ಲಷ್ಟೇ ಗೆಲುವು ಸಾಧಿಸುತ್ತಿದೆ. 2008 ಮತ್ತು 2013ರಲ್ಲಿ ಕಾಂಗ್ರೆಸ್ ನಾಲ್ಕು ಹಾಗೂ ಜೆಡಿಎಸ್ ಒಂದು ಸ್ಥಾನ ಗಳಿಸಿದ್ದವು. ಚಾಮರಾಜಪೇಟೆ ಶಾಸಕ ಜಮೀರ್ ಅಹಮ್ಮದ್ ಖಾನ್ ಅವರ ವಲಸೆಯಿಂದಾಗಿ ಕಾಂಗ್ರೆಸ್ ಒಂದು ಸ್ಥಾನವನ್ನು ಹೆಚ್ಚಿಸಿಕೊಂಡಿದ್ದರೆ, ಜೆಡಿಎಸ್ ಸಾಧನೆ ಶೂನ್ಯಕ್ಕಿಳಿದಿದೆ.

ಹಿಂದಿನ ಚುನಾವಣೆಗಳಿಗೆ ಹೋಲಿಸಿದರೆ ಈ ಬಾರಿಯೂ ಇಲ್ಲಿನ ಬಹುತೇಕ ಕ್ಷೇತ್ರಗಳಲ್ಲಿ ಹಾಲಿ ಶಾಸಕರ ಪ್ರಾಬಲ್ಯವೇ ಎದ್ದು ಕಾಣುತ್ತಿದೆ. ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಯಲ್ಲಿ ಮತದಾನದ ವೇಳೆ ಭಿನ್ನವಾಗಿ ಆಲೋಚಿಸುವ ಇಲ್ಲಿನ ಮತದಾರರನ್ನು ಪ್ರಧಾನಿ ನರೇಂದ್ರ ಮೋದಿ ಅವರ 'ನಾಮಬಲ'ದಲ್ಲಿ ಸೆಳೆದು ಬಲ ಹೆಚ್ಚಿಸಿಕೊಳ್ಳಲು ಬಿಜೆಪಿ ಭಾರಿ ಕಸರತ್ತು ನಡೆಸುತ್ತಿದೆ. ಆಡಳಿತ ವಿರೋಧಿ ಅಲೆಯ ನೆರವಿನಲ್ಲಿ ಮತ್ತಷ್ಟು ಕ್ಷೇತ್ರಗಳನ್ನು ಗೆದ್ದು, ಪ್ರಾಬಲ್ಯ ಸಾಧಿಸಲು ಕಾಂಗ್ರೆಸ್ ಪ್ರಯತ್ನಿಸುತ್ತಿದೆ.

ಬಿಜೆಪಿ ಶಾಸಕ ಅರವಿಂದ ಲಿಂಬಾವಳಿ ಪ್ರತಿನಿಧಿಸುತ್ತಿರುವ ಮಹದೇವಪುರ ಎಸ್‌ಸಿ ಮೀಸಲು ಕ್ಷೇತ್ರ ಈ ಬಾರಿ ಕುತೂಹಲದ ಕೇಂದ್ರವಾಗಿದೆ. ಶಾಸಕರಿಗೆ ಟಿಕೆಟ್ ನಿರಾಕರಿಸಿರುವ ಬಿಜೆಪಿ ವರಿಷ್ಠರು, ಅವರ ಪತ್ನಿ ಮಂಜುಳಾ ಲಿಂಬಾವಳಿ ಅವರನ್ನು ಕಣಕ್ಕಿಳಿಸಿದ್ದಾರೆ. ಮುಳಬಾಗಿಲು ಕ್ಷೇತ್ರದಲ್ಲಿ ಪಕ್ಷೇತರನಾಗಿ ಸ್ಪರ್ಧಿಸಿ ಗೆದ್ದು, ಸಚಿವರೂ ಆಗಿದ್ದ ಎಚ್. ನಾಗೇಶ್ ಇಲ್ಲಿ ಈ ಬಾರಿ ಕಾಂಗ್ರೆಸ್ ಅಭ್ಯರ್ಥಿ. ಮಹದೇವಪುರ ಕ್ಷೇತ್ರವನ್ನು ಬಿಜೆಪಿ ತೆಕ್ಕೆಯಿಂದ ಕಸಿದುಕೊಳ್ಳಲು ಕಾಂಗ್ರೆಸ್ ಶತಪ್ರಯತ್ನ ಮಾಡುತ್ತಿದೆ. ಪತಿಯ ಹೆಸರಿನ ಬಲದಲ್ಲಿ ಗೆದ್ದುಬರಲು ಮಂಜುಳಾ ಕಸರತ್ತು ನಡೆಸುತ್ತಿದ್ದಾರೆ.

ವಿಧಾನ ಪರಿಷತ್‌ನ ಮಾಜಿ ಸದಸ್ಯ ಪುಟ್ಟಣ್ಣ ಅವರ ಪ್ರವೇಶದಿಂದ ರಾಜಾಜಿನಗರವೂ ಜಿದ್ದಾಜಿದ್ದಿ ಹೋರಾಟದ ಕಣವಾಗಿದೆ. ಐದು ಬಾರಿ ಶಾಸಕರಾಗಿದ್ದ ಎಸ್. ಸುರೇಶ್ ಕುಮಾರ್, ಆರನೇ ಗೆಲುವಿಗೆ ಹೋರಾಟ ನಡೆಸುತ್ತಿದ್ದಾರೆ. ವರ್ಷದ ಹಿಂದೆಯೇ ಮನೆ, ಮನೆ ಪ್ರಚಾರ ಆರಂಭಿಸಿದ್ದ ಅವರು, ಕ್ಷೇತ್ರದಲ್ಲಿ ವ್ಯಾಪಿಸಿಕೊಂಡಿರುವ ಸಂಘಟನೆಯ ಬಲ ತಮ್ಮನ್ನು ಮತ್ತೊಮ್ಮೆ ಗೆಲುವಿನ ದಡ ಮುಟ್ಟಿಸಬಹುದು ಎಂಬ ವಿಶ್ವಾಸದಲ್ಲಿದ್ದಾರೆ. ಜೆಡಿಎಸ್‌ನಿಂದ ಬಿಜೆಪಿಗೆ ಹೋಗಿ ಅಲ್ಲಿಂದ ಕಾಂಗ್ರೆಸ್‌ಗೆ ಜಿಗಿದಿರುವ ಪುಟ್ಟಣ್ಣ, ಒಕ್ಕಲಿಗ ಮತದಾರರ ಬಾಹುಳ್ಯ 'ಕೈ' ಹಿಡಿಯಬಹುದು ಎಂಬ ಲೆಕ್ಕಾಚಾರದಲ್ಲಿದ್ದಾರೆ. ಕೊನೆಯ ಕ್ಷಣದಲ್ಲಿ ಅಭ್ಯರ್ಥಿ ಬದಲಿಸಿರುವ ಜೆಡಿಎಸ್, ಚಿರಪರಿಚಿತ ವೈದ್ಯ ಡಾ. ಆಂಜನಪ್ಪ ಟಿ.ಎಚ್. ಅವರನ್ನು ಕಣಕ್ಕಿಳಿಸಿದೆ. ಅವರು ಒಕ್ಕಲಿಗರ ಮತಗಳನ್ನು ಹೆಚ್ಚು ಸೆಳೆದರೆ ಬಿಜೆಪಿಗೆ ಅನುಕೂಲ ಆಗುವ ಸಾಧ್ಯತೆ ಇದೆ.

ಚಾಮರಾಜಪೇಟೆ ಕ್ಷೇತ್ರವನ್ನು ಕಾಂಗ್ರೆಸ್‌ನ ಬಿ.ಜೆಡ್. ಜಮೀರ್ ಅಹಮ್ಮದ್ ಖಾನ್ ಅವರಿಂದ ಕಿತ್ತುಕೊಳ್ಳಲು ಬಿಜೆಪಿ ಮತ್ತು ಜೆಡಿಎಸ್ ನಾನಾ ಬಗೆಯ ದಾಳ ಉರುಳಿಸುತ್ತಿವೆ. ಜೆಡಿಎಸ್‌ನಲ್ಲಿದ್ದ ಜಮೀರ್, 2018ರ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಗೆದ್ದರು. ಈ ಬಾರಿ ಜಮೀರ್ ಆಪ್ತ ಗೋವಿಂದರಾಜು ಅವರನ್ನೇ ಸೆಳೆದಿರುವ ಜೆಡಿಎಸ್, ಅಲ್ಲಿ ಕಣಕ್ಕಿಳಿಸಿದೆ. ಐಪಿಎಸ್ ಅಧಿಕಾರಿ ಹುದ್ದೆಯಿಂದ ಸ್ವಯಂನಿವೃತ್ತಿ ಪಡೆದು ಆಮ್ ಆದ್ಮಿ ಪಕ್ಷ ಸೇರಿದ್ದ ಭಾಸ್ಕರ್ ರಾವ್, ಅಲ್ಲಿಂದ ಬಿಜೆಪಿಗೆ ಜಿಗಿದು ಅಭ್ಯರ್ಥಿಯಾಗಿದ್ದಾರೆ. ಸಂಘ ಪರಿವಾರದ ಕಾರ್ಯಕರ್ತರೂ ಅಖಾಡಕ್ಕೆ ಇಳಿದಿರುವುದರಿಂದ ಈ ಬಾರಿ ಜಮೀರ್ ಪ್ರಬಲ ಪೈಪೋಟಿ ಎದುರಿಸುತ್ತಿದ್ದಾರೆ.


ಗಾಂಧಿನಗರ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ದಿನೇಶ್ ಗುಂಡೂರಾವ್ ಮತ್ತು ಬಿಜೆಪಿಯ ಸಪ್ತಗಿರಿ ಗೌಡ ನೇರ ಹಣಾಹಣಿ ನಡೆಸುತ್ತಿದ್ದಾರೆ. ಐದು ಬಾರಿ ಈ ಕ್ಷೇತ್ರವನ್ನು ಪ್ರತಿನಿಧಿಸಿರುವ ದಿನೇಶ್ ಅವರಿಂದ ಗೆಲುವು ಕಸಿಯಲು ಬಿಜೆಪಿಯ ಹಿರಿಯ ನಾಯಕರಾಗಿದ್ದ ಮಾಜಿ ಸಚಿವ ಕೆ. ರಾಮಚಂದ್ರೇಗೌಡ ಅವರ ಮಗ ಸಪ್ತಗಿರಿ ಗೌಡ ಪ್ರಯತ್ನಿಸುತ್ತಿದ್ದಾರೆ. ಆದರೆ, ಮಾಜಿ ಸಚಿವ ಕೃಷ್ಣಯ್ಯ ಶೆಟ್ಟಿ ಪಕ್ಷೇತರನಾಗಿ ಕಣದಲ್ಲಿದ್ದು, ಬಿಜೆಪಿ ಮತ ಕಸಿಯುವ ಸಾಧ್ಯತೆ ಇದೆ. ಅದು ದಿನೇಶ್ ಅವರಿಗೆ ಅನುಕೂಲ ಸೃಷ್ಟಿಸಬಹುದು.


ಕಾಂಗ್ರೆಸ್‌ನ ಭದ್ರಕೋಟೆಯಂತಿರುವ ಶಿವಾಜಿನಗರ ಕ್ಷೇತ್ರದಲ್ಲಿ ಶಾಸಕ ರಿಜ್ವಾನ್ ಅರ್ಷದ್ ಮತ್ತು ಬಿಜೆಪಿಯ ಚಂದ್ರ ಎನ್. ನೇರ ಹಣಾಹಣಿ ನಡೆಸುತ್ತಿದ್ದಾರೆ. ಜೆಡಿಎಸ್ ಅಭ್ಯರ್ಥಿ ಕಣದಲ್ಲಿಲ್ಲ. ಇದು ಕಾಂಗ್ರೆಸ್‌ಗೆ ಮತ್ತಷ್ಟು ಅನುಕೂಲಕರ ಸನ್ನಿವೇಶ ನಿರ್ಮಿಸಿದೆ.

1985ರಿಂದ ಐದು ಬಾರಿ ಶಾಸಕರಾಗಿರುವ ಕೆ.ಜೆ. ಜಾರ್ಜ್ ಸರ್ವಜ್ಞನಗರದಲ್ಲಿ ಆರನೇ ಗೆಲುವಿಗೆ ಪ್ರಬಲ ಹೋರಾಟ ನೆಸುತ್ತಿದ್ದಾರೆ. 2013ರ ಚುನಾವಣೆಯಲ್ಲಿ ಅಭ್ಯರ್ಥಿಯಾಗಿದ್ದ ಪದ್ಮನಾಭ ರೆಡ್ಡಿ ಅವರನ್ನೇ ಬಿಜೆಪಿ ಈ ಬಾರಿಯೂ ಕಣಕ್ಕಿಳಿಸಿದೆ. ಜಾರ್ಜ್ ಸ್ವಂತ ಶಕ್ತಿಯಲ್ಲಿ ಸರ್ವಜ್ಞನಗರ ಕ್ಷೇತ್ರವನ್ನು ಕಾಂಗ್ರೆಸ್‌ನ ಭದ್ರಕೋಟೆಯನ್ನಾಗಿ ಮಾಡಿದ್ದಾರೆ. ಅದನ್ನು ವಶ ಮಾಡಿಕೊಳ್ಳಲು ಬಿಜೆಪಿ ಹರಸಾಹಸ ನಡೆಸುತ್ತಿದೆ.

ಶಾಂತಿನಗರ ಕ್ಷೇತ್ರದಲ್ಲಿ 'ಹ್ಯಾಟ್ರಿಕ್' ಗೆಲುವು ಸಾಧಿಸಿರುವ ಕಾಂಗ್ರೆಸ್‌ನ ಎನ್.ಎ. ಹ್ಯಾರಿಸ್, ನಾಲ್ಕನೇ ಗೆಲುವಿನ ನಿರೀಕ್ಷೆಯಲ್ಲಿದ್ದಾರೆ. ಬಿಜೆಪಿಯಿಂದ ಬಿಬಿಎಂಪಿ ಮಾಜಿ ಸದಸ್ಯ ಕೆ. ಶಿವಕುಮಾರ್ ಮತ್ತು ಆಮ್ ಆದ್ಮಿ ಪಕ್ಷದಿಂದ ನಿವೃತ್ತ ಕೆಎಎಸ್ ಅಧಿಕಾರಿ ಕೆ. ಮಥಾಯಿ ಕಣದಲ್ಲಿದ್ದಾರೆ. ಕ್ಷೇತ್ರದ ಮೇಲೆ ಹ್ಯಾರಿಸ್ ಬಲವಾದ ಹಿಡಿತ ಸಾಧಿಸಿದ್ದಾರೆ. ಶಿವಕುಮಾರ್ ತಾವು ಪ್ರತಿನಿಧಿಸಿದ್ದ ವಾರ್ಡ್ ಸೇರಿದಂತೆ ಸೀಮಿತ ಪ್ರದೇಶದಲ್ಲಿ ಪರಿಚಿತರಾಗಿರುವುದು ಬಿಜೆಪಿಗಿರುವ ನಕಾರಾತ್ಮಕ ಅಂಶ.

ಸಿ.ವಿ. ರಾಮನ್ ನಗರ ಎಸ್‌ಸಿ ಮೀಸಲು ಕ್ಷೇತ್ರದಲ್ಲಿ ಸತತ ನಾಲ್ಕು ಬಾರಿ ಗೆಲುವು ಸಾಧಿಸಿರುವ ಬಿಜೆಪಿಯ ಎಸ್. ರಘು, ಮತ್ತೆ ಕಣದಲ್ಲಿದ್ದಾರೆ. ಕಾಂಗ್ರೆಸ್ ಆನಂದ ಕುಮಾರ್ ಎಸ್. ಅವರನ್ನು ಕಣಕ್ಕಿಳಿಸಿದೆ. ಆಪ್‌ನಿಂದ ಮೋಹನ್ ದಾಸರಿ ಸ್ಪರ್ಧೆಯಲ್ಲಿದ್ದಾರೆ. ಕ್ಷೇತ್ರದಲ್ಲಿ ರಘು ಅವರಿಂದ ಗೆಲುವು ಕಸಿಯಲು ಕಾಂಗ್ರೆಸ್ ಯತ್ನಿಸುತ್ತಿದೆ. ಆದರೆ, ಇಲ್ಲಿಯೂ ರಘು ಅವರ ಪ್ರಭಾವಳಿಯನ್ನು ಮಣಿಸಲು ಕಾಂಗ್ರೆಸ್ ಬೆವರು ಹರಿಸುತ್ತಿದೆ.




ಎನ್.ಎ. ಹ್ಯಾರಿಸ್ | ಕೆ.ಜೆ.ಜಾರ್ಜ್ | ಎಸ್.ಸುರೇಶ್ ಕುಮಾರ್ | ಎಚ್.ನಾಗೇಶ್ | ಮಂಜುಳಾ ಲಿಂಬಾವಳಿ | ಜಮೀರ್ ಅಹಮದ್ | ದಿನೇಶ್ ಗುಂಡೂರಾವ್ | ಎಸ್. ರಘು | ರಿಜ್ವಾನ್ ಅರ್ಷದ್

ಪಕ್ಷಗಳ ಬಲಾಬಲ

ಕ್ಷೇತ್ರ	2013	2018
ಸರ್ವಜ್ಞನಗರ	ಕಾಂಗ್ರೆಸ್	ಕಾಂಗ್ರೆಸ್
ಸಿ.ವಿ. ರಾಮನ್‌ನಗರ (ಎಸ್‌ಸಿ)	ಬಿಜೆಪಿ	ಬಿಜೆಪಿ
ಶಿವಾಜಿನಗರ	ಕಾಂಗ್ರೆಸ್	ಕಾಂಗ್ರೆಸ್
ಶಾಂತಿನಗರ	ಕಾಂಗ್ರೆಸ್	ಕಾಂಗ್ರೆಸ್
ಗಾಂಧಿನಗರ	ಕಾಂಗ್ರೆಸ್	ಕಾಂಗ್ರೆಸ್
ರಾಜಾಜಿನಗರ	ಬಿಜೆಪಿ	ಬಿಜೆಪಿ
ಚಾಮರಾಜಪೇಟೆ	ಜೆಡಿಎಸ್	ಕಾಂಗ್ರೆಸ್
ಮಹದೇವಪುರ (ಎಸ್‌ಸಿ)	ಬಿಜೆಪಿ	ಬಿಜೆಪಿ

ಸೋಮವಾರ, ಮೇ 8, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಜಾದೂ...
ಪಠ್ಯದಲ್ಲಿ ಜಾದೂ ಸೇರ್ಪಡೆ ಮಾಡುವಂತೆ ಒತ್ತಾಯಿಸಿ ಕೋಲ್ಕತ್ತದಲ್ಲಿ ಭಾನುವಾರ ಬಾಲಕಿಯೊಬ್ಬಳು ಕೈಚಳಕ ತೋರಿದ ಬಗೆ



‘ನೆರವಾದವರನ್ನು ಜನ ಮರೆಯಲ್ಲ’

• ವೈ.ಗ.ಜಗದೀಶ್/ ವಿಜಯಕುಮಾರ್ ಎಸ್.ಕೆ.


‘ಎಸ್‌ಡಿಪಿಐ ಕಪಿಮುಷ್ಟಿಯಲ್ಲಿದೆ ಕಾಂಗ್ರೆಸ್’

• ಬಜರಂಗದಳದ ನಿಷೇಧ ಮಾಡುವ ಬಗ್ಗೆ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಪ್ರಕಟಿಸಿದ ಬಳಿಕ ನಿಮ್ಮ ಮತಗಳು ಮತ್ತಷ್ಟು ಭದ್ರವಾದವೇ?

10–12 ವರ್ಷಗಳಿಂದ ಅಲ್ಪಸಂಖ್ಯಾತರ ವಿಶ್ವಾಸವನ್ನು ಕಾಂಗ್ರೆಸ್ ಕಳೆದುಕೊಳ್ಳುತ್ತಾ ಬಂದಿದೆ. ಆ ಜಾಗವನ್ನು ಎಸ್‌ಡಿಪಿಐ ಮತ್ತು ಪಿಎಫ್‌ಐ ತುಂಬುತ್ತಿವೆ. ಈ ಚುನಾವಣೆಯಲ್ಲಿ ಎಸ್‌ಡಿಪಿಐ ಮತ್ತು ಕಾಂಗ್ರೆಸ್ ಒಪ್ಪಂದ ಮಾಡಿಕೊಂಡಿವೆ. ಎಸ್‌ಡಿಪಿಐ ಕಪಿಮುಷ್ಟಿಯಲ್ಲಿ ಕಾಂಗ್ರೆಸ್ ಇದೆ. ಪಿಎಫ್‌ಐ ನಿಷೇಧ ಮಾಡಿದಾಗ ಕಾಂಗ್ರೆಸ್ ತುಟಿಬಿಚ್ಚಲಿಲ್ಲ ಎಂಬ ಕಾರಣಕ್ಕೆ ಎಸ್‌ಡಿಪಿಐ ಅಸಮಾಧಾನಗೊಂಡಿದೆ. ಈಗ ಬಜರಂಗದಳ ನಿಷೇಧ ಮಾಡುವಂತೆ ಒತ್ತಡ ಹಾಕಿದ್ದಕ್ಕೆ ಪ್ರಣಾಳಿಕೆಯಲ್ಲಿ ಈ ಪ್ರಸ್ತಾಪವನ್ನು ಕಾಂಗ್ರೆಸ್ ಮಾಡಿದೆ. ಅದರಿಂದ ನಷ್ಟ ಆಗುವುದನ್ನು ಅರಿತ ಕಾಂಗ್ರೆಸ್ ಈಗ ಹನುಮಾನ್ ಚಾಲೀಸ್ ಓದುವಂತಾಯಿತು.

• ಮುಂದಿನ ಭಾನುವಾರವೂ ನೀವೇ ಮುಖ್ಯಮಂತ್ರಿ ಆಗಿರುತ್ತೀರಾ?

ಈ ಪ್ರಶ್ನೆಗೆ ಮೇ 13ರ ನಂತರ ಉತ್ತರ ನೀಡುತ್ತೇನೆ.



ಬೆಂಗಳೂರು: ‘ನವಭಾರತಕ್ಕಾಗಿ ನವಕರ್ನಾಟಕ ಎಂಬ ಸಂಕಲ್ಪದಡಿ ಇಡೀ ರಾಜ್ಯವನ್ನು ಅಭಿವೃದ್ಧಿಯ ದಿಕ್ಕಿಗೆ ಮುನ್ನಡೆಸಿದ್ದೇವೆ. ಸಾಮಾಜಿಕ ನ್ಯಾಯದಿಂದ ವಂಚಿತವಾಗಿದ್ದ ಅನೇಕ ಸಮುದಾಯದವರಿಗೆ ಮೀಸಲಾತಿಯ ಹಕ್ಕನ್ನೂ ಕೊಟ್ಟಿದ್ದೇವೆ. ಅದರ ಕೃತಜ್ಞತಾಭಾವ ಜನರಲ್ಲಿದ್ದು, ಇದರ ಫಲವಾಗಿ ಬಿಜೆಪಿ ಮರಳಿ ಅಧಿಕಾರಕ್ಕೆ ಬರುವುದು ಖಚಿತ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಶ್ವಾಸದಿಂದ ಹೇಳಿದರು.

ಚುನಾವಣೆ ಹೊತ್ತಿನಲ್ಲಿ ಪ್ರಜಾವಾಣಿಗೆ ನೀಡಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ.

• 224 ಕ್ಷೇತ್ರಗಳನ್ನೂ ಸುತ್ತಿದ್ದೀರಿ, ಅದರ ಫಲಿತಾಂಶ ಏನು?

ಕರ್ನಾಟಕದ ಉದ್ದಗಲಕ್ಕೂ ತಿರುಗಾಡಿದ್ದೇನೆ. ಎಲ್ಲಾ ಕಡೆ ಬಿಜೆಪಿ ಅಲೆ ಇದೆ, ಸಂಪೂರ್ಣ ಬಹುಮತ ಬರಲಿದೆ.

• ಮುಖ್ಯಮಂತ್ರಿಯಾಗಿ ಚುನಾವಣೆ ಮುನ್ನಡೆಸುತ್ತಿದ್ದೀರಿ; ಹೇಗನಿಸುತ್ತಿದೆ?

ಮುಖ್ಯಮಂತ್ರಿಯಾಗಿ 20 ತಿಂಗಳು ಕೆಲಸ ಮಾಡಿದ್ದೇನೆ. ನಮ್ಮ ಕಾರ್ಯಕ್ರಮಗಳು ಜನರಿಗೆ ತಲುಪಿವೆ. ಆದ್ದರಿಂದ ಜನರ ಸ್ಪಂದನೆ ಅದ್ಭುತವಾಗಿದೆ. ಎಲ್ಲೆಡೆ 50 ಸಾವಿರದಿಂದ 60 ಸಾವಿರ ಜನ ನೇರ ಫಲಾನುಭವಿಗಳೇ ಸೇರುತ್ತಿದ್ದಾರೆ. ನಮ್ಮ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಿ ಬಿಜೆಪಿಗೆ ಅತಿ ದೊಡ್ಡ ಬೆಂಬಲ ತೋರಿಸುತ್ತಿದ್ದಾರೆ.

• ಹಿಂದಿನ ಚುನಾವಣೆಗಳಲ್ಲಿ ಅಭಿವೃದ್ಧಿಯೊಂದೇ ಕೈ ಹಿಡಿದಿರುವುದು ಕಡಿಮೆ ಅಲ್ಲವಾ?

ರಾಜ್ಯದ ಅಭಿವೃದ್ಧಿ ಜತೆಗೆ ಹಲವು ವರ್ಷಗಳಿಂದ ಕೇಳುತ್ತಿದ್ದ ಮೀಸಲಾತಿಯ ಪ್ರಮಾಣವನ್ನು ಹೆಚ್ಚಿಸಿ, ಜನರಿಗೆ ಅವರ ಹಕ್ಕನ್ನು ಕೊಟ್ಟಿದ್ದೇವೆ. ಸಾಮಾನ್ಯ ಮತ್ತು ದುಡಿಯುವ ವರ್ಗದ ಜನ ತಮ್ಮ ಕಷ್ಟಕ್ಕೆ ನೆರವಾದವರನ್ನು ಮರೆಯುವುದಿಲ್ಲ. ಅವರಷ್ಟು ಕೃತಜ್ಞರು ಮತ್ತೊಬ್ಬರಿಲ್ಲ.

ಪ್ರಜಾವಾಣಿ ಸಂದರ್ಶನ

ಬಸವರಾಜ ಬೊಮ್ಮಾಯಿ

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

• ಒಳ ಮೀಸಲಾತಿಗೆ ಲಂಬಾಣಿ, ಬೋವಿ ಸಮುದಾಯಗಳ ವಿರೋಧ ವ್ಯಕ್ತವಾಯಿತಲ್ಲ?

ಒಳ ಮೀಸಲಾತಿ ಕಲ್ಪಿಸುವಾಗ ಲಂಬಾಣಿ ಮತ್ತು ಭೋವಿ ಸಮುದಾಯಗಳನ್ನು ಎಸ್‌ಸಿ ಪಟ್ಟಿಯಿಂದ ಕೈಬಿಡಲಾಗುತ್ತದೆ ಎಂಬ ಆತಂಕ ಕಳೆದ ಇಪ್ಪತ್ತು ವರ್ಷಗಳಿಂದ ಇತ್ತು. ಕಾಂಗ್ರೆಸ್ ಈ ಆತಂಕ ನಿವಾರಿಸುವ ಕೆಲಸ ಮಾಡಿರಲಿಲ್ಲ. ಮೀಸಲಾತಿಯನ್ನು ಮೊದಲು ಜಾರಿಗೆ ತಂದಾಗ ಎಸ್‌ಸಿ ಪಟ್ಟಿಯಲ್ಲಿ ಆರೇ(ಆದಿ ಕರ್ನಾಟಕ, ಆದಿ ದ್ರಾವಿಡ, ಲಂಬಾಣಿ, ಬೋವಿ, ಕೊರಮ ಮತ್ತು ಕೊರಚ) ಜಾತಿಗಳಿದ್ದವು. ಈ ಎಲ್ಲಾ ಅಂಶಗಳನ್ನು ದಾಖಲಿಸಿ ಈ ಸಮುದಾಯಗಳ ಮೇಲಿದ್ದ ತೂಗುಗತ್ತಿಯನ್ನು ಶಾಶ್ವತವಾಗಿ ತೆಗೆದಿದ್ದೇವೆ. ಇದನ್ನು ಮನವರಿಕೆ ಮಾಡಿಸಿದ ಬಳಿಕ ಬಂಜಾರ, ಬೋವಿ ಸಮುದಾಯದವರು ನಮ್ಮ ಬೆಂಬಲಕ್ಕೆ ನಿಂತಿದ್ದಾರೆ.

• ಜಗದೀಶ ಶೆಟ್ಟರ್– ಲಕ್ಷ್ಮಣ ಸವದಿ ಪಕ್ಷ ಬಿಟ್ಟಿದ್ದರ ಪರಿಣಾಮ?

ಲಿಂಗಾಯತರಿಗೆ ರಾಜಕೀಯ ಅನುಭವ ಮತ್ತು ಪ್ರಬುದ್ಧತೆ ಇದೆ. ಯಾರೋ ಒಬ್ಬ ವ್ಯಕ್ತಿಯ ಹಿಂದೆ ಹೋಗುವುದಿಲ್ಲ. ಬಿಜೆಪಿ ಯಾವಾಗಲೂ ಎಲ್ಲಾ ಸಮುದಾಯಗಳಿಗೂ ಸಮಾನವಾದ ಗೌರವ ಕೊಟ್ಟಿದೆ. ಲಿಂಗಾಯತ ಸಮುದಾಯವನ್ನು ಕಾಂಗ್ರೆಸ್ ಅತ್ಯಂತ ದ್ವೇಷ ಭಾವನೆಯಿಂದ ನೋಡಿದೆ. ವೀರೇಂದ್ರ ಪಾಟೀಲರ ವಿಷಯ ಇರಬಹುದು, 2018ರಲ್ಲಿ ಸಿದ್ದರಾಮಯ್ಯ ಅವರು ಲಿಂಗಾಯತ ಸಮುದಾಯವನ್ನು ಒಡೆಯುವ ಪ್ರಯತ್ನ ಇರಬಹುದು. ಅಂತಹ ಪಕ್ಷಕ್ಕೆ ಹೋದವರಿಗೇ ನಷ್ಟವೇ ಹೊರತು, ಬಿಜೆಪಿಗೆ ಅಲ್ಲ. ಹುಬ್ಬಳ್ಳಿ ಸೆಂಟ್ರಲ್, ಅಥಣಿಯಲ್ಲಿ ಬಿಜೆಪಿ ಗೆಲುವು ನಿಶ್ಚಿತ.

• ಕಾಂಗ್ರೆಸ್ ಮತ್ತು ಜೆಡಿಎಸ್‌ನ ಸಾಮರ್ಥ್ಯ ಮತ್ತು ದೌರ್ಬಲ್ಯ ಏನು?

ಅವು ಪರಿವಾರದ ಪಕ್ಷಗಳು. ಕಾಂಗ್ರೆಸ್ ಆಡಳಿತ ನಡೆಸಿರುವ ಎಲ್ಲಾ ರಾಜ್ಯಗಳಲ್ಲಿ ಭ್ರಷ್ಟಾಚಾರ ಜಾಸ್ತಿಯಾಗಿತ್ತು. ಅವರಲ್ಲಿ ಅಧಿಕಾರಕ್ಕಾಗಿ ಕಿತ್ತಾಟ ಇರುತ್ತದೆ. ಈ ಮೂರು ಕಾರಣಗಳಿಂದ ದೇಶದಲ್ಲಿ ಕಾಂಗ್ರೆಸ್ ಪಕ್ಷವನ್ನು ಜನ ಬೇರುಸಮೇತ ಕಿತ್ತೊಗೆದಿದ್ದಾರೆ. ಇದೇ ಸಮಸ್ಯೆ ಕರ್ನಾಟಕದಲ್ಲೂ ಇದೆ.

• ಭ್ರಷ್ಟಾಚಾರದ ಬಾಣವನ್ನು ನಿಮಗೇ ತಿರುಗಿಸಿದ್ದಾರಲ್ಲ?

ನನ್ನ ಸರ್ಕಾರದ ಬರುವ ಹಿಂದಿನ ಅವಧಿಯ ಬಗ್ಗೆಯಷ್ಟೇ ಗುತ್ತಿಗೆದಾರರ ತಕರಾರು ಇದ್ದದ್ದು. ರಾಜ್ಯದಲ್ಲಿ 45 ಸಾವಿರಕ್ಕೂ ಹೆಚ್ಚು ಗುತ್ತಿಗೆದಾರರಿದ್ದಾರೆ ಕೆಂಪಣ್ಣ ಅಧ್ಯಕ್ಷತೆಯ ಗುತ್ತಿಗೆದಾರರ ಸಂಘದಲ್ಲಿ 700 ಗುತ್ತಿಗೆದಾರರಷ್ಟೇ ಇದ್ದಾರೆ. ಅವರಲ್ಲಿ ಅರ್ಧದಷ್ಟು ಗುತ್ತಿಗೆದಾರರು ಕೆಲಸ ಮಾಡುತ್ತಿಲ್ಲ. ಆದರೂ ಅವರನ್ನು ಕರೆದು ಮಾತನಾಡಿದೆ. ಶೇ 40ರಷ್ಟು ಕಮಿಷನ್ ಪಡೆಯುತ್ತಿರುವ ಬಗ್ಗೆ ಸಾಕ್ಷಿ ಕೇಳಿದೆ, ಒಂದೇ ಒಂದು ಪುರಾವೆಯನ್ನೂ ನೀಡಿಲ್ಲ. ನ್ಯಾಯಾಲಯಕ್ಕೂ ಅವರು ಸಾಕ್ಷಿ ಒದಗಿಸಿಲ್ಲ. ಲೋಕಾಯುಕ್ತವನ್ನು ದುರ್ಬಲಗೊಳಿಸಿದ ಕೀರ್ತಿ ಕಾಂಗ್ರೆಸ್ ಮತ್ತು ಸಿದ್ದರಾಮಯ್ಯ ಅವರಿಗೆ ಸಲ್ಲುತ್ತದೆ.

• ಬಿಜೆಪಿ ಗೆದ್ದರೆ ಯಾರು ಮುಖ್ಯಮಂತ್ರಿ ?

ಇಂತವರೇ ಮುಖ್ಯಮಂತ್ರಿ ಎಂದು ಹೇಳುವ ಪಕ್ಷ ನಮ್ಮದಲ್ಲ. ನಮ್ಮದು ರಾಷ್ಟ್ರೀಯ ಪಕ್ಷ. ಜೆಡಿಎಸ್‌ನವರು ಡ್ರಾಯಿಂಗ್ ರೂಂನಲ್ಲಿ ಕುಳಿತು ನಿರ್ಧಾರ ಕೈಗೊಳ್ಳುತ್ತಾರೆ. ಕಾಂಗ್ರೆಸ್‌ನವರು ಅಧಿಕೃತವಾಗಿ ನಾನೇ ಸಿಎಂ ಎಂದು ಹೇಳಲು ಆಗುತ್ತಿಲ್ಲ. ಶಾಸಕಾಂಗ ಸಭೆ ಮತ್ತು ಸಂಸದೀಯ ಮಂಡಳಿ ತೀರ್ಮಾನ ಕೈಗೊಳ್ಳುತ್ತದೆ.

‘ಅಧಿಕಾರ ಖಚಿತ; ಪ್ರಣಾಳಿಕೆಗೆ ಬದ್ಧ’

• ರಾಜೇಶ್ ರೈ ಚಟ್ಲ


‘ಮೋದಿ, ಬೊಮ್ಮಾಯಿ ಮ್ಯಾಜಿಕ್ ನಡೆಯಲ್ಲ’

• ವರುಣದಲ್ಲಿ ವಿ. ಸೋಮಣ್ಣ, ಕನಕಪುರದಲ್ಲಿ ಆರ್. ಅಶೋಕ ಅವರನ್ನು ಕಣಕ್ಕಿಳಿಸಿದ ಬಿಜೆಪಿ ಉದ್ದೇಶ ಏನಿರಬಹುದು?

ಅದು ಅವರ ರಾಜಕೀಯ ಆಟ. ಮೋದಿ ಮ್ಯಾಜಿಕ್. ರಾಜ್ಯದಲ್ಲಿ ಬೊಮ್ಮಾಯಿ ಮ್ಯಾಜಿಕ್ ನಡೆಯುತ್ತಿಲ್ಲ. ವರುಣದಲ್ಲಿ ಸಿದ್ದರಾಮಯ್ಯ ಸುಲಭ ಜಯ ಸಾಧಿಸುತ್ತಾರೆ. ಅಲ್ಲಿ ಮತ್ತು ನನ್ನ ಕ್ಷೇತ್ರ ಕನಕಪುರದಲ್ಲಿ ಪ್ರಚಾರ ಮಾಡಲು ನನಗೆ ಸಮಯ ಸಿಕ್ಕಿಲ್ಲ. ಕನಕಪುರದಲ್ಲಿ ಶಿವ ಭಕ್ತ ಬೇಕಾ? ಅಶೋಕ ಚಕ್ರವರ್ತಿ ಬೇಕಾ? ಎಂದು ಅಲ್ಲಿನ ಜನ ನಿರ್ಧರಿಸುತ್ತಾರೆ.

• ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮುಖ್ಯಮಂತ್ರಿ ನೀವೇನಾ?

ನಾವು ಸಾಮೂಹಿಕ ನಾಯಕತ್ವದಲ್ಲಿ ಚುನಾವಣೆ ಎದುರಿಸಿದ್ದೇವೆ. ಮುಖ್ಯಮಂತ್ರಿ ಯಾರಾಗಬೇಕೆಂಬ ವಿಚಾರದಲ್ಲಿ ಹೈಕಮಾಂಡ್ ತೀರ್ಮಾನಕ್ಕೆ ನಾವೆಲ್ಲರೂ ಬದ್ಧರಾಗಿದ್ದೇವೆ.



ಬೆಂಗಳೂರು: ‘ಈ ಬಾರಿ 141 ಸ್ಥಾನ ಗೆದ್ದು ಅಧಿಕಾರ ಹಿಡಿಯುವುದು ಖಚಿತ. ನಾವು ನೀಡಿರುವ ಐದು ಗ್ಯಾರಂಟಿಗಳನ್ನು ಮೊದಲ ಸಚಿವ ಸಂಪುಟ ಸಭೆಯಲ್ಲೇ ಜಾರಿ ಮಾಡುತ್ತೇವೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ‘ಪ್ರಜಾವಾಣಿ’ಗೆ ಅವರು ನೀಡಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ.

• ಮತದಾನಕ್ಕೆ ಇನ್ನು ಎರಡೇ ದಿನ. ನಿಮ್ಮ ಮುಂದಿರುವ ಸವಾಲು ಏನು?

ಅವರು (ಬಿಜೆಪಿ) ಅಧಿಕಾರವನ್ನು ಎಷ್ಟು ದುರುಪಯೋಗ ಮಾಡಿಕೊಳ್ಳಲು ಪ್ರಯತ್ನಿಸುತ್ತಾರೊ ಅದನ್ನು ತಡೆಯುವುದೇ ನಮ್ಮ ಮುಂದಿರುವ ದೊಡ್ಡ ಸವಾಲು. ಸಾಂವಿಧಾನಿಕ, ಸರ್ಕಾರಿ ಸಂಸ್ಥೆಗಳನ್ನು ಅವರು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ತಮ್ಮ ಚುನಾವಣಾ ಪ್ರಚಾರಕ್ಕೆ ಅನುಕೂಲವಾಗುವಂತೆ ಡಬಲ್ ಎಂಜಿನ್ ಸರ್ಕಾರ, ಡಬಲ್ ರಸ್ತೆಗಳನ್ನು ಹೇಗೆ ಬಳಸಿದೆ ನೀವೇ ನೋಡಿ. ಆದರೆ, ನಮಗೆ ಅನುಮತಿ ಕೊಟ್ಟಿಲ್ಲ. ರಸ್ತೆಗಳನ್ನೇ ಅವರು ರಾಜಕೀಯ ಮೈದಾನಗಳನ್ನಾಗಿ ಮಾಡಿಕೊಂಡಿದ್ದಾರೆ.

• ಭ್ರಷ್ಟಾಚಾರ ಆರೋಪಿಸಿ ‘ರೇಟ್ ಕಾರ್ಡ್’ ಸಹಿತ ಪ್ರಕಟಿಸಿದ ಚುನಾವಣಾ ಜಾಹೀರಾತಿಗೆ ನೋಟಿಸ್ ನೀಡಿದ್ದಾರಲ್ಲವೇ?

ಹೌದು. 24 ಗಂಟೆಯಲ್ಲಿ ಉತ್ತರ ನೀಡುವಂತೆ ನೋಟಿಸ್ ಬಂದಿದೆ. ನಾನು ಪ್ರಚಾರದಲ್ಲಿದ್ದೇನೆ. ಹೇಗೆ ಉತ್ತರ ಕೊಡಲಿ? ಅಷ್ಟಕ್ಕೂ ಆ ‘ರೇಟ್ ಕಾರ್ಡ್’ ನಮ್ಮದಲ್ಲ. ಅದಕ್ಕೆ ಯತ್ನಾಳ್, ವಿಶ್ವನಾಥ್, ಮಾಧ್ಯಮಗಳು ಸಾಕ್ಷ್ಯ. ಲಂಚ ಪ್ರಕರಣದ ಆರೋಪಿ ಮಾಡಾಳ್ ವಿರೂಪಾಕ್ಷಪ್ಪ, ಆತ್ಮಹತ್ಯೆ ಮಾಡಿಕೊಂಡ ಗುತ್ತಿಗೆದಾರ ಸಂತೋಷ್ ಪಾಟೀಲ ಸಾಕ್ಷ್ಯ ಅಲ್ಲವೇ? ನಮ್ಮದು ಶೇ 10 ಕಮಿಷನ್ ಸರ್ಕಾರ, ಶೇ 85 ಕಮಿಷನ್ ಸರ್ಕಾರ ಎಂದೂ ಮೋದಿ ಹೇಳಿದ್ರಲ್ಲ. ಅದಕ್ಕೆ ಎಲ್ಲಿದೆ ಸಾಕ್ಷ್ಯ?

• ಜೆಡಿಎಸ್ ಪ್ರಾಬಲ್ಯದ ಹಳೆ ಮೈಸೂರು ಭಾಗದಲ್ಲಿ ಎಷ್ಟು ಸ್ಥಾನ ನಿರೀಕ್ಷಿಸುತ್ತೀರಿ?

ನಮ್ಮ ರೈತರ ಬಗ್ಗೆ ನಂಬಿಕೆ ಇದೆ. ಈಗಾಗಲೇ ಬದಲಾವಣೆ ಕಾಣುತ್ತಿದೆ. ಕೆ.ಆರ್. ಪೇಟೆಯಲ್ಲಿ ಜೆಡಿಎಸ್‌ನ ದೇವರಾಜ್ ನಮ್ಮ ಕಡೆ ಬಂದಿದ್ದಾರೆ. ಅರಸೀಕೆರೆ ಶಿವಲಿಂಗೇಗೌಡ, ಗುಬ್ಬಿ ವಾಸು ನಮ್ಮ ಜೊತೆ ಇದ್ದಾರೆ. ಅವರೆಲ್ಲ ಕಾಂಗ್ರೆಸ್ ಸೇರಲು ದಡ್ಡರಾ? ಖಂಡಿತಾ ಆ ಭಾಗದಲ್ಲಿ ಸಾಧನೆ ಮಾಡುತ್ತೇವೆ.

• ಒಕ್ಕಲಿಗರು ಈ ಬಾರಿ ದೊಡ್ಡ ಪ್ರಮಾಣದಲ್ಲಿ ಡಿ.ಕೆ. ಶಿವಕುಮಾರ್ ಪರ ನಿಲ್ಲಬಹುದೇ?

ನನಗೆ ಜಾತಿಗಿಂತ ನೀತಿ ಮುಖ್ಯ. ಒಕ್ಕಲಿಗನಾಗಿ ಹುಟ್ಟಿದ್ದೇನೆ. ಅದಕ್ಕೆ ಅಭಿಮಾನವಿದೆ. ಎಲ್ಲರಿಗೂ ಅವಕಾಶ ಕೊಟ್ಟಾಗಿದೆ, ಶಿವಕುಮಾರ್‌ಗೂ ಕೊಡಬೇಕೆಂದು ಒಕ್ಕಲಿಗರು ಬಯಸಿದರೆ ತಪ್ಪೇನು? ಹಾಗೆಂದು, ನಾನು ಒಂದೇ ಜಾತಿಯನ್ನು ಅವಲಂಬಿಸಿಲ್ಲ.

ಪ್ರಜಾವಾಣಿ ಸಂದರ್ಶನ

ಡಿ.ಕೆ. ಶಿವಕುಮಾರ್

• ಈ ಬಾರಿ 141 ಸೀಟು ಗೆಲ್ಲುತ್ತೇವೆಂಬ ನಿಮ್ಮ ವಿಶ್ವಾಸಕ್ಕೆ ಬಲವಾದ ಕಾರಣವೇನು?

ನಾನೊಬ್ಬ ರಾಜಕೀಯ ಕಾರ್ಯಕರ್ತ. 40 ವರ್ಷದ ರಾಜಕಾರಣ, 35 ವರ್ಷ ವಿಧಾನಸಭೆಯ ಅನುಭವ, ನನ್ನ ಪ್ರವಾಸ, ಜನ ತೋರಿಸಿದ ಪ್ರೀತಿ. ಕಷ್ಟದಲ್ಲಿದ್ದಾಗ, ತಿಹಾರ್ ಜೈಲಿನಲ್ಲಿದ್ದಾಗ ಜನ ಪ್ರೀತಿ ತೋರಿಸಿದ್ದಾರೆ. ಲಕ್ಷಾಂತರ ಜನರು ನನ್ನ ಬೆನ್ನಿಗೆ ನಿಂತು ಪ್ರತಿಭಟನೆ ನಡೆಸಿದ್ದಾರೆ. ಚುನಾವಣೆಯಲ್ಲೂ ಆ ಪ್ರೀತಿ ತೋರಿಸುವ ವಿಶ್ವಾಸವಿದೆ.

• ನಿಮ್ಮ ‘ಗ್ಯಾರಂಟಿ’ ಭರವಸೆಗಳು ಜನರಿಗೆ ತಲುಪಿದೆಯೇ?

ಶೇ ನೂರರಷ್ಟು ತಲುಪಿದೆ ಎಂದು ಹೇಳಲ್ಲ. ಆದರೆ, ನಮ್ಮ ಐದೂ ‘ಗ್ಯಾರಂಟಿ’ಗಳು ಬದುಕು ಕಟ್ಟಿಕೊಳ್ಳಲು ನೆರವಾಗಬಹುದೆಂಬ ವಿಶ್ವಾಸ ಜನರಲ್ಲಿ ಮೂಡಿದೆ. ಕೊಟ್ಟ ಮಾತನ್ನು ಉಳಿಸಿಕೊಳ್ಳುತ್ತೇವೆ. ಯಾವುದು ಅನುಷ್ಠಾನ ಮಾಡಲು ಸಾಧ್ಯವೋ ಅದನ್ನು ಘೋಷಿಸಿದ್ದೇವೆ.

• ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ರದ್ದುಗೊಳಿಸುವುದಾಗಿ ಪ್ರಣಾಳಿಕೆಯಲ್ಲಿ ಘೋಷಿಸಿದ್ದೀರಲ್ಲ?

ಅದು ರಾಷ್ಟ್ರೀಯ ಶಿಕ್ಷಣ ನೀತಿಯಲ್ಲ, ‘ನಾಗಪುರ ಶಿಕ್ಷಣ ನೀತಿ’ (ಎನ್‌ಇಪಿ). ಕರ್ನಾಟಕ ಈಗಾಗಲೇ ಶಿಕ್ಷಣ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ. ರಾಜ್ಯಕ್ಕೆ ಈ ನೀತಿಯ ಅಗತ್ಯವಿಲ್ಲ. ನಾಗಪುರ ಶಿಕ್ಷಣದ, ಆರೆಸ್ಸೆಸ್, ಬಿಜೆಪಿ ಕಾರ್ಯಸೂಚಿಯ ನೀತಿಯಿದು. ನಾವು ರದ್ದು ಮಾಡುವುದು ಶೇ ನೂರರಷ್ಟು ಖಚಿತ.

• ಜೆಡಿಎಸ್‌ಗೆ ಹಾಕಿದ ಪ್ರತಿ ಮತ ಕಾಂಗ್ರೆಸ್‌ಗೆ ಹಾಕಿದಂತೆ ಎಂದು ಮೋದಿ ಹೇಳುತ್ತಿದ್ದಾರಲ್ಲ?

ಅದು ಅವರ ಕಾರ್ಯತಂತ್ರ. ಅವರು ಬುದ್ಧಿವಂತ. ಆದರೆ, ಅವರ ಈ ಮಾತನ್ನು ನಾವು ಗಂಭೀರವಾಗಿ ತೆಗೆದುಕೊಂಡಿಲ್ಲ. 2018ರ ಚುನಾವಣೆಯಲ್ಲಿ ಮಂಡ್ಯದ ಎಲ್ಲ ಏಳು ಸ್ಥಾನಗಳು ಜೆಡಿಎಸ್ ಗೆದ್ದಿದೆ. ಆ ನಂತರ ಒಂದು ಕ್ಷೇತ್ರದ ಶಾಸಕ ‘ಆಪರೇಷನ್ ಕಮಲ’ಕ್ಕೆ ಬಲಿಯಾಗಿ ಬಿಜೆಪಿ ಸೇರಿದರು. ಮಂಡ್ಯದಲ್ಲಿ ಮೋದಿ ಯಾಕೆ ಜೆಡಿಎಸ್ ಬಗ್ಗೆ ಮಾತನಾಡಿಲ್ಲ. ಅದು ಏನು ಸಂದೇಶ ಕೊಡುತ್ತದೆ?

• ಹಾಗಿದ್ದರೆ, ಜೆಡಿಎಸ್– ಬಿಜೆಪಿ ಮಧ್ಯೆ ಒಳ ಒಪ್ಪಂದ ಇದೆ ಎಂದೇ?


ಅದನ್ನು ನಾನು ಹೇಳುವುದಿಲ್ಲ. ಆದರೆ, ಜೆಡಿಎಸ್ ಬಗ್ಗೆ ಮೋದಿ ಯಾಕೆ ಒಂದು ಶಬ್ದ ಕೂಡಾ ಮಾತನಾಡುತ್ತಿಲ್ಲ. ಮಂಡ್ಯದಲ್ಲಿ ಅವರು (ಬಿಜೆಪಿ) ಒಂದು ಕ್ಷೇತ್ರವನ್ನೂ ಗೆಲ್ಲಲ್ಲ.

• ಮೋದಿ ರೋಡ್ ಶೋದಿಂದ ಬಿಜೆಪಿ ಲಾಭ ಆಗಬಹುದೇ?

ಯಾವ ಪ್ರಭಾವ, ಪರಿಣಾಮವೂ ಆಗುವುದಿಲ್ಲ. ಪೆಟ್ರೋಲ್, ದಿನಬಳಕೆ ಪದಾರ್ಥಗಳ ಬೆಲೆ ಏರಿಕೆಯಿಂದ ಜನ ಬೇಸತ್ತಿದ್ದಾರೆ. ದಿನಾ ಪಿಕ್ ಪಾಕೆಟ್ ಆಗುತ್ತಿದೆ. ಮೋದಿ ತಮ್ಮ ಪ್ರಯಾಣಕ್ಕೆ ಭಾರತೀಯ ವಾಯುಪಡೆ ವಿಮಾನವನ್ನು ಬಳಸುತ್ತಿದ್ದಾರೆ. ಹೊರಗಿನಿಂದ ಏನೆಲ್ಲ ತರಲು ಸಾಧ್ಯವೋ ಅದನ್ನೆಲ್ಲ ತಂದು ಬಳಸುತ್ತಿದ್ದಾರೆ. ಇದನ್ನು ಚುನಾವಣಾ ಆಯೋಗ ನೋಡಬೇಕು. ಜಾಗೃತ ದಳವೂ ಕಣ್ಣಿಡಬೇಕು.

‘ದಳಪತಿ’ ಸಿ.ಎಂ ಅಸ್ತ್ರಕ್ಕೆ ‘ಸೈನಿಕ’ನ ಪ್ರತ್ಯಸ್ತ್ರ

• ಆರ್. ಜಿತೇಂದ್ರ



ಕುಮಾರಸ್ವಾಮಿ



ಯೋಗೇಶ್ವರ್

ಚನ್ನಪಟ್ಟಣ ಗಮನ ಸೆಳೆದ ಕಣ

ಸಾಕ್ಷಾತ್ ಸಮೀಕ್ಷೆ

ರಾಮನಗರ: ‘ಮತ್ತೊಮ್ಮೆ ಮುಖ್ಯಮಂತ್ರಿ’ಯಾಗುವ ವಿಶ್ವಾಸದೊಂದಿಗೆ ಚನ್ನಪಟ್ಟಣ ಕ್ಷೇತ್ರದ ಕಣದಲ್ಲಿರುವ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹಾಗೂ ಕ್ಷೇತ್ರದ ಮಗನಿಗೆ ಅವಕಾಶ ನೀಡಿ ಎಂದು ‘ಸ್ವಾಭಿಮಾನ’ದ ಹೆಸರಲ್ಲಿ ಪೈಪೋಟಿ ಒಡ್ಡಿರುವ ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ನಡುವಿನ ಜಿದ್ದಾಜಿದ್ದಿ ಗಮನ ಸೆಳೆದಿದೆ.


ಇದರೊಂದಿಗೆ ಹಾಲಿ ಹಾಗೂ ಮಾಜಿ ಪ್ರಧಾನಿಗಳ ಅಬ್ಬರದ ಪ್ರಚಾರ ಕೂಡ ಭಾರಿ ಸದ್ದು ಮಾಡಿದ್ದು, ಈ ಬಾರಿಯೂ ಗೆಲುವಿಗಾಗಿ ಜೆಡಿಎಸ್– ಬಿಜೆಪಿ ನಡುವೆ ತೀವ್ರ ಹಣಾಹಣಿ ನಡೆದಿದೆ.

ಜೆಡಿಎಸ್ ಅಭ್ಯರ್ಥಿಗಳ ಪರ ಪುತ್ರ ಎಚ್.ಡಿ. ಕುಮಾರಸ್ವಾಮಿ ಅವರನ್ನು ರಾಜ್ಯದಾದ್ಯಂತ ಪ್ರಚಾರಕ್ಕೆ ಕಳುಹಿಸಿರುವ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ಕ್ಷೇತ್ರದಲ್ಲಿ ತಾವೇ ದಳಪತಿಯಾಗಿ ‘ಸೈನಿಕ’ನ ವಿರುದ್ಧ ತೊಡೆತಟ್ಟಿ ನಿಂತಿದ್ದಾರೆ. ಚುನಾವಣೆ ಘೋಷಣೆ ಆದಾಗಿನಿಂದ ನಾಲ್ಕಾರು ಬಾರಿ ಭೇಟಿ ನೀಡಿದ್ದಾರೆ. ಇಳಿವಯಸ್ಸಿನಲ್ಲೂ ಅವರ ಉತ್ಸಾಹ ಕಂಡು ಜೆಡಿಎಸ್ ಕಾರ್ಯಕರ್ತರು ಹುರುಪಿನಲ್ಲಿದ್ದಾರೆ. ಬಿಜೆಪಿಯು ಇದನ್ನೇ ‘ಪುತ್ರ ವ್ಯಾಮೋಹ’ ಎಂದು ಜರಿಯುತ್ತಿದೆ.

ಪ್ರಧಾನಿ ನರೇಂದ್ರ ಮೋದಿ ಇದೇ ಮೊದಲ ಬಾರಿಗೆ ಚನ್ನಪಟ್ಟಣದಲ್ಲಿ ಪ್ರಚಾರ ನಡೆಸಿದ್ದು, ಇದು ಗೆಲುವಿಗೆ ಮುನ್ನುಡಿ ಆಗಲಿದೆ ಎಂದು ಯೋಗೇಶ್ವರ್ ವಿಶ್ವಾಸದಲ್ಲಿದ್ದಾರೆ. ದೇವೇಗೌಡರ ಮೂಲಕ ಮೋದಿ ಅಲೆಯನ್ನು ಪುಡಿಗಟ್ಟುವ ವಿಶ್ವಾಸ ಜೆಡಿಎಸ್‌ನದ್ದು.

ಈ ಕಿಚ್ಚು ನಾಯಕರಿಗೆ ಮಾತ್ರ ಸೀಮಿತವಾಗಿಲ್ಲ. ಕ್ಷೇತ್ರದ ಯಾವುದೇ ಹಳ್ಳಿ ಅಥವಾ ಮನೆಗೆ ಹೋದರೂ ಎರಡೂ ಪಕ್ಷಗಳ ಕಾರ್ಯಕರ್ತರ ನಡುವಿನ ತುರುಸಿನ ರಾಜಕೀಯ ಪೈಪೋಟಿ ಎದ್ದು ಕಾಣುತ್ತದೆ. ಈ ಇಬ್ಬರ ಅಬ್ಬರದಲ್ಲಿ ಕೈ ಪಡೆ ಮಂಕಾದಂತೆ ಕಾಣುತ್ತಿದೆ.

ಚನ್ನಪಟ್ಟಣದಲ್ಲಿ ಒಕ್ಕಲಿಗರ ಪ್ರಾಬಲ್ಯ ಇದೆ. ಕುಮಾರಸ್ವಾಮಿ ಈ ಸಮುದಾಯದ ಮನ್ನಣೆ ಗಳಿಸಿದ್ದು, ಮುಖ್ಯಮಂತ್ರಿ ಅಭ್ಯರ್ಥಿ ಎಂಬ ಕಾರಣಕ್ಕೆ ಕಳೆದ ಬಾರಿ ಇಲ್ಲಿನ ಜನರು ಅವರನ್ನು ಆರಿಸಿದ್ದರು. ಈ ಬಾರಿ ಕೂಡ ಅದೇ ಪುನರಾವರ್ತನೆ ಆಗಲಿದೆ ಎನ್ನುವ ವಿಶ್ವಾಸ ಅವರದ್ದು.



ಬಿಜೆಪಿ ಅಭ್ಯರ್ಥಿ ಯೋಗೇಶ್ವರ್ ರಾಜಕೀಯ ಬದುಕು ಅವರ ಸಿನಿಮಾಗಳಷ್ಟೇ ವರ್ಣರಂಜಿತವಾಗಿದೆ. ಇಲ್ಲಿಂದ ಏಳು ಬಾರಿ ಸ್ಪರ್ಧೆ ಮಾಡಿರುವ ಅವರು, ಐದರಲ್ಲಿ ಗೆಲುವು ಕಂಡಿದ್ದಾರೆ. 1999ರಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿ ಗೆಲುವಿನ ಖಾತೆ ತೆರೆದ ಯೋಗೇಶ್ವರ್ ನಂತರದಲ್ಲಿ ಎರಡು ಬಾರಿ ಕಾಂಗ್ರೆಸ್, ಒಮ್ಮೆ ಬಿಜೆಪಿಯಿಂದಲೂ ಗೆದ್ದಿದ್ದಾರೆ. 2013ರಲ್ಲಿ ಈ ಭಾಗದ ಜನರಿಗೆ ಪರಿಚಯವೇ ಇಲ್ಲದ ‘ಸೈಕಲ್’ ಚಿಹ್ನೆ ತೋರಿಸಿಯೂ ವಿಜಯಶಾಲಿ ಆಗಿದ್ದಾರೆ. ಈ ಬಾರಿ ವೈಯಕ್ತಿಕ ವರ್ಚಸ್ಸಿನ ಜೊತೆ ಮೋದಿ ಪ್ರಭಾವವನ್ನೂ ಅವರು ನೆಚ್ಚಿಕೊಂಡಿದ್ದಾರೆ.

ಸ್ವಾಭಿಮಾನಿ ಅಸ್ತ್ರ: ಕಳೆದ ಚುನಾವಣೆಯ ಸೋಲಿನ ಸೇಡಿನ ತವಕದಲ್ಲಿರುವ ಯೋಗೇಶ್ವರ್, ವರ್ಷದ ಹಿಂದಿನಿಂದಲೇ ಸ್ಥಳೀಯ ಜೆಡಿಎಸ್ ಮುಖಂಡರಿಗೆ ಗಾಳ ಹಾಕಿ ಬಿಜೆಪಿಯತ್ತ ಎಳೆದಿದ್ದಾರೆ. ಮೂರ್ನಾಲ್ಕು ತಿಂಗಳಿಂದ ‘ಸ್ವಾಭಿಮಾನಿ ಸಂಕಲ್ಪ ನಡಿಗೆ’ ಹೆಸರಲ್ಲಿ ಊರೂರು ಸುತ್ತಿರುವ ಅವರು, ಈ ಬಾರಿ ಕ್ಷೇತ್ರದ ಮಗನಿಗೇ ಅವಕಾಶ ನೀಡಿ ಎಂದು ಸ್ವಾಭಿಮಾನದ ಅಸ್ತ್ರ ಪ್ರಯೋಗಿಸಿದ್ದಾರೆ.

ಜೆಡಿಎಸ್ ಪರ ದೇವೇಗೌಡರ ಪರಿವಾರದವರೇ ಕ್ಷೇತ್ರ ಪ್ರಚಾರದ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ. ಕಾಂಗ್ರೆಸ್‌ನ ಸಂಭಾವ್ಯ ಅಭ್ಯರ್ಥಿಯಾಗಿದ್ದ ಪ್ರಸನ್ನಗೌಡರನ್ನೇ ‘ಹೈಜಾಕ್’ ಮಾಡಿರುವ ಎಚ್‌ಡಿಕೆ, ಗೋವಿಂದ ರಾಜು ಸೇರಿದಂತೆ ಯೋಗೇಶ್ವರ್ ಅನೇಕ ಆಪ್ತರನ್ನೂ ಸೆಳೆದು ತಿರುಗೇಟು ನೀಡಿದ್ದಾರೆ.

ನೀರಾವರಿ ಶ್ರೇಯಸ್ಸಿಗೆ ಕಿತ್ತಾಟ: ಕೆರೆ ತುಂಬಿಸುವ ಯೋಜನೆಗಳಿಂದ ನಾಡಿನ ಗಮನ ಸೆಳೆದ ಕ್ಷೇತ್ರ ಚನ್ನಪಟ್ಟಣ. ಸದ್ಯ ಇಲ್ಲಿನ 120ಕ್ಕೂ ಹೆಚ್ಚು ಕೆರೆಗಳು ಪೈಪ್‌ಲೈನ್ ಮೂಲಕ ಪ್ರತಿ ವರ್ಷ ಭರ್ತಿಯಾಗುತ್ತಿದ್ದು, ಕೃಷಿ ಮತ್ತು ಹೈನುಗಾರಿಕೆ ಮರುಜೀವ ಪಡೆದುಕೊಂಡಿದೆ. ಇದಕ್ಕೆ ತಾವೇ ಕಾರಣ ಎಂದು ದೇವೇಗೌಡ ಹಾಗೂ ಯೋಗೇಶ್ವರ್ ಇಬ್ಬರೂ ಶ್ರೇಯಸ್ಸಿಗಾಗಿ ಕಿತ್ತಾಡುತ್ತಿದ್ದಾರೆ. ಈ ಬಾರಿಯೂ ಇದೇ ಪ್ರಮುಖ ಚರ್ಚೆಯ ವಿಷಯವಾಗಿದೆ.

ಕ್ಷೇತ್ರಕ್ಕೆ ಅನುದಾನ ಬಿಡುಗಡೆ ವಿಚಾರದಲ್ಲಿ ಕುಮಾರಸ್ವಾಮಿ–ಯೋಗೇಶ್ವರ್ ಬೆಂಬಲಿಗರ ನಡುವೆ ಅನೇಕ ದಿನಗಳಿಂದ ಘರ್ಷಣೆ ನಡೆಯುತ್ತಲೇ ಇದೆ. ಒಂದೊಮ್ಮೆ ಇದು ಅತಿರೇಕಕ್ಕೆ ತಿರುಗಿ, ಭೂಮಿಪೂಜೆಗೆ ಬಂದ ಯೋಗೇಶ್ವರ್ ಕಾರಿಗೆ ಜೆಡಿಎಸ್ ಕಾರ್ಯಕರ್ತರು ಮೊಟ್ಟೆ ಎಸೆದ ಘಟನೆಯ ನೆನಪು ಇನ್ನೂ ಹಸಿರಾಗಿದೆ.

ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷ ಎಸ್. ಗಂಗಾಧರ್ ಕಡೆ ಕ್ಷಣದಲ್ಲಿ ಅಭ್ಯರ್ಥಿ ಆಗಿದ್ದಾರೆ. ಒಲ್ಲದ ಮನಸ್ಸಿನಿಂದ ನಾಮ ಪತ್ರ ಸಲ್ಲಿಸಿದ್ದರೂ ನಂತರದಲ್ಲಿ ಉತ್ಸಾಹದಿಂದ ಪ್ರಚಾರ ಮಾಡುತ್ತಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಭಾವ ಶರತ್‌ಚಂದ್ರ ಇಲ್ಲಿ ಆಮ್ ಆದ್ಮಿ ಪಕ್ಷದಿಂದ ಸ್ಪರ್ಧಿಸಿದ್ದಾರೆ. ಅವರ ಸ್ಪರ್ಧೆ ಯಾರ ಮೇಲೂ ಪರಿಣಾಮ ಬೀರಿಲ್ಲ. ಸೀಮಿತವಾಗಿ ಪ್ರಚಾರ ಮಾಡುತ್ತಿದ್ದು, ಹೊಸ ಪಕ್ಷ ಇಲ್ಲಿ ಮತದಾರರನ್ನು ಸೆಳೆಯುವಲ್ಲಿ ನಿರೀಕ್ಷಿಸಿದಷ್ಟು ಯಶಸ್ಸು ಕಾಣುತ್ತಿಲ್ಲ.

2008ರ ಚುನಾವಣೆ ಫಲಿತಾಂಶ

ಅಭ್ಯರ್ಥಿ	ಪಕ್ಷ	ಪಡೆದ ಮತ
ಸಿ.ಪಿ. ಯೋಗೇಶ್ವರ್	ಕಾಂಗ್ರೆಸ್	69,356
ಎಂ.ಸಿ. ಅಶ್ವತ್ಥ್	ಜೆಡಿಎಸ್	64,426
ಎನ್. ರಮೇಶ್	ಬಿಜೆಪಿ	3434

2013ರ ಚುನಾವಣೆ ಫಲಿತಾಂಶ

ಅಭ್ಯರ್ಥಿ	ಪಕ್ಷ	ಪಡೆದ ಮತ
ಸಿ.ಪಿ. ಯೋಗೇಶ್ವರ್	ಸಮಾಜವಾದಿ ಪಾರ್ಟಿ	80,999
ಅನಿತಾ ಕುಮಾರಸ್ವಾಮಿ	ಜೆಡಿಎಸ್	73,635
ಸಾದತ್ ಅಲಿ ಖಾನ್	ಕಾಂಗ್ರೆಸ್	8134

2018ರ ಚುನಾವಣೆ ಫಲಿತಾಂಶ

ಅಭ್ಯರ್ಥಿ	ಪಕ್ಷ	ಪಡೆದ ಮತ
ಎಚ್.ಡಿ.ಕುಮಾರಸ್ವಾಮಿ	ಜೆಡಿಎಸ್	87,995
ಸಿ.ಪಿ.ಯೋಗೇಶ್ವರ್	ಬಿಜೆಪಿ	66,465
ಎಚ್.ಎಂ. ರೇವಣ್ಣ	ಕಾಂಗ್ರೆಸ್	30,208



ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರು ನಾಗಮಂಗಲದಲ್ಲಿ ಭಾನುವಾರ ನಡೆಸಿದ ರೋಡ್ ಶೋನಲ್ಲಿ ಪಾಲ್ಗೊಂಡಿದ್ದ ಕಾರ್ಯಕರ್ತರು

ಗೌಡರಿಂದ ಭರ್ಜರಿ ರೋಡ್ ಶೋ

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರು ಭಾನುವಾರ ಪಟ್ಟಣದ ಮರಿಯಪ್ಪ ವೃತ್ತದಿಂದ ತಾಲ್ಲೂಕು ಕ್ರೀಡಾಂಗಣದವರೆಗೆ 2.5 ಕಿ.ಮೀ. ರೋಡ್ ಶೋ ನಡೆಸಿ, ಪಕ್ಷದ ಅಭ್ಯರ್ಥಿ ಸುರೇಶ್ ಗೌಡ ಪರ ಮತಯಾಚಿಸಿದರು. ನೆರೆದಿದ್ದ ಜನಸ್ತೋಮವನ್ನು ಕಂಡು ಸಂತಸ ವ್ಯಕ್ತಪಡಿಸಿದರು.

‘ಮಂಡ್ಯದಲ್ಲಿ ಪ್ರಧಾನಿ ನರೇಂದ್ರ ಮೋದಿ ನಡೆಸಿದ ರೋಡ್ ಶೋ ಅನ್ನು ಈ ಕಾರ್ಯಕ್ರಮ ಮೀರಿಸಿದೆ. ತಾಲ್ಲೂಕಿನ ಜನರು ತೋರುತ್ತಿರುವ ಪ್ರೀತಿ, ಅಭಿಮಾನಕ್ಕೆ ನಾನು ತಲೆಬಾಗುತ್ತೇನೆ’ ಎಂದರು.

(ದೊಡ್ಡಬಳ್ಳಾಪುರ ವರದಿ): ‘ವಿಷ ಸರ್ಪ, ವಿಷಕನ್ನೆಯರ ಬಗ್ಗೆ ಮಾತನಾಡುವ ಜನ ನಮಗೆ ಬೇಡ. ರೈತರು, ನೇಕಾರರು, ಕಾರ್ಮಿಕರ ಬದುಕು ಕುರಿತು ಮಾತನಾಡುವವರು ಮುಖ್ಯ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಕಾಂಗ್ರೆಸ್, ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ನಗರದಲ್ಲಿ ಭಾನುವಾರ ನಡೆದ ಜೆಡಿಎಸ್ ಪ್ರಚಾರ ಸಭೆಯಲ್ಲಿ ಮಾತನಾಡಿ, ‘ಯಾವ ಪಕ್ಷದವರು ಎಷ್ಟು ಕಮಿಷನ್ ಪಡೆಯುತ್ತಿದ್ದಾರೆ ಎಂದು ದೂರುವುದರಲ್ಲೇ ಕಾಂಗ್ರೆಸ್, ಬಿಜೆಪಿ ಕಾಲ ಕಳೆಯುತ್ತಿದೆ. ಕಮಿಷನ್ ನಿಲ್ಲಿಸುವ ಬಗ್ಗೆ ಯಾರೂ ಮತದಾರರಿಗೆ ಭರವಸೆ ನೀಡುತ್ತಿಲ್ಲ’ ಎಂದು ಟೀಕಿಸಿದರು.

‘ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಗುಜರಾತ್‌ನ 30ಕ್ಕೂ ಹೆಚ್ಚಿನ ಶಾಸಕರಿಗೆ ರಾಜ್ಯದ ಮತದಾರರ ಮೇಲೆ ಪ್ರೀತಿ ಮೂಡಿದೆ. ಈಗ ಕೈ ಮುಗಿದು ಹೋದರೆ ಮತ್ತೆ ಬರುವುದು ಚುನಾವಣೆ ಸಂದರ್ಭದಲ್ಲೇ ಎನ್ನುವುದನ್ನು ರಾಜ್ಯದ ಜನರು ಅರಿಯಬೇಕು’ ಎಂದರು.

ಕ್ಷೇತ್ರಕ್ಕೆ ಕಾಲಿಡಲು ವಿನಯ ಕುಲಕರ್ಣಿಗೆ ನಿರ್ಬಂಧ: ಪತ್ನಿ ಮಕ್ಕಳಿಂದಲೇ ಪ್ರಚಾರ

• ಇ.ಎಸ್.ಸುಧೀಂದ್ರ ಪ್ರಸಾದ್



ವಿನಯ ಕುಲಕರ್ಣಿ



ಅಮೃತ ದೇಸಾಯಿ

ಧಾರವಾಡ ಗಮನ ಸೆಳೆದ ಕಣ

ಸಾಕ್ಷಾತ್ ಸಮೀಕ್ಷೆ

ಧಾರವಾಡ: ಚುನಾವಣೆಯಲ್ಲಿ ಪ್ರತಿಷ್ಠಿತ ಶಿಗ್ಗಾವಿ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿರುದ್ಧ ಸ್ಪರ್ಧಿಸುವ ಅವಕಾಶ ವಿನಯ ಕುಲಕರ್ಣಿಗೆ ಇದ್ದಾಗಲೂ ಅದನ್ನು ನಿರಾಕರಿಸಿ ತಾವು ಪ್ರವೇಶಿಸಲಾಗದ ಧಾರವಾಡ ಕ್ಷೇತ್ರವನ್ನೇ ಆಯ್ಕೆ ಮಾಡಿಕೊಂಡಿದ್ದಾರೆ.

ಜಿಲ್ಲಾ ಪಂಚಾಯಿತಿ ಸದಸ್ಯ ಯೋಗೀಶ ಗೌಡ ಗೌಡರ ಕೊಲೆ ಪ್ರಕರಣದಲ್ಲಿ 15ನೇ ಆರೋಪಿ ಹಾಗೂ ಇದೇ ಪ್ರಕರಣದ ಸಾಕ್ಷ್ಯ ನಾಶ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿರುವ ವಿನಯ ಕುಲಕರ್ಣಿಗೆ ಜಿಲ್ಲಾ ಪ್ರತಿನಿಧಿಗಳ ನ್ಯಾಯಾಲಯ ಜಿಲ್ಲೆ ಪ್ರವೇಶವನ್ನು ನಿರ್ಬಂಧಿಸಿದೆ.

ಚುನಾವಣಾ ಪ್ರಚಾರಕ್ಕಾಗಿ ಕ್ಷೇತ್ರ ಭೇಟಿಗೆ 50 ದಿನಗಳ ಅನುಮತಿಯನ್ನು ಅವರು ಕೋರಿದ್ದರು. ಹೆಚ್ಚಿನ ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇರುವುದರಿಂದ ಪ್ರವೇಶ ನಿರಾಕರಿಸಬೇಕು ಎಂಬ ಸಿಬಿಐ ವಕೀಲರ ವಾದವನ್ನು ನ್ಯಾಯಾಲಯ ಎತ್ತಿಹಿಡಿಯಿತು. ಕನಿಷ್ಠ 30 ದಿನಗಳ ಅವಕಾಶವನ್ನೂ ನ್ಯಾಯಾಲಯ ತಿರಸ್ಕರಿಸಿತು. ಹೈಕೋರ್ಟ್ ಕೂಡ ಜನಪ್ರತಿನಿಧಿಗಳ ನ್ಯಾಯಾಲಯದ ಆದೇಶವನ್ನೇ ಎತ್ತಿಹಿಡಿದಿದ್ದರಿಂದ ಕ್ಷೇತ್ರದಿಂದ ಹೊರಗಿದ್ದುಕೊಂಡೇ ಸ್ಪರ್ಧಿಸಿ ಹೋರಾಡುತ್ತಿದ್ದಾರೆ.

ಈ ಹಿಂದೆ ಬಿಜೆಪಿಯಿಂದ ಅಮೃತ ದೇಸಾಯಿ ಗೆಲುವು ಸಾಧಿಸುವಲ್ಲಿ ಈ ಕೊಲೆ ಪ್ರಕರಣವೂ ಸಹಾಯಕವಾಗಿತ್ತು. ಇಬ್ಬರೂ ಲಿಂಗಾಯತ ಸಮುದಾಯಕ್ಕೆ ಸೇರಿದವರು. ಇಬ್ಬರೂ ಜಮೀನ್ದಾರರು.

ಪಂಚಮಸಾಲಿ ಮೀಸಲಾತಿ ಹೋರಾಟದಲ್ಲಿ ಮುಂಚೂಣಿಯಲ್ಲಿರುವ ವಿನಯ ಕುಲಕರ್ಣಿಗೆ ಈ ಸಮುದಾಯದವರ ಮತ ತಮಗೆ ಮೀಸಲು ಎಂಬ ನಿರೀಕ್ಷೆಯಲ್ಲಿದ್ದಾರೆ. ಬಣಜಿಗ ಸಮುದಾಯದ ಜಗದೀಶ ಶೆಟ್ಟರ್ ಅವರ ಕಾಂಗ್ರೆಸ್ ಸೇರ್ಪಡೆಯಿಂದ ಆ ಸಮುದಾಯದ ಬೆಂಬಲವೂ ಜೊತೆಗೂಡುವ ಲೆಕ್ಕಾಚಾರ ಕಾಂಗ್ರೆಸ್ ಪಕ್ಷದ್ದು. ಕಳೆದ ಚುನಾವಣೆಯಲ್ಲಿ ದೇಸಾಯಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಮತ್ತು ಕ್ಷೇತ್ರದಲ್ಲಿ ಉತ್ತಮ ಹಿಡಿತ ಹೊಂದಿರುವ ತವನಪ್ಪ ಅಷ್ಟಗಿ ಕಾಂಗ್ರೆಸ್ ಬೆಂಬಲಿಸಿರುವುದು ಬಲ ಹೆಚ್ಚಿಸಿದೆ.

ವಿನಯ ಕುಲಕರ್ಣಿಗೆ ಇದು ಮಾಡು ಇಲ್ಲವೇ ಮಡಿ ಚುನಾವಣೆ. 2018ರ ವಿಧಾನಸಭೆ, 2019ರ ಲೋಕಸಭಾ ಚುನಾವಣೆಯಲ್ಲಿ ಪರಾಭವದ ಜತೆಗೆ ಜಿಲ್ಲೆಯಿಂದಲೇ ದೂರ ಉಳಿದರು. ಜಿಲ್ಲೆಯ ಗಡಿಯಿಂದಾಚೆ ಕುಳಿತು ಸಾಮಾಜಿಕ ಜಾಲತಾಣ, ಡಿಜಿಟಲ್ ಮಾಧ್ಯಮಗಳ ಮೂಲಕ ತಮ್ಮನ್ನು ಗೆಲ್ಲಿಸಲು ಮತದಾರರಲ್ಲಿ ಕೋರುತ್ತಿದ್ದಾರೆ.

ಪತ್ನಿ, ಮಕ್ಕಳ ಕಣ್ಣೀರು: ಧಾರವಾಡ ತಾಲ್ಲೂಕಿನ 54 ಹಳ್ಳಿ ಹಾಗೂ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ 9 ವಾರ್ಡ್‌ಗಳನ್ನು ಒಳಗೊಂಡ ಧಾರವಾಡ ಕ್ಷೇತ್ರ. ಕ್ಷೇತ್ರದಿಂದ ಹೊರಗಿರುವ ಪತಿಯ ಗೆಲುವಿಗಾಗಿ ವಿನಯ ಕುಲಕರ್ಣಿ ಪತ್ನಿ ಶಿವಲೀಲಾ ಕುಲಕರ್ಣಿ ಬಿಡುವಿಲ್ಲದೆ ಕ್ಷೇತ್ರದ ಉದ್ದಗಲದಲ್ಲಿ ಮತಯಾಚಿಸುತ್ತಿದ್ದಾರೆ.

‘ವಿರೋಧಿಗಳ ಷಡ್ಯಂತ್ರಕ್ಕೆ ಕಳೆದ ಮೂರು ವರ್ಷಗಳಿಂದ ಪತಿ ಮನೆಗೆ ಬಾರದಂತಾಗಿದೆ’ ಎಂದು ಶಿವಲೀಲಾ ಕಣ್ಣೀರು ಸುರಿಸುತ್ತಿದ್ದಾರೆ. ‘ತಂದೆಯ ನೆನಪಾದರೆ ಮನೆಯಿಂದ ಮಾತ್ರವಲ್ಲ, ಜಿಲ್ಲೆಯಿಂದಲೇ ಹೊರಗೆ ಹೋಗಿ ನೋಡಿಬರುವ ಸ್ಥಿತಿ ನಮ್ಮದು’ ಎಂಬ ಮಕ್ಕಳ ಹೇಳಿಕೆ ಎಬ್ಬಿಸುತ್ತಿರುವ ಅನುಕಂಪದ ಅಲೆ ತಡೆಯಲು ಬಿಜೆಪಿ ನಾಯಕರು ‘ಕ್ಷೇತ್ರದಲ್ಲಿ ಶಾಂತಿ’ಯ ಮಂತ್ರ ಜಪಿಸುತ್ತಿದ್ದಾರೆ.

‘ಮನೆಗೊಬ್ಬ ವಿನಯ ಕುಲಕರ್ಣಿ’ ಎಂಬ ಅಭಿಯಾನ, ಕೇಸರಿ ಪಡೆಗಳನ್ನು ಹುಟ್ಟುಹಾಕಿ ಹನುಮ ಜಯಂತಿ, ರಾಮ ನವಮಿಗಳ ಆಚರಣೆಗಳಿಂದ ಕಾಂಗ್ರೆಸ್ ಹಿಂದೂ ಮತಗಳಿಗೆ ಲಗ್ಗೆ ಹಾಕಿದೆ.

ಅಮೃತ ದೇಸಾಯಿ ಸಾದರ ಲಿಂಗಾಯತ. ಕ್ಷೇತ್ರದಲ್ಲಿ ಅತ್ಯಂತ ಕಡಿಮೆ ಸಂಖ್ಯೆಯಲ್ಲಿರುವ ಸಮುದಾಯ ಇದು. ಬಿಜೆಪಿಯ ಸಾಂಪ್ರದಾಯಿಕ ಮತಗಳ ಜತೆಗೆ ಹಲವು ಹಳ್ಳಿಗಳಲ್ಲಿ ನೂರಾರು ಎಕರೆ ಜಮೀನು ಹೊಂದಿರುವ ಅವರು ಅಲ್ಲಿರುವ ‘ಗೇಣಿದಾರ’ರ ಬೆಂಬಲದ ನಿರೀಕ್ಷೆಯಲ್ಲಿದ್ದಾರೆ.

ವಿನಯ ವಿರುದ್ಧದ ಸ್ಪರ್ಧೆಯಲ್ಲಿ ದೇಸಾಯಿಯನ್ನು ಗೆಲ್ಲಿಸಲೇಬೇಕು ಎಂದು ಹಟ ಹೊತ್ತಿರುವ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಮುನಿಸಿಕೊಂಡವರ ಮನೆಗಳಿಗೆ ತೆರಳಿ ಅವರ ಮನವೊಲಿಸುವ ಯತ್ನ ನಡೆಸಿದ್ದಾರೆ. ಜಿಲ್ಲೆಯ ಹಿಡಿತ ಸಾಧಿಸಲು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹಾಗೂ ವಿನಯ ಕುಲಕರ್ಣಿ ನಡುವಿನ ಸ್ಪರ್ಧೆ ಇದು ಎಂದು ವಿಶ್ಲೇಷಿಸಲಾಗುತ್ತಿದೆ.

ಪ್ರಚಾರಕ್ಕೆ ಬಂದ ಬೊಮ್ಮಾಯಿ, ಯಡಿಯೂರಪ್ಪ, ಬಸನಗೌಡ ಪಾಟೀಲ ಯತ್ನಾಳ ಸೇರಿದಂತೆ ಯಾರೂ ಯೋಗೀಶ ಗೌಡ ಕೊಲೆ ಪ್ರಕರಣವನ್ನು ಈ ಚುನಾವಣೆಯಲ್ಲಿ ಪ್ರಸ್ತಾಪಿಸುತ್ತಿಲ್ಲ. ವಿನಯ ಕುಲಕರ್ಣಿ ಹೆಸರನ್ನೂ ತಮ್ಮ ಭಾಷಣದಲ್ಲಿ ಹೇಳಿಲ್ಲ!

ಕ್ಷೇತ್ರದಲ್ಲಿ ಲಿಂಗಾಯತ, ಕುರುಬ, ಮರಾಠಾ, ಮುಸ್ಲಿಂ ಮತಗಳು ನಿರ್ಣಾಯಕ. 2018ರಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ಅಭ್ಯರ್ಥಿ ನೋಟಾ ಮತಗಳಿಗಿಂತಲೂ ಕಡಿಮೆ ಮತ ಪಡೆದಿದ್ದರು. ಈ ಬಾರಿ ಮಂಜುನಾಥ ಹಗೇದಾರ ಅರವನ್ನು ಪಕ್ಷ ಕಣಕ್ಕಿಳಿಸಿದೆ.


ರೈತ ಹೋರಾಟಗಾರರಾದ ದಿ.ಬಾಬಾಗೌಡ ಪಾಟೀಲ ಹಾಗೂ ಪ್ರೊ.ಎಂ.ಡಿ.ನಂಜುಂಡ ಸ್ವಾಮಿ ಅವರು ಸ್ಪರ್ಧಿಸಿ ರಾಜ್ಯದ ಗಮನ ಸೆಳೆದಿದ್ದ ಧಾರವಾಡ ಕ್ಷೇತ್ರ, ಈಗ ಮತ್ತೆ ಕುತೂಹಲ ಕೆರಳಿಸಿರುವ ಕಣವಾಗಿದೆ.

ಜೈಲಲ್ಲಿದ್ದು ಗೆದ್ದಿದ್ದ ರವಿಕಾಂತ ಪಾಟೀಲ!



ಕ್ಷೇತ್ರದೊಳಗೆ ಅಭ್ಯರ್ಥಿಯೇ ಇಲ್ಲದೆ ಚುನಾವಣೆ ನಡೆದ ಉದಾಹರಣೆಗಳಲ್ಲಿ ವಿಜಯಪುರ ಜಿಲ್ಲೆಯ ಇಂಡಿ ಕ್ಷೇತ್ರವೂ ಒಂದು. 1999ರಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಕಣದಲ್ಲಿದ್ದ ರವಿಕಾಂತ ಪಾಟೀಲ ಅವರು ಪ್ರಕರಣವೊಂದರಲ್ಲಿ ಜೈಲು ಸೇರಿದ್ದರು.

ಚುನಾವಣೆ ಸಂದರ್ಭದಲ್ಲಿ ಅವರು ಸಲ್ಲಿಸಿದ್ದ ಪೆರೋಲ್‌ಗೆ ನ್ಯಾಯಾಲಯ ಅನುಮತಿ ನೀಡಿರಲಿಲ್ಲ. ಹೀಗಾಗಿ ಸೂಚಕರ ಮೂಲಕವೇ ಅವರು ನಾಮಪತ್ರ ಸಲ್ಲಿಸಿದ್ದರು. ಪತ್ನಿ ಹಾಗೂ ಬೆಂಬಲಿಗರು ಪ್ರಚಾರ ನಡೆಸಿದ್ದರು. ಫಲಿತಾಂಶ ರವಿಕಾಂತ ಪಾಟೀಲ ಅವರ ಪರವಾಗಿಯೇ ಬಂತು. ಚುನಾವಣೆ ಗೆಲ್ಲುವುದು ಮಾತ್ರವಲ್ಲದೇ, ಪ್ರಕರಣದಿಂದಲೂ ಅವರು ಖುಲಾಸೆಯಾಗಿದ್ದರು.



2013ರ ಚುನಾವಣಾ ಫಲಿತಾಂಶ

ಅಭ್ಯರ್ಥಿ	ಪಕ್ಷ	ಪಡೆದ ಮತ
ವಿನಯ ಕುಲಕರ್ಣಿ	ಕಾಂಗ್ರೆಸ್	53,453
ಅಮೃತ ದೇಸಾಯಿ	ಜೆಡಿಎಸ್	35,133
ತವನಪ್ಪ ಅಷ್ಟಗಿ	ಕೆಜೆಪಿ	21,589

2018ರ ಚುನಾವಣಾ ಫಲಿತಾಂಶ

ಅಭ್ಯರ್ಥಿ	ಪಕ್ಷ	ಪಡೆದ ಮತ
ಅಮೃತ ದೇಸಾಯಿ	ಬಿಜೆಪಿ	85,123
ವಿನಯ ಕುಲಕರ್ಣಿ	ಕಾಂಗ್ರೆಸ್	64,783
ತಿರಕಪ್ಪ ಜಮನಾಳ	ಜೆಡಿಎಸ್	1263

ಸೋಮವಾರ, ಮೇ 8, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 127 | ಪುಟ 18
www.prajavani.net
prajavani.net | prajavani | prajavani | prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ 9
ಇ-ಇನ್‌ವಾಯ್ಸ್ ಅಪ್‌ಲೋಡ್ ಕಾಲಮಿತಿ ಮುಂದೂಡಿಕೆ 10
ಬ್ರಿಜ್‌ಭೂಷಣ್ ಬಂಧನಕ್ಕೆ ಮೇ 21 ಗಡುವು 6
ಕೋಲ್ ಇಂಡಿಯಾ ಲಾಭ ಶೇ 17ರಷ್ಟು ಇಳಿಕೆ 10
ಗಿಲ್ ಅಬ್ಬರ, ಮೋಹಿತ್ ಬಿರುಗಾಳಿ 12

ಹೌಸ್‌ಬೋಟ್ ಮಗುಚಿ 20 ಮಂದಿ ಸಾವು

ಮಲಪ್ಪುರ(ಕೇರಳ) (ಪಿಟಿಐ): ಇಲ್ಲಿನ ತಾನೂರು ಪ್ರದೇಶದ ತುವಲ್‌ತೀರ ಬೀಚ್ ಬಳಿ ಭಾನುವಾರ ಪ್ರವಾಸಿ ಹೌಸ್ ಬೋಟ್ ಮಗುಚಿ 20 ಮಂದಿ ಮೃತಪಟ್ಟಿದ್ದಾರೆ. ಒಟ್ಟು 30 ಜನರು ಹೌಸ್‌ಬೋಟ್‌ನಲ್ಲಿ ಪ್ರಯಾಣಿಸುತ್ತಿದ್ದರು. 5

ಪ್ರಜಾ ಮತ
ಜನತಂತ್ರದ ಹಬ್ಬ

ಜನಾದೇಶ ಅಪಹರಣ ತಪ್ಪಿಸಲು ಕಾಂಗ್ರೆಸ್‌ಗೆ ಬಹುಮತ ನೀಡಿ 4
‘ಆಮದು ಶುಲ್ಕ ಹೆಚ್ಚಿಸಿ ಅಡಿಕೆ ಬೆಳೆಗಾರರ ರಕ್ಷಣೆ’ 4
ಮೋದಿ ಅಂಗರಕ್ಷಕನ ಕುತ್ತಿಗೆಗೆ ತಾಗಿದ ಮೊಬೈಲ್ 4

ಚಿನಕುರಳಿ
ಪ್ರಕಾಶ್ ಶೆಟ್ಟಿ





ರಾಷ್ಟ್ರೀಯ ನಾಯಕರು, ಸ್ಥಳೀಯ ನಾಯಕರಿಂದ ಭಾರಿ ರೋಡ್ ಶೋ, ಸಮಾವೇಶ

ಅತಿರಥರ ಮಹಾ ಮತ ಪ್ರಚಾರ

ಪ್ರಜಾವಾಣಿ ವಾರ್ತೆ





ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಬೆಂಗಳೂರಿನ ಏರ್‌ಲೈನ್ಸ್ ಹೋಟೆಲ್‌ನಲ್ಲಿ ಗಿಗ್ ಕಾರ್ಮಿಕರ ಜೊತೆ ಭಾನುವಾರ ಸಂವಾದ ನಡೆಸಿದರು –ಪಿಟಿಐ ಚಿತ್ರ (ಎಡಚಿತ್ರ) ಬೆಂಗಳೂರಿನ ಇಂದಿರಾನಗರದ ಸಿ.ಎಂ.ಎಚ್ ರಸ್ತೆಯಲ್ಲಿ ಪ್ರಧಾನಿ ಮೋದಿ ಅವರು ಅಭಿಮಾನಿಗಳತ್ತ ಹೂವು ಎಸೆದರು –ಪ್ರಜಾವಾಣಿ ಚಿತ್ರ/ ರಂಜು ಪಿ

ಬೆಂಗಳೂರು: ಬಹಿರಂಗ ಪ್ರಚಾರಕ್ಕೆ ತೆರೆ ಬೀಳಲು ಒಂದು ದಿನವಷ್ಟೇ ಬಾಕಿ ಇದ್ದು, ವಿವಿಧ ಪಕ್ಷಗಳ ಘಟಾನುಘಟಿ ನಾಯಕರು ರಾಜ್ಯದ ವಿವಿಧೆಡೆ ಭಾನುವಾರ ಅಬ್ಬರದ ಪ್ರಚಾರ ನಡೆಸಿದರು. ರೋಡ್ ಶೋ, ಬಹಿರಂಗ ಸಭೆಗಳ ಮೂಲಕ ಮತದಾರರನ್ನು ತಮ್ಮ ಪಕ್ಷದ ಅಭ್ಯರ್ಥಿಗಳತ್ತ ಸೆಳೆಯುವ ಕಸರತ್ತು ನಡೆಸಿದರು.

ರಾಜ್ಯದಲ್ಲಿಯೇ ಬೀಡುಬಿಟ್ಟಿದ್ದ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ತಮ್ಮ ಪಕ್ಷದ ಹುರಿಯಾಳುಗಳ ಪರವಾಗಿ ಮತಯಾಚಿಸಿ, ಕೊನೆಯ ದಿನಗಳ ಪ್ರಚಾರಕ್ಕೆ ರಂಗು ತಂದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರು ಇಡೀ ದಿನ ಚುನಾವಣಾ ಪ್ರಚಾರದಲ್ಲಿ ನಿರತರಾದರು. ಪ್ರತಿ ಸ್ಪರ್ಧಿ ಪಕ್ಷಗಳ ದೌರ್ಬಲ್ಯಗಳನ್ನೇ ಪ್ರಧಾನವಾಗಿ ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ ನಾಯಕರು, ತಮ್ಮ ಹೆಗ್ಗಳಿಕೆಯನ್ನು ಹೇಳಿಕೊಳ್ಳಲು ಮರೆಯಲಿಲ್ಲ. ದಿನದಿಂದ ದಿನಕ್ಕೆ ಬದಲಾಗುತ್ತಿರುವ ಮತದಾರರ ಮನಸ್ಸನ್ನು ತಮ್ಮ ಕಡೆಗೆ ಸೆಳೆದು, ಮತ ಬದಲಿಸುವ ಯತ್ನವನ್ನೂ ನಡೆಸಿದರು. ರಾಜ್ಯದ ಹಲವು ನಾಯಕರು ಪ್ರತ್ಯೇಕವಾಗಿ ಕಾರ್ಯಕ್ರಮಗಳಲ್ಲಿ ಭಾಗಿಯಾದರು.

ಬೆಂಗಳೂರಿನಲ್ಲಿ ಶನಿವಾರ 26 ಕಿ.ಮೀ. ರೋಡ್ ಶೋ ನಡೆಸಿದ್ದ ಪ್ರಧಾನಿ, ಭಾನುವಾರ 6.5 ಕಿ.ಮೀ. ರೋಡ್ ಶೋ ಮೂಲಕ ಆರು ಕ್ಷೇತ್ರಗಳಲ್ಲಿ ಸಂಚರಿಸಿದರು. ಅಲ್ಲಿಂದ ಶಿವಮೊಗ್ಗ, ನಂಜನಗೂಡಿನಲ್ಲಿ ಸಭೆಯಲ್ಲಿ ಭಾಗಿಯಾದರು. ನಂಜನಗೂಡಿನಲ್ಲಿ ಶ್ರೀಕಂಠೇಶ್ವರನ ದರ್ಶನ ಪಡೆದು ದೆಹಲಿಗೆ ಹಿಂದಿರುಗಿದರು.

ಅಮಿತ್ ಶಾ, ಜೆ.ಪಿ. ನಡ್ಡಾ ಸೇರಿದಂತೆ ಕೇಂದ್ರದ ಹಲವು ಸಚಿವರು, ಬಿಜೆಪಿಯ ಪ್ರಮುಖ ನಾಯಕರು ರಾಜ್ಯದ ಉದ್ದಗಲ ಪ್ರಚಾರ ನಡೆಸಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಕೂಡ ಕೆಲವೆಡೆ ಪ್ರಚಾರದಲ್ಲಿ ಭಾಗಿಯಾದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತವರು ಜಿಲ್ಲೆ ಕಲಬುರಗಿಯಲ್ಲೇ ಪ್ರಚಾರ ನಡೆಸಿದರು. ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಬೆಂಗಳೂರು ಹಾಗೂ ಮಂಗಳೂರಿನ ಹಲವು ಕ್ಷೇತ್ರಗಳಲ್ಲಿ ಬಿರುಸಿನ ಪ್ರಚಾರ ನಡೆಸಿದರು.

ಬೆಂಗಳೂರಿನ ಏರ್‌ಲೈನ್ಸ್ ಹೋಟೆಲ್‌ನಲ್ಲಿ ಗಿಗ್ ಕಾರ್ಮಿಕರ (ಕಂಪೆನಿಗಳ ಬೇಡಿಕೆಗೆ ಅನುಗುಣವಾಗಿ, ಗುತ್ತಿಗೆ ಆಧಾರದಲ್ಲಿ, ಫ್ರೀಲ್ಯಾನ್ಸ್ ರೂಪದಲ್ಲಿ ಕೆಲಸ ಮಾಡುವವರು) ಜತೆ ಸಭೆ ನಡೆಸಿದ ರಾಹುಲ್ ಗಾಂಧಿ, ಅವರ ಕಷ್ಟಸುಖಗಳನ್ನು ಆಲಿಸಿ, ಅವರ ಜತೆ ಉಪಾಹಾರ ಸೇವಿಸಿದರು. ಬಳಿಕ, ಡೆಲಿವರಿ ಕಾರ್ಮಿಕರೊಬ್ಬರ ಜತೆ ದ್ವಿಚಕ್ರವಾಹನದಲ್ಲಿ ಕೆಲ ದೂರ ಪ್ರಯಾಣವನ್ನೂ ಮಾಡಿ ಸಂಭ್ರಮಿಸಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತವರು ಜಿಲ್ಲೆ ಮೈಸೂರಿನ ನಾಲ್ಕು ಕ್ಷೇತ್ರಗಳಲ್ಲಿ ಬಹಿರಂಗ ಸಭೆಗಳಲ್ಲಿ ಭಾಗಿಯಾದರು.

ಯಾರ್‍ಯಾರು, ಎಲ್ಲೆಲ್ಲಿ ಪ್ರಚಾರ?

- ನರೇಂದ್ರ ಮೋದಿ– ಬೆಂಗಳೂರಿನಲ್ಲಿ 6.5 ಕಿ.ಮೀ. ರೋಡ್ ಶೋ, ಶಿವಮೊಗ್ಗ ಮತ್ತು ನಂಜನಗೂಡಿನಲ್ಲಿ ಬಹಿರಂಗ ಸಭೆ, ಶ್ರೀಕಂಠೇಶ್ವರ ದೇವಸ್ಥಾನಕ್ಕೆ ಭೇಟಿ
- ಅಮಿತ್ ಶಾ– ಬೆಳಗಾವಿ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ಆನೇಕಲ್‌ನಲ್ಲಿ ರೋಡ್ ಶೋ, ಬಾಗಲಕೋಟೆಯಲ್ಲಿ ಕೂಡಲಸಂಗಮ ಕ್ಷೇತ್ರಕ್ಕೆ ಭೇಟಿ, ಬಹಿರಂಗ ಸಭೆ
- ಜೆ.ಪಿ. ನಡ್ಡಾ– ಹರಪನಹಳ್ಳಿ, ಬಳ್ಳಾರಿಯಲ್ಲಿ ರೋಡ್ ಶೋ, ಕೂಡ್ಲಿಗಿಯಲ್ಲಿ ಬಹಿರಂಗ ಸಭೆ
- ಮಲ್ಲಿಕಾರ್ಜುನ ಖರ್ಗೆ–ಕಲಬುರಗಿ ಗ್ರಾಮಾಂತರ, ವಾಡಿ, ಕಲಬುರಗಿ ಉತ್ತರದಲ್ಲಿ ಬಹಿರಂಗ ಸಭೆ
- ರಾಹುಲ್ ಗಾಂಧಿ– ಆನೇಕಲ್, ಪುಲಕೇಶಿನಗರ, ಶಿವಾಜಿನಗರದಲ್ಲಿ ಸಭೆ
- ಪ್ರಿಯಾಂಕಾ ಗಾಂಧಿ– ಮೂಡುಬಿದಿರೆ ಬಹಿರಂಗ ಸಭೆ, ಮಹದೇವಪುರ ರೋಡ್ ಶೋ, ಬೆಂಗಳೂರು ದಕ್ಷಿಣ, ಶಿವಾಜಿನಗರದಲ್ಲಿ ಬಹಿರಂಗ ಸಭೆ
- ಎಚ್.ಡಿ. ದೇವೇಗೌಡ– ನಾಗಮಂಗಲ, ತುಮಕೂರು ನಗರ, ಮಳವಳ್ಳಿ, ಮೇಲುಕೋಟೆಯಲ್ಲಿ ರೋಡ್ ಶೋ ಮತ್ತು ಸಭೆ
- ಬಸವರಾಜ ಬೊಮ್ಮಾಯಿ– ಕನಕಪುರದಲ್ಲಿ ರೋಡ್ ಶೋ ಮತ್ತು ಸಭೆ, ಶಿಗ್ಗಾವಿಯಲ್ಲಿ ಪ್ರಚಾರ
- ಬಿ.ಎಸ್. ಯಡಿಯೂರಪ್ಪ– ಹಿರೇಕೆರೂರು ಮತ್ತು ಶಿವಮೊಗ್ಗದಲ್ಲಿ ಬಹಿರಂಗ ಸಭೆ
- ಸಿದ್ದರಾಮಯ್ಯ– ಎಚ್.ಡಿ. ಕೋಟೆ, ಕೆ.ಆರ್.ನಗರ, ಪಿರಿಯಾಪಟ್ಟಣ, ಹುಣಸೂರಿನಲ್ಲಿ ಬಹಿರಂಗ ಸಭೆ
- ಡಿ.ಕೆ. ಶಿವಕುಮಾರ್– ಪ್ರಿಯಾಂಕಾ ಗಾಂಧಿ ಅವರೊಂದಿಗೆ ಬಹಿರಂಗ ಸಭೆಗಳಲ್ಲಿ ಭಾಗಿ
- ಎಚ್.ಡಿ. ಕುಮಾರಸ್ವಾಮಿ– ಮಾಗಡಿ, ತುಮಕೂರು ಗ್ರಾಮಾಂತರ, ದೊಡ್ಡಬಳ್ಳಾಪುರ, ಗೌರಿಬಿದನೂರು, ಕೋಲಾರ, ಚಿಕ್ಕಬಳ್ಳಾಪುರ, ಮಂಗಳೂರಿನಲ್ಲಿ ರೋಡ್ ಶೋ ಮತ್ತು ಬಹಿರಂಗ ಸಭೆ.


ಬಹಿರಂಗ ಪ್ರಚಾರ ಇಂದು ತೆರೆ

ಮತದಾನ ಅಂತ್ಯಗೊಳ್ಳುವ 48 ಗಂಟೆಗಳ ಮೊದಲು ಬಹಿರಂಗ ಪ್ರಚಾರ ಮುಕ್ತಾಯವಾಗಬೇಕಿದೆ. ಬುಧವಾರ ಮತದಾನ ನಡೆಯುವುದರಿಂದ ಸೋಮವಾರ ಸಂಜೆ 6 ಗಂಟೆಗೆ ಬಹಿರಂಗ ಪ್ರಚಾರ ಅಂತ್ಯಗೊಳ್ಳಲಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

ಹೊರ ರಾಜ್ಯಗಳಿಂದ ಬಂದಿರುವವರು ಸೋಮವಾರವೇ ರಾಜ್ಯದಿಂದ ಹೊರ ಹೋಗಬೇಕು. ಸ್ಥಳೀಯರು ಮಾತ್ರ ಮಂಗಳವಾರ ಸಂಜೆ 6ರವರೆಗೆ ಮನೆ, ಮನೆ ಪ್ರಚಾರ ನಡೆಸಲು ಅವಕಾಶ ಇದೆ.

‘ಜನರ ಕಷ್ಟಕ್ಕೆ ಮಿಡಿದ ಸರ್ಕಾರ’

ಪ್ರಜಾವಾಣಿ ವಾರ್ತೆ



ಬಸವರಾಜ ಬೊಮ್ಮಾಯಿ

ಬೆಂಗಳೂರು: ‘ನಮ್ಮದು ಪ್ರಗತಿಪರ ಮತ್ತು ಜನರ ಕಷ್ಟಕ್ಕೆ ಮಿಡಿಯುವ ಸರ್ಕಾರ ಎಂಬುದು ಜನರಿಗೆ ಮನವರಿಕೆಯಾಗಿದೆ. ಜನರ ಅಪಾರ ಬೆಂಬಲದೊಂದಿಗೆ ಮತ್ತೆ ಅಧಿಕಾರಕ್ಕೆ ಬರಲಿದ್ದೇವೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

‘ಪ್ರಜಾವಾಣಿ’ಗೆ ನೀಡಿದ ಸಂದರ್ಶನದಲ್ಲಿ, ‘ನಾನು ಅಧಿಕಾರ ವಹಿಸಿಕೊಂಡಾಗ ಇನ್ನೂ ಕೋವಿಡ್ ಇತ್ತು. ಲಸಿಕೆ ಕಾರ್ಯಕ್ರಮವನ್ನು ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಸಮರ್ಥವಾಗಿ ನಿಭಾಯಿಸಿದೆವು. ಪ್ರವಾಹ ಸಂಕಷ್ಟದಲ್ಲಿ ಸಂತ್ರಸ್ತರ ಜತೆಯಲ್ಲಿ ಸರ್ಕಾರ ಇದೆ ಎಂದು ತೋರಿಸಿದ್ದೇವೆ. ಕೋವಿಡ್ ನಂತರ ರಾಜ್ಯದ ಆರ್ಥಿಕ ಸ್ಥಿತಿಯನ್ನು ನಿರೀಕ್ಷೆಗೂ ಮೀರಿ ಸುಧಾರಿಸಿದ್ದೇವೆ. ಪ್ರತಿ ವರ್ಷ 13 ಲಕ್ಷ ಉದ್ಯೋಗಗಳನ್ನು ಸೃಷ್ಟಿ ಮಾಡಿದ್ದೇವೆ’ ಎಂದರು.

ಭ್ರಷ್ಟಾಚಾರ ಕುರಿತ ಪ್ರಶ್ನೆಗೆ, ‘ನಾನು ಅಧಿಕಾರ ಸ್ವೀಕರಿಸುವ ಮೊದಲೇ ಗುತ್ತಿಗೆದಾರರ ಸಂಘ ಶೇ 40 ಕಮಿಷನ್ ಬಗ್ಗೆ ಪ್ರಧಾನಿ ಕಚೇರಿಗೆ ಪತ್ರ ಬರೆದಿತ್ತು. ಒಂದು ಬೆರಳು ನನ್ನ ಕಡೆ ತೋರಿಸಿದಾಗ, ಮತ್ತೆ ಮೂರು ಬೆರಳು ಅವರ ಕಡೆ ತೋರಿಸುತ್ತದೆ. ಯಾರು ಕಳ್ಳರಿರುತ್ತಾರೋ ಅವರು ಮತ್ತೊಬ್ಬರನ್ನು ಕಳ್ಳ ಎನ್ನುತ್ತಾರೆ. ಲೋಕಾಯುಕ್ತವನ್ನೇ ಮುಗಿಸಿ, ಬಚಾವಾದವರು ತಮ್ಮ ಕಾಲದ ತಪ್ಪನ್ನು ಮುಚ್ಚಿಕೊಳ್ಳಲು ಈಗ ಶೇ 40 ಕಮಿಷನ್ ಆರೋಪ ಮಾಡಿದ್ದಾರೆ. ಇದು ಕಾಂಗ್ರೆಸ್‌ನ ಚಿತಾವಣೆ ಎಂದು ಹೇಳಿದರು.

ಸಂದರ್ಶನದ ಪೂರ್ಣ ಪಾಠ IV

ಬದಲಾವಣೆಗಾಗಿ ಜನ ಮತಗಟ್ಟೆಗೆ ಬರಲಿದ್ದಾರೆ: ಡಿಕೆಶಿ

ಪ್ರಜಾವಾಣಿ ವಾರ್ತೆ



ಡಿ.ಕೆ. ಶಿವಕುಮಾರ್

ಬೆಂಗಳೂರು: ‘ರಾಜ್ಯದ ಜನರು ಅತಂತ್ರ ಸ್ಥಿತಿಯಲ್ಲಿ ರಚನೆಯಾದ ಸರ್ಕಾರವನ್ನೂ ನೋಡಿದ್ದಾರೆ. ಡಬಲ್ ಎಂಜಿನ್ ಸರ್ಕಾರವನ್ನೂ ನೋಡಿದ್ದಾರೆ. ಈ ಬಾರಿ ಬದಲಾವಣೆಗಾಗಿ ಮತಗಟ್ಟೆಗೆ ಹೋಗುತ್ತಾರೆ. ಅವರಲ್ಲಿ ಯಾವುದೇ ಗೊಂದಲ ಇಲ್ಲ. ಪರ್ಯಾಯವನ್ನು ಅವರು ನಿರ್ಧರಿಸುತ್ತಾರೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

‘ಪ್ರಜಾವಾಣಿ’ಗೆ ನೀಡಿದ ಸಂದರ್ಶನದಲ್ಲಿ, ‘ಮೋದಿ ಅಬ್ಬರದ ಪ್ರಚಾರ ಮತದಾರರ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಆದರೆ, ಬಿಜೆಪಿಯವರು ಸಾಂವಿಧಾನಿಕ, ಸರ್ಕಾರಿ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಅವರು ಏನೆಲ್ಲಾ ಮಾಡಿದರೂ ಕಾಂಗ್ರೆಸ್ ಈ ಬಾರಿ ಸ್ಪಷ್ಟ ಬಹುಮತ ಪಡೆದು ಗದ್ದುಗೆಗೆ ಏರಲಿದೆ’ ಎಂದರು.

‘ಮೊದಲ ಸಂಪುಟ ಸಭೆಯಲ್ಲಿಯೇ ಐದೂ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಒಪ್ಪಿಗೆ ನೀಡುತ್ತೇವೆ. ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ರಾಷ್ಟ್ರೀಯ ಶಿಕ್ಷಣ ನೀತಿ ರದ್ದುಪಡಿಸುವುದು ಶೇ 100ರಷ್ಟು ಖಚಿತ. ಶಾಂತಿ ಭಂಗ ಮಾಡುವ ಸಂಘಟನೆಗಳ ನಿಷೇಧ ವಿಚಾರದಿಂದಲೂ ಹಿಂದೆಸರಿಯುವ ಪ್ರಶ್ನೆಯೇ ಇಲ್ಲ’ ಎಂದರು.

ಸಂದರ್ಶನದ ಪೂರ್ಣ ಪಾಠ IV

ಮಣಿಪುರ: ಕಣ್ಗಾವಲು ಹೆಚ್ಚಿಸಿದ ಸೇನೆ

ಇಂಫಾಲ್ (ಪ್ರಜಾವಾಣಿ ವಾರ್ತೆ/ ಪಿಟಿಐ): ಹಿಂಸಾಚಾರದಿಂದ ತತ್ತರಿಸಿದ್ದ ಮಣಿಪುರದ ಕೆಲ ಭಾಗಗಳಲ್ಲಿ ಭಾನುವಾರ ನಿಷೇಧಾಜ್ಞೆಯನ್ನು ಭಾಗಶಃ ತೆರವುಗೊಳಿಸಲಾಗಿದೆ.

ಸೇನೆಯು ಡ್ರೋನ್, ಹೆಲಿಕಾಪ್ಟರ್‌ಗಳನ್ನು ನಿಯೋಜನೆ ಮಾಡುವ ಮೂಲಕ ಗಲಭೆಪೀಡಿತ ಪ್ರದೇಶಗಳ ಮೇಲೆ ತೀವ್ರ ನಿಗಾ ಇರಿಸಿದೆ.

‘ಭದ್ರತಾ ಪಡೆಗಳಿಗೆ ಸೇರಿದ ಶಸ್ತ್ರಾಸ್ತ್ರಗಳನ್ನು ಗಲಭೆಕೋರರು ಲೂಟಿ ಮಾಡಿದ್ದರು. ಈ ಪೈಕಿ 134 ಆಯುಧಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಮಣಿಪುರ ಸರ್ಕಾರಕ್ಕೆ ಭದ್ರತಾ ಸಲಹೆಗಾರರಾಗಿ ನೇಮಕವಾಗಿರುವ ಕುಲದೀಪ್ ಸಿಂಗ್ ಹೇಳಿದ್ದಾರೆ.

‘10ಕ್ಕೂ ಹೆಚ್ಚು ಸ್ಥಳಗಳಲ್ಲಿ ಶಾಂತಿ ಸಭೆ ನಡೆಸಲಾಗಿದೆ’ ಎಂದಿರುವ ಅವರು, ಲೂಟಿ ಮಾಡಿದ ಆಯುಧಗಳು ವಶದಲ್ಲಿ ಇದ್ದಲ್ಲಿ ತಕ್ಷಣವೇ ಮರಳಿಸಬೇಕು’ ಎಂದು ಜನರಿಗೆ ಮನವಿ ಮಾಡಿದ್ದಾರೆ.

ಗಲಭೆಯಿಂದ ಹೆಚ್ಚು ಬಾಧಿತವಾಗಿರುವ ಚುರಚಾಂದ್‌ಪುರ ಪಟ್ಟಣದಲ್ಲಿ ಬೆಳಿಗ್ಗೆ 7ರಿಂದ 10 ಗಂಟೆ ವರೆಗೆ ಕರ್ಫ್ಯೂ ಸಡಿಲಿಸಲಾಗಿತ್ತು. ಜನರು ಅಗತ್ಯ ವಸ್ತುಗಳನ್ನು ಖರೀದಿಸಲು ಮುಗಿಬಿದ್ದಿದ್ದ ದೃಶ್ಯಗಳು ಸಾಮಾನ್ಯವಾಗಿದ್ದವು.

ಈ ಅವಧಿ 10 ಗಂಟೆಗೆ ಮುಕ್ತಾಯಗೊಂಡ ಬೆನ್ನಲ್ಲೇ, ಸೇನೆ ಹಾಗೂ ಅಸ್ಸಾಂ ರೈಫಲ್ಸ್‌ನ ಯೋಧರು ಪಟ್ಟಣದಲ್ಲಿ ಪಥಸಂಚಲನ ನಡೆಸಿದರು.

ಮುಖ್ಯಾಂಶಗಳು

- ಭದ್ರತಾ ಪಡೆಗಳ 120–125 ತುಕಡಿ ನಿಯೋಜನೆ
- ಅರೆಸೇನಾ ಪಡೆ, ಕೇಂದ್ರೀಯ ಪೊಲೀಸ್ ಪಡೆಯಿಂದ ನಿಗಾ

‘ರಾಜಸ್ಥಾನ ‘ಕೈ’ ಸರ್ಕಾರ ಉಳಿಸಿದ್ದ ಬಿಜೆಪಿ ನಾಯಕರು’

ಧೋಲ್‌ಪುರ (ರಾಜಸ್ಥಾನ), (ಪಿಟಿಐ): ‘2020ರಲ್ಲಿ ನಮ್ಮ ಪಕ್ಷದ ಶಾಸಕರು ಬಂಡಾಯವೆದ್ದಿದ್ದಾಗ ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೇ ಹಾಗೂ ಬಿಜೆಪಿಯ ಇತರ ಇಬ್ಬರು ನಾಯಕರು ನನ್ನ ನೆರವಿಗೆ ಧಾವಿಸಿದ್ದರು. ಸರ್ಕಾರ ಉಳಿಸಲು ಅವರು ಸಹಾಯ ಮಾಡಿದ್ದರು’ ಎಂದು ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಭಾನುವಾರ ಹೇಳಿದ್ದಾರೆ. 6

ಆ. 31ರೊಳಗೆ ವರದಿ ಸಲ್ಲಿಸಲು ಎನ್‌ಜಿಟಿ ಆದೇಶ

ಕಸಾಯಿಖಾನೆಗೂ ‘ಪರಿಸರ ಅನುಮತಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ಕಸಾಯಿಖಾನೆಗಳು ಹಾಗೂ ಮಾಂಸ ಸಂಸ್ಕರಣಾ ಘಟಕಗಳನ್ನು ‘ಪರಿಸರ ಅನುಮೋದನೆ’ ವ್ಯಾಪ್ತಿಗೆ ಸೇರಿಸುವ ಕುರಿತು ಕ್ರಮ ಕೈಗೊಳ್ಳುವಂತೆ ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯಕ್ಕೆ ರಾಷ್ಟ್ರೀಯ ಹಸಿರು ನ್ಯಾಯಪೀಠ (ಎನ್‌ಜಿಟಿ) ನಿರ್ದೇಶನ ನೀಡಿದೆ.

ನ್ಯಾಯಮೂರ್ತಿ ಆದರ್ಶಕುಮಾರ್ ಗೋಯಲ್ ನೇತೃತ್ವದ ಎನ್‌ಜಿಟಿಯ ಪ್ರಧಾನ ಪೀಠ ಅರ್ಜಿ ವಿಚಾರಣೆ ನಡೆಸಿತು. ಈ ಕುರಿತು ಕೈಗೊಂಡ ಕ್ರಮಗಳ ಬಗ್ಗೆ ಆಗಸ್ಟ್ 31ರೊಳಗೆ ವರದಿ ಸಲ್ಲಿಸುವಂತೆ ಸಚಿವಾಲಯಕ್ಕೆ ನಿರ್ದೇಶನ ನೀಡಿದ ನ್ಯಾಯಪೀಠ, ವಿಚಾರಣೆಯನ್ನು ಸೆಪ್ಟೆಂಬರ್ 14ಕ್ಕೆ ಮುಂದೂಡಿತು.

ಕಸಾಯಿಖಾನೆಗಳಿಂದ ಹಲವು ಸಮಸ್ಯೆಗಳು ಸೃಷ್ಟಿಯಾಗುತ್ತಿದ್ದು, ಪರಿಸರದ ಮೇಲಾಗುತ್ತಿರುವ ಪರಿಣಾಮಗಳ ಮೌಲ್ಯಮಾಪನ ಹಾಗೂ ನಿಯಂತ್ರಣಕ್ಕಾಗಿ ಸಮರ್ಪಕ ಚೌಕಟ್ಟು ಇಲ್ಲ ಎಂದು ಅರ್ಜಿ ಸಲ್ಲಿಸಲಾಗಿತ್ತು.

ಈ ವಿಷಯ ಕುರಿತು ಕ್ರಮ ಕೈಗೊಳ್ಳುವಂತೆ ಪರಿಸರ ಮತ್ತು ಅರಣ್ಯ ಸಚಿವಾಲಯ ನೇಮಿಸಿದ್ದ ತಜ್ಞರ ಸಮಿತಿ ಶಿಫಾರಸುಗಳನ್ನು ಮಾಡಿತ್ತು. ಆದರೆ, ಕೇಂದ್ರ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಅರ್ಜಿದಾರರು ದೂರಿದ್ದಾರೆ.

ಎಸ್‌ಎಸ್‌ಎಲ್‌ಸಿ ಫಲಿತಾಂಶ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 2022–23ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶ ಮೇ 8ರಂದು ಬೆಳಿಗ್ಗೆ 10ರ ವೇಳೆಗೆ ಪ್ರಕಟವಾಗಲಿದೆ ಎಂದು ಕರ್ನಾಟಕ ಶಾಲಾ ಪರೀಕ್ಷಾ ಮತ್ತು ಮೌಲ್ಯನಿರ್ಣಯ ಮಂಡಳಿ ತಿಳಿಸಿದೆ.

ಬೆಳಿಗ್ಗೆ 11ರ ಬಳಿಕ http://karresults.nic.in ಜಾಲತಾಣದಲ್ಲೂ ವಿದ್ಯಾರ್ಥಿಗಳು ಫಲಿತಾಂಶ ವೀಕ್ಷಿಸಬಹುದು. ಮಧ್ಯಾಹ್ನ ಆಯಾ ಶಾಲೆಗಳಲ್ಲೂ ಪ್ರಕಟಿಸಲಾಗುವುದು. ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದ ಮೊಬೈಲ್ ಸಂಖ್ಯೆಗೆ ಎಸ್‌ಎಂಎಸ್ ಮೂಲಕವೂ ಫಲಿತಾಂಶದ ವಿವರ ಕಳುಹಿಸಲಾಗುವುದು ಎಂದು ಮಂಡಳಿ ತಿಳಿಸಿದೆ

ಮಾರ್ಚ್ 31ರಿಂದ ಏಪ್ರಿಲ್ 15ರ ವರೆಗೆ ರಾಜ್ಯದ 3,305 ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆದಿದ್ದವು. 8.42 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಹೆಸರು ನೋಂದಾಯಿಸಿಕೊಂಡಿದ್ದರು. ಜಿಲ್ಲಾ ಕೇಂದ್ರಗಳಲ್ಲೂ ಮೌಲ್ಯಮಾಪನ ಕಾರ್ಯ ನಡೆದಿದ್ದು, 63 ಸಾವಿರ ಶಿಕ್ಷಕರು ಭಾಗವಹಿಸಿದ್ದರು.

₹4.85 ಕೋಟಿ ನಗದು ವಶ

ಪ್ರಜಾವಾಣಿ ವಾರ್ತೆ

ಮದ್ದೂರು/ ಬ್ಯಾಡಗಿ: ಮಂಡ್ಯ ಜಿಲ್ಲೆಯ ಮದ್ದೂರು ಹಾಗೂ ಹಾವೇರಿ ಜಿಲ್ಲೆಯ ಬ್ಯಾಡಗಿಯಲ್ಲಿ ಭಾನುವಾರ ಚುನಾವಣಾಧಿಕಾರಿಗಳು ಮತ್ತು ಆದಾಯ ತೆರಿಗೆ ಇಲಾಖೆ ನಡೆಸಿದ ಪ್ರತ್ಯೇಕ ದಾಳಿಗಳಲ್ಲಿ ಒಟ್ಟು ₹4.85 ಕೋಟಿ ನಗದು ವಶಪಡಿಸಿಕೊಳ್ಳಲಾಗಿದೆ.

ಮದ್ದೂರು ವರದಿ: ಕಾಂಗ್ರೆಸ್ ಅಭ್ಯರ್ಥಿ ಕದಲೂರು ಉದಯ್ ಆಪ್ತರಾಗಿ ಗುರುತಿಸಿಕೊಂಡಿರುವ ಪಟ್ಟಣದ ದೊಡ್ಡಿ ಬೀದಿಯ ನಿವಾಸಿ ಸುರೇಶ್ ಬಾಬು ಅವರ ಮನೆಯಲ್ಲಿ ಚುನಾವಣಾಧಿಕಾರಿಗಳು ಭಾನುವಾರ ಮುಂಜಾನೆ ಶೋಧ ನಡೆಸಿ ₹2 ಕೋಟಿ ನಗದನ್ನು ವಶಕ್ಕೆ ಪಡೆದಿದ್ದಾರೆ.

ಚುನಾವಣಾ ಫ್ಲೈಯಿಂಗ್ ಸ್ಕ್ವಾಡ್ ಅಧಿಕಾರಿಗಳು ಹಾಗೂ ಪಿಎಸ್‌ಐ ಉಮೇಶ್ ಶೋಧ ನಡೆಸಿದ್ದಾರೆ. ಇನ್ನೂ ಇಬ್ಬರು ಆಪ್ತರ ಮನೆಗಳಲ್ಲಿ ಶೋಧ, ಅಲ್ಲಿ ನಗದು ಸಿಕ್ಕಿಲ್ಲ ಎಂಬ ಮಾಹಿತಿ ಲಭ್ಯವಾಗಿದೆ. ಸುರೇಶ್ ಬಾಬು ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಬ್ಯಾಡಗಿ ವರದಿ: ಪಟ್ಟಣದ ವಿದ್ಯಾನಗರದ ಮೆಣಸಿನಕಾಯಿ ವರ್ತಕ, ಎಪಿಎಂಸಿ ಮಾಜಿ ಅಧ್ಯಕ್ಷ ಹಾಗೂ ಕಾಂಗ್ರೆಸ್ ಮುಖಂಡ ಚನ್ನಬಸಪ್ಪ ಹುಲ್ಲತ್ತಿ ಅವರ ಮನೆಯಲ್ಲಿ ಆದಾಯ ತೆರಿಗೆ ಅಧಿಕಾರಿಗಳು ಶೋಧ ಮಾಡಿದ್ದು ಒಟ್ಟು ₹2.85 ಕೋಟಿ ನಗದು ವಶಪಡಿಸಿಕೊಂಡಿದ್ದಾರೆ.

ಬೆಂಗಳೂರು ಆದಾಯ ತೆರಿಗೆ ಇಲಾಖೆಯ ಸೂಚನೆ ಮೇರೆಗೆ ದಾವಣಗೆರೆ ವಲಯದ ಅಧಿಕಾರಿಗಳು ಕಾರ್ಯಾಚರಣೆ ನಡೆಸಿದ್ದಾರೆ.

ಶಿಡೇನೂರ ಎಪಿಎಂಸಿಗೆ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದರು.

ಬಾಗ್ಮನೆ ಸಮೂಹದಲ್ಲಿ ಐ.ಟಿ ಶೋಧ

ಬೆಂಗಳೂರು ವರದಿ: ಚುನಾವಣಾ ಅಕ್ರಮಕ್ಕೆ ಹಣ ಪೂರೈಸುತ್ತಿರುವ ಶಂಕೆ ಮೇಲೆ ಬಾಗ್ಮನೆ ಸಮೂಹಕ್ಕೆ ಸೇರಿದ ಕೆಲವು ಸ್ಥಳಗಳ ಮೇಲೆ ದಾಳಿಮಾಡಿರುವ ಆದಾಯ ತೆರಿಗೆ ಅಧಿಕಾರಿಗಳು, ಶೋಧ ನಡೆಸಿದ್ದಾರೆ.

ಬಾಗ್ಮನೆ ಸಮೂಹದ ಮಾಲೀಕರು ಕೋರಮಂಗಲದಲ್ಲಿ ಹೊಂದಿರುವ ಮನೆ, ನಗರದ ಕೆಲವು ಅಪಾರ್ಟ್‌ಮೆಂಟ್‌ಗಳು ಹಾಗೂ ಕಚೇರಿಗಳಲ್ಲಿ ಶನಿವಾರವೇ ಶೋಧ ನಡೆಸಲಾಗಿತ್ತು. ಭಾನುವಾರವೂ ಶೋಧ ನಡೆಸ ಲಾಗಿದೆ ಎಂದು ಮೂಲಗಳು ತಿಳಿಸಿವೆ.

ರೈತನ ಹೆಸರಿನಲ್ಲಿ ನಕಲಿ ಮತದಾನ ಗುರುತಿನ ಚೀಟಿ

ಬೆಂಗಳೂರು: ರೈತರೊಬ್ಬರ ಹೆಸರಿನಲ್ಲಿ ನಕಲಿ ಮತದಾನ ಗುರುತಿನ ಚೀಟಿ (ಎಪಿಕ್) ಹಾಗೂ ಇತರೆ ದಾಖಲೆ ಸೃಷ್ಟಿಸಿ ಅಪರಾಧ ಪ್ರಕರಣದ ಆರೋಪಿಗೆ ಜಾಮೀನು ಕೊಡಿಸಲಾಗಿದ್ದು, ಈ ಸಂಬಂಧ ಹಲಸೂರು ಗೇಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬೆಂಗಳೂರು ಉತ್ತರ ತಾಲ್ಲೂಕಿನ ರೈತ ಅರಸಪ್ಪ ಕೃತ್ಯದ ಬಗ್ಗೆ ದೂರು ನೀಡಿದ್ದಾರೆ. ಕೃಷ್ಣ ಅಲಿಯಾಸ್ ವಿಜಯ ಕೃಷ್ಣ ಭೋಸ್ಲೆ ಹಾಗೂ ಇತರರ ವಿರುದ್ಧ ಎಫ್ಐಆರ್ ದಾಖಲಿಸಿಕೊಳ್ಳ ಲಾಗಿದೆ' ಎಂದು ಪೊಲೀಸರು ಹೇಳಿದರು.

'ಅರಸಪ್ಪ ಅವರಿಗೆ ಮೇ 3ರಂದು ನೋಟಿಸ್ ಕಳುಹಿಸಿದ್ದ ಗ್ರಾಮ ಲೆಕ್ಕಾಧಿಕಾರಿ, ಜಾಮೀನು ಶ್ಯೂರಿಟಿ ಮೊತ್ತ ₹ 50 ಸಾವಿರ ಪಾವತಿ ಸುವಂತೆ ಹೇಳಿದ್ದರು. ತಾವು ಯಾರಿಗೂ ಜಾಮೀನು ನೀಡಿಲ್ಲವೆಂದು ಅರಸಪ್ಪ ಉತ್ತರಿಸಿದ್ದರು.' 'ಅರಸಪ್ಪ ಕೋರ್ಟ್‌ಗೆ ಹಾಜರಾದಾಗ ಜಾಮೀನು ಪ್ರಕರಣದ ಬಗ್ಗೆ ದಾಖಲೆ ಸೃಷ್ಟಿಸಿದ್ದ ಪ್ರಕರಣ ಗೊತ್ತಾಗಿದೆ' ಎಂದು ಹೇಳಿದರು.


'ಅರಸಪ್ಪ ಜಮೀನಿನ ಪಹಣಿಯನ್ನು ಆನ್‌ಲೈನ್ ಮೂಲಕ ಪಡೆದುಕೊಂಡಿದ್ದ ಆರೋಪಿಗಳು, ಅದನ್ನು ಬಳಸಿಕೊಂಡು ಹಲವು ದಾಖಲೆ ಸಿದ್ಧಪಡಿಸಿದ್ದರು. ಅರಸಪ್ಪ ಹೆಸರಿನಲ್ಲಿ ವ್ಯಕ್ತಿಯೊಬ್ಬರನ್ನು ಹುಟ್ಟು ಹಾಕಿದ್ದರು' ಎಂದು ರೈತ ದೂರಿನಲ್ಲಿ ತಿಳಿಸಿದ್ದಾರೆ.

'ಕೃಷ್ಣನನ್ನು ಜೈಲಿನಿಂದ ಹೊರಗೆ ಕರೆತರಲು ಕೃತ್ಯ ಎಸಗಿದ್ದಾರೆ. ಕೃಷ್ಣನನ್ನು ವಿಚಾರಣೆ ನಡೆಸಬೇಕಿದೆ' ಎಂದು ಪೊಲೀಸರು ಹೇಳಿದರು.

ಗಾಂಧಿನಗರ ವಿಧಾನಸಭಾ ಕ್ಷೇತ್ರ : ಮಾಜಿ ಸಚಿವ ಕೃಷ್ಣಯ್ಯ ಶೆಟ್ಟಿ ಪಕ್ಷೇತರರಾಗಿ ಕಣಕ್ಕೆ

ಕಾಂಗ್ರೆಸ್–ಬಿಜೆಪಿ ಮಧ್ಯೆ 'ಕ್ಲೈಮ್ಯಾಕ್ಸ್'

• ರವಿ ಪ್ರಕಾಶ್ .ಎಸ್



ಕ್ಷೇತ್ರ	2008	2013	2018
ಗಾಂಧಿನಗರ	ಕಾಂಗ್ರೆಸ್	ಕಾಂಗ್ರೆಸ್	ಕಾಂಗ್ರೆಸ್



ದಿನೇಶ್ ಗುಂಡೂರಾವ್ | ಸಪ್ತಗಿರಿ ಗೌಡ | ಕೃಷ್ಣಯ್ಯ ಶೆಟ್ಟಿ

ಪ್ರಜಾ ಮತ ಜನತಂತ್ರದ ಹಬ್ಬ ಕರ್ನಾಟಕ ವಿಧಾನಸಭಾ ಚುನಾವಣೆ - 2023

ಸಾಕ್ಷಾತ್ ಸಮೀಕ್ಷೆ

ಬೆಂಗಳೂರು: ನಗರದ ವಾಣಿಜ್ಯ ಕೇಂದ್ರ ಬಿಂದುವಾಗಿರುವ ಗಾಂಧಿನಗರ ವಿಧಾನಸಭೆ ಕ್ಷೇತ್ರದಲ್ಲಿ ಈ ಬಾರಿ ಕಾಂಗ್ರೆಸ್ ಮತ್ತು ಬಿಜೆಪಿ ಮಧ್ಯೆ ತುರುಸಿನ ಪೈಪೋಟಿ ನಡೆದಿದೆ.

ಕೋವಿಡ್ ಬಳಿಕ ನಡೆಯುತ್ತಿರುವ ಈ ಚುನಾವಣೆ ಗಾಂಧಿ ನಗರದಲ್ಲಿ ಕೋವಿಡ್ ಕಾಲದ ಚರ್ಚೆ ಈಗಲೂ ನಡೆಯುತ್ತಿರುವುದು ವಿಶೇಷ. ಆಡಳಿತಾರೂಢ ಬಿಜೆಪಿ ಪರ ಮತ್ತು ವಿರೋಧ ಅಭಿಪ್ರಾಯಗಳು ಕೇಳಿ ಬರುತ್ತಿವೆ. ಇತರೆ ಯಾವುದೇ ಕ್ಷೇತ್ರಕ್ಕಿಂತ ಇಲ್ಲಿ ಕೋವಿಡ್‌ನಿಂದ ಬಾಧಿತರಾದವರು ಹೆಚ್ಚು. ಇಲ್ಲಿ ಕಾರ್ಮಿಕರ ಸಂಖ್ಯೆಯೂ ಅಧಿಕ. ಸಂಕಷ್ಟಕ್ಕೀಡಾದವರಲ್ಲಿ ಇವರೇ ಅಧಿಕ. ಹೀಗಾಗಿ ಕಣ ರಂಗೇರಿದೆ.

ಕಾಂಗ್ರೆಸ್‌ನಿಂದ ದಿನೇಶ್ ಗುಂಡೂರಾವ್ ಈ ಬಾರಿಯೂ ಕಣದಲ್ಲಿದ್ದಾರೆ. ಬಿಜೆಪಿಯಿಂದ ಸಪ್ತಗಿರಿಗೌಡ ಕಠಿಣ ಸ್ಪರ್ಧೆ ನೀಡಿದ್ದಾರೆ. ಆದರೆ, ಬಿಜೆಪಿಯ ಟಿಕೆಟ್ ಆಕಾಂಕ್ಷಿಯಾಗಿ ಎರಡು ವರ್ಷಗಳಿಂದ ಈ ಕ್ಷೇತ್ರದಲ್ಲಿ ಓಡಾಟ ನಡೆಸಿದ್ದ ಮಾಜಿ ಸಚಿವ ಕೃಷ್ಣಯ್ಯ ಶೆಟ್ಟಿ ಪಕ್ಷೇತರರಾಗಿ ಕಣಕ್ಕೆ ಇಳಿದಿದ್ದಾರೆ. ಇವರು ಬಿಜೆಪಿ ಅಭ್ಯರ್ಥಿಯ ಮತಗಳನ್ನು ಕಸಿಯುವ ಭೀತಿ ಎದುರಾಗಿದೆ.

ಜೆಡಿಎಸ್‌ನಿಂದ ವಿ.ನಾರಾಯಣ ಸ್ವಾಮಿ ಅವರೂ ಕಣದಲ್ಲಿದ್ದಾರೆ. ಕಳೆದ ಬಾರಿ ಇವರು ಪ್ರಬಲ ಪೈಪೋಟಿ ನೀಡಿದ್ದರು. ಸಪ್ತಗಿರಿ ಗೌಡ ಮತ್ತು ಇವರ ನಡುವಿನ ಮತಗಳ ಅಂತರ ಸುಮಾರು 1,500 ದಷ್ಟಿತ್ತು. ಈ ಬಾರಿ ಒಟ್ಟು 15 ಮಂದಿ ಹುರಿಯಾಳುಗಳಿದ್ದಾರೆ. ಕೊಳೆಗೇರಿಗಳೇ ಹೆಚ್ಚಾಗಿದ್ದು ನಾಗರಿಕ ಸಮಸ್ಯೆಗಳೂ ಹೆಚ್ಚು.

ಅಭಿವೃದ್ಧಿ ವಿಚಾರದಲ್ಲಿ ಅ ಕ್ಕ ಪ ಕ್ಕ ದ ಕ್ಷೇತ್ರಗಳಿಗೆ ಹೋಲಿಸಿದರೆ ಇಲ್ಲಿ ಏನೇನೂ ಸಾಲದು ಎಂಬ ಮಾತು ಕೇಳಿಬರುತ್ತಿದೆ. ಪ್ರಧಾನಿ ಮೋದಿ ಅವರ ವರ್ಚಸ್ಸು, ಸರ್ಕಾರದ ಅಭಿವೃದ್ಧಿ ಕೆಲಸಗಳು ಸಹಾಯವಾಗಬಹುದು ಎಂಬ ಲೆಕ್ಕಾಚಾರ ಬಿಜೆಪಿಯದು. ಇಲ್ಲಿ ಪರಿಶಿಷ್ಟ ಜಾತಿ, ಪಂಗಡ, ತಮಿಳರು, ಮಾ ರ್ವಾ ಡಿ ಗ ಳು ಹೆಚ್ಚಾಗಿದ್ದಾರೆ.

ಸುದ್ದಿ 2 ನಿಮಿಷ

ನಗರದ ವಿವಿಧೆಡೆ ಜೋರು ಮಳೆ

ಬೆಂಗಳೂರು: ನಗರದ ಹಲವೆಡೆ ಭಾನುವಾರ ಬೆಳಿಗ್ಗೆ ಹಾಗೂ ಸಂಜೆ ಮಳೆಯಾಗಿದೆ. ಇಡೀ ದಿನ ಮೋಡ ಕವಿದ ವಾತಾವರಣವಿತ್ತು.

ಬೆಳಿಗ್ಗೆ 9 ಗಂಟೆ ತನಕ ಯಲಹಂಕ, ದಾಸರಹಳ್ಳಿ, ಪೀಣ್ಯ, ರಾಜಾಜಿನಗರ, ಮಹಾಲಕ್ಷ್ಮಿ ಲೇಔಟ್, ಯಶವಂತಪುರ, ಗೊರಗುಂಟೆಪಾಳ್ಯ, ಸದಾಶಿವನಗರ, ಮತ್ತಿಕೆರೆ, ದೊಮ್ಮಲೂರು, ಅಶೋಕ ನಗರ, ಎಂ.ಜಿ.ರಸ್ತೆ, ಕೆಂಗೇರಿ, ವಿಜಯನಗರ, ದೀಪಾಂಜಲಿನಗರ ಭಾಗದಲ್ಲಿ ಜಿಟಿಜಿಟಿ ಮಳೆಯಾಗಿದೆ. ಇದೇ ಸಮಯದಲ್ಲಿ ಮೆಜೆಸ್ಟಿಕ್ ಸುತ್ತಮುತ್ತ ಜೋರು ಮಳೆಯಾಗಿದೆ.

ನಗರದಲ್ಲಿ ಸೋಮವಾರ ಸಂಜೆ ಅಥವಾ ರಾತ್ರಿ ವೇಳೆ ಜೋರು ಮಳೆಯಾಗುವ ಸಾಧ್ಯತೆಯಿದೆ ಎಂದು ಐಎಂಡಿ ತಿಳಿಸಿದೆ.



ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅರಿವು

ಬೆಂಗಳೂರು: ಎಂಜಿನಿಯರಿಂಗ್, ಪದವಿ ಮತ್ತು ಡಿಪ್ಲೊಮಾ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಅರಿವು ಮೂಡಿಸಲು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಹಾಗೂ ಸ್ಪರ್ಧಾ ಅರಿವು ಮಾಸಪತ್ರಿಕೆ ಒಪ್ಪಂದ ಮಾಡಿಕೊಂಡಿವೆ.

ಈ ಕಾರ್ಯಕ್ರಮದ ಮೂಲಕ ಒಂದು ಲಕ್ಷ ವಿದ್ಯಾರ್ಥಿಗಳಿಗೆ ಉಚಿತವಾಗಿ ಸ್ಪರ್ಧಾ ಅರಿವು ಮಾಸಪತ್ರಿಕೆಯನ್ನು ಒದಗಿಸಲಾಗುವುದು. ಈಗಾಗಲೇ 50 ಸಾವಿರ ವಿದ್ಯಾರ್ಥಿಗಳಿಗೆ ಈ ಪತ್ರಿಕೆಯು ಡಿಜಿಟಲ್ ರೂಪದಲ್ಲಿ ತಲುಪುತ್ತಿದೆ. ಸ್ಪರ್ಧಾ ಅರಿವು ಪತ್ರಿಕೆ ಬಹು ಆಯ್ಕೆಯ ಪ್ರಶ್ನೆಗಳಿಗೆ ಮಾತ್ರವಲ್ಲದೆ, ಟಿಪ್ಪಣಿ ರೂಪದ ಪ್ರಶ್ನೆಗಳಿಗೂ ಉತ್ತರಿಸುವಷ್ಟು ಮಾಹಿತಿ ನೀಡುತ್ತದೆ. ಇದು ಕನ್ನಡ ಮತ್ತು ಇಂಗ್ಲಿಷ್ ಎರಡರಲ್ಲೂ ಲಭ್ಯವಿದ್ದು, 40ಕ್ಕೂ ಅಧಿಕ ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ.

ಕ್ಯೂಆರ್ ಕೋಡ್ ಮೂಲಕ ಇತರೆ ಪೂರಕ ಮಾಹಿತಿ ಕೂಡ ಪತ್ರಿಕೆಯಲ್ಲಿ ಲಭ್ಯವಿದೆ. ಪತ್ರಿಕೆ ಜೊತೆಗೆ ಆಡಿಯೊ ಪಾಡ್‌ಕಾಸ್ಟ್‌ಗಳೂ ಉಚಿತವಾಗಿ ದೊರೆಯುತ್ತವೆ ಎಂದು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಮಾಹಿತಿಗೆ, 9008496009ಕ್ಕೆ ವಾಟ್ಸ್‌ಆ್ಯಪ್ ಮಾಡಬಹುದು ಅಥವಾ https://spardhaarivu.in/. ಜಾಲತಾಣ ನೋಡಬಹುದು.


ಆನೇಕಲ್ ಕ್ಷೇತ್ರ: ಕಾಂಗ್ರೆಸ್ –ಬಿಜೆಪಿ ಮಧ್ಯೆ ನೇರ ಹಣಾಹಣಿ

ಹ್ಯಾಟ್ರಿಕ್ ಗೆಲುವು ತಪ್ಪಿಸಲು ಬಿಜೆಪಿ ಯತ್ನ

ಪ್ರಜಾವಾಣಿ ವಾರ್ತೆ



ಸಿ.ಶ್ರೀನಿವಾಸ್ | ಬಿ.ಶಿವಣ್ಣ | ಕೆ.ಪಿ.ರಾಜು | ಡಾ.ಚಿನ್ನಪ್ಪ



ಮತಗಳ ವಿವರ

ಪಕ್ಷ	2018	2013	2008
ಕಾಂಗ್ರೆಸ್	1,13,894	1,05,464	52,593
ಬಿಜೆಪಿ	1,05,267	65,282	62,455
ಜೆಡಿಎಸ್	ಬಿಎಸ್‌ಪಿಗೆ ಬೆಂಬಲ	7,307	1,847

ಆನೇಕಲ್: ಆನೇಕಲ್ ವಿಧಾನಸಭಾ ಕ್ಷೇತ್ರದಲ್ಲಿ ಎರಡು ಬಾರಿ ಗೆದ್ದಿರುವ ಬಿ.ಶಿವಣ್ಣ ಈಗ ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿದ್ದಾರೆ. ಬಿಜೆಪಿಯಿಂದ ಮೊದಲ ಬಾರಿಗೆ ಕಣ್ಣಕ್ಕಿಳಿದಿರುವ ಶ್ರೀನಿವಾಸ್ ಸಿ.ಹುಲ್ಲಹಳ್ಳಿ ಪ್ರಬಲ ಪೈಪೋಟಿ ನೀಡುತ್ತಿದ್ದು, ನೇರ ಹಣಾಹಣಿ ಏರ್ಪಟ್ಟಿದೆ.

ಹೆಬ್ಬಗೋಡಿ ನಗರಸಭೆ, 4 ಪುರಸಭೆ ಮತ್ತು ಬಿಬಿಎಂಪಿ ವ್ಯಾಪ್ತಿಯ ಕೂಡ್ಲು ವಾರ್ಡ್ ಮತ್ತು 21 ಗ್ರಾಮ ಪಂಚಾಯಿತಿಗಳನ್ನು ಆನೇಕಲ್ ಮೀಸಲು ವಿಧಾನಸಭಾ ಕ್ಷೇತ್ರ (ಎಸ್‌ಸಿ) ಹೊಂದಿದೆ. ಎಲೆಕ್ಟ್ರಾನಿಕ್ ಸಿಟಿ ಸೇರಿದಂತೆ ನಾಲ್ಕು ಕೈಗಾರಿಕ ಪ್ರದೇಶಗಳನ್ನು ಹೊಂದಿದೆ. ಪರಿಶಿಷ್ಟ ಜಾತಿ ಒಕ್ಕಲಿಗ, ರೆಡ್ಡಿ ಸಮುದಾಯಗಳ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಬಿ.ಶಿವಣ್ಣ ಎರಡು ಬಾರಿಯೂ ಬಿಜೆಪಿಯ ಎ.ನಾರಾಯಣಸ್ವಾಮಿ ವಿರುದ್ಧ ಗೆಲುವು ಸಾಧಿಸಿದ್ದಾರೆ. 2013ರಲ್ಲಿ 40 ಸಾವಿರಕ್ಕೂ ಅಧಿಕ ಮತಗಳ ಅಂತರದಿಂದ ಗೆದ್ದಿದ್ದರೆ, ಎರಡನೇ ಬಾರಿ 2018ರಲ್ಲಿ 8 ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ಗೆದ್ದಿದ್ದರು.

ಜೆಡಿಎಸ್ ಅಭ್ಯರ್ಥಿ ಕೆ.ಪಿ.ರಾಜು ಮತ್ತು ಬಿಎಸ್‌ಪಿ ಅಭ್ಯರ್ಥಿ ಡಾ.ಚಿನ್ನಪ್ಪ ವೈ.ಚಿಕ್ಕಹಾಗಡೆ ಕೂಡ ಸ್ಪರ್ಧೆಯಲ್ಲಿದ್ದಾರೆ. ತಮ್ಮದೇ ಕಾರ್ಯತಂತ್ರ ಮೂಲಕ ಮತ ಸೆಳೆಯಲು ಶ್ರಮಿಸುತ್ತಿದ್ದಾರೆ.

ಎರಡು ಅವಧಿಗಳಲ್ಲಿ ಕಾಂಗ್ರೆಸ್ ಕೈಗೊಂಡಿರುವ ಅಭಿವೃದ್ಧಿಯೇ ಕೈ ಹಿಡಿಯಲಿವೆ ಎಂಬ ವಿಶ್ವಾಸದಲ್ಲಿ ಬಿ.ಶಿವಣ್ಣ ಮತಯಾಚನೆ ಮಾಡುತ್ತಿದ್ದಾರೆ. ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್. ಸಿ ಹುಲ್ಲಹಳ್ಳಿ ಅವರಿಗೆ ಬಿಜೆಪಿ ಕಾರ್ಯಕರ್ತರೇ ಶ್ರೀರಕ್ಷೆ. ಶಿವಣ್ಣ ಅವರ ಹ್ಯಾಟ್ರಿಕ್ ಗೆಲುವಿಗೆ ತಡೆಯೊಡ್ಡಲು ಕಾರ್ಯಕರ್ತರು ಹುರುಪಿನಿಂದ ಕೆಲಸ ಮಾಡುತ್ತಿದ್ದಾರೆ. ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದ ಸರ್ಜಾಪುರದ ಜಿ.ನಾಗರಾಜು ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ. ಕೆ.ಪಿ.ರಾಜು ಕೂಡ ಬಿರುಸಿನಿಂದ ಪ್ರಚಾರ ನಡೆಸುತ್ತಿದ್ದು, ಗೆಲುವಿನ ದಡ ಸೇರಲು ಶ್ರಮಿಸುತ್ತಿದ್ದಾರೆ. ಬಿಎಸ್‌ಪಿ ಅಭ್ಯರ್ಥಿ ಡಾ.ಚಿನ್ನಪ್ಪ ವೈ.ಚಿಕ್ಕಹಾಗಡೆ ಯುವ ಮತದಾರರು ಮತ್ತು ದಲಿತ, ಹಿಂದುಳಿದ ವರ್ಗಗಳನ್ನು ನೆಚ್ಚಿಕೊಂಡು ಪ್ರಚಾರ ನಡೆಸುತ್ತಿದ್ದಾರೆ. ತಾಲ್ಲೂಕಿನ ಎಲ್ಲ ಗ್ರಾಮಗಳನ್ನು ತಲುಪಿದ್ದಾರೆ. ಆಮ್ ಆದ್ಮಿ ಪಕ್ಷದಿಂದ ಎಂ.ಮುನೇಶ, ಕೆಆರ್‌ಎಸ್ ಪಕ್ಷದಿಂದ ನಿವೃತ್ತ ಯೋಧ ಅನ್ಬುರಾಜ್ ಕಣದಲ್ಲಿದ್ದಾರೆ.

'ಕಾಂಗ್ರೆಸ್ ಬಂದರೆ ಕೇಂದ್ರದ ಯೋಜನೆಗಳಿಗೆ ಬ್ರೇಕ್'

ಕೂಡ್ಲಿಗಿ/ ಹರಪನಹಳ್ಳಿ: 'ರಾಜ್ಯದಲ್ಲಿ ಡಬಲ್ ಎಂಜಿನ್ ಸರ್ಕಾರ ಮುಂದುವರಿದರೆ ಕೇಂದ್ರದ ಯೋಜನೆಗಳು ಮುಂದುವರಿಯುತ್ತವೆ. ಒಂದು ವೇಳೆ ಸಿದ್ದರಾಮಯ್ಯನವರ ಸರ್ಕಾರ ಬಂದರೆ ಅವುಗಳಿಗೆ ಬ್ರೇಕ್ ಬೀಳುತ್ತದೆ' ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಹೇಳಿದರು.

ಜಿಲ್ಲೆಯ ಹರಪನಹಳ್ಳಿ ಹಾಗೂ ಕೂಡ್ಲಿಗಿ ವಿಧಾನಸಭಾ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳ ಪರ ಭಾನುವಾರ ಮತಯಾಚಿಸಿ ಮಾತನಾಡಿದರು.

'ಡಬಲ್ ಎಂಜಿನ್ ಸರ್ಕಾರ ಮುಂದುವರಿದರೆ ಪ್ರಧಾನ ಮಂತ್ರಿ ಆವಾಸ್ ಯೋಜನೆ, ಪ್ರಧಾನ ಮಂತ್ರಿ ಗರೀಬ್ ಅನ್ನ ಕಲ್ಯಾಣ ಯೋಜನೆ, ಪ್ರಧಾನ ಮಂತ್ರಿ ಉಜ್ವಲ ಯೋಜನೆಯ ಪ್ರಯೋಜನ ಸಿಗುತ್ತದೆ' ಎಂದರು.

ನಗರದಲ್ಲಿ ಇಂದು

'ಡಾ. ವಿ. ಪರಮೇಶ್ವರ' ಅವರ ನೆನಪಿನಲ್ಲಿ 'ಭಕ್ತಿ ಗೀತಾಂಜಲಿ': ಪ್ರಸ್ತುತಿ: ಶತಾವಧಾನಿ ಆರ್. ಗಣೇಶ್, ವೇದ ಪಾರಾಯಣ: ರಾಜಗೋಪಾಲ ಶರ್ಮಾ, ಸಂಗೀತ ಕಾರ್ಯಕ್ರಮ, ಗಾಯನ: ರಂಜನಿ ವಾಸುಕಿ, ಪಿಟೀಲು: ವಿಶ್ವಜಿತ್ ಮತ್ತೂರ್, ಮೃದಂಗ: ಸಾಯಿವಂಶಿ, ಆಯೋಜನೆ ಮತ್ತು ಸ್ಥಳ: ಭಾರತೀಯ ವಿದ್ಯಾಭವನದ ಕೆ.ಆರ್.ಜಿ. ಸಭಾಂಗಣ, ಬೆಳಿಗ್ಗೆ 10.30 ರಿಂದ

ಪ್ರವಚನ ವಾಹಿನಿ: 'ಭಗವದ್ಗೀತೆಯಲ್ಲಿ ಮನೋವಿಜ್ಞಾನ' ಕುರಿತು ಉಪನ್ಯಾಸ: ಗ.ನ. ಭಟ್ಟ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ
nagaradalli_indu@prajavani.co.in



ನಗರದಲ್ಲಿ ಹಂಸಲೇಖ ಸಂಗೀತ ಶಾಲೆ ಮತ್ತು ಕಳರಿ ಗುರುಕುಲಂ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಂಗೀತ ನಿರ್ದೇಶಕ ಹಂಸಲೇಖ ಅವರ 'ನೆನೆ ಮನವೇ' ಗೀತೆಗಳ ಆಡಿಯೊ ಬಿಡುಗಡೆಗೊಳಿಸಲಾಯಿತು. ಲತಾ ಹಂಸಲೇಖ, ಅರ್ಚನಾ ಜೋಯಿಸ್, ಮೀನಾಕ್ಷಿ ಅಮ್ಮ, ಕಲರಿ ಗುರುಕುಲಂನ ರಂಜನ್ ಮುಲ್ಲಾರಟ್, ಹಂಸಲೇಖ, ಶಿಕ್ಷಕಿ ಶಿನ್ನಿ ಮತ್ತು ಉಪಾಸನ ಗುರ್ಜರ್ ಇದ್ದರು

ಕುಂದು ಕೊರತೆ

ಜನದನಿ


ನಿಮ್ಮ ಅಹವಾಲುಗಳನ್ನು ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು

'ರಸ್ತೆ ಗುಂಡಿ ಮುಚ್ಚಿಸಿ'



ಸದಾನಂದನಗರದ 8ನೇ ಮುಖ್ಯರಸ್ತೆಯಲ್ಲಿರುವ ಬಿಡಿಎ ಪಾರ್ಕ್‌ಗೆ ಹೊಂದಿಕೊಂಡಿರುವ ಪಾದಚಾರಿ ಮಾರ್ಗ ಸಂಪೂರ್ಣ ಹಾಳಾಗಿದೆ. ಈ ಮಾರ್ಗದಲ್ಲಿ 10ಕ್ಕೂ ಹೆಚ್ಚು ಗುಂಡಿಗಳು ಬಿದ್ದಿವೆ. ಸದಾನಂದನಗರದ ನಿವಾಸಿಗಳು ವಾಯುವಿಹಾರಕ್ಕೆ ಈ ಮಾರ್ಗದ ಮೂಲಕ ಉದ್ಯಾನಕ್ಕೆ ಹೋಗಬೇಕಾದ ಪರಿಸ್ಥಿತಿ ಇದೆ. ಇಲ್ಲಿ ಗುಂಡಿಗಳು ಬಿದ್ದ ಕಾರಣ ಮಕ್ಕಳು, ಮಹಿಳೆಯರು, ವೃದ್ಧರ ಓಡಾಟಕ್ಕೆ ಸಂಚಕಾರ ಬಂದಿದೆ. ಹಲವಾರು ಜನ ಬಿದ್ದು ಗಾಯ ಮಾಡಿಕೊಂಡ ಘಟನೆಗಳು ನಡೆದಿವೆ. ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ.

ವಾಲಿ, ಕಾರ್ಯದರ್ಶಿ, ಬಿಡಿಎ ವೆಲ್ಫೇರ್ ಅಸೋಸಿಯೇಷನ್, ಸದಾನಂದ ನಗರ



'ಪಾದಚಾರಿ ಮಾರ್ಗ ಒತ್ತುವರಿ'

ವಿಜ್ಞಾನ ನಗರದ ಮಹದೇವಪುರ ಮಹೇಶ್ವರಮ್ಮ ದೇವಸ್ಥಾನ ರಸ್ತೆಯ ಪಾದಚಾರಿ ಮಾರ್ಗವನ್ನು ವರ್ಷದಿಂದ ಕಟ್ಟಡದ ಮಾಲೀಕರೊಬ್ಬರು ಒತ್ತುವರಿ ಮಾಡಿಕೊಂಡಿದ್ದಾರೆ. ಇದರಿಂದ, ಪಾದಚಾರಿಗಳ ಸಂಚಾರಕ್ಕೆ ತೊಂದರೆ ಆಗಿದೆ. ಸರ್ಕಾರಿ ಜಾಗ ಒತ್ತುವರಿ ಮಾಡಿಕೊಂಡು ಕಟ್ಟಡ ನಿರ್ಮಿಸಲಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕಾನೂನು ಕ್ರಮ ಕೈಗೊಂಡು ಒತ್ತುವರಿ ತೆರವುಗೊಳಿಸಬೇಕು.

ರಮೇಶ್, ಸ್ಥಳೀಯ ನಿವಾಸಿ



'ಒಳಚರಂಡಿ ದುರಸ್ತಿಗೊಳಿಸಿ'

ದೊಡ್ಡಬೊಮ್ಮಸಂದ್ರದ 5ನೇ ಮುಖ್ಯರಸ್ತೆಯಲ್ಲಿರುವ ಒಳಚರಂಡಿ ನೀರು ರಸ್ತೆಯಲ್ಲಿ ಹರಿಯುತ್ತಿದೆ. ಮಳೆ ಬಂದರೆ ಈ ತ್ಯಾಜ್ಯ ನೀರು ಮನೆಗಳಿಗೆ ನುಗ್ಗುತ್ತದೆ. ದೊಡ್ಡಬೊಮ್ಮಸಂದ್ರ ಕೆರೆಯಿಂದ ಹೆಬ್ಬಾಳ ಕೆರೆ ಸಂಪರ್ಕಿಸುವ ರಾಜಕಾಲುವೆ ನಿರ್ಮಿಸುವ ಕೆಲಸ ಪ್ರಗತಿ ಕಾಣದ ಹಿನ್ನೆಲೆಯಲ್ಲಿ ಈ ಸಮಸ್ಯೆ ಉಂಟಾಗಿದೆ. ಮಳೆ ಬಂದಾಗ ಇಲ್ಲಿನ ನಿವಾಸಿಗಳ ಪಾಡು ಹೇಳತೀರದು. ಮಳೆಗಾಲ ಪ್ರಾರಂಭವಾಗುವುದಕ್ಕೂ ಮುಂಚಿತವಾಗಿ ಸಂಬಂಧಪಟ್ಟ ಅಧಿಕಾರಿಗಳು ಈ ಸಮಸ್ಯೆಗೆ ಮುಕ್ತಿ ನೀಡಬೇಕು.

ಶ್ರೀಕಾಂತ ಟರ್ಕಿ, ಸ್ಥಳೀಯ ನಿವಾಸಿ



ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ
ಕಾಂಗ್ರೆಸ್ ಬರಲಿದೆ. ಪ್ರಗತಿ ತರಲಿದೆ.
₹2000 ಮನೆಯೊಡತಿಗೆ ಪ್ರತಿ ತಿಂಗಳು ₹2000
10 KG ಬಡವರಿಗೆ ಪ್ರತಿ ತಿಂಗಳು ತಲಾ 10 ಕೆಜಿ ಅಕ್ಕಿ ಉಚಿತ
200 Units ಮನೆಗೆ ಪ್ರತಿ ತಿಂಗಳು 200 ಯೂನಿಟ್ ಉಚಿತ ವಿದ್ಯುತ್
₹3000 ಪ್ರತಿ ತಿಂಗಳು ಪದವೀಧರರಿಗೆ ₹3000, ಡಿಪ್ಲೋಮಾ ಪದವಿಧರರಿಗೆ ₹1500 ಭತ್ಯೆ
ಉಚಿತ ಮಹಿಳೆಯರಿಗೆ ಬಸ್ ಸಂಚಾರ ಉಚಿತ
ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ
ಆರ್.ಕೆ. ರಮೇಶ್ ರವರಿಗೆ
ತಮ್ಮ ಅತ್ಯಮೂಲ್ಯವಾದ ಮತವನ್ನು ನೀಡಬೇಕಾಗಿ ವಿನಂತಿ.
ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿ....
ಸುವರ್ಣ ಕರ್ನಾಟಕ ನಿರ್ಮಾಣಕ್ಕಾಗಿ ಆರೂವರೆ ಕೋಟಿ ರಾಜ್ಯದ ಜನತೆ ಕಾಂಗ್ರೆಸ್ ಅಭ್ಯರ್ಥಿಗಳನ್ನು ಆಶೀರ್ವದಿಸುವ ಮೂಲಕ ಈ ಐದು ಜನಪ್ರಿಯ ಯೋಜನೆಗಳನ್ನು ತಮ್ಮ ಮನೆಬಾಗಿಲಿಗೆ ಬರಮಾಡಿಕೊಳ್ಳಿ ಹಾಗೂ ನಿಮ್ಮೆಲ್ಲರ ಅಮೂಲ್ಯವಾದ ಮತವನ್ನು ಕಾಂಗ್ರೆಸ್ ಪಕ್ಷಕ್ಕೆ ನೀಡಿ, ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತನ್ನಿ.
ಕಾಂಗ್ರೆಸ್ ಗೆಲ್ಲಿಸಿ...
ಕರ್ನಾಟಕ ಉಳಿಸಿ...
ಶುಭ ಕೋರುವವರು
ಡಾ|| ಆರ್. ಪ್ರಭಾಕರ್ ರೆಡ್ಡಿ
ಕಾಂಗ್ರೆಸ್ ಮುಖಂಡರು, ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ
ಡಿ.ಕೆ. ಸುರೇಶ್
ಬೆಂಗಳೂರು ಗ್ರಾಮಾಂತರ ಲೋಕಸಭಾ ಸದಸ್ಯರು
ಪ್ರಕಟಣೆ: ಡಾ. ಆರ್. ಪ್ರಭಾಕರ್ ರೆಡ್ಡಿ ಅಭಿಮಾನಿ ಬಳಗ, ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ


ಪುಲಕೇಶಿನಗರ: ಕಾಂಗ್ರೆಸ್‌ಗೆ ತಿರುಗೇಟು ನೀಡಲು 'ಅಖಂಡ' ಯತ್ನ

'ಕೈ'ಕೊಟ್ಟು ಸವಾರಿಗಿಳಿದ 'ಆನೆ'

• ರಾಜೇಶ್ ರೈ ಚಟ್ಲ


ಶ್ರೀನಿವಾಸ ಮೂರ್ತಿ


ಎ.ಸಿ. ಶ್ರೀನಿವಾಸ್



ಕ್ಷೇತ್ರ	2008	2013	2018
ಪುಲಕೇಶಿ ನಗರ	ಕಾಂಗ್ರೆಸ್	ಜೆಡಿಎಸ್	ಕಾಂಗ್ರೆಸ್

ಬೆಂಗಳೂರು: ಕೆ.ಜಿ. ಹಳ್ಳಿ, ಡಿ.ಜೆ. ಹಳ್ಳಿಯಲ್ಲಿ 2020ರಲ್ಲಿ ನಡೆದ ಗಲಭೆಯಿಂದ ಸುದ್ದಿಯಾದ ಕ್ಷೇತ್ರ ಪುಲಕೇಶಿ ನಗರ. 2018ರ ವಿಧಾನಸಭೆ ಚುನಾವಣೆಯಲ್ಲಿ ಇಡೀ ರಾಜ್ಯದಲ್ಲಿಯೇ ಅತೀ ಹೆಚ್ಚು 81,626 ಮತಗಳ ಅಂತರದಿಂದ ಗೆಲುವು ಕಂಡಿದ್ದ ಅಖಂಡ ಶ್ರೀನಿವಾಸಮೂರ್ತಿ ಅವರಿಗೆ ಈ ಘಟನೆಯ ಕಾರಣಕ್ಕೆ ಈ ಬಾರಿ ಕಾಂಗ್ರೆಸ್ ಟಿಕೆಟ್ ನಿರಾಕರಿಸಿದೆ.

ತನ್ನದಲ್ಲದ ತಪ್ಪಿಗೆ ಪಕ್ಷದ ನಾಯಕರು ಶಿಕ್ಷೆ ಕೊಟ್ಟಿದ್ದಾರೆಂದು ಮುನಿಸಿಕೊಂಡಿರುವ ಅಖಂಡ ಕಾಂಗ್ರೆಸ್‌ಗೆ ಕೈಕೊಟ್ಟು 'ಆನೆ'ಯೇರಿ (ಬಿಎಸ್‌ಪಿ) ಕ್ಷೇತ್ರದಲ್ಲಿ ಸವಾರಿಗಿಳಿದಿದ್ದಾರೆ. ಹೀಗಾಗಿ, ಪರಿಶಿಷ್ಟರಿಗೆ ಮೀಸಲಾದ ಈ ಕ್ಷೇತ್ರದ ಚುನಾವಣಾ ರೋಚಕತೆಯ ಕಾವು ಏರಿದೆ.

ದೇವನಹಳ್ಳಿ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದ ಎ.ಸಿ. ಶ್ರೀನಿವಾಸ್ ಅವರನ್ನು ಇಲ್ಲಿಗೆ ಕರೆದುಕೊಂಡು ಬಂದು ಕಾಂಗ್ರೆಸ್ ಕಣಕ್ಕೆ ಇಳಿಸಿದೆ. ಕಳೆದ ಮೂರೂ ಚುನಾವಣೆಗಳಲ್ಲಿ ಠೇವಣಿ ಉಳಿಸಿಕೊಳ್ಳಲು ಸಾಧ್ಯವಾಗದ ಬಿಜೆಪಿ, ಈ ಬಾರಿ ತನ್ನ ಬಲ ಪ್ರದರ್ಶಿಸಲು ಹೋರಾಟ ನಡೆಸುತ್ತಿದ್ದು, ಎ. ಮುರುಳಿ ಅವರನ್ನು ಕಣಕ್ಕೆ ಇಳಿಸಿದೆ. ಆದರೆ, ಪೈಪೋಟಿ ಮಾತ್ರ ಬಿಎಸ್‌ಪಿ- ಕಾಂಗ್ರೆಸ್ ನಡುವೆ ಇದೆ. ಕ್ಷೇತ್ರದಲ್ಲಿ ಮುಸ್ಲಿಂ ಮತ್ತು ಪರಿಶಿಷ್ಟರ ಮತಗಳೇ ನಿರ್ಣಾಯಕ. ಹೀಗಾಗಿ, ಎಸ್‌ಡಿಪಿಐ ಕೂಡ ಕಣ್ಣಿಟ್ಟಿದ್ದು, ಭಾಸ್ಕರ್ ಪ್ರಸಾದ್ ಅವರನ್ನು ಕಣಕ್ಕಿಳಿಸಿದೆ. ಮಹಿಳೆಗೆ ಜೆಡಿಎಸ್ ಟಿಕೆಟ್ ನೀಡಿದ್ದು, ಅನುರಾಧಾ ಕಣದ-ಲ್ಲಿದ್ದಾರೆ.

ಪರಿಶಿಷ್ಟರು ಮತ್ತು ಮುಸ್ಲಿಂ ಸಮುದಾಯದಲ್ಲಿ ಅಖಂಡ ತಮ್ಮದೇ ಆದ ಹಿಡಿತ ಹೊಂದಿದ್ದಾರೆ. ಕೆ.ಜಿ. ಹಳ್ಳಿ, ಡಿ.ಜೆ. ಹಳ್ಳಿ ಗಲಭೆ ನಂತರ ಮುಸ್ಲಿಮರು ಅಖಂಡ ಅವರಿಂದ ಅಂತರ ಕಾಯ್ದು-ಕೊಂಡಿದ್ದಾರೆ ಎನ್ನುವುದು ಕಾಂಗ್ರೆಸ್ ನಾಯಕರ ಭಾವನೆ. ಆದರೆ, ಪರಿಶಿಷ್ಟರು ಅಖಂಡಗೆ 'ಆನೆ' ಬಲ ಕೊಡುವ ಸಾಧ್ಯತೆ ಇದೆ ಎನ್ನುವುದು ಕ್ಷೇತ್ರ ಹಲವರ ಅಭಿಪ್ರಾಯ.

ಕ್ಷೇತ್ರ ಮತ ಸಮೀಕರಣವನ್ನು ಅಳೆದು ತೂಗಿ ಎ.ಸಿ. ಶ್ರೀನಿವಾಸ್ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿದೆ. 'ಅಖಂಡ ಅವರಿಗೆ ಮುಸ್ಲಿಂ ಸಮುದಾಯ ಟಿಕೆಟ್ ನೀಡಬೇಡಿ ಎಂದಿದ್ದಕ್ಕೆ ಕಾಂಗ್ರೆಸ್ ಟಿಕೆಟ್ ನೀಡಿಲ್ಲ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಈಗಾಗಲೇ ಸ್ಪಷ್ಟ-ಪಡಿಸಿದ್ದಾರೆ. ಮುಸ್ಲಿಂ, ದಲಿತ ಮತಗಳು ಕಾಂಗ್ರೆಸ್ ಪಾಲಾಗಬಹುದು ಎಂಬ ನಿರೀಕ್ಷೆಯಲ್ಲಿ ಕಾಂಗ್ರೆಸ್ ನಾಯಕರಿದ್ದಾರೆ. ಬಿಜೆಪಿಗೆ ಇಲ್ಲಿ ನೆಲೆಯೇ ಇಲ್ಲ. ಕಳೆದ ಮೂರು ಚುನಾವಣೆಗಳಲ್ಲಿಯೂ ಬಿಜೆಪಿ ಠೇವಣಿ ಕಳೆದುಕೊಂಡಿದೆ. ಈ ಬಾರಿ ತಮಿಳು ಮತಗಳ ಮೇಲೆ ಕಣ್ಣಿಟ್ಟಿರುವ ಬಿಜೆಪಿ, ಇಲ್ಲಿ ತಮಿಳುನಾಡಿನ ಪಕ್ಷ ಎಐಎಡಿಎಂಕೆ ಬೆಂಬಲ ಪಡೆದಿದೆ. ಹೀಗಾಗಿ, ಎಐಎಡಿಎಂಕೆಯಿಂದ ನಾಮಪತ್ರ ಸಲ್ಲಿಸಿದ್ದ ಅನ್ಬರಸನ್ ನಾಮಪತ್ರ ಹಿಂಪಡೆದಿದ್ದಾರೆ.


ಪುಲಿಕೇಶಿನಗರ ಸೇರಿದಂತೆ ಅವಿಭಜಿತ ಯಲಹಂಕ ಕ್ಷೇತ್ರವನ್ನು ಬೂಸಾ ಚಳವಳಿಯ ಹರಿಕಾರ ದಿವಂಗತ ಬಸವಲಿಂಗಪ್ಪ ಪ್ರತಿನಿಧಿಸಿದ್ದ-ರು. ಅದಾದ ಬಳಿಕ 2008ರಲ್ಲಿ ಕಾಂಗ್ರೆಸ್‌ನಿಂದ ಅವರ ಪುತ್ರ ಬಿ. ಪ್ರಸನ್ನ ಕುಮಾರ್ ಗೆದ್ದಿದ್ದರೆ, 2013 ಮತ್ತು 2018ರಲ್ಲಿ ಅಖಂಡ ಶ್ರೀನಿವಾಸ ಮೂರ್ತಿ ಸತತವಾಗಿ ಜೆಡಿಎಸ್ ಮತ್ತು ಕಾಂಗ್ರೆಸ್‌ನಿಂದ ಗೆಲುವು ಸಾಧಿಸಿದ್ದಾರೆ. ಈ ಬಾರಿ ಕಾಂಗ್ರೆಸ್ ಹಾಗೂ ಬಿಎಸ್‌ಪಿ ನಡುವೆ ದಲಿತ ಮತಗಳು ವಿಭಜನೆ ಆಗುವ ಸಾಧ್ಯತೆ ಇದೆ. ಬಿಜೆಪಿ, ಎಸ್‌ಡಿಪಿಐ ಪಡೆಯುವ ಮತಗಳ ಆಧಾರದಲ್ಲಿ ಕಾಂಗ್ರೆಸ್, ಬಿಎಸ್‌ಪಿ ಸೋಲು- ಗೆಲುವು ನಿರ್ಧಾರವಾಗಲಿದೆ ಎನ್ನುವುದು ಮತದಾರರ ಮಾತು.

ಸಾಕ್ಷಾತ್ ಸಮೀಕ್ಷೆ

ಬಿಜೆಪಿ ಕೋಟೆಯಲ್ಲಿ ಪ್ರಬಲ ಪೈಪೋಟಿ

ಯಲಹಂಕ ಕ್ಷೇತ್ರ: ನಾಲ್ಕನೇ ಬಾರಿ ಅದೃಷ್ಟ ಪರೀಕ್ಷೆಗಿಳಿದ ಎಸ್‌.ಆರ್. ವಿಶ್ವನಾಥ್

• ಸಚ್ಚಿದಾನಂದ ಕುರಗುಂದ



ಕ್ಷೇತ್ರ	2008	2013	2018
ಯಲಹಂಕ	ಬಿಜೆಪಿ	ಬಿಜೆಪಿ	ಬಿಜೆಪಿ

ಬೆಂಗಳೂರು: ನಗರ ಮತ್ತು ಗ್ರಾಮೀಣ ಪ್ರದೇಶ ಹೊಂದಿರುವ ಯಲಹಂಕ ಕ್ಷೇತ್ರದಲ್ಲಿ ಬಿಜೆಪಿಯದ್ದೇ ಪಾರುಪತ್ಯ.

ಬಿಜೆಪಿಯ ಈ ಭದ್ರಕೋಟೆಯಲ್ಲಿ ನುಗ್ಗಲು ಕಾಂಗ್ರೆಸ್, ಜೆಡಿಎಸ್ ತೀವ್ರ ಪೈಪೋಟಿ ನಡೆಸುತ್ತಿವೆ. ಇದೇ ಕ್ಷೇತ್ರದಿಂದ 2008ರಿಂದ ಸತತ ಮೂರು ಬಾರಿ ಜಯ ಸಾಧಿಸಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧ್ಯಕ್ಷರೂ ಆಗಿರುವ ಹಾಲಿ ಶಾಸಕ ಎಸ್.ಆರ್. ವಿಶ್ವನಾಥ್, ನಾಲ್ಕನೇ ಬಾರಿ ಅಗ್ನಿ ಪರೀಕ್ಷೆ ಎದುರಿಸುತ್ತಿದ್ದಾರೆ.

ಕ್ಷೇತ್ರದ ಕೆಲವೆಡೆ ಇರುವ ಆಡಳಿತ ವಿರೋಧಿ ಅಲೆಯನ್ನು ಹಿಮ್ಮೆಟ್ಟಿಸಿ ಗೆಲುವಿನ ಮಾರ್ಗ ಕಂಡುಕೊಳ್ಳಲು ವಿಶ್ವನಾಥ್ ಸರ್ವ ರೀತಿಯ ಪ್ರಯತ್ನ ನಡೆಸುತ್ತಿದ್ದಾರೆ. ಡಾ. ಕೆ. ಶಿವರಾಮ ಕಾರಂತ ಬಡಾವಣೆಗಾಗಿ ಬಿಡಿಎ ಬೆಂಗಳೂರು ಉತ್ತರ ತಾಲ್ಲೂಕಿನ 17 ಗ್ರಾಮಗಳಲ್ಲಿನ 3,500 ಎಕರೆ ಕೃಷಿ ಪ್ರದೇಶ ಸ್ವಾಧೀನಪಡಿಸಿಕೊಂಡಿರುವ ಸ್ಥಳಗಳಲ್ಲಿ ವಿಶ್ವನಾಥ್ ಅವರ ಬಗ್ಗೆ ಅಸಮಾಧಾನ ಇದೆ.

ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ಕೇಶವ ರಾಜಣ್ಣ ಬಿ. ಮತ್ತು ಜೆಡಿಎಸ್ ಅಭ್ಯರ್ಥಿ ಎಂ. ಮುನೇಗೌಡ ಅವರು ಆಡಳಿತ ವಿರೋಧ ಅಲೆಯನ್ನು ತಮ್ಮ ಮತಗಳನ್ನಾಗಿ ಪರಿವರ್ತಿಸಲು ಯತ್ನಿಸುತ್ತಿದ್ದಾರೆ. ಎಂ. ಸಂದೀಪ್ ಅವರನ್ನು ಬಿಎಸ್‌ಪಿ ಕಣಕ್ಕಿಳಿಸಿದೆ. ಆಮ್ ಆದ್ಮಿ ಪಕ್ಷದಿಂದ ಪಿ. ಮಂಜುನಾಥ್ ಸ್ಪರ್ಧಿಸಿದ್ದಾರೆ. ಜನರ ಹಿತಾಸಕ್ತಿ ಕಾಪಾಡುವಲ್ಲಿ ವಿಶ್ವನಾಥ್ ವಿಫಲರಾಗಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್, ಜೆಡಿಎಸ್ ಅಭ್ಯರ್ಥಿಗಳು ಮತಯಾಚಿಸುತ್ತಿದ್ದಾರೆ.


ವಿಶ್ವನಾಥ್


ಕೇಶವ ರಾಜಣ್ಣ


ಮುನೇಗೌಡ

'ರೈತರ ಆಕ್ರೋಶದ ಬಗ್ಗೆ ಪಕ್ಷಕ್ಕೆ ಅರಿವು ಇದೆ. ಈ ಆಕ್ರೋಶವನ್ನು ತಣಿಸಲು ವಿಶ್ವನಾಥ್ ಎಲ್ಲ ಪ್ರಯತ್ನ ನಡೆಸಿದ್ದಾರೆ. ಪ್ರತಿಸ್ಪರ್ಧಿಗಳ ಆರೋಪಗಳಿಗಿಂತ ಅಭಿವೃದ್ಧಿ ಕಾರ್ಯಕ್ಕೆ ಮತದಾರರು ಮನ್ನಣೆ ನೀಡುವ ವಿಶ್ವಾಸವಿದೆ. ಹೀಗಾಗಿ, ಹಿಂದಿನ ಚುನಾವಣೆಗಳಿಂತಲೂ ಈ ಬಾರಿ ಹೆಚ್ಚು ಮತ ಪಡೆಯುವ ವಿಶ್ವಾಸವಿದೆ' ಎಂದು ಬಿಜೆಪಿಯ ಸ್ಥಳೀಯ ಮುಖಂಡರು ಹೇಳುತ್ತಾರೆ.

ಈ ಬಾರಿ ಆಡಳಿತ ವಿರೋಧಿ ಅಲೆ ಇದ್ದರೂ ವಿಶ್ವನಾಥ್ ಅವರ ಪ್ರಮುಖ ಪ್ರತಿಸ್ಪರ್ಧಿಯಾಗಿರುವ ಕಾಂಗ್ರೆಸ್ ಮತ್ತು ಜೆಡಿಎಸ್ ಅಭ್ಯರ್ಥಿಗಳು ಗೆಲುವಿನ ಮಾರ್ಗದಲ್ಲಿ ಸಾಗಲು ಹರಸಾಹಸ ಮಾಡಬೇಕಾಗಿದೆ. ಕೇಶವ ರಾಜಣ್ಣ ಹಲವು ವರ್ಷಗಳಿಂದ ಕ್ಷೇತ್ರದಲ್ಲಿ ಗುರುತಿಸಿಕೊಂಡು ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಮೂರು ಚುನಾವಣೆಗಳಲ್ಲಿ ಜೆಡಿಎಸ್ ಎರಡನೇ ಸ್ಥಾನ ಮತ್ತು ಕಾಂಗ್ರೆಸ್ ಮೂರನೇ ಸ್ಥಾನ ಪಡೆದಿತ್ತು. ಪ್ರಬಲ ಪೈಪೋಟಿ ನೀಡುತ್ತಿದ್ದ ಜೆಡಿಎಸ್ ಶಕ್ತಿ ಈ ಬಾರಿ ನಿರೀಕ್ಷಿತ ಮಟ್ಟದಲ್ಲಿ ಇಲ್ಲ ಎನ್ನುವುದು ಸ್ಥಳೀಯರ ಅಭಿಪ್ರಾಯ.


ಕ್ಷೇತ್ರದಲ್ಲಿನ ಟ್ರಾಫಿಕ್, ಕುಡಿಯುವ ನೀರಿನ ಸಮಸ್ಯೆ ಈವರೆಗೆ ಬಗೆಹರಿದಿಲ್ಲ. ವಿಮಾನ ನಿಲ್ದಾಣಕ್ಕೆ ಮೆಟ್ರೊ ಕಾಮಗಾರಿ ತ್ವರಿತಗತಿಯಲ್ಲಿ ನಡೆಯಬೇಕು ಮತ್ತು ಜಾರಕಬಂಡೆ ಕಾವಲ್ ಅರಣ್ಯವನ್ನು ಉದ್ಯಾನವಾಗಿ ಪರಿವರ್ತಿಸುವ ಯೋಜನೆ ಕೈಬಿಡುವುದು ಹಾಗೂ ಹೆಸರಘಟ್ಟ ಹುಲ್ಲುಗಾವಲು ಪ್ರದೇಶವನ್ನು ಮೀಸಲು ಸಂರಕ್ಷಿತ ಪ್ರದೇಶವನ್ನಾಗಿ ಘೋಷಿಸುವ ವಿಷಯಗಳು ಈ ಬಾರಿ ಚುನಾವಣೆಯಲ್ಲಿ ಪ್ರಸ್ತಾಪವಾಗಿದ್ದರೂ ಫಲಿತಾಂಶದ ಮೇಲೆ ಪರಿಣಾಮ ಬೀರುವುದಿಲ್ಲ ಎನ್ನುವುದು ಸ್ಥಳೀಯರ ವಿಶ್ಲೇಷಣೆ.

ಬಿಜೆಪಿ ಹಿಡಿತ ತಪ್ಪಿಸಲು ಕಾಂಗ್ರೆಸ್ ಪಣ


ಬೆಂಗಳೂರು ದಕ್ಷಿಣ: ಅತಿ ಹೆಚ್ಚು ಮತದಾರರನ್ನು ಹೊಂದಿರುವ ಕ್ಷೇತ್ರ

• ವಿಜಯಕುಮಾರ್ ಎಸ್.ಕೆ.


ಎಂ.ಕೃಷ್ಣಪ್ಪ


ಆರ್.ಕೆ.ರಮೇಶ್


ರಾಜಗೋಪಾಲರೆಡ್ಡಿ



ಕ್ಷೇತ್ರ	2008	2013	2018
ಬೆಂಗಳೂರು ದಕ್ಷಿಣ	ಬಿಜೆಪಿ	ಬಿಜೆಪಿ	ಬಿಜೆಪಿ

ಬೆಂಗಳೂರು: ನಗರದಲ್ಲಿ ಅತಿ ಹೆಚ್ಚು ಮತದಾರರನ್ನು ಹೊಂದಿರುವ ಬೆಂಗಳೂರು ದಕ್ಷಿಣ ವಿಧಾನಸಭೆ ಕ್ಷೇತ್ರದಲ್ಲಿ ಮೂರು ಬಾರಿ ಗೆದ್ದಿರುವ ಬಿಜೆಪಿ ಮಣಿಸಲು ಕಾಂಗ್ರೆಸ್ ಭಾರಿ ಪ್ರಯತ್ನ ನಡೆಸುತ್ತಿದ್ದು, ಜಿದ್ದಾಜಿದ್ದಿನ ಕಣವಾಗಿದೆ.

2008ರಲ್ಲಿ ಕ್ಷೇತ್ರ ಪುನರ್ ವಿಂಗಡಣೆಯಾದಾಗ ಉತ್ತರಹಳ್ಳಿ ಕ್ಷೇತ್ರದಲ್ಲಿದ್ದ ಪ್ರದೇಶಗಳು ಬೆಂಗಳೂರು ದಕ್ಷಿಣ ಕ್ಷೇತ್ರವಾಗಿ ಪ್ರತ್ಯೇಕಗೊಂಡಿತು. ನಗರ ಮತ್ತು ಗ್ರಾಮೀಣ ಜನರು, ವಲಸೆ ಕಾರ್ಮಿಕರು ಈ ಕ್ಷೇತ್ರದ ಮತದಾರರು. ರಾಜ್ಯದಲ್ಲಿಯೇ ಅತಿ ಹೆಚ್ಚು ಮತದಾರರನ್ನು ಹೊಂದಿರುವ ವಿಧಾನಸಭಾ ಕ್ಷೇತ್ರ ಎಂಬುದೂ ಮತ್ತೊಂದು ವಿಶೇಷ. ಈ ಕ್ಷೇತ್ರದಲ್ಲಿ 6.95 ಲಕ್ಷ ಮತದಾರರಿದ್ದಾರೆ. 2018ರ ಚುನಾವಣೆಯಲ್ಲಿ 3.18 ಲಕ್ಷ ಜನ ಮತ ಚಲಾಯಿಸಿದ್ದರು.

ಬೆಂಗಳೂರು ದಕ್ಷಿಣದ ತುದಿಗೆ ಚಾಚಿಕೊಂಡಿರುವ ಕ್ಷೇತ್ರ ಉತ್ತರಹಳ್ಳಿಯಿಂದ ಆರಂಭವಾಗಿ ನಗರ ಮತ್ತು ನಗರವಾಗಿ ಹೊರಳುತ್ತಿರುವ ಹಳ್ಳಿಗಳು, ನೈಸ್ ರಸ್ತೆಯಿಂದ ಆಚೆಗಿನ ಗ್ರಾಮ ಪಂಚಾಯಿತಿ ವ್ಯಾಪ್ತಿಯ-ಲ್ಲಿನ ಹಳ್ಳಿಗಳೂ ಈ ಕ್ಷೇತ್ರದ ವ್ಯಾಪ್ತಿಯಲ್ಲಿವೆ. ಎಲೆಕ್ಟ್ರಾನಿಕ್ ಸಿಟಿಯಿಂದ ಬನ್ನೇರುಘಟ್ಟದ ತುದಿಗೆ ಮತ್ತು ಜಿಗಣಿ ತನಕ ವ್ಯಾಪಿಸಿಕೊಂಡಿದೆ. ಈ ಕ್ಷೇತ್ರ ಅಸ್ತಿತ್ವಕ್ಕೆ ಬಂದಾಗಿನಿಂದ ಮೂರು ಬಾರಿ ಶಾಸಕರಾಗಿರುವ ಎಂ.ಕೃಷ್ಣಪ್ಪ ಬಿಗಿ ಹಿಡಿತ ಹೊಂದಿದ್ದಾರೆ. ಇದನ್ನ ಸಡಿಲಗೊಳಿಸಲು ಕಾಂಗ್ರೆಸ್ ಮತ್ತು ಜೆಡಿಎಸ್ ಶತಾಯಗತಾಯ ಪ್ರಯತ್ನ ನಡೆಸುತ್ತಿವೆ.

ಕಾಂಗ್ರೆಸ್‌ನಿಂದ ಆರ್.ಕೆ.ರಮೇಶ್ ಸ್ಪರ್ಧಿಸಿದ್ದು, ಜೆಡಿಎಸ್‌ನಿಂದ ಎಚ್.ಪಿ. ರಾಜಗೋಪಾಲರೆಡ್ಡಿ ಕಣದ-ಲ್ಲಿದ್ದಾರೆ. ಈ ಇಬ್ಬರೂ ಕಾಂಗ್ರೆಸ್ ಟಿಕೆಟ್ ಬಯಸಿದ್ದರು. ಅಂತಿಮವಾಗಿ ಆರ್.ಕೆ.ರಮೇಶ್ ಟಿಕೆಟ್ ಪಡೆಯುವಲ್ಲಿ ಯಶಸ್ವಿಯಾದರು. ರಾಜಗೋಪಾಲರೆಡ್ಡಿ ಕಾಂಗ್ರೆಸ್ ತೊರೆದು ಜೆಡಿಎಸ್‌ನಿಂದ ಸ್ಪರ್ಧೆಗೆ ಇಳಿದಿದ್ದಾರೆ. ಜೆಡಿಎಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಆರ್.ಪ್ರಭಾಕರರೆ-ಡ್ಡಿ ಕಾಂಗ್ರೆಸ್ ಸೇರ್ಪಡೆಯಾಗಿದ್ದಾರೆ.

ಆರ್.ಕೆ.ರಮೇಶ್ 2018ರ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದರು. 1,22,068 ಮತಗಳನ್ನು ಪಡೆದಿದ್ದರು. 1,52,427 ಮತ ಪಡೆದಿದ್ದ ಎಂ.ಕೃಷ್ಣಪ್ಪ ಗೆಲುವು ಸಾಧಿಸಿದ್ದರು.

ಬಾರಿ ಪೈಪೋಟಿಯ ನಡುವೆ ಕಾಂಗ್ರೆಸ್ ಟಿಕೆಟ್ ಪಡೆದಿರುವ ಆರ್.ಕೆ.ರಮೇಶ್, ಹುರುಪಿನಿಂದ ಕ್ಷೇತ್ರದಲ್ಲಿ ಸುತ್ತಾಡುತ್ತಿದ್ದಾರೆ. 15 ವರ್ಷಗಳಿಂದ ಕ್ಷೇತ್ರದಲ್ಲಿ ಹಿಡಿತ ಹೊಂದಿರುವ ಕೃಷ್ಣಪ್ಪ ಕೂಡ ಅದೇ ಹುರುಪಿನಲ್ಲಿ ಸುತ್ತಾಡುತ್ತಿದ್ದಾರೆ.

ಎಎಪಿಯಿಂದ ಅಶೋಕ್ ಮೃತ್ಯುಂಜಯ, ಬಿಎಸ್‌ಪಿಯಿಂದ ಕಿರಣ್ ವಿ. ಉತ್ತಮ ಪ್ರಜಾಕೀಯ ಪಕ್ಷದಿಂದ ಮನು ಎಂ.ಎಂ., ಕರ್ನಾಟಕ ರಾಷ್ಟ್ರ ಸಮಿತಿಯಿಂದ ವಿಜಯರಾಘವ ಮರಾಠೆ, ಆರ್‌ಪಿಐ (ಎ) ಪಕ್ಷದಿಂದ ಎ.ರವಿಕುಮಾರ್ ಕಣದಲ್ಲಿದ್ದಾರೆ.

ರಾಜಾಜಿನಗರ ಕ್ಷೇತ್ರ: ಜೆಡಿಎಸ್‌ನಿಂದ ವೈದ್ಯ ಆಂಜನಪ್ಪ ಚುನಾವಣಾ ಕಣಕ್ಕೆ


ಕಮಲ ಕೋಟೆಗೆ ಲಗ್ಗೆ ಇಡಲು ಕೈ ಹರಸಾಹಸ

• ರವಿ ಪ್ರಕಾಶ್ .ಎಸ್


ಸುರೇಶ್ ಕುಮಾರ್


ಪುಟ್ಟಣ್ಣ


ಡಾ.ಆಂಜನಪ್ಪ



ಕ್ಷೇತ್ರ	2008	2013	2018
ರಾಜಾಜಿನಗರ	ಬಿಜೆಪಿ	ಬಿಜೆಪಿ	ಬಿಜೆಪಿ

ಬೆಂಗಳೂರು: ಪ್ರಜ್ಞಾವಂತರು, ಸುಶಿಕ್ಷಿತರು, ಮಧ್ಯಮವರ್ಗದವರೇ ಹೆಚ್ಚಾಗಿರುವ ಈ ಕ್ಷೇತ್ರದಲ್ಲಿ ಅತಿ ಹೆಚ್ಚು ಸಂಖ್ಯೆಯ ಸಣ್ಣ ಉದ್ಯಮಗಳೂ ಇವೆ. ಹೀಗಾಗಿ ಇಲ್ಲಿ ಶ್ರಮಿಕವರ್ಗವೂ ಗಣನೀಯ ಪ್ರ-ಮಾಣದಲ್ಲಿದೆ. ಬೆಂಗಳೂರಿನ ಇತರ ಕೆಲವು ಪ್ರಮುಖ ಕ್ಷೇತ್ರಗಳಂತೆ ಅಭಿವೃದ್ಧಿ ಕೆಲಸಗಳು ಆಗಿದ್ದರೂ, ಅಕ್ಕಪಕ್ಕದ ಕ್ಷೇತ್ರಗಳಿಗೆ ಹೋಲಿಸಿ ನೋಡುವ ಜನರು ಅಲ್ಲಿಗಿಂತ ಇಲ್ಲಿ ತುಸು ಕಡಿಮೆ ಎಂಬ ಭಾವನೆ ಹೊಂದಿದ್ದಾರೆ.

ಬಿಜೆಪಿಯ ಪ್ರಬಲ ಅಭ್ಯರ್ಥಿ ಎಸ್. ಸುರೇಶ್‌ಕುಮಾರ್ ಅವರಿಗೆ ಪೈಪೋಟಿ ನೀಡುತ್ತಿರುವುದು ಕಾಂಗ್ರೆಸ್‌ನ ಪುಟ್ಟಣ್ಣ. ಜೆಡಿಎಸ್‌ನಿಂದ ಡಾ. ಆಂಜನಪ್ಪ ಅದೃಷ್ಟದ ಪರೀಕ್ಷೆ ನಡೆಸಿದ್ದಾರೆ. ಐದು ಬಾರಿ ಇಲ್ಲಿ ಶಾಸಕರಾಗಿರುವ ಸುರೇಶ್ ಕುಮಾರ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರಾಗಿ ರಾಜಕೀಯ ಜೀವನ ಆರಂಭಿಸಿದ್ದು ರಾಜಾಜಿನಗರ ಕ್ಷೇತ್ರದಿಂದಲೇ. ಹೀಗಾಗಿ, ಕ್ಷೇತ್ರದ ಸಂದಿ ಮೂಲೆಯ ಅರಿವಿದೆ. ಒಮ್ಮೆ ಮಾತ್ರ ಅವರು ಸೋಲು ಅನುಭವಿಸಿದ್ದರು. ಈ ಬಾರಿ ಒಟ್ಟು 17 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಕಾಂಗ್ರೆಸ್‌ನಲ್ಲಿ ಈ ಬಾರಿ ಹಲವರು ಟಿಕೆಟ್ ಆಕಾಂಕ್ಷಿಗಳಿದ್ದರು. ಅವರಲ್ಲಿ ಪ್ರಮುಖವಾಗಿ ಪುಟ್ಟರಾಜು, ಭವ್ಯ ನರಸಿಂಹಮೂರ್ತಿ, ಪದ್ಮಾವತಿ ಕಡೇ ಹಂತದವರೆಗೆ ಟಿಕೆಟ್‌ಗೆ ಪೈಪೋಟಿ ನಡೆಸಿದ್ದರು. ಆದರೆ, ಬಿಜೆಪಿಯಿಂದ ವಲಸೆ ಬಂದ ಪುಟ್ಟಣ್ಣ ಅವರಿಗೆ ಟಿಕೆಟ್ ಅನಾಯಾಸವಾಗಿ ದೊರೆಯಿತು. ಇದರಿಂದ ಕ್ಷೇತ್ರದಲ್ಲಿ ಟಿಕೆಟ್ ಆಕಾಂಕ್ಷಿಗಳು ಮತ್ತು ಕಾರ್ಯಕರ್ತ-ರಲ್ಲಿ ಅಸಮಾಧಾನ ಮನೆ ಮಾಡಿದೆ. ಇವರನ್ನೆಲ್ಲ ಸಮಾಧಾನಪಡಿಸಿ ಗೆಲುವಿನ ಗುರಿ ತಲುಪಲು ಪುಟ್ಟಣ್ಣ ಬೆವರು ಹರಿ-ಸುತ್ತಿದ್ದಾರೆ.

ಸುರೇಶ್‌ಕುಮಾರ್ ಅವರಿಗೆ ಸಾಕಷ್ಟು ಜನರು ವೈಯಕ್ತಿಕವಾಗಿ ಪರಿಚಯವಿದೆ. ಆದರೆ, ಪುಟ್ಟಣ್ಣ ಪ್ರಬಲ ಅಭ್ಯರ್ಥಿ. ವಿಧಾನಪರಿಷತ್‌ಗೆ ಶಿಕ್ಷಕರ ಕ್ಷೇತ್ರದಿಂದ ಹಲವು ಬಾರಿ ಗೆದ್ದು, ಚುನಾವಣೆ ಹೇಗೆ ನಡೆಸಬೇಕು. ಕೊನೆ ಕ್ಷಣದ ತಂತ್ರಗಾರಿಕೆ, ಪಟ್ಟುಗಳನ್ನು ಚೆನ್ನಾಗಿ ಬಲ್ಲವರು. ಆದರೆ, 1978 ರಿಂದ ಈಚೆಗೆ ಈ ಕ್ಷೇತ್ರದಲ್ಲಿ ಎರಡು ಬಾರಿ ಮಾತ್ರ ಕಾಂಗ್ರೆಸ್ ಗೆದ್ದಿತ್ತು, ಲಕ್ಕಣ್ಣ (1989) ಮತ್ತು ನೆ.ಲ.ನರೇಂದ್ರ ಬಾಬು (2004) ಕಾಂಗ್ರೆಸ್ ಶಾಸಕರಾ-ಗಿದ್ದರು.


'ರಾಜಾಜಿನಗರ ಕ್ಷೇತ್ರದ ಸಮಸ್ಯೆ ಎಂದರೆ ಸಾಕಷ್ಟು ಖಾಲಿ ಜಾಗದ ಕೊರತೆ ಇದೆ. ಇಲ್ಲಿಗೆ ಉತ್ತಮ ಕ್ರೀಡಾಂಗಣ, ಈಜುಕೊಳ ಬೇಕು ಎಂಬ ಬೇಡಿಕೆಗಳಿವೆ. ಸಂಚಾರ ದಟ್ಟಣೆ ಸಮಸ್ಯೆ ಬಗೆಹರಿಸಲು ಕ್ರಮ ತೆಗೆದುಕೊಳ್ಳಬೇಕಾಗಿದೆ. ಕೊಳೆಗೇರಿ ಜನರಿಗೆ ಹಕ್ಕು ಪತ್ರ ವಿತರಿಸಬೇಕಾಗಿದೆ' ಎನ್ನುತ್ತಾರೆ ಸುರೇಶ್ ಕುಮಾರ್.

ಪುಟ್ಟಣ್ಣ ಬೇರೆಯದೇ ಚಿತ್ರಣ ಮುಂದಿಡುತ್ತಾರೆ. ಅವರ ಪ್ರಕಾರ, 'ಇಲ್ಲಿ ನೂರಾರು ಸಮಸ್ಯೆಗಳಿವೆ. ಇಲ್ಲಿನ ಶಾಸಕರು ಸಚಿವರಾಗಿದ್ದರೂ ಏನೂ ಮಾಡಿಲ್ಲ. ಇವೆಲ್ಲವನ್ನೂ ಸರಿಪಡಿಸಲು ನಾನು ಬದ್ಧನಾಗಿದ್ದೇನೆ. ಈ ಹಿಂದೆ ಸುರೇಶ್ ಅವರನ್ನು ಎದುರಿಸಲು ಪಕ್ಷದಿಂದ ಸಮರ್ಥರನ್ನು ಕಣಕ್ಕೆ ಇಳಿಸಿರಲಿಲ್ಲ. ಮಹಿಳಾ ಅಭ್ಯರ್ಥಿಗ-ಳನ್ನು ಕಣಕ್ಕೆ ಇಳಿಸಿದ್ದರಿಂದ ಅವರು ಪೈಪೋಟಿ ನೀಡಲು ಸಾಧ್ಯವಾಗಲಿಲ್ಲ' ಎನ್ನುತ್ತಾರೆ.

ಜೆಡಿಎಸ್ ಅಭ್ಯರ್ಥಿ ಡಾ.ಆಂಜನಪ್ಪ ಅವರು ವೈದ್ಯರಾಗಿ ಹೆಸರು ಮಾಡಿದ್ದು, ಪಕ್ಷದ ಪಂಚರತ್ನ ಕಾರ್ಯಕ್ರಮ ಮತ್ತು ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ಮಾಡಿದ ಕೆಲಸಗಳನ್ನೇ ನೆಚ್ಚಿಕೊಂಡು ಮತ ಯಾಚಿಸುತ್ತಿದ್ದಾರೆ. ಕ್ಷೇತ್ರದಲ್ಲಿ ಉತ್ತರಕರ್ನಾಟಕ ಜನಸಂಖ್ಯೆ ಈ ಭಾಗದಲ್ಲಿ ಹೆಚ್ಚು. ಇವರನ್ನು ಒಲಿ-ಸಿಕೊಂಡವರಿಗೇ ವಿಜಯದ ಮಾಲೆ ಬೀಳಲಿದೆ.

'ಇ.ಡಿ ದಾಳಿ ಕಾಂಗ್ರೆಸ್ ನಾಯಕರ ಮೇಲಷ್ಟೇ ಏಕೆ?'

ಪ್ರಜಾವಾಣಿ ವಾರ್ತೆ


ಮಲ್ಲಿಕಾರ್ಜುನ ಖರ್ಗೆ

ಕಮಲಾಪುರ: 'ಕಾಂಗ್ರೆಸ್‌ನವರ ವಿರುದ್ಧ ಜಾರಿ ನಿರ್ದೇಶನಾಲಯದ ಅಧಿಕಾರಿಗಳನ್ನು ಛೂಬಿಟ್ಟು ದ್ವೇಷ ಸಾಧಿಸುತ್ತಿದ್ದೀರಾ. ಜೈಲಿಗೆ ಅಟ್ಟುತ್ತಿದ್ದೀರಾ. ನಿಮ್ಮ ಶಾಸಕ ಮಾಡಾಳ್ ವಿರೂಪಾಕ್ಷಪ್ಪನ ಮನೆಯಲ್ಲಿ ₹ 8 ಕೋಟಿ ನಗದು ಸಿಕ್ಕಿದೆ. ಆತನಿಗೆ ಜೈಲು ಶಿಕ್ಷೆ ಕೊಡಿಸುತ್ತೀರಾ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಗುಡುಗಿದರು.

ಪಟ್ಟಣದಲ್ಲಿ ಭಾನುವಾರ ಕಾಂಗ್ರೆಸ್ ಅಭ್ಯರ್ಥಿ ರೇವು ನಾಯಕ ಬೆಳಮಗಿ ಪರ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

'ಈ ಹಿಂದೆ ಗಾಂಧಿ ಟೋಪಿ, ನೆಹರೂ ಶರ್ಟ್ ಫೇಮಸ್ ಆಗಿತ್ತು. ಈಗ ದಿನಕ್ಕೆ ನಾಲ್ಕು ಬಾರಿ ಬಣ್ಣ ಬದಲಿಸುವ ಮೋದಿ ಜಾಕೆಟ್ ಫೇಮಸ್ ಆಗಿದೆ. ನಾ ಖಾವುಂಗಾ ಖಾನೆ ದುಂಗಾ (ನಾ ತಿನ್ನಲ್ಲ, ಬೇರೆಯವರಿಗೆ ತಿನ್ನಲು ಬಿಡುವುದಿಲ್ಲ) ಎನ್ನುತ್ತೀರಾ. ಭ್ರಷ್ಟಾಚಾರಿಗಳಿಗೆ ಪಕ್ಕದಲ್ಲಿ ಕೂರಿಸಿಕೊಂಡು ಖಾತೆ ಜಾವು (ತಿನ್ನುತ್ತಿರು) ಎಂದು ಹೇಳುತ್ತಿದ್ದೀರಿ' ಎಂದು ಅವರು ಹರಿಹಾಯ್ದರು.

'ನನ್ನ ತಾಯಂದಿರ ಕಣ್ಣಲ್ಲಿ ನೀರು ಬರುತ್ತಿದೆ. ಅದನ್ನು ಹೋಗಲಾಡಿಸಲು ಎಲ್ಲರಿಗೂ ಅಡುಗೆ ಅನಿಲ ಸಿಲಿಂಡರ್ ಒದಗಿಸಿದ್ದೇನೆ ಎಂದರು. ಈಗ ಅದರ ಬೆಲೆ ಕೇಳಿ ಎಲ್ಲರಿಗೂ ಕಣ್ಣೀರು ಬರುತ್ತಿದೆ' ಎಂದರು.

ಕಮಲ ಪಡೆಗೆ ಹುರುಪು ತುಂಬಿದ ರೋಡ್ ಶೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಆರು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ 6.5 ಕಿ.ಮೀ. ದೂರದವರೆಗೆ ಭಾನುವಾರ ಅಬ್ಬರದ ರೋಡ್ ಶೋ ನಡೆಸಿದ ಪ್ರಧಾನಿ ನರೇಂದ್ರ ಮೋದಿ, ಮತದಾರರನ್ನು ಬಿಜೆಪಿಯತ್ತ ಸೆಳೆಯುವ ಪ್ರಯತ್ನ ಮಾಡಿದರು.

ಮಹದೇವಪುರ, ಕೆ.ಆರ್.ಪುರ, ಸಿ.ವಿ.ರಾಮನ್ ನಗರ, ಸರ್ವಜ್ಞನಗರ, ಶಿವಾಜಿನಗರ ಮತ್ತು ಶಾಂತಿನಗರ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರಧಾನಿ ಸಂಚರಿಸಿದರು. ತೆರೆದ ವಾಹನದಲ್ಲಿ ನಿಂತು ಸಾರ್ವಜನಿಕರತ್ತ ಕೈಬೀಸುತ್ತಾ ಸಾಗಿದ ಅವರು, ಬಿಜೆಪಿ ಪರ ಮತ ಚಲಾಯಿಸುವಂತೆ ಜನರಿಗೆ ಸಂದೇಶ ರವಾನೆ ಮಾಡಿದರು.

ಶನಿವಾರ 26 ಕಿ.ಮೀ. ದೂರದ ರೋಡ್ ಶೋ ನಡೆಸಿದ್ದ ಪ್ರಧಾನಿ, ಚುನಾವಣಾ ಪ್ರಚಾರದಲ್ಲಿ ಬಿಜೆಪಿ ಪರ ಅಲೆ ಎಬ್ಬಿಸುವ ಪ್ರಯತ್ನ ಮಾಡಿದ್ದರು. ಭಾನುವಾರ ಬೆಳಿಗ್ಗೆಯೂ ಬಿಜೆಪಿ ಪರ ಜನಬೆಂಬಲ ಕ್ರೋಡೀಕರಿಸಲು ಯತ್ನಿಸಿದರು.

ರಾಜಭವನದಿಂದ ಹೊರಟ ಮೋದಿ, ನ್ಯೂ ತಿಪ್ಪ-ಸಂದ್ರಕ್ಕೆ ಬಂದರು. ಅಲ್ಲಿ ನಾಡಪ್ರಭು ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಬೆಳಿಗ್ಗೆ 10.15ರ ಸುಮಾರಿಗೆ ಅಲ್ಲಿಂದ ತೆರೆದ ವಾಹನದಲ್ಲಿ ರೋಡ್ ಶೋ ಆರಂಭಿಸಿದರು. ಬೆಮೆಲ್ ಗೇಟ್, 80 ಅಡಿ ರಸ್ತೆ, ಇಎಸ್ಐ ಆಸ್ಪತ್ರೆ, ದೊಮ್ಮಲೂರು 12ನೇ ಮುಖ್ಯ ರಸ್ತೆ, ಜೋಗುಪಾಳ್ಯ, ಚಿನ್ಮಯ ಮಿಷನ್ ಆಸ್ಪತ್ರೆ, ಲಕ್ಷ್ಮೀಪುರ, ಹಲಸೂರು ಮಾರ್ಗವಾಗಿ ಸಾಗಿ ಟ್ರಿನಿಟಿ ವೃತ್ತ ತಲುಪಿದರು.

ಪ್ರಧಾನಿ ಒಬ್ಬರೇ ಭದ್ರತಾ ಸಿಬ್ಬಂದಿಯೊಂದಿಗೆ ತೆರೆದ ವಾಹನದಲ್ಲಿ ನಿಂತು ಜನರತ್ತ ಕೈ ಬೀಸುತ್ತಾ ಸಾಗಿದರು. 6.5 ಕಿ.ಮೀ. ಮಾರ್ಗದುದ್ದಕ್ಕೂ ರಸ್ತೆಯ ಇಕ್ಕೆಲಗಳಲ್ಲಿ ಭಾರಿ ಸಂಖ್ಯೆಯ ಜನರು ನಿಂತಿದ್ದರು. ಯುವಕರು, ಮಹಿಳೆಯರು, ಮಕ್ಕಳು, ವೃದ್ಧರು ಸೇರಿದಂತೆ ಎಲ್ಲ ವಯೋಮಾನದವರೂ ಮೋದಿ ಅವರನ್ನು ಕಾಣಲು ಬಂದಿದ್ದರು.

ತೆರೆದ ವಾಹನದಲ್ಲಿ ಮೋದಿ ಸಾಗಿ ಬರುತ್ತಿದ್ದಂತೆಯೇ ಹೂವಿನ ಪಕಳೆಗಳನ್ನು ಚೆಲ್ಲಿ ಹರ್ಷೋದ್ಗಾರದೊಂದಿಗೆ ಸ್ವಾಗತಿಸಿದರು. 'ಮೋದಿ, ಮೋದಿ, ಮೋದಿ...' ಎಂದು ಘೋಷಣೆ ಕೂಗಿ ಕುಣಿದು ಕುಪ್ಪಳಿಸಿದರು. ತಾವು ನಿಂತಿದ್ದ ವಾಹನದ ಮೇಲೆ ಸಂಗ್ರಹವಾಗಿದ್ದ ಹೂವಿನ ಪಕಳೆಗಳನ್ನು ಎತ್ತಿಕೊಂಡು ಜನರತ್ತ ತೂರಿ ಪ್ರಧಾನಿ ಸಂಭ್ರಮಿಸಿದರು.

ರೋಡ್ ಶೋ ಸಾಗಿದ ಮಾರ್ಗದುದ್ದಕ್ಕೂ ಪ್ರಧಾನಿ ಭಾವಚಿತ್ರವಿದ್ದ ಸಾವಿರಾರು ಫ್ಲೆಕ್ಸ್‌ಗಳನ್ನು ಅಳವಡಿಸ-ಲಾಗಿತ್ತು. ಕಾರ್ಯಕರ್ತರು ಪಕ್ಷದ ಬಾವುಟ, ವಿವಿಧ ಮುಖವಾಡಗಳನ್ನು ಧರಿಸಿ ನಿಂತಿದ್ದರು. ರೋಡ್ ಶೋನಲ್ಲಿ ಪ್ರಧಾನಿ ವಿವಿಧ ಕ್ಷೇತ್ರಗಳನ್ನು ಹಾದು ಬರುತ್ತಿದ್ದಾಗ ಅಲ್ಲಿನ ಬಿಜೆಪಿ ಅಭ್ಯರ್ಥಿಗಳ ಪರ ಅವರ ಬೆಂಬಲಿಗರು ಘೋಷಣೆ ಕೂಗಿದರು.

ಜಾನಪದ ಕಲಾ ತಂಡಗಳು, ಚೆಂಡೆ, ಡೋಲು ವಾದಕರ ತಂಡಗಳು ರೋಡ್ ಶೋದಲ್ಲಿ ಭಾಗಿಯಾದವು.

'ಜೆಡಿಎಸ್ ಅಧಿಕಾರಕ್ಕೆ ಬಂದರೆ ಗೋಮಾಂಸ ವ್ಯಾಪಾರಕ್ಕೆ ಅವಕಾಶ'

ಪ್ರಜಾವಾಣಿ ವಾರ್ತೆ

ಹುಮನಾಬಾದ್: 'ರಾಜ್ಯದಲ್ಲಿ ಜೆಡಿಎಸ್ ಅಧಿಕಾರಕ್ಕೆ ಬಂದರೆ ಗೋ ಮಾಂಸ ವ್ಯಾಪಾರಕ್ಕೆ ಪರವಾನಗಿ ನೀಡಲಾಗುವುದು' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಹೇಳಿದರು.

'ಮಣಿಪುರದ ಬಿಜೆಪಿ ಸಚಿವರೊಬ್ಬರು ನಾನು ಗೋಮಾಂಸ ತಿನ್ನುತ್ತೇನೆ ಎನ್ನುತ್ತಾರೆ. ಅವರಿಗೆ ಬಿಜೆಪಿಯವರು ಏನು ಮಾಡಿದ್ದೀರಿ' ಎಂದು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನಿಸಿದರು.

ರಾಜ್ಯದಲ್ಲಿ ರೈತರು ಗೋ ಹತ್ಯೆ ನಿಷೇಧ ಕಾಯ್ದೆಯಿಂದ ಕಂಗಾಲಾಗಿದ್ದಾರೆ. ಹೈನುಗಾರಿಕೆ ಮಾಡುವುದಕ್ಕಾಗಿ ₹60–70 ಸಾವಿರ ನೀಡಿ ಹಸುಗಳನ್ನು ತಂದರೆ ಅದು ಹಾಲು ನೀಡದಿದ್ದರೆ ಮಾರಾಟ ಮಾಡಿ ಮತ್ತೊಂದು ಹಸು ತರಲು ಅನುಕೂಲ ಆಗಲಿದೆ. ಆದರೆ, ಈ ಕಾಯ್ದೆ ಜಾರಿ ಇರುವುದರಿಂದ ರೈತರು ಯಾರಿಗೆ ಮಾರಾಟ ಮಾಡಬೇಕು?' ಎಂದು ಪ್ರಶ್ನಿಸಿದರು.


ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೃಷ್ಣಬೈರೇಗೌಡ ಅವರು ಜಕ್ಕೂರು ಗ್ರಾಮದಲ್ಲಿ ಭಾನುವಾರ ರೋಡ್ ಶೋ ನಡೆಸಿ ಮತಯಾಚಿಸಿದರು. ಮುಖಂಡರಾದ ಎಂ.ಜಯಗೋಪಾಲಗೌಡ, ರವಿಕುಮಾರ್, ಬಿ.ರವೀಗೌಡ ಇದ್ದರು

ಮಳೆ ಅಡ್ಡಿ: ದೊಡ್ಡನೆಕ್ಕುಂದಿಯಲ್ಲಿ ಪ್ರಿಯಾಂಕಾ ಗಾಂಧಿ ರೋಡ್ ಶೋ

ಮತದಾರರ ಓಲೈಕೆಗೆ ಅಬ್ಬರದ ಪ್ರಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆ ಬಹಿರಂಗ ಪ್ರಚಾರಕ್ಕೆ ಸೋಮವಾರ ಸಂಜೆ ತೆರೆಬೀಳಲಿದ್ದು, ರಾಜಧಾನಿಯ ವಿವಿಧ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳು ಅಬ್ಬರದ ಪ್ರಚಾರ ನಡೆಸಿದರು. ಮತದಾರರ ಓಲೈಕೆಗೆ ಅಂತಿಮ ಹಂತದ ಕಸರತ್ತು ನಡೆಸಿದರು.

ತೆರೆದ ವಾಹನಗಳಲ್ಲಿ ಅಭ್ಯರ್ಥಿಗಳು ತಮ್ಮ ಪಕ್ಷದ ನಾಯಕರೊಂದಿಗೆ ರೋಡ್ ಶೋ ನಡೆಸಿ, ಮತಯಾಚಿಸಿದರು. ಅಭ್ಯರ್ಥಿಗಳಿಗೆ ಬೆಂಬಲಿಗರು ಸಾಥ್ ನೀಡಿದರು. ಬೆಳಿಗ್ಗೆ ಹಾಗೂ ಮಧ್ಯಾಹ್ನ ಜಿಟಿಜಿಟಿ ಮಳೆಯು ಪ್ರಚಾರಕ್ಕೆ ಅಡ್ಡಿ ಪಡಿಸಿತು. ಮಳೆ ನಿಂತ ಬಳಿಕ ಮತ್ತೆ ಬಿರುಸಿನ ಪ್ರಚಾರ ನಡೆಸಿ ಮತಯಾಚಿಸಿದರು.

ಹೇರೋಹಳ್ಳಿ ವಾರ್ಡ್‌ನ ಗೊಲ್ಲರ ಹಟ್ಟಿ, ಬಾಲಾಜಿ ಲೇಔಟ್, ಬ್ಯಾಡರಹಳ್ಳಿ, ಬಿಳಿಕಲ್ಲು, ಅಂಜನಾನಗರ, ಮುದ್ದಿನಪಾಳ್ಯದಲ್ಲಿ ಯಶವಂತಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ಟಿ.ಸೋಮಶೇಖರ್ ಪ್ರಚಾರ ನಡೆಸಿದರು.



ಮಹದೇವಪುರದ ದೊಡ್ಡನೆಕ್ಕುಂದಿಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ರೋಡ್ ಶೋ ನಡೆಸಿದರು

ಕೆ.ಆರ್.ಪುರ ವರದಿ: ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ದೊಡ್ಡನೆಕ್ಕುಂದಿ ಎಂಬಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಚ್.ನಾಗೇಶ್ ಪರ ರೋಡ್ ಶೋ ನಡೆಸಿದರು.

ಪ್ರಿಯಾಂಕಾ ಅವರನ್ನು ನೋಡಲು ಸಾವಿರಾರು ಜನರು ರಸ್ತೆಬದಿಯಲ್ಲಿ ನೆರೆದಿದ್ದರು. ಅಭಿಮಾನಿಗಳು ರಸ್ತೆಯು-ದ್ದಕ್ಕೂ ಹೂವಿನ ಮಳೆಗರೆದರು. ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ನಲ್ಲೂರಹಳ್ಳಿ ನಾಗೇಶ್, ಗುಂಜೂರು ರಾಮಕೃಷ್ಣಪ್ಪ, ಬಾಬುಗೌಡ, ಸಾಥ್ ನೀಡಿದರು.

ಯಲಹಂಕ ವರದಿ: 'ರಾಜ್ಯದ ಜನರು ಈ ಬಾರಿ ಬದಲಾವಣೆ ಬಯಸಿದ್ದು, ಕಾಂಗ್ರೆಸ್ 150 ಸ್ಥಾನಗಳನ್ನು ಗೆಲ್ಲುವ ಮೂಲಕ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ' ಎಂದು ಕಾಂಗ್ರೆಸ್ ಮುಖಂಡ ಎಂ.ವೀರಪ್ಪ ಮೊಯಿಲಿ ವಿಶ್ವಾಸ ವ್ಯಕ್ತಪಡಿಸಿದರು.

ರಾಜರಾಜೇಶ್ವರಿನಗರ ವರದಿ: ಕ್ಷೇತ್ರದ ಜನರು ನನಗೆ ದೇವರು. ಮತದಾರರೇ ಸ್ಟಾರ್ ಪ್ರಚಾರಕರು. ನಿಮ್ಮ ಶಕ್ತಿಯ ಮುಂದೆ ಎಂತಹ ದುಷ್ಟಶಕ್ತಿ. ಭ್ರಷ್ಟಾಚಾರಿಗಳು ಉಳಿಯುವುದಿಲ್ಲ ಎಂದು ಕಾಂಗ್ರೆಸ್ ಅಭ್ಯರ್ಥಿ ಎಚ್.ಕುಸುಮಾ ಹೇಳಿದರು.

ಬೆಟ್ಟಿಂಗ್ ದಂಧೆ ಮಾಡುವವರಿಗೆ ಟಿಕೆಟ್: ಎಚ್‌ಡಿಕೆ ಆಕ್ರೋಶ

ಪ್ರಜಾವಾಣಿ ವಾರ್ತೆ

ರಾಮನಗರ: 'ಕ್ರಿಕೆಟ್, ಆನ್‌ಲೈನ್ ಬೆಟ್ಟಿಂಗ್ ದಂಧೆ ನಡೆಸುವವ-ರನ್ನು ಕಾಂಗ್ರೆಸ್ ಹಾಗೂ ಬಿಜೆಪಿ ತನ್ನ ಅಭ್ಯರ್ಥಿಗಳನ್ನಾಗಿ ನಿಲ್ಲಿಸಿದೆ. ಇಂತಹವರಿಂದ ರಾಜ್ಯದ ಬಡವರನ್ನು ಉಳಿಸಲು ಸಾಧ್ಯವೇ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು.

ಮಾಗಡಿ ತಾಲ್ಲೂಕಿನ ಕುದೂರು ಪಟ್ಟಣದಲ್ಲಿ ಚುನಾವಣಾ ಪ್ರಚಾರದ ವೇಳೆ ಭಾನುವಾರದ 'ಪ್ರಜಾವಾಣಿ' ಸಂಚಿಕೆಯಲ್ಲಿ ಕ್ರಿಕೆಟ್ ಬೆಟ್ಟಿಂಗ್ ಕುರಿತು ಮುಖಪುಟ ಸಹಿತ ಒಂದೂವರೆ ಪುಟದಷ್ಟು ಸಮಗ್ರವಾದ ವರದಿ ಪ್ರಕಟವಾಗಿದೆ ಎಂದು ಉಲ್ಲೇಖಿಸಿದರು.

ನೆಮ್ಮದಿಯಿಂದ ಬದುಕುತ್ತಿದ್ದ ಅನೇಕ ಕುಟುಂಬಗಳು ಬೆಟ್ಟಿಂಗ್ ದಂಧೆ ವ್ಯಾಮೋಹಕ್ಕೆ ಒಳಗಾಗಿ ₹15–20 ಲಕ್ಷ ಕಳೆದುಕೊಂಡು ಬೀದಿಗೆ ಬಂದ ಉದಾಹರಣೆಗಳನ್ನೂ ಪತ್ರಿಕೆಯಲ್ಲಿ ವಿವರಿಸಲಾಗಿದೆ. ಈ ಬೆಟ್ಟಿಂಗ್ ದಂಧೆ ಯಾವ ರೀತಿ ಹಳ್ಳಿಯ ಮಕ್ಕಳನ್ನು ಹಾಳು ಮಾಡುತ್ತಿದೆ ಎಂಬುದರ ವಿವರಗಳು ಇವೆ. ಈಗ ಆನ್‌ಲೈನ್ ಬೆಟ್ಟಿಂಗ್ ದಂಧೆ ಕೂಡ ಜೋರಾಗಿದೆ. ಇದರಿಂದ ಊರಿಗೆ ಊರೇ ಹಾಳಾಗುತ್ತಿದೆ ಎಂದರು.

ಜಗ್ಗೇಶ್ ವಿರುದ್ಧ ಪ್ರಕರಣ ದಾಖಲು

ತುಮಕೂರು: ದ್ವೇಷ ಭಾಷಣ ಮಾಡಿದ ಹಿನ್ನೆಲೆಯಲ್ಲಿ ರಾಜ್ಯಸಭಾ ಸದಸ್ಯ ಜಗ್ಗೇಶ್ ವಿರುದ್ಧ ಪ್ರಕರಣ ದಾಖಲಿಸಲಾಗುವುದು ಎಂದು ಪೊಲೀಸ್ ವರಿಷ್ಠಾಧಿಕಾರಿ ಆರ್.ಕೆ.ಶಹಾಪೂರವಾಡ್ ತಿಳಿಸಿದರು.


ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ಶುಕ್ರವಾರ ನಡೆದ ಬಿಜೆಪಿ ಪ್ರಚಾರದ ಸಭೆಯಲ್ಲಿ ಜಗ್ಗೇಶ್, 'ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಯಾವೊಬ್ಬ ಹಿಂದೂವಿಗೂ ಉಳಿಗಾಲವಿಲ್ಲ' ಎಂದು ಹೇಳಿಕೆ ನೀಡಿದ್ದರು.

ಸಮಸ್ಯೆಗಳ ಕುರಿತು ಮಾಹಿತಿ ಪಡೆದ ನಾಯಕ

ನೌಕರರೊಬ್ಬರ ದ್ವಿಚಕ್ರ ವಾಹನದಲ್ಲಿ ಹಿಂಬದಿಯಲ್ಲಿ ಕುಳಿತು ಸ್ವಲ್ಪ ದೂರದವರೆಗೆ ಸಂಚರಿಸಿದ ರಾಹುಲ್

ಗಿಗ್ ಕಾರ್ಮಿಕರ ಜೊತೆ ರಾಹುಲ್ ಸಂವಾದ

ಬೆಂಗಳೂರು: ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ನಗರದ ಏರ್‌ಲೈನ್ಸ್ ಹೋಟೆಲ್‌ನಲ್ಲಿ ಗಿಗ್ ಕಾರ್ಮಿಕರು ಮತ್ತು ಡಂಜೊ, ಸ್ವಿಗ್ಗಿ, ಜೊಮಾಟೊ, ಬ್ಲಿಂಕಿಟ್ ಮುಂತಾದ ಆಹಾರ ಪೂರೈಕೆ ಕಂಪನಿಗಳ ನೌಕರರ ಜೊತೆ ಭಾನುವಾರ ಸಂವಾದ ನಡೆಸಿದರು.


ರಾಹುಲ್ ಗಾಂಧಿ

ಒಂದು ಕಪ್ ಕಾಫಿ ಮತ್ತು ಮಸಾಲೆ ದೋಸೆ ಸವಿಯುತ್ತಲೇ ರಾಹುಲ್ ಅವರು, ಅಗತ್ಯ ವಸ್ತುಗಳ ಬೆಲೆ ಏರಿಕೆ, ನಿರುದ್ಯೋಗ, ಆಹಾರ ವಿತರಣೆ ವೇಳೆ ಎದುರಿಸುವ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿದರು. ಗಿಗ್ ಕೆಲಸವನ್ನು ಆರಿಸಿಕೊಂಡ ಕುರಿತು ಮತ್ತು ಆ ಕೆಲಸ ನಿರ್ವಹಿಸುವಾಗ ಎದುರಾಗುವ ತೊಂದರೆಗಳ ಬಗ್ಗೆಯೂ ಅವರು ಮಾಹಿತಿ ಪಡೆದರು.

ಬೆಂಗಳೂರು ನಗರವೊಂದರಲ್ಲಿಯೇ 2 ಲಕ್ಷಕ್ಕೂ ಹೆಚ್ಚು ಗಿಗ್ ಕಾರ್ಮಿಕರಿದ್ದಾರೆ. ಕಾಂಗ್ರೆಸ್ ಪಕ್ಷವು ತನ್ನ ಚುನಾವಣಾ ಪ್ರಣಾಳಿ-ಕೆಯಲ್ಲಿ ಈ ವರ್ಗದ ಕಾರ್ಮಿಕರನ್ನು ಗಮನದಲ್ಲಿಟ್ಟು, ₹ 3 ಸಾವಿರ ಕೋಟಿ ನಿಧಿ ಮೀಸಲಿಟ್ಟು ಗಿಗ್ ಕಾರ್ಮಿಕರ ಕಲ್ಯಾಣ ಮಂಡಳಿ ಸ್ಥಾಪನೆ, ಗಿಗ್ ಕೆಲಸಗಾರರು ಮತ್ತು ಅಸಂಘಟಿತ ವಲಯದ ಇತರ ಕಾರ್ಮಿಕರಿಗೆ ಕೆಲಸದ ಅವಧಿಗೆ ಅನುಗುಣವಾಗಿ ಕನಿಷ್ಠ ವೇತನದ ಭರವಸೆ ನೀಡಿದೆ ಎಂದೂ ಹೇಳಿದರು.

ಬಿಜೆಪಿ ಸರ್ಕಾರ ಶೇ 40 ಕಮಿಷನ್ ಸರ್ಕಾರವಾಗಿದೆ ಎಂದು ಆರೋಪಿಸಿದ ರಾಹುಲ್, ಕಾಂಗ್ರೆಸ್ ಪಕ್ಷದ ಐದು ಗ್ಯಾರಂಟಿಗಳ ಪರಿಣಾಮಗಳ ಬಗ್ಗೆಯೂ ಚರ್ಚೆ ನಡೆಸಿದರು.

ಲೆಕ್ಕಕ್ಕೆ ಸಿಗದ ಪಕ್ಷಗಳ ಬಲಾಬಲ, ಚರ್ಚೆಗೆ ಬಾರದ ಅಭಿವೃದ್ಧಿ ವಿಚಾರಗಳು– ಗಂಭೀರ ಸಮಸ್ಯೆಗಳು

ತ್ಯಾಗ– ಸ್ವಾಭಿಮಾನ ನಡುವಿನ ಸಂಘರ್ಷ

• ಸಂತೋಷ ಈ. ಚಿನಗುಡಿ

2,26,227 ಅಥಣಿ ಕ್ಷೇತ್ರದಲ್ಲಿರುವ ಒಟ್ಟು ಮತದಾರರು
1,15,701 ಪುರುಷರು
1,10,523 ಮಹಿಳೆಯರು
3 ತೃತೀಯ ಲಿಂಗಿಗಳು
13 ಕಣದಲ್ಲಿರುವ ಒಟ್ಟು ಅಭ್ಯರ್ಥಿಗಳು



2019ರ ಉಪ ಚುನಾವಣೆ		
ಅಭ್ಯರ್ಥಿ	ಪಕ್ಷ	ಪಡೆದ ಮತ
ಮಹೇಶ ಕುಮಠಳ್ಳಿ	ಬಿಜೆಪಿ	99,203
ಗಜಾನನ ಮಂಗಸೂಳಿ	ಕಾಂಗ್ರೆಸ್	59,214
ಗೆಲುವಿನ ಅಂತರ: 39,989		
2018ರ ಚುನಾವಣೆ		
ಮಹೇಶ ಕುಮಠಳ್ಳಿ	ಕಾಂಗ್ರೆಸ್	82,094
ಲಕ್ಷ್ಮಣ ಸವದಿ	ಬಿಜೆಪಿ	79,763
ಗೆಲುವಿನ ಅಂತರ: 2,331		
2013ರ ಚುನಾವಣೆ		
ಲಕ್ಷ್ಮಣ ಸವದಿ	ಬಿಜೆಪಿ	74,299
ಮಹೇಶ ಕುಮಠಳ್ಳಿ	ಕಾಂಗ್ರೆಸ್	50,528
ಗೆಲುವಿನ ಅಂತರ: 23,771		

ಅಥಣಿ: 'ತರಗೆಲೆ, ಪೀಡೆ, ಶನಿ, ಬೆಳವ, ರಕ್ತ, ಹೆಣ...'

ಅಥಣಿ ವಿಧಾನಸಭಾ ಕ್ಷೇತ್ರದಲ್ಲಿ ಪದೇ ಪದೇ ಕೇಳಿಸುತ್ತಿರುವ ಪದಗಳಿವು. 2018ರಲ್ಲಿ ಲಕ್ಷ್ಮಣ ಸವದಿ ಸೋಲಿನಿಂದಾಗಿ ಹೆಸರಾಗಿದ್ದ ಈ ಕ್ಷೇತ್ರ, 2019ರಲ್ಲಿ 'ಆಪರೇಷನ್ ಕಮಲ'ದಿಂದ ದೊಡ್ಡ ಸುದ್ದಿಯಾಯಿತು. ಆ ಆಪರೇಷನ್ ಅಡ್ಡ ಪರಿಣಾಮ ಬೀರಿ ಲಕ್ಷ್ಮಣ ಸವದಿ ಕಾಂಗ್ರೆಸ್ ಸೇರಿದರು. ಈ ಅನಿರೀಕ್ಷಿತ ಬೆಳವಣಿಗೆಗಳ ಕಾರಣ ಕ್ಷೇತ್ರವು ಮತ್ತೊಮ್ಮೆ ಗಮನ ಸೆಳೆದಿದೆ.

20 ವರ್ಷಗಳಿಂದ ಕಾಂಗ್ರೆಸ್‌ಗಾಗಿ ದುಡಿದ ಮಹೇಶ ಕುಮಠಳ್ಳಿ ಈಗ ಬಿಜೆಪಿ ಅಭ್ಯರ್ಥಿ. ಅಷ್ಟೇ ಸಮಯ ಬಿಜೆಪಿಯಲ್ಲಿದ್ದ ಲಕ್ಷ್ಮಣ ಸವದಿ ಕಾಂಗ್ರೆಸ್ ಉಮೇದುವಾರ. ಅಭ್ಯರ್ಥಿಗಳ ಈ 'ಅದಲು–ಬದಲು' ಕುತೂಹಲವನ್ನು ಹೆಚ್ಚಿಸಿದೆ.

ಅಥಣಿ
ಗಮನ ಸೆಳೆದ ಕಣ
ಸಾಕ್ಷಾತ್ ಸಮೀಕ್ಷೆ

ಪ್ರತಿಷ್ಠೆ, ಪ್ರತಿಜ್ಞೆ, ಪ್ರಶ್ನೆ: ಲಕ್ಷ್ಮಣ ಸವದಿ ಅವರನ್ನು ಸೋಲಿಸುವ ಹೊಣೆಯನ್ನು ಬಿಜೆಪಿಯು ಬಿ.ಎಸ್. ಯಡಿಯೂರಪ್ಪ ಹಾಗೂ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ವಹಿಸಿದೆ. ಸವದಿಯ ಕಾರಣಕ್ಕೆ ಇತರ ಕ್ಷೇತ್ರಗಳಲ್ಲಿ ಲಿಂಗಾಯತ ಮತದಾರರು ಬಿಜೆಪಿಯಿಂದ ಚದುರದಂತೆ ನೋಡಿಕೊಳ್ಳುವಂತೆಯೂ ಸೂಚಿಸಿದೆ.

ರಮೇಶ ಜಾರಕಿಹೊಳಿ ಅವರ 'ಪ್ರತಿಜ್ಞೆ' ಕೂಡ ಬಿಜೆಪಿ ಕಾರ್ಯಕರ್ತರನ್ನು ಅತ್ತಿತ್ತ ಸುಳಿಯದಂತೆ ಮಾಡಿದೆ. ಬಿಜೆಪಿ ಸರ್ಕಾರ ರಚನೆಗೆ ಮಹೇಶ ಕುಮಠಳ್ಳಿ ತ್ಯಾಗ ಮಾಡಿದರು. ಆ ತ್ಯಾಗ ವ್ಯರ್ಥವಾಗದಂತೆ ನೋಡಿಕೊಳ್ಳುವುದು ಮತದಾರರ ಜವಾಬ್ದಾರಿ ಎಂದು ಕಟ್ಟಿಹಾಕುತ್ತಿದ್ದಾರೆ.

'ಹೊರಗಿನವರು ಬಂದು ನನ್ನ 'ಸ್ವಾಭಿಮಾನ'ಕ್ಕೆ ಪೆಟ್ಟು ನೀಡಿದ್ದಾರೆ. ಅಥಣಿಯ ಮಗ ಸೋತರೆ ಕ್ಷೇತ್ರದ ಸ್ವಾಭಿಮಾನವೇ ಸೋತಂತೆ' ಎಂದು ಲಕ್ಷ್ಮಣ ಸವದಿ ಭಾವುಕರಾಗುತ್ತ


ಲಕ್ಷ್ಮಣ ಸವದಿ


ಮಹೇಶ ಕುಮಠಳ್ಳಿ

ಸಾಗಿದ್ದಾರೆ. ಅಭಿವೃದ್ಧಿ–ಸಮಸ್ಯೆಗಳಿಗಿಂತ 'ತ್ಯಾಗ–ಸ್ವಾಭಿಮಾನ' ಎಂಬ ಸಂಗತಿಗಳೇ ಚುನಾವಣಾ ಅಸ್ತ್ರಗಳಾಗಿವೆ.

ವರ್ಚಸ್ಸು ಒರೆಗೆ ಹಚ್ಚಿದ ಸವದಿ: ಎರಡು ದಶಕಗಳಲ್ಲಿ ಮೂರು ಬಾರಿ ಬಿಜೆಪಿಯಿಂದ ಗೆದ್ದವರು ಲಕ್ಷ್ಮಣ ಸವದಿ. ಸಚಿವರಾಗಿ, ಉಪ ಮುಖ್ಯಮಂತ್ರಿ ಆಗಿ ವರ್ಚಸ್ಸು ಹೆಚ್ಚಿಸಿಕೊಂಡವರು. ಕರಿಮಸೂರಿ ಏತ ನೀರಾವರಿ ಯೋಜನೆ ಪೂರ್ಣ, 40 ಹಳ್ಳಿಗಳಿಗೆ ಕೃಷ್ಣಾ ನದಿಯಿಂದ ಕುಡಿಯುವ ನೀರು ಸರಬರಾಜು, ಪಶು ವೈದ್ಯಕೀಯ ವಿಶ್ವವಿದ್ಯಾಲಯ ಸ್ಥಾಪನೆ, ಪಟ್ಟಣದ ರಸ್ತೆಗಳಿಗೆ ಆಧುನಿಕ ಸ್ಪರ್ಶ ಇವೇ ಮುಂತಾದ ಅಂಶಗಳು ಅವರಿಗೆ ವರವಾಗುವ ಸಾಧ್ಯತೆ ಇದೆ.

ಕಾಂಗ್ರೆಸ್ ಪ್ರಬಲ ಆಕಾಂಕ್ಷಿಗಳಾಗಿದ್ದ ಬಣಜಿಗ ಸಮಾಜದ ಗಜಾನನ ಮಂಗಸೂಳಿ, ಮಾಳಿ ಸಮಾಜದ ಬುಟಾಳೆ ಸಹೋದರರು ಕೂಡ ಲಕ್ಷ್ಮಣ ಸವದಿ ಬೆಂಬಲಕ್ಕೆ ನಿಂತಿದ್ದಾರೆ. 2019ರ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಇದೇ ಗಜಾನನ 59,214 ಮತ ಪಡೆದಿದ್ದರು.

ಮುಸ್ಲಿಂ ಸಮಾವೇಶ ಮಾಡಿದ ಸವದಿ ಅವರು 'ಮುಸ್ಲಿಮರು ನನ್ನ ಹೃದಯದಲ್ಲಿದ್ದಾರೆ' ಎಂದೂ ಹೇಳಿದ್ದರು. ಬಿಜೆಪಿಯಲ್ಲಿದ್ದಾಗಲೂ ಸವದಿ ಮುಸ್ಲಿಂ ಸಮಾಜವನ್ನು ಟೀಕಿಸಿದವರಲ್ಲ. ಈಗ ಕಾಂಗ್ರೆಸ್ ಮತಗಳು, ಮುಸ್ಲಿಂ ಮತಗಳು, ಸವದಿ ಕುಟುಂಬದ ನಿಷ್ಠಾವಂತ ಮತಗಳು ಒಂದಾಗಿ 'ರೊಟ್ಟಿ ಜಾರಿ ತುಪ್ಪಕ್ಕೆ ಬೀಳುತ್ತದೆ' ಎನ್ನುವುದು ಅವರ ಕಡೆಯವರ ಮಾತು.

'ಕ್ಷೇತ್ರದ ಜನರಿಗೆ ಸುಲಭವಾಗಿ ಸಿಗುವುದಿಲ್ಲ. ಗ್ರಾಮೀಣ ರಸ್ತೆಗಳತ್ತ ನಿರ್ಲಕ್ಷ್ಯ ಮಾಡಿದ್ದಾರೆ. ಪ್ರವಾಹದಿಂದ ತತ್ತರಿಸುವ ಹಳ್ಳಿಗಳ ರಕ್ಷಣೆಗೆ ಶಾಶ್ವತ ಪರಿಹಾರ ಕಂಡುಕೊಂಡಿಲ್ಲ. ಹೊಲ–ಮನೆ ಮುಳುಗಿದವರಿಗೆ ಪರಿಹಾರ ಧನ ಸಿಕ್ಕಿಲ್ಲ' ಎಂಬ ಅಂಶಗಳು ಅವರ ಕಾಲೆಳೆಯಬಹುದು.

ಗಟ್ಟಿಯಾಗಿ ಬೇರೂರಿದ ಕುಮಠಳ್ಳಿ: ಮಹೇಶ ಕುಮಠಳ್ಳಿ 2018ರಲ್ಲಿ ಕಾಂಗ್ರೆಸ್‌ನಿಂದ ಗೆದ್ದಾಗ ಹುಮ್ಮಸ್ಸಿನ ರಾಜಕಾರಣಿ ಅನಿಸಿದ್ದರು. 2019ರ ಉಪ ಚುನಾವಣೆಯಲ್ಲೂ ಗೆದ್ದಾಗ ಅನುಭವಿ ಆದರು. ನಾಲ್ಕು ವರ್ಷಗಳಲ್ಲಿ ಗಟ್ಟಿಯಾಗಿ ಬೇರೂರಿದ್ದಾರೆ.

ಕುಮಠಳ್ಳಿ ಸಿವಿಲ್ ಎಂಜಿನಿಯರ್ ಆಗಿದ್ದಾಗ 'ಅಮ್ಮಾಜೇಶ್ವರಿ ಏತ ನೀರಾವರಿ' ಯೋಜನೆಯ ರೂಪುರೇಷೆ ಸಿದ್ಧಪಡಿಸಿದ್ದರು. ತಾವು ಶಾಸಕರಾದ ಮೇಲೆ ಅದಕ್ಕೆ ಮಂಜೂರಾತಿ ಪಡೆದರು. ಮಿನಿ ವಿಮಾನ ನಿಲ್ದಾಣಕ್ಕೂ ಮಂಜೂರಾತಿ ಪಡೆದಿದ್ದಾರೆ. ಕ್ಷೇತ್ರಕ್ಕೆ ₹2,700 ಕೋಟಿ ಅನುದಾನ ತಂದಿದ್ದಾರೆ ಎನ್ನುವ ಅಂಶಗಳು ಅವರಿಗೆ ವರವಾಗಿವೆ.

'ಮೃದು ಸ್ವಭಾವದ ನಾಯಕ, ಜನರಿಗೆ ಸುಲಭವಾಗಿ ಸಿಗುತ್ತಾರೆ. ಪಂಚಮಸಾಲಿ ಸಮಾಜಕ್ಕೆ ಸೇರಿದವರು. ಪ್ರತಿಯೊಂದು ಸಮಾಜದ ಸಮುದಾಯ ಭವನಕ್ಕೂ ತಲಾ ₹50 ಲಕ್ಷ ನೀಡಿದ್ದಾರೆ' ಎನ್ನುವ ಮಾತುಗಳು ಅವರ ಬಲ ಹೆಚ್ಚಿಸಿವೆ.

ರಮೇಶ ಜಾರಕಿಹೊಳಿ ಅವರು ಕುಮಠಳ್ಳಿ ಮೂಲಕ ಅಥಣಿಯಲ್ಲಿ ಅಧಿಪತ್ಯ ಸ್ಥಾಪಿಸಲು ಯತ್ನಿಸುತ್ತಿದ್ದಾರೆ. ಕುಮಠಳ್ಳಿ ಗೆದ್ದರೂ ಜಾರಕಿಹೊಳಿ ಕುಟುಂಬವೇ ನಿಯಂತ್ರಿಸುತ್ತದೆ. ಹಿಂದೆ 'ಆಪರೇಷನ್'ಗೆ ಒಳಗಾದವರು ಮತ್ತೆ ಅಂಥದ್ದೇ ಆಪರೇಷನ್‌ಗೆ ಒಪ್ಪಿದರೆ ಮಾಡುವುದೇನು? ಎಂಬ ಮತದಾರರ ಪ್ರಶ್ನೆಗಳು ಬಿಜೆಪಿಗೆ ಬಿಸಿತುಪ್ಪ ಆಗುವ ಸಾಧ್ಯತೆಯೂ ಇದೆ.

ಜೆಡಿಎಸ್‌ನಿಂದ ಕಣಕ್ಕಿಳಿದ ಶಶಿಕಾಂತ ಪಡಸಲಗಿ ಅವರು ಈ ಭಾಗದಲ್ಲಿ ಗುರೂಜಿ ಎಂದೇ ಪರಿಚಿತರು. ಇಂಚಗೇರಿ ಮಠದ ಅಧ್ಯಾತ್ಮ ಸಂಪ್ರದಾಯ ಪಾಲಕರೂ ಆಗಿದ್ದಾರೆ. ಹಳ್ಳಿಮಟ್ಟದಲ್ಲಿ ಲಿಂಗಾಯತ ಮತಗಳನ್ನು ಅವರು ಸೆಳೆಯುವ ಸಾಧ್ಯತೆಯೂ ಇದೆ.

ಮೋದಿ ಮಾತನಾಡುವ ಧೈರ್ಯ ತೋರಲಿ: ರಾಹುಲ್

ಪ್ರಜಾವಾಣಿ ವಾರ್ತೆ

ಆನೇಕಲ್: 'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಅವರ ಕುಟುಂಬದವರನ್ನು ಹತ್ಯೆ ಮಾಡುವುದಾಗಿ ಬಿಜೆಪಿ ಅಭ್ಯರ್ಥಿ ಮಣಿಕಂಠ ರಾಠೋಡ ಅವರಿಗೆ ಸೇರಿದ ಎನ್ನಲಾದ ಆಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮಾಹಿತಿಯಿದ್ದರೂ ಇದರ ವಿರುದ್ಧ ಮಾತನಾಡಿಲ್ಲ. ಪ್ರಧಾನಿ ಅವರು ಇಂತಹ ವಿಚಾರಗಳ ಬಗ್ಗೆ ಮಾತನಾಡುವ ಧೈರ್ಯ ತೋರಬೇಕು' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟೀಕಾ ಪ್ರಹಾರ ನಡೆಸಿದರು.

ಪಟ್ಟಣದಲ್ಲಿ ಭಾನುವಾರ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಮಾತನಾಡಿದ ಅವರು, 'ಬಿಜೆಪಿಯವರು ನಮ್ಮನ್ನು ಆತಂಕವಾದಿಗಳು ಎಂದು ಹೇಳುತ್ತಾರೆ. ವಾಸ್ತವವಾಗಿ ಕಾಂಗ್ರೆಸ್‌ನ ಇಬ್ಬರು ಪ್ರಧಾನಿಗಳು ದೇಶಕ್ಕಾಗಿ ಹುತಾತ್ಮರಾಗಿದ್ದಾರೆ. ಕಾಂಗ್ರೆಸ್ ಆತಂಕವಾದವನ್ನು ಎಂದಿಗೂ ಬೆಂಬಲಿಸುವುದಿಲ್ಲ' ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರು ದಿನದ 24 ಗಂಟೆಯೂ ಭದ್ರತೆಯಲ್ಲಿ ಇರುತ್ತಾರೆ. ಅವರು ಜನರ ಮಧ್ಯೆ ಬರಬೇಕು. ಆಗ ಜನರ ಸಮಸ್ಯೆಗಳು ಅರ್ಥವಾಗುತ್ತದೆ ಎಂದು ಕುಟುಕಿದರು.

ಜನರಿಗಾಗಿ ಸಾಯಲು ಸಿದ್ಧ: ಖರ್ಗೆ

ಕಲಬುರಗಿ: 'ಒಳ್ಳೆಯ ಕೆಲಸಗಳನ್ನು ಮಾಡಿಕೊಂಡು ಬರುತ್ತಿದ್ದು, ಬಿಜೆಪಿಯವರು ನನ್ನನ್ನು ಸಾಯಿಸಲು ಬಯಸುತ್ತಿದ್ದಾರೆ. ಜನರಿಗಾಗಿ ನಾನು ಸಾಯಲು ಸಿದ್ಧ. ಯಾವುದಕ್ಕೂ ಹೆದರುವುದಿಲ್ಲ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ನಗರದಲ್ಲಿ ಭಾನುವಾರ ಕಲಬುರಗಿ ಉತ್ತರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಶಾಸಕಿ ಕನೀಜ್ ಫಾತಿಮಾ ಅವರ ಪರ ಚುನಾವಣಾ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

'ನಾವು ಸಣ್ಣ, ಪುಟ್ಟ ವಿಚಾರಗಳನ್ನು ಮಾತನಾಡಿದರೆ ನಮಗೆ ನೋಟಿಸ್ ಕೊಟ್ಟು ಧಮ್ಕಿ ಹಾಕುತ್ತಾರೆ. ಬಿಜೆಪಿಯವರು ನನ್ನನ್ನು ಸಾಯಿಸಲು ಇಚ್ಛಿಸಿದ್ದಾರೆ. ನನ್ನ ಇಡೀ ಕುಟುಂಬವನ್ನು ಸಾಫ್ ಮಾಡುತ್ತೇವೆ ಎನ್ನುತ್ತಿದ್ದಾರೆ. ನಾವು ಸಾಯಲು ಹುಟ್ಟಿದವರು. ಸಾಯಿಸುವುದಾದರೆ ಸಾಯಿಸಿ, ನಾವು ಸಾಯಲು ಸಿದ್ಧ' ಎಂದರು. 'ಭೂಮಿಯ ಮೇಲೆ ಯಾರಾದರೂ 200 ವರ್ಷ ಬದುಕಿದ್ದಾರಾ? ನನಗೆ ಈಗ 81 ವರ್ಷ ವಯಸ್ಸು. ಇನ್ನೆಷ್ಟು ವರ್ಷಗಳ ಕಾಲ ಬದುಕಿರುತ್ತೇನೆ. ನಾನು ಸಾಯಲು ಹೆದರುವುದಿಲ್ಲ. ಸಂಸತ್ತಿನ ಒಳಗೆ–ಹೊರಗೆ ಜನರಿಗಾಗಿ ಹೋರಾಟ ಮಾಡಿದ್ದೇನೆ, ಮಾಡುತ್ತಿದ್ದೇನೆ, ಮುಂದೆ ಮಾಡುತ್ತೇನೆ. ಒಳ್ಳೆಯ ಕೆಲಸಕ್ಕಾಗಿ ಹೆದರುವುದು ಏಕೆ' ಎಂದು ಪ್ರಶ್ನಿಸಿದರು.

ತನಿಖೆಗೆ ಸಿ.ಎಂ ಆದೇಶ

ಕೋಲಾರ: 'ಮಲ್ಲಿಕಾರ್ಜುನ ಖರ್ಗೆ ಕುಟುಂಬಕ್ಕೆ ಕೊಲೆ ಬೆದರಿಕೆ ಆರೋಪ ಸಂಬಂಧ ಮುಖ್ಯಮಂತ್ರಿ ತನಿಖೆಗೆ ಆದೇಶಿಸಿದ್ದಾರೆ. ಈ ರೀತಿಯ ರಾಜಕಾರಣವನ್ನು ಪಕ್ಷ ಸಹಿಸುವುದಿಲ್ಲ' ಎಂದು ಬಿಜೆಪಿ ರಾಜ್ಯ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು. ಭಾನುವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಸೋಲಿನ ಭೀತಿಯಿಂದ ಕಾಂಗ್ರೆಸ್ ಈ ಪ್ರಕರಣ ಸೃಷ್ಟಿಸಿದೆ' ಎಂದು ಆರೋಪಿಸಿದರು.

ಅಡಿಕೆ ಬೆಳೆಗಾರರ ವಿರುದ್ಧ ಕಾಂಗ್ರೆಸ್ ಷಡ್ಯಂತ್ರ: ಪ್ರಧಾನಿ ನರೇಂದ್ರ ಮೋದಿ ಆರೋಪ

ಆಮದು ಶುಲ್ಕ ಹೆಚ್ಚಿಸಿ ಅಡಿಕೆ ಬೆಳೆಗಾರರ ರಕ್ಷಣೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಪ್ರತಿ ಕೆ.ಜಿ.ಗೆ ₹ 100 ಇದ್ದ ಆಮದು ಶುಲ್ಕವನ್ನು ₹ 350ಕ್ಕೆ ಹೆಚ್ಚಿಸಿ ಕರ್ನಾಟಕದ ಅಡಿಕೆ ಬೆಳೆಗಾರರ ಹಿತ ಕಾಪಾಡಿದ್ದು ಬಿಜೆಪಿ' ಎಂದು ಭಾನುವಾರ ತಾಲ್ಲೂಕಿನ ಆಯನೂರಿನಲ್ಲಿ ನಡೆದ ಪಕ್ಷದ ಪ್ರಚಾರ ಸಭೆಯಲ್ಲಿ ಹೇಳಿದ ಪ್ರಧಾನಿ ನರೇಂದ್ರ ಮೋದಿ, ಮಲೆನಾಡಿನ ಅಡಿಕೆ ಬೆಳೆಗಾರರ ಮನಗೆಲ್ಲಲು ಪ್ರಯತ್ನಿಸಿದರು.

'ವಿದೇಶದಿಂದ ಕಡಿಮೆ ಗುಣಮಟ್ಟದ ಅಡಿಕೆ ಆಮದು ಮಾಡಿಕೊಳ್ಳಲು ಅವಕಾಶ ನೀಡಿ ಬೆಳೆಗಾರರನ್ನು ನಾಶ ಮಾಡಲು ಕಾಂಗ್ರೆಸ್ ಷಡ್ಯಂತ್ರ ನಡೆಸಿತ್ತು' ಎಂದು ಆರೋಪಿಸಿದ ಮೋದಿ, 'ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದ ವೇಳೆ ಗುಜರಾತ್‌ಗೆ ಬಂದು ನನ್ನನ್ನು ಭೇಟಿ ಮಾಡಿ, ಅಡಿಕೆ ಬೆಳೆಗಾರರ ಸಂಕಷ್ಟ ಬಿಚ್ಚಿಟ್ಟಿದ್ದರು. ಹೀಗಾಗಿ ಶುಲ್ಕ ಹೆಚ್ಚಿಸಿ ಆಮದು ಮಾಡಿಕೊಳ್ಳುವ ಅವಕಾಶ ತಪ್ಪಿಸಿದ್ದೆ' ಎಂದರು.

'ಅಡಿಕೆ ಆಮದು ವಿಚಾರದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿಯ ನೀತಿಯನ್ನು ತುಲನೆ ಮಾಡಿ ನಮ್ಮ ಪ್ರೀತಿ ಹೇಗಿದೆ ಎಂಬುದನ್ನು ಅರಿತು ಬೆಂಬಲಿಸಬೇಕು' ಎಂದು ಮನವಿ ಮಾಡಿದರು.


ಶಿವಮೊಗ್ಗ ತಾಲ್ಲೂಕಿನ ಆಯನೂರಿನಲ್ಲಿ ಭಾನುವಾರ ನಡೆದ ಬಿಜೆಪಿ ಪ್ರಚಾರ ಸಭೆಯಲ್ಲಿ ಪಾಲ್ಗೊಂಡ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹನುಮಂತ ದೇವರ ಕಂಚಿನ ಮೂರ್ತಿಯನ್ನು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹಾಗೂ ಶಾಸಕ ಕೆ.ಎಸ್. ಈಶ್ವರಪ್ಪ ನೀಡಿ ಗೌರವಿಸಿದರು. ಶಾಸಕ ಕುಮಾರ್ ಬಂಗಾರಪ್ಪ, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಟಿ.ಡಿ. ಮೇಘರಾಜ್, ಸಂಸದ ಬಿ.ವೈ. ರಾಘವೇಂದ್ರ ಚಿತ್ರದಲ್ಲಿದ್ದಾರೆ

> **ನೀಟ್ ಪರೀಕ್ಷೆ ಇದ್ದ ಕಾರಣ ಬೆಂಗಳೂರಿನಲ್ಲಿ ರೋಡ್ ಶೋ 11 ಗಂಟೆಯೊಳಗೆ ಮುಗಿಸಿರುವೆ. ಮಕ್ಕಳ ಪರೀಕ್ಷೆ ಮುಖ್ಯ. ನಮ್ಮ ಪರೀಕ್ಷೆಗೆ ಇನ್ನೂ ಮೂರು ದಿನ ಇದೆ**
> **ನರೇಂದ್ರ ಮೋದಿ,** ಪ್ರಧಾನಿ

'ಗ್ಯಾರಂಟಿ ಕಾರ್ಡ್ ನೆಪದಲ್ಲಿ ಕಾಂಗ್ರೆಸ್, ಸುಳ್ಳುಗಳ ಗಾಳಿ ತುಂಬಿದ ಬಲೂನನ್ನು ಹಾರಿಬಿಟ್ಟಿದೆ. ಆದರೆ, ಚುನಾವಣೆಗೆ ಮುನ್ನ ಜನರೇ ಆ ಬಲೂನನ್ನು ಒಡೆದಿದ್ದಾರೆ. ಯಡಿಯೂರಪ್ಪ ಅವರ ನೆಲದಲ್ಲಿ (ಶಿವಮೊಗ್ಗ) ನಿಂತು ನಾನು ಇಡೀ ಕರ್ನಾಟಕಕ್ಕೆ ಅಸಲಿ ಗ್ಯಾರಂಟಿ ಕೊಡುವೆ. ಬಹುಮತದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ತನ್ನಿ. ಕರ್ನಾಟಕದ ವಿಕಾಸದ ಮೂಲಕ ಬಡ್ಡಿ ಸಮೇತ ನಿಮ್ಮ ಪ್ರೀತಿ–ಋಣ ತೀರಿಸುವೆ' ಎಂದು ಭರವಸೆ ನೀಡಿದರು.

ಹನುಮಾನ್ ಟೋಪಿಧಾರಿ ಮೋದಿ, ಸ್ಮರಣಿಕೆ ಸ್ವೀಕಾರ

ಪ್ರಧಾನಿ ಮೋದಿ ಆಂಜನೇಯನ ಸ್ಮರಣೆಯೊಂದಿಗೆ ಭಾಷಣ ಆರಂಭಿಸಿದರು. ಅದಕ್ಕೂ ಮುನ್ನ ಬಿಜೆಪಿ ಜಿಲ್ಲಾ ಘಟಕದಿಂದ ಪ್ರಧಾನಿಗೆ ಆಂಜನೇಯನ ಕಂಚಿನ ಪ್ರತಿಮೆ ನೀಡಿ ಗೌರವಿಸಲಾಯಿತು. ಈ ವೇಳೆ ಮೋದಿ ಹನುಮಾನ್ ಟೋಪಿ ಧರಿಸಿದ್ದು ವಿಶೇಷ.

ನರೇಂದ್ರ ಮೋದಿ ಭಾಷಣ ಕನ್ನಡಕ್ಕೆ ಅನುವಾದ ಮಾಡಲು ವಿಧಾನ ಪರಿಷತ್ ಸದಸ್ಯ ಪ್ರತಾಪ ಸಿಂಹ ನಾಯಕ ಮುಂದಾದರು. ಈ ವೇಳೆ ನೆರೆದವರು ಮೋದಿ ಮೋದಿ ಎಂದು ಕೂಗುತ್ತಾ ಅನುವಾದ ಬೇಕಿಲ್ಲ, ನಮಗೆ ಭಾಷಣ ಅರ್ಥವಾಗುತ್ತಿದೆ ಎಂದರು. ಹೀಗಾಗಿ ಪ್ರತಾಪ ಸಿಂಹ ನಾಯಕ ವಾಪಸ್ ಆಸನದತ್ತ ತೆರಳಿದರು. ಮೋದಿ ಮಾತು ಮುಂದುವರಿಸಿದರು.

ಆಪರೇಷನ್ ಕಾವೇರಿ ಕಾರ್ಯಾಚರಣೆ ನೆರವಿನಿಂದ ಸುಡಾನ್‌ನಿಂದ ಶಿವಮೊಗ್ಗಕ್ಕೆ ಮರಳಿರುವ ಹಕ್ಕಿಪಿಕ್ಕಿ ಸಮುದಾಯದವರನ್ನು ಪ್ರಧಾನಿ ವಿಮಾನ ನಿಲ್ದಾಣದಲ್ಲಿ ಭೇಟಿ ಆಗಿ ಅವರ ಅನುಭವ ಆಲಿಸಿದರು.

ಇಂದು ಹನುಮಾನ್ ಚಾಲೀಸ್ ಪಠಣ

ಗಂಗಾವತಿ (ಕೊಪ್ಪಳ ಜಿಲ್ಲೆ): ಅಧಿಕಾರಕ್ಕೆ ಬಂದರೆ ಬಜರಂಗದಳ ನಿಷೇಧದ ಬಗ್ಗೆ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಘೋಷಣೆ ಮಾಡುತ್ತಿದ್ದಂತೆಯೇ ಜಿಲ್ಲೆಯ ಹಲವು ಕಡೆ ಹನುಮಾನ್ ಚಾಲೀಸ್ ಪಠಣ ನಡೆಯುತ್ತಿದೆ. ಆದರೆ, ಇದೇ ಮೊದಲ ಸಲ ಗಂಗಾವತಿ ತಾಲ್ಲೂಕಿನ ಅಂಜನಾದ್ರಿಯಲ್ಲಿ ಸಹಸ್ರ ಕಂಠಗಳಿಂದ ಹನುಮಾಲ್ ಚಾಲೀಸ್ ಪಠಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸೋಮವಾರ (ಮೇ 8) ಬೆಳಿಗ್ಗೆ 9 ಗಂಟೆಗೆ ಅಂಜನಾದ್ರಿಯಲ್ಲಿ ಸಹಸ್ರ ಕಂಠಗಳಿಂದ ಪಠಣ ಜರುಗಲಿದೆ ಎಂದು ಹನುಮ ಭಕ್ತರು ಕಾರ್ಯಕ್ರಮದ ಮಾಹಿತಿ ಹಂಚಿಕೊಳ್ಳುತ್ತಿದ್ದಾರೆ. ಆದರೆ, ಯಾವ ಸಂಘಟನೆಯ ಹೆಸರನ್ನೂ ಆಹ್ವಾನ ಪತ್ರಿಕೆಯಲ್ಲಿ ಪ್ರಕಟಿಸಿಲ್ಲ. ಪಠಣದ ಬಳಿಕ ಚಿಂತಕ ಚಕ್ರವರ್ತಿ ಸೂಲಿಬೆಲೆ ಜಾಗೃತಿ ಭಾಷಣ ಮಾಡಲಿದ್ದು, 'ಹನುಮನ ಭಕ್ತಿ ನಾಡಿಗೆ ಶಕ್ತಿ ಚಲೋ ಅಂಜನಾದ್ರಿ' ಎಂದು ಸಂಘಟಕರು ಭಕ್ತರಿಗೆ ಕರೆ ನೀಡುತ್ತಿದ್ದಾರೆ.

'85 ಪರ್ಸೆಂಟ್ ಕಮಿಷನ್ ತಿನ್ನುವ ಕಾಂಗ್ರೆಸ್ ನಿಮ್ಮ ಉತ್ತಮ ಭವಿಷ್ಯ ರೂಪಿಸಲಿದೆಯೇ, ನಿಮ್ಮ ಅಪ್ಪ, ಅಜ್ಜ, ಮುತ್ತಜ್ಜ ಎದುರಿಸಿದ ಸಮಸ್ಯೆಯನ್ನು ನೀವು ಅನುಭವಿಸಬೇಕೇ' ಎಂದ ಅವರು, 'ಬಿಜೆಪಿ ಮಾತ್ರ ಯುವ ಮತದಾರರಿಗೆ ಸುಭದ್ರ ಭವಿಷ್ಯ ರೂಪಿಸಿಕೊಡಲಿದೆ' ಎಂದರು.

ಕಾಂಗ್ರೆಸ್‌ನಿಂದ ಒಡಕು (ಮೈಸೂರು ವರದಿ): ನಂಜನಗೂಡಿನ ಎಲಚಗೆರೆ ಬೋರೆಯಲ್ಲಿ ಚುನಾವಣಾ ಭಾಷಣ ಮಾಡಿದ ಪ್ರಧಾನಿ ನರೇಂದ್ರ ಮೋದಿ, ಹಳೆ ಮೈಸೂರು ಭಾಗದಲ್ಲಿ ಮತ ಫಸಲು ತೆಗೆಯಲು ಕನ್ನಡ ಅಸ್ಮಿತೆ, ಸಾರ್ವಭೌಮತ್ವವನ್ನು ಅಸ್ತ್ರವಾಗಿಸಿಕೊಂಡರು.

ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಅವರು, 'ಆ ಪಕ್ಷಕ್ಕೆ ಕನ್ನಡಿಗರು ರಾಜಕೀಯ ಆಮ್ಲಜನಕ ನೀಡಬಾರದು' ಎಂದು ಕೋರಿದರು. ನಂತರ ನಂಜನಗೂಡಿನಲ್ಲಿ ಶ್ರೀಕಂಠೇಶ್ವರನ ದರ್ಶನ ಪಡೆದರು.

ಬಿಎಸ್‌ವೈ ಅಭಿಮಾನಿ ಹೆಸರಿನಲ್ಲಿ ನಕಲಿ ಖಾತೆ: ದೂರು ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫೇಸ್‌ಬುಕ್ ಜಾಲತಾಣದಲ್ಲಿ 'ಅಖಿಲ ಕರ್ನಾಟಕ ಯಡಿಯೂರಪ್ಪನವರ ಅಭಿಮಾನಿಗಳ ಬಳಗ' ಹೆಸರಿನಲ್ಲಿ ನಕಲಿ ಖಾತೆ ಸೃಷ್ಟಿಸಿದ್ದ ಆರೋಪದಡಿ ಮೂವರ ವಿರುದ್ಧ ಹಲಸೂರು ಗೇಟ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಕಬ್ಬನ್‌ಪೇಟೆಯ ಸಿದ್ದು ಎಂಬುವವರು ದೂರು ನೀಡಿದ್ದಾರೆ. ಅನ್ವರ್ ಪಾಷಾ, ಶಾಹೀದ್, ಮೊಹಮ್ಮದ್ ಶರೀಫ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಮೂವರೂ ಕಾರ್ಕಳದವರು ಎಂಬುದು ಗೊತ್ತಾಗಿದ್ದು, ಅವರ ಪತ್ತೆಗಾಗಿ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹಲವು ತಿಂಗಳ ಹಿಂದೆಯೇ ನಕಲಿ ಖಾತೆ ಸೃಷ್ಟಿಸಿದ್ದಾರೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಹೆಸರಿನಲ್ಲಿ ಫೋಟೊ ಸಮೇತ ಆಕ್ಷೇಪಾರ್ಹ ಪೋಸ್ಟ್‌ಗಳನ್ನು ಪ್ರಕಟಿಸಲಾಗಿದೆ. ಯಡಿಯೂರಪ್ಪ ಅವರ ಗೌರವಕ್ಕೆ ಚ್ಯುತಿ ತರುವ ರೀತಿಯಲ್ಲಿ ಪೋಸ್ಟ್ ಮಾಡಲಾಗಿದೆ. ಲಿಂಗಾಯತ ಸಮುದಾಯದವರ ಬಗ್ಗೆಯೂ ಇಲ್ಲಸಲ್ಲದ ಅವಹೇಳನಕಾರಿ ಪೋಸ್ಟ್ ಅಪ್‌ಲೋಡ್ ಮಾಡಲಾಗಿದೆ. ಈ ಸಂಗತಿ ದೂರಿನಲ್ಲಿದೆ' ಎಂದು ಮೂಲಗಳು ತಿಳಿಸಿವೆ.

'ಸಮಾಜದಲ್ಲಿ ದ್ವೇಷ ಭಾವನೆ ಸೃಷ್ಟಿಸಲು, ಶಾಂತಿಗೆ ಭಂಗ ಉಂಟುಮಾಡಲು ಆರೋಪಿಗಳು ಕೃತ್ಯ ಎಸಗಿದ್ದಾರೆ. ಅವರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆಯೂ ದೂರುದಾರರು ಕೋರಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಮೋದಿ ಅಂಗರಕ್ಷಕನ ಕುತ್ತಿಗೆಗೆ ತಾಗಿದ ಮೊಬೈಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ ರೋಡ್ ಶೋ ವೇಳೆ ಭಾನುವಾರ ವ್ಯಕ್ತಿಯೊಬ್ಬರು ಹೂವಿನ ಜೊತೆ ಮೊಬೈಲ್ ಎಸೆದಿದ್ದು, ಅದು ಅಂಗರಕ್ಷಕನ ಕುತ್ತಿಗೆಗೆ ತಾಗಿ ಕೆಲ ನಿಮಿಷ ಆತಂಕದ ವಾತಾವರಣ ನಿರ್ಮಾಣವಾಯಿತು.

ನ್ಯೂ ತಿಪ್ಪಸಂದ್ರದಿಂದ ಟ್ರಿನಿಟಿ ವೃತ್ತದವರೆಗೆ ತೆರೆದ ವಾಹನದಲ್ಲಿ ಮೋದಿ ರೋಡ್ ಶೋ ನಡೆಸಿದರು. ಮಾರ್ಗಮಧ್ಯೆ ನೆರೆದಿದ್ದ ಜನ, ಮೋದಿಯತ್ತ ಪುಷ್ಪವೃಷ್ಟಿ ಮಾಡಿದರು. ಅದೇ ಸಂದರ್ಭದಲ್ಲಿ ವ್ಯಕ್ತಿಯೊಬ್ಬರು, ಮೋದಿ ಅವರತ್ತ ಮೊಬೈಲ್ ಎಸೆದಿದ್ದರು.

ಅದನ್ನು ಗಮನಿಸಿದ್ದ ಅಂಗರಕ್ಷಕ, ಮೊಬೈಲ್ ಹಿಡಿದುಕೊಳ್ಳಲು ಮುಂದಾಗಿದ್ದಾರೆ. ಆದರೆ, ಮೊಬೈಲ್ ಅವರ ಕುತ್ತಿಗೆಗೆ ತಾಗಿತ್ತು. ನಂತರ, ಅದೇ ಮೊಬೈಲ್ ವಾಹನದ ಮುಂಭಾಗದ ಬಾನೆಟ್ ಮೇಲೆ ಬಿದ್ದಿತ್ತು. ಮತ್ತೊಬ್ಬ ಅಂಗರಕ್ಷಕ ಮೊಬೈಲ್ ತೆರವು ಮಾಡಿದರು. ಈ ದೃಶ್ಯ ವಿಡಿಯೊದಲ್ಲಿ ಸೆರೆಯಾಗಿದೆ. 'ಮೋದಿ ಮೇಲೆ ಮೊಬೈಲ್ ಎಸೆದಿರುವ ಬಗ್ಗೆ ಸದ್ಯಕ್ಕೆ ಯಾವುದೇ ಮಾಹಿತಿ ಲಭ್ಯವಾಗಿಲ್ಲ. ಪರಿಶೀಲಿಸಲಾಗುತ್ತಿದೆ' ಪೊಲೀಸರು ತಿಳಿಸಿದ್ದಾರೆ.ಮೈಸೂರಿನಲ್ಲೂ ಇತ್ತೀಚೆಗೆ ರೋಡ್ ಶೋ ವೇಳೆ ಮೊಬೈಲ್ ಎಸೆಯಲಾಗಿತ್ತು.

ಒಳನೋಟ
ಪ್ರತಿಕ್ರಿಯೆಗಳಿಗಾಗಿ ಈ ಲಿಂಕ್‌ಗೆ ಭೇಟಿ ನೀಡಿ
https://bit.ly/42elX2a

‘ಜನಾದೇಶ ಅಪಹರಣ ತಪ್ಪಿಸಲು ಕಾಂಗ್ರೆಸ್‌ಗೆ ಬಹುಮತ’


ಬಿಜೆಪಿಗೆ ಅವಕಾಶ ಬೇಡ: ರಾಜಕೀಯ ವಿಶ್ಲೇಷಕ ಸುಧೀಂದ್ರ ಕುಲಕರ್ಣಿ

ಪ್ರಜಾವಾಣಿ ವಾರ್ತೆ

ವಿಜಯಪುರ: 'ರಾಜ್ಯದ ಪ್ರಬುದ್ಧ ಮತದಾರರು 'ಆಪರೇಷನ್ ಕಮಲ'ದ ಮೂಲಕ ಜನಾದೇಶ ಕದಿಯಲು ಬಿಜೆಪಿಗೆ ಅವಕಾಶ ನೀಡದೇ, ಕಾಂಗ್ರೆಸ್‌ಗೆ ಸ್ಪಷ್ಟ, ಪೂರ್ಣ ಬಹುಮತ ನೀಡಬೇಕು' ಎಂದು ರಾಜಕೀಯ ವಿಶ್ಲೇಷಕ ಸುಧೀಂದ್ರ ಕುಲಕರ್ಣಿ ಮನವಿ ಮಾಡಿದರು.

ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ದೇಶದಲ್ಲಿ ಪ್ರಜಾಪ್ರಭುತ್ವ, ಸಂವಿಧಾನ ಮೌಲ್ಯ ಉಳಿಯಬೇಕು ಎಂದಾದರೆ ಬಿಜೆಪಿ ವಿರುದ್ಧ ವೋಟ್ ಹಾಕಿ' ಎಂದು ಅವರು ಮತದಾರರಿಗೆ ಕರೆ ನೀಡಿದರು.

'ಒಂದು ವೇಳೆ ಮೇ 13ರಂದು ತ್ರಿಶಂಕು ಸರ್ಕಾರ ಬಂದರೆ ರಾಜ್ಯಕ್ಕೆ ದೊಡ್ಡ ಅಪಾಯ ಎದುರಾಗಲಿದೆ' ಎಂದು ಆತಂಕ ವ್ಯಕ್ತಪಡಿಸಿದರು.



> **ವಾಜಪೇಯಿ, ಅಡ್ವಾಣಿ ಅವರ ಚಿಂತನೆಯ ಪಾರ್ಟಿಯಾಗಿ ಬಿಜೆಪಿ ಉಳಿದಿಲ್ಲ. ಬಿಜೆಪಿ ಸಂಸ್ಥಾಪಕ ಪಂಡಿತ್ ದೀನ ದಯಾಳ್ ಉಪಾಧ್ಯಾಯ ಅವರ ತತ್ವ, ಸಿದ್ಧಾಂತ ಗಾಳಿಗೆ ತೂರಲಾಗಿದೆ**
> **ಸುಧೀಂದ್ರ ಕುಲಕರ್ಣಿ,** ರಾಜಕೀಯ ವಿಶ್ಲೇಷಕ

'ರಾಜ್ಯದ ಅಭಿವೃದ್ಧಿಗೆ ಡಬಲ್ ಎಂಜಿನ್ ಸರ್ಕಾರ ಬೇಕೇ ಬೇಕು ಎಂದು ಪ್ರಧಾನಿ, ಗೃಹ ಸಚಿವ ಸೇರಿದಂತೆ ಬಿಜೆಪಿಯವರು ಅಬ್ಬರದ ಪ್ರಚಾರ ನಡೆಸಿದ್ದಾರೆ. ಆದರೆ, ರಾಜ್ಯದಲ್ಲಿ ಸದ್ಯ ಡಬಲ್ ಎಂಜಿನ್ ಸರ್ಕಾರವೇ ಇದ್ದರೂ ಬೆಲೆ ಏರಿಕೆ ಏಕೆ ತಡೆಯಲಾಗಲಿಲ್ಲ? ಅಡುಗೆ ಅನಿಲ ಸಿಲಿಂಡರ್ ದರ ₹ 1,200 ಏರಿಕೆಯಾದರೂ ತಡೆಯಲು ಸಾಧ್ಯವಾಗಲಿಲ್ಲ. ರೂಪಾಯಿ ಮೌಲ್ಯ ಕುಸಿದಿದೆ, ನಿರುದ್ಯೋಗ ಸಮಸ್ಯೆ ತಡೆಯಲು ಏನು ಮಾಡಲಾಗಲಿಲ್ಲ' ಎಂದು ಆರೋಪಿಸಿದರು.

'ಡಬಲ್ ಎಂಜಿನ್ ಸರ್ಕಾರ ಎಂಬುದು ಪೊಳ್ಳು ಭರವಸೆ, ಡಬಲ್ ಎಂಜಿನ್ ಎಂಬುದು ಪ್ರಜಾಪ್ರಭುತ್ವ ವಿರೋಧಿ, ಸಂವಿಧಾನ ವಿರೋಧಿಯಾಗಿದೆ. ನಮ್ಮ ದೇಶ ಹಲವು ಪಕ್ಷಗಳಿರುವ ದೇಶವಾಗಿದೆ' ಎಂದು ಹೇಳಿದರು.

'ಬಿಜೆಪಿಗೆ ಡಬಲ್ ಎಂಜಿನ್ ಸರ್ಕಾರವಷ್ಟೇ ಬೇಕಿಲ್ಲ, ಮೋದಿ ಎಂಬ ಸಿಂಗಲ್ ಡ್ರೈವರ್ ಇರುವ ಡಬಲ್ ಎಂಜಿನ್ ಸರ್ಕಾರ ಬೇಕಾಗಿದೆ. ದೆಹಲಿಯಲ್ಲೂ ಮೋದಿಯೇ ಡ್ರೈವರ್, ಕರ್ನಾಟಕದಲ್ಲೂ ಮೋದಿಯವರೇ ಡ್ರೈವರ್ ಎಂಬುದು ಅವರ ಹುನ್ನಾರ' ಎಂದು ದೂರಿದರು.

'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಎಂಬುದು ಮೋದಿಯ ಪೊಳ್ಳು ಘೋಷಣೆ. ರಾಜ್ಯದ 224 ಕ್ಷೇತ್ರದಲ್ಲಿ ಒಬ್ಬ ಮುಸ್ಲಿಮರಿಗೂ ಟಿಕೆಟ್ ನೀಡಿಲ್ಲ. ಇದೇನಾ ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಎಂದು ಪ್ರಶ್ನಿಸಿದರು.

'ರಾಹುಲ್ ಒಳ್ಳೆಯ ನಾಯಕ, ಅವರು ದೇಶದ ನಾಯಕತ್ವ ವಹಿಸಿಕೊಳ್ಳಬೇಕಾದ ಸಾಮರ್ಥ್ಯ ಇನ್ನೂ ತೋರಿಸಬೇಕಾದ ಅಗತ್ಯವಿದೆ' ಎಂದರು.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಚೆಕ್ ಅಥವಾ ಡಿ.ಡಿ.ರೂಪದಲ್ಲಿ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

ಆನ್‌ಲೈನ್/ಚೆಕ್ ಮೂಲಕವೂ ಹಣ ವರ್ಗಾಯಿಸಬಹುದು. ₹1,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ
'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ
ದಾನಿಗಳು ಲಕೋಟೆ ಮೇಲೆ ಶೈಕ್ಷಣಿಕ ನೆರವಿಗೆ ಕೊಡುಗೆ ಎಂದು ನಮೂದಿಸಬೇಕು

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್
ನಂ. 75, ಮಹಾತ್ಮ ಗಾಂಧಿ ರಸ್ತೆ
ಬೆಂಗಳೂರು – 560001

ಗಡಿ ಸಮೀಪದ ವಯನಾಡು ಜಿಲ್ಲೆಯಲ್ಲಿ ಹೆಚ್ಚಿದ ನಕ್ಸಲರ ಚಟುವಟಿಕೆ

ಕೇರಳ ಗಡಿಯಲ್ಲಿ ನಕ್ಸಲ್ ನಿಗ್ರಹ ತಂಡ ಕಟ್ಟೆಚ್ಚರ

• ಕೆ.ಎಸ್. ಗಿರೀಶ

ಮಡಿಕೇರಿ: ವಿಧಾನಸಭಾ ಚುನಾವಣೆ ಸಮೀಪಿಸುತ್ತಿದ್ದಂತೆ ಕೊಡಗು ಜಿಲ್ಲೆಯ ಕೇರಳ ಗಡಿಯಲ್ಲಿ ನಕ್ಸಲ್ ನಿಗ್ರಹ ಪಡೆಯ ಪೊಲೀಸರು ಕೂಂಬಿಂಗ್ ಕಾರ್ಯಾಚರಣೆ ಚುರುಕುಗೊಳಿಸಿದ್ದಾರೆ. ಇಲ್ಲಿನ ಬಿರುನಾಣಿ, ಪೂಕೊಳ, ಮಾಕುಟ್ಟ ಮೊದಲಾದ ಗಡಿಭಾಗದ ಪ್ರದೇಶಗಳ ಜೊತೆಗೆ ಕೇರಳದ ಭಾಗಗಳಲ್ಲೂ ನಿರಂತರ ನಿಗಾ ಇರಿಸಿದ್ದಾರೆ.

'ಏಪ್ರಿಲ್ 27ರಂದು ಕೇರಳದ ವಯನಾಡು ಜಿಲ್ಲೆಯ ತಲಪೂರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಾಲ್ವರು ನಕ್ಸಲರು ಕಾಣಿಸಿಕೊಂಡಿದ್ದರು. ಇವರಲ್ಲಿ ಕರ್ನಾಟಕದ ನಕ್ಸಲ್ ವಿಕ್ರಂ ಗೌಡ ಅವರೂ ಇದ್ದರು' ಎಂದು ಮೂಲಗಳು ತಿಳಿಸಿವೆ. ಹಾಗಾಗಿ, ಇಲ್ಲಿನ ನಕ್ಸಲ್ ನಿಗ್ರಹ ಪಡೆಯ ಪೊಲೀಸರು ಎಚ್ಚೆತ್ತಿದ್ದು, ಗಡಿಭಾಗದಲ್ಲಿ ಹದ್ದಿನ ಕಣ್ಣಿಟ್ಟಿದ್ದಾರೆ.

ಮುಖ್ಯಾಂಶಗಳು
- ಗಡಿಭಾಗದಲ್ಲಿ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ ನಿಯೋಜನೆಗೆ ಚಿಂತನೆ
- ಹೆಚ್ಚಿನ ಭದ್ರತೆ ಕಲ್ಪಿಸಲು ನಿರ್ಧಾರ
- ಕಾಡಿನೊಳಗೆ ಹೆಚ್ಚಿದ ಕೂಂಬಿಂಗ್

> **ಚುನಾವಣೆ ದಿನ ಗಡಿಭಾಗದ ಮತಗಟ್ಟೆಗಳಲ್ಲಿ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ, ರಾಜ್ಯ ಮೀಸಲು ಪೊಲೀಸ್ ಪಡೆ ಸೇರಿ ಹೆಚ್ಚಿನ ಸಿಬ್ಬಂದಿ ನಿಯೋಜಿಸಲಾಗುವುದು**
> **ಕೆ.ರಾಮರಾಜನ್,** ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ.

'ಕೇರಳದ ಕಾಡಿನಂಚಿನಲ್ಲಿರುವ ಅನೇಕರಿಗೆ ನಕ್ಸಲರ ಮೇಲೆ ಅನುಕಂಪ ಇದೆ. ನಕ್ಸಲರ ಚಟುವಟಿಕೆಗಳು ಹೆಚ್ಚಿದ್ದರೂ, ಮಾಹಿತಿ ಇದ್ದರೂ ಇವರು ಪೊಲೀಸರಿಗೆ ಮಾಹಿತಿ ನೀಡುವುದಿಲ್ಲ' ಎನ್ನುತ್ತವೆ ಮೂಲಗಳು.

'ಗಡಿಭಾಗದ ಕುಟ್ಟ ಮತ್ತು ಆರ್ಜಿ ಗ್ರಾಮಗಳಲ್ಲಿ ನಕ್ಸಲ್ ನಿಗ್ರಹ ಪಡೆಯ ಎರಡು ಶಿಬಿರಗಳು ಇವೆ. ಇಲ್ಲಿ 60ಕ್ಕೂ ಅಧಿಕ ಮಂದಿ ಪೊಲೀಸರು ಸಕ್ರಿಯವಾಗಿದ್ದು, ನಿತ್ಯವೂ ಕಾಡಿನೊಳಗೆ ಕೂಂಬಿಂಗ್ ಕಾರ್ಯಾಚರಣೆ ನಡೆಸಲಾಗುತ್ತಿದೆ' ಎಂದು ನಕ್ಸಲ್ ನಿಗ್ರಹ ಪಡೆಯ ಸಿಬ್ಬಂದಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಕೇರಳದಲ್ಲಿ ಸದ್ಯ 'ಬಾಣಾಸುರ', 'ಕಬಿನಿ–1', 'ಕಬಿನಿ– 2' ಎಂಬ ತಂಡಗಳು ಹೆಚ್ಚು ಸಕ್ರಿಯವಾಗಿವೆ. ಇವರಲ್ಲಿ 8 ಮಂದಿ ಕನ್ನಡಿಗರೂ ಸೇರಿದಂತೆ ಒಟ್ಟು 16 ಮಂದಿ ಇದ್ದಾರೆ ಎಂಬುದು ಖಚಿತವಾಗಿದೆ. ಇತ್ತೀಚೆಗೆ ಮತ್ತಿಬ್ಬರು ಈ ತಂಡಕ್ಕೆ ಸೇರ್ಪಡೆಯಾಗಿದ್ದು, ಅವರ ಗುರುತು ಪತ್ತೆಯಾಗಿಲ್ಲ ಎನ್ನಲಾಗಿದೆ. ಈ ಎಲ್ಲ ತಂಡಗಳೂ ಒಂದಾಗಿರುವುದು ಪೊಲೀಸರ ನಿದ್ದೆಗೆಡಿಸಿದೆ.

ಮಳೆ ಇಲ್ಲದೇ ಇರುವುದರಿಂದ ಕಾಡಿನೊಳಗೆ ಸುಲಭವಾಗಿ ಮತ್ತು ಸರಾಗವಾಗಿ ಓಡಾಡಬಹುದಾಗಿದೆ. ಇದರಿಂದ ಕಳೆದೆರಡು ತಿಂಗಳುಗಳಿಂದ ನಕ್ಸಲರ ಚಟುವಟಿಕೆಗಳು ಗಡಿಭಾಗಕ್ಕೆ ಹೊಂದಿಕೊಂಡ ಕೇರಳದಲ್ಲಿ ಹೆಚ್ಚಾಗಿದೆ ಎಂಬುದು ತಿಳಿದುಬಂದಿದೆ.

ಫೆ.7ರಂದು ಕೇರಳದ ಆರಳಂನ ವಿಯಟ್ನಾಂ ಕಾಲೊನಿಯ ಮನೆಯೊಂದಕ್ಕೆ ಬಂದಿದ್ದ ಐವರು ಬಂದೂಕುಧಾರಿ ನಕ್ಸಲರು ಮೊಬೈಲ್ ಫೋನ್ ಚಾರ್ಜ್ ಮಾಡಿಕೊಂಡು, ಅಡುಗೆ ಮಾಡಿಸಿ, ಊಟ ಮಾಡಿಕೊಂಡು, ದಿನಸಿ ಪದಾರ್ಥಗಳನ್ನು ತೆಗೆದುಕೊಂಡು ಕಾಡಿಗೆ ತೆರಳಿತ್ತು. ಈ ತಂಡದಲ್ಲಿಯೂ ಕರ್ನಾಟಕದವರು ಇದ್ದರು ಎಂದು ಮೂಲಗಳು ತಿಳಿಸಿವೆ.

ನಂತರ, ಮಾರ್ಚ್ 15ರಂದು ವಯನಾಡು ಜಿಲ್ಲೆಯ ಅರಿಮಲ ಕಾಲೊನಿಗೆ ಬಂದಿದ್ದ ನಾಲ್ವರು ನಕ್ಸಲರ ತಂಡವು ಕರಪತ್ರ ಹಂಚಿ ಪರಾರಿಯಾಗಿತ್ತು.

ಇಂದು ರಾಜ್ಯದ ಹಲವೆಡೆ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಒಳನಾಡಿನ ಎಲ್ಲ ಜಿಲ್ಲೆಗಳು ಹಾಗೂ ಉತ್ತರ ಒಳನಾಡಿನ ರಾಯಚೂರು, ಕಲಬುರಗಿ, ಯಾದಗಿರಿ, ವಿಜಯಪುರ, ಬೀದರ್, ಕೊಪ್ಪಳ ಜಿಲ್ಲೆಯ ಕೆಲವು ಭಾಗದಲ್ಲಿ ಸೋಮವಾರ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ.

ಕರಾವಳಿ ಭಾಗದ ದಕ್ಷಿಣ ಕನ್ನಡ ಹಾಗೂ ಉಡುಪಿಯ ಒಂದೆರಡು ಕಡೆ ಮಳೆಯಾಗುವ ಸೂಚನೆ ನೀಡಿದೆ.



ಭಾನುವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ 24 ಗಂಟೆಯಲ್ಲಿ ಮೈಸೂರು ಜಿಲ್ಲೆಯ ಹುಣಸೂರಿನಲ್ಲಿ 7 ಸೆಂ.ಮೀ, ರಾಮನಗರದಲ್ಲಿ 6 ಸೆಂ.ಮೀ, ಕೋಲಾರ ಜಿಲ್ಲೆಯ ಮಾಲೂರು, ತುಮಕೂರಿನ ವೈ.ಎನ್.ಹೊಸಕೋಟೆ, ಕನಕಪುರದಲ್ಲಿ 5, ರಾಯಚೂರು, ಮೈಸೂರಿನ ಸರಗೂರು, ಚಿತ್ರದುರ್ಗದ ಪರಶುರಾಂಪುರದಲ್ಲಿ ತಲಾ 4 ಸೆಂ.ಮೀ ಮಳೆಯಾಗಿದೆ.

ವಿದ್ಯಾರ್ಥಿಗಳ ಅಭಿಪ್ರಾಯ

ಶುಲ್ಕ ಭರಿಸಲು ಸಹಾಯ



ಮೂಡುಬಿದಿರೆ ಆಳ್ವಾಸ್ ಕಾಲೇಜಿನಲ್ಲಿ ನಾನು ಪಿಯುಸಿ ಓದುತ್ತಿರುವೆ. ಕಾಲೇಜಿನ ಶುಲ್ಕ ಭರಿಸಲು 'ಪ್ರಜಾವಾಣಿ' ನೀಡಿದ ವಿದ್ಯಾರ್ಥಿ ವೇತನ ಸಹಾಯವಾಯಿತು. ಈ ತರಹದ ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಿರುವ ಪತ್ರಿಕೆಗೆ ನನ್ನ ಧನ್ಯವಾದಗಳು. ಇಂತಹ ಕಾರ್ಯಗಳು ಮುಂದುವರಿಯಲಿ ಎಂದು ಆಶಿಸುವೆ.

ಪಿ.ಬಿ.ಸಿಂಚನಾ, ಸೋಮವಾರಪೇಟೆ, ಕೊಡಗು ಜಿಲ್ಲೆ

ಪಠ್ಯಪುಸ್ತಕ ಖರೀದಿಗೆ ನೆರವು



'ಪ್ರಜಾವಾಣಿ'ಯಿಂದ ದೊರೆತ ವಿದ್ಯಾರ್ಥಿ ವೇತನವನ್ನು ಪ್ರಥಮ ಪಿಯುಸಿಯ ಪಠ್ಯಪುಸ್ತಕ ಖರೀದಿಸಲು, ಕಾಲೇಜು ಊರಿಂದ ದೂರ ಇರುವ ಕಾರಣ ಬಸ್‌ಗೆ ಹೋಗಲು ಬಳಸಿಕೊಂಡೆ. ಇದು ನನ್ನಂತಹ ಬಡ ವಿದ್ಯಾರ್ಥಿಗಳಿಗೆ ಪ್ರಯೋಜನವಾಗುತ್ತದೆ. ಪತ್ರಿಕಾ ಬಳಗಕ್ಕೆ ಅನಂತ ಧನ್ಯವಾದಗಳು. ನಿರಂತರವಾಗಿ ಮುಂದುವರಿಯಲಿ.

ಉತ್ತಮ್ ಎಂ.ಪಿ., ಬೊಮ್ಮನಕಟ್ಟೆ, ಶಿವಮೊಗ್ಗ

ರಾಜರಾಜೇಶ್ವರಿನಗರ: ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಹಲ್ಲೆ

11 ಮಂದಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಹಲ್ಲೆ ಮಾಡಿ ಗೌರವಕ್ಕೆ ಧಕ್ಕೆ ತಂದ ಆರೋಪದಡಿ ಮಾಜಿ ಕಾರ್ಪೊರೇಟರ್ ಬಿಜೆಪಿಯ ಜಿ.ಕೆ.ವೆಂಕಟೇಶ್ ಸೇರಿ 11 ಮಂದಿ ವಿರುದ್ಧ ಯಶವಂತಪುರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಯಶವಂತಪುರ ವಾರ್ಡ್‌ನ 7ನೇ ಅಡ್ಡರಸ್ತೆಯಲ್ಲಿ ಶನಿವಾರ ಸಂಜೆ ನಡೆದ ಗಲಾಟೆ ಸಂಬಂಧ ಕಾಂಗ್ರೆಸ್ ಪಕ್ಷದ ಕಾರ್ಯಕರ್ತ ಚಂದ್ರಪ್ಪ ಜಿಗಳಿ ದೂರು ನೀಡಿದ್ದಾರೆ. ಜಿ.ಕೆ.ವೆಂಕಟೇಶ್, ನಿರ್ಮಲಾ, ಸಲ್ಮಾನ್, ಆಟೊ ಸತೀಶ್, ಮಂಜು, ಅಯೂಬ್, ರಘು, ಅನ್ನಮ್ಮ ಮಂಜು, ಅನಿತಾ, ರೇಖಾ, ಗುಲಾಬ್ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಮತಯಾಚನೆ ವಿಚಾರವಾಗಿ ಬಿಜೆಪಿ– ಕಾಂಗ್ರೆಸ್ ನಡುವೆ ಜಟಾಪಟಿ ನಡೆದಿದೆ. ಸ್ಥಳದಲ್ಲಿ ಸೇರಿದ್ದ ಜನರನ್ನು ಲಾಠಿ ಪ್ರಹಾರ ನಡೆಸಿ ಚದುರಿಸಲಾಗಿದೆ. ಕೆಲ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ’ ಎಂದು ಹೇಳಿವೆ.

ದೂರಿನ ವಿವರ: ‘ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಎಚ್. ಕುಸುಮಾ ಪರ ಪ್ರಚಾರ ಮಾಡಲು ನಾನು ಹಾಗೂ ಇತರೆ ಕಾರ್ಯಕರ್ತರು ಯಶವಂತಪುರ ವಾರ್ಡ್‌ನ 7ನೇ ಅಡ್ಡರಸ್ತೆಗೆ ಹೋಗಿದ್ದೆವು. ಮನೆ ಮನೆಗೆ ಹೋಗಿ ಕರಪತ್ರ ನೀಡಿ ಮತಯಾಚನೆ ಮಾಡುತ್ತಿದ್ದೆವು. ಸ್ಥಳಕ್ಕೆ ಬಂದಿದ್ದ ಕಾರ್ಪೊರೇಟರ್ ಜಿ.ಕೆ. ವೆಂಕಟೇಶ್ ಹಾಗೂ ಇತರರು ಪ್ರಚಾರಕ್ಕೆ ಅಡ್ಡಿಪಡಿಸಿದ್ದರು’ ಎಂದು ಚಂದ್ರಪ್ಪ ದೂರಿನಲ್ಲಿ ತಿಳಿಸಿದ್ದಾರೆ.

‘ಹೊರಗಿನಿಂದ ಬಂದು ನಮ್ಮ ಪ್ರದೇಶದಲ್ಲಿ ಏಕೆ ಪ್ರಚಾರ ಮಾಡುತ್ತಿದ್ದಿರಾ. ನಿಮ್ಮನ್ನು ಸುಮ್ಮನೇ ಬಿಡುವುದಿಲ್ಲ’ ಎಂದಿದ್ದ ವೆಂಕಟೇಶ್ ಹಾಗೂ ಇತರರು ನಮ್ಮ ಮೇಲೆ ಹಲ್ಲೆ ಮಾಡಿದರು. ಮಹಿಳಾ ಕಾರ್ಯಕರ್ತೆಯರನ್ನು ರಸ್ತೆಯಲ್ಲಿ ಎಳೆದಾಡಿ ಅಸಭ್ಯವಾಗಿ ವರ್ತಿಸಿದರು. ಸ್ಥಳದಲ್ಲಿದ್ದ ಪೊಲೀಸರು ಹಾಗೂ ಚುನಾವಣಾಧಿಕಾರಿ ತಂಡದ ಎದುರೇ ಆರೋಪಿಗಳು ಕೃತ್ಯ ಎಸಗಿದ್ದಾರೆ. ಪೊಲೀಸರು ಮೌನವಾಗಿದ್ದರು. ಹಲ್ಲೆಯಿಂದಾಗಿ ನಾನು ಹಾಗೂ ಇತರೆ ಕಾರ್ಯಕರ್ತರು ಗಾಯಗೊಂಡಿದ್ದಾರೆ’ ಎಂದು ಹೇಳಿದ್ದಾರೆ.

ಆಸ್ಪತ್ರೆಯಲ್ಲಿ ಆರೋಪಿಗಳು: ‘ಪ್ರಕರಣದ ಮೂವರು ಆರೋಪಿಗಳು, ಆಸ್ಪತ್ರೆಗೆ ದಾಖಲಾಗಿದ್ದಾರೆ. ತಮ್ಮ ಮೇಲೂ ಕಾಂಗ್ರೆಸ್ ಕಾರ್ಯಕರ್ತರು ಹಲ್ಲೆ ಮಾಡಿರುವುದಾಗಿ ದೂರುತ್ತಿದ್ದಾರೆ. ಪ್ರಕರಣದ ಕೆಲ ಆರೋಪಿಗಳಿಗೆ ನೋಟಿಸ್ ನೀಡಲಾಗಿದೆ. ವಿಚಾರಣೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಉತ್ತರ ವಿಭಾಗದ ಡಿಸಿಪಿ ಶಿವಪ್ರಕಾಶ್ ದೇವರಾಜು ‘ಪ್ರಜಾವಾಣಿ’ಗೆ ತಿಳಿಸಿದರು.

ಮಹಿಳಾ ಅಭ್ಯರ್ಥಿ ತಳ್ಳಿದ್ದ ಡಿಸಿಪಿ ಅಮಾನತಿಗೆ ಆಗ್ರಹ

‘ಕಾರ್ಯಕರ್ತರ ರಕ್ಷಣೆಗೆಂದು ಘಟನಾ ಸ್ಥಳಕ್ಕೆ ಹೋಗಿದ್ದ ಕಾಂಗ್ರೆಸ್ ಅಭ್ಯರ್ಥಿ ಎಚ್. ಕುಸುಮಾ ಅವರನ್ನು ಉತ್ತರ ವಿಭಾಗದ ಡಿಸಿಪಿ ಶಿವಪ್ರಕಾಶ್ ದೇವರಾಜು ತಳ್ಳಾಡಿ, ಅನುಚಿತವಾಗಿ ವರ್ತಿಸಿದ್ದಾರೆ. ಡಿಸಿಪಿ ಅವರನ್ನು ಅಮಾನತು ಮಾಡಬೇಕು’ ಎಂದು ಕಾಂಗ್ರೆಸ್ ಕಾರ್ಯಕರ್ತರು ಆಗ್ರಹಿಸಿದ್ದಾರೆ.

ಯಶವಂತಪುರ ಠಾಣೆ ಎದುರು ಶನಿವಾರ ರಾತ್ರಿ ಪ್ರತಿಭಟನೆ ನಡೆಸಿದ ಕಾರ್ಯಕರ್ತರು, ‘ಅಕ್ರಮ ತಡೆದು ರಕ್ಷಣೆ ನೀಡಬೇಕಾದ ಡಿಸಿಪಿ ಅವರು ಮಹಿಳಾ ಅಭ್ಯರ್ಥಿಯನ್ನು ತಳ್ಳಾಡಿದ್ದಾರೆ. ಜೊತೆಗಿದ್ದ ಕಾರ್ಯಕರ್ತರ ಮೇಲೆ ಲಾಠಿ ಬೀಸಿದ್ದಾರೆ’ ಎಂದು ದೂರಿದರು.

‘ಗಲಾಟೆ ವೇಳೆ ಸ್ಥಳದಲ್ಲಿ ಮಹಿಳಾ ಸಿಬ್ಬಂದಿ ಇರಲಿಲ್ಲ. ಸಮವಸ್ತ್ರದಲ್ಲಿದ್ದ ಪೊಲೀಸರು, ಬಿಜೆಪಿ ಅಭ್ಯರ್ಥಿ ಪರವಾಗಿದ್ದರು. ಹೀಗಾಗಿ, ಘಟನೆ ಬಗ್ಗೆ ತನಿಖೆ ನಡೆಸಬೇಕು’ ಎಂದು ಆಗ್ರಹಿಸಿದರು.

ಗಲಾಟೆ ನಿಯಂತ್ರಿಸಲು ಲಘು ಲಾಠಿ ಪ್ರಹಾರ ನಡೆಸಬೇಕಾಯಿತು. ನೂಕುನುಗ್ಗಲಿನಲ್ಲಿ ಅಭ್ಯರ್ಥಿ ಯಾರು ಎಂಬುದು ಗೊತ್ತಾಗಲಿಲ್ಲ

ಶಿವಪ್ರಕಾಶ್ ದೇವರಾಜು
ಉತ್ತರ ವಿಭಾಗದ ಡಿಸಿಪಿ



ಕೇರಳದ ಮಲಪ್ಪುರ ಜಿಲ್ಲೆಯಲ್ಲಿ ಭಾನುವಾರ ಪ್ರವಾಸಿ ಹೌಸ್‌ಬೋಟ್ ಮಗುಚಿ ಬಿದ್ದಿದ್ದು, ಕೆಳಗೆ ಸಿಲುಕಿದವರ ರಕ್ಷಣಾ ಕಾರ್ಯ ನಡೆಯುತ್ತಿದೆ –ಪಿಟಿಐ ಚಿತ್ರ

ಕೇರಳ: ಹೌಸ್‌ಬೋಟ್ ಮಗುಚಿ 20 ಮಂದಿ ಸಾವು

ಮಲಪ್ಪುರ(ಕೇರಳ)(ಪಿಟಿಐ): ಇಲ್ಲಿನ ತಾನೂರು ಪ್ರದೇಶದ ತುವಲ್‌ತೀರ ಬೀಚ್ ಬಳಿ ಭಾನುವಾರ ಪ್ರವಾಸಿ ಹೌಸ್‌ಬೋಟ್ ಮಗುಚಿ 20 ಮಂದಿ ಮೃತಪಟ್ಟಿದ್ದಾರೆ.

ಒಟ್ಟು 30 ಜನರು ಹೌಸ್‌ಬೋಟ್‌ನಲ್ಲಿ ಪ್ರಯಾಣಿಸುತ್ತಿದ್ದರು. ಮೃತಪಟ್ಟವರಲ್ಲಿ ಬಹುತೇಕ ಮಕ್ಕಳು ಮತ್ತು ಮಹಿಳೆಯರು ಇದ್ದಾರೆ. ಶಾಲೆಗಳಿಗೆ ರಜೆ ಇದ್ದ ಕಾರಣ ಮಕ್ಕಳೊಟ್ಟಿಗೆ ಪೋಷಕರು ವಿಹರಿಸಲು ಬಂದಿದ್ದರು.

ದೋಣಿ ಕೆಳಗೆ ಸಿಲುಕಿದ್ದ ಕೆಲವರನ್ನು ರಕ್ಷಿಸಿ ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ.

‘12 ಮೃತದೇಹಗಳನ್ನು ಗುರುತಿಸಲಾಗಿದೆ. ಕೆಸರಿನಲ್ಲಿ ಸಿಲುಕಿಕೊಂಡಿದ್ದ ದೋಣಿಯನ್ನು ಮೇಲೆತ್ತಲಾಗುತ್ತಿದೆ. ಹಾಗಾಗಿ, ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚುವ ಸಾಧ್ಯತೆ ಇದೆ’ ಎಂದು ಕ್ರೀಡಾ ಸಚಿವ ವಿ. ಅಬ್ದುರಹಮಾನ್ ಸುದ್ದಿಗಾರರಿಗೆ ತಿಳಿಸಿದರು.

‘ದೋಣಿಯಲ್ಲಿ ನಿಗದಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರಿದ್ದರು. ಇದೇ ಅವಘಡಕ್ಕೆ ಕಾರಣವಾಗಿದೆ. ಸಂಜೆ 6 ಗಂಟೆ ನಂತರ ದೋಣಿ ವಿಹಾರಕ್ಕೆ ಅವಕಾಶವಿಲ್ಲ. ನಿಯಮ ಉಲ್ಲಂಘಿಸಿ ಸಂಜೆ 7 ಗಂಟೆಗೆ ತೆರಳಿದ್ದಾರೆ ’ ಎಂದು ಶಾಸಕ ಕುಂಞಾಲಿ ಕುಟ್ಟಿ ತಿಳಿಸಿದರು.





ಅಬಕಾರಿ ನೀತಿ ಪ್ರಕರಣ: ಇಬ್ಬರಿಗೆ ಜಾಮೀನು

ನವದೆಹಲಿ (ಪಿಟಿಐ): ಅಬಕಾರಿ ನೀತಿ ಪ್ರಕರಣದಲ್ಲಿ ಇಬ್ಬರು ಆರೋಪಿಗಳಿಗೆ ನ್ಯಾಯಾಲಯ ಜಾಮೀನು ನೀಡಿದೆ. ಹಾಗಾಗಿ, ಪ್ರಕರಣಕ್ಕೂ ಆಮ್ ಆದ್ಮಿ ಪಕ್ಷಕ್ಕೂ (ಎಎಪಿ) ಸಂಬಂಧ ಕಲ್ಪಿಸಿ ಸುಳ್ಳು ಆರೋಪ ಮಾಡಿದ ಬಿಜೆಪಿ ಕ್ಷಮೆ ಯಾಚಿಸಬೇಕು ಎಂದು ಎಎಪಿ ಭಾನುವಾರ ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ಹಿರಿಯ ನಾಯಕಿ, ಸಚಿವೆ ಆತಿಶಿ, 'ಮದ್ಯ ಮಾರಾಟ ಉದ್ಯಮಿಗಳಿಂದ ₹100 ಕೋಟಿ ಲಂಚ ಪಡೆದು ಅದನ್ನು ಗೋವಾ ಚುನಾವಣೆಯಲ್ಲಿ ಬಳಸಲಾಗಿದೆ ಎಂದು ಜಾರಿ ನಿರ್ದೇಶನಾಲಯ ಗಂಭೀರ ಆರೋಪ ಮಾಡಿತ್ತು. ರೌಸ್ ಅವೆನ್ಯೂ ನ್ಯಾಯಾಲಯವು ರಾಜೇಶ್ ಜೋಶಿ ಮತ್ತು ಗೌತಮ್ ಮಲ್ಹೋತ್ರಾ ಅವರಿಗೆ ಶನಿವಾರ ಜಾಮೀನು ನೀಡಿದೆ. ಲಂಚ ಪಾವತಿಸಿದ ಬಗ್ಗೆ ಇ.ಡಿ ಯಾವುದೇ ಸಾಕ್ಷ್ಯ ಒದಗಿಸಿಲ್ಲ. ಇ.ಡಿ ಸಲ್ಲಿಸಿದ ಸಾಕ್ಷಿಗಳ ಹೇಳಿಕೆಗಳು ಅಸ್ಪಷ್ಟವಾಗಿವೆ ಎಂದು ಕೋರ್ಟ್ ಆದೇಶದಲ್ಲಿ ತಿಳಿಸಿದೆ' ಎಂದು ಅವರು ಹೇಳಿದರು.

'ಬಿಜೆಪಿ ವಕ್ತಾರರು ಹಗರಣ ನಡೆದಿದೆ ಎಂದು ಕೂಗಾಡುತ್ತಿದ್ದರು. ಈಗ ಕ್ಷಮೆ ಯಾಚಿಸಿ, ಯಾವುದೇ ಹಗರಣ ನಡೆದಿಲ್ಲವೆಂದು ಒಪ್ಪಿಕೊಳ್ಳುತ್ತಾರೆಯೇ' ಎಂದು ಅವರು ಪ್ರಶ್ನಿಸಿದರು.

ಇಡೀ ಪ್ರಕರಣವೇ ನಕಲಿ ಎಂದು ಆರಂಭದಿಂದಲೂ ಹೇಳುತ್ತಿದ್ದೇವೆ. ಇದು ಪಕ್ಷದ ವರ್ಚಸ್ಸನ್ನು ಹಾಳು ಮಾಡಲು ಮಾಡಿದ ಪಿತೂರಿ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ.

ರಾಹುಲ್ ಪ್ರಕರಣ ಬಳಿಕ ಪ್ರಜಾ ಪ್ರಾತಿನಿಧ್ಯ ಕಾಯ್ದೆ ಕುರಿತ ಚರ್ಚೆ ಮತ್ತೆ ಮುನ್ನೆಲೆಗೆ

35 ವರ್ಷಗಳಲ್ಲಿ 42 ಸಂಸದರು ಅನರ್ಹ

ನವದೆಹಲಿ (ಪಿಟಿಐ): 1988ರಿಂದ ಈ ವರೆಗೆ ವಿವಿಧ ಪ್ರಕರಣಗಳಲ್ಲಿ ಶಿಕ್ಷೆಗೆ ಗುರಿಯಾದ ನಂತರ, ಪ್ರಜಾ ಪ್ರಾತಿನಿಧ್ಯ ಕಾಯ್ದೆಯಡಿ 42 ಸಂಸದರು ಅನರ್ಹಗೊಂಡಿದ್ದಾರೆ. 14ನೇ ಲೋಕಸಭಾ ಅವಧಿಯಲ್ಲಿ (2004-2009) ಗರಿಷ್ಠ 19 ಸಂಸದರು ತಮ್ಮ ಸದಸ್ಯತ್ವ ಕಳೆದುಕೊಂಡಿದ್ದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಸೂರತ್‌ನ ನ್ಯಾಯಾಲಯವು ಮಾನನಷ್ಟ ಪ್ರಕರಣದಲ್ಲಿ ಎರಡು ವರ್ಷ ಜೈಲು ಶಿಕ್ಷೆ ವಿಧಿಸಿ ಮಾರ್ಚ್ 23ರಂದು ತೀರ್ಪು ನೀಡಿತ್ತು. ಲೋಕಸಭಾ ಸಚಿವಾಲಯವು ಮಾರನೇ ದಿನವೇ ರಾಹುಲ್ ಅವರನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸಿ ಅಧಿಸೂಚನೆ ಹೊರಡಿಸಿತ್ತು.

ಈ ವಿದ್ಯಮಾನವು, ಪ್ರಜಾ ಪ್ರಾತಿನಿಧ್ಯ ಕಾಯ್ದೆ ಕುರಿತ ಚರ್ಚೆಯನ್ನು ಮತ್ತೆ ಮುನ್ನೆಲೆಗೆ ತಂದಿದೆ. ಅಪರಾಧ ಪ್ರಕರಣಗಳಲ್ಲಿ ಸಂಸದರು ಮತ್ತು ಶಾಸಕರಿಗೆ ನ್ಯಾಯಾಲಯವು ಎರಡು ಅಥವಾ ಎರಡಕ್ಕಿಂತ ಹೆಚ್ಚು ವರ್ಷಗಳ ಜೈಲು ಶಿಕ್ಷೆ ವಿಧಿಸಿದಾಗ, ಈ ಕಾಯ್ದೆ ಪ್ರಕಾರ ಸಹಜವಾಗಿಯೇ ಅವರು ಅನರ್ಹಗೊಳ್ಳುತ್ತಾರೆ.

ಕಳೆದ ಮೂರೂವರೆ ದಶಕದ ಅವಧಿಯಲ್ಲಿ ವಿವಿಧ ಕಾರಣಗಳಿಂದಾಗಿ ಸಂಸದರನ್ನು ಅನರ್ಹಗೊಳಿಸಲಾಗಿದೆ. ಪಕ್ಷ ನಿಷ್ಠೆ ಬದಲಾಯಿಸಿದ್ದು, ಸಂಸದೀಯ ಶಿಷ್ಟಾಚಾರಕ್ಕೆ ವ್ಯತಿರಿಕ್ತವಾಗಿ ವರ್ತಿಸಿದ್ದು,



ನ್ಯಾಯಾಲಯವು ಎರಡು ಅಥವಾ ಅದಕ್ಕಿಂತ ಹೆಚ್ಚು ವರ್ಷ ಜೈಲು ಶಿಕ್ಷೆ ವಿಧಿಸಿದ ಕಾರಣಗಳಿಂದಾಗಿ ಹಲವರು ಅನರ್ಹಗೊಂಡಿರುವ ಉದಾಹರಣೆಗಳಿವೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಎನ್‌ಸಿಪಿ ಮುಖಂಡ ಮೊಹಮ್ಮದ್ ಫೈಜಲ್ ಪಿ.ಪಿ ಹಾಗೂ ಬಿಎಸ್‌ಪಿ ನಾಯಕ ಅಫ್ಜಲ್ ಅನ್ಸಾರಿ ಅವರು ಇತ್ತೀಚೆಗೆ, ಎರಡು ಹಾಗೂ ಅದಕ್ಕಿಂತ ಹೆಚ್ಚು ವರ್ಷಗಳ ಜೈಲು ಶಿಕ್ಷೆಗೆ ಗುರಿಯಾಗಿರುವ ಕಾರಣ ಸಂಸದ ಸ್ಥಾನದಿಂದ ಅನರ್ಹಗೊಂಡವರಾಗಿದ್ದಾರೆ.

ಲಕ್ಷದ್ವೀಪ ಸಂಸದರಾದ ಫೈಜಲ್ ಅವರು ಕೊಲೆ ಯತ್ನ ಪ್ರಕರಣವೊಂದರಲ್ಲಿ ಜೈಲು ಶಿಕ್ಷೆಗೆ ಗುರಿಯಾಗಿದ್ದಕ್ಕಾಗಿ ಅವರನ್ನು ಅನರ್ಹಗೊಳಿಸಲಾಗಿತ್ತು. ಆದರೆ, ಅವರ ವಿರುದ್ಧದ ತೀರ್ಪು ಹಾಗೂ ಶಿಕ್ಷೆಗೆ ಕೇರಳ ಹೈಕೋರ್ಟ್ ತಡೆ ನೀಡಿದ ಕಾರಣ ಅವರ ಅನರ್ಹತೆಯನ್ನು ರದ್ದುಪಡಿಸಲಾಗಿದೆ.

'ಮೋದಿ ಉಪನಾಮ'ಕ್ಕೆ ಸಂಬಂಧಿಸಿದ ಮಾನನಷ್ಟ ಮೊಕದ್ದಮೆಯಲ್ಲಿ ಎರಡು ವರ್ಷ ಜೈಲು ಶಿಕ್ಷೆಗೆ ಗುರಿಯಾಗಿರುವ ರಾಹುಲ್ ಗಾಂಧಿ ಅವರು, ಶಿಕ್ಷೆಗೆ ತಡೆ ಕೋರಿ ಗುಜರಾತ್ ಹೈಕೋರ್ಟ್ ಮೊರೆ ಹೋಗಿದ್ದು, ವಿಚಾರಣೆ ನಡೆಯುತ್ತಿದೆ.

ಕಾಯ್ದೆಗೆ ತಿದ್ದುಪಡಿ: ಶಿಕ್ಷೆಗೆ ಒಳಗಾದ ಸಂಸದರನ್ನು ಅನರ್ಹಗೊಳಿಸುವುದರಿಂದ ಭುಗಿಲೇಳುವ ಸಂಭಾವ್ಯ ರಾಜಕೀಯ ಕೋಲಾಹಲವನ್ನು ತಡೆಯುವ ಸಲುವಾಗಿ ಸಂಸತ್ (ಅನರ್ಹತೆ ತಡೆ) ಕಾಯ್ದೆಗೆ, 1959ರ ಏಪ್ರಿಲ್ 4ರಿಂದ ಪೂರ್ವಾನ್ವಯವಾಗುವಂತೆ 2006ರಲ್ಲಿ ತಿದ್ದುಪಡಿ ತರಲಾಯಿತು.

ಅನರ್ಹಗೊಂಡವರು....

- 1985ರಲ್ಲಿ ಪಕ್ಷಾಂತರ ನಿಷೇಧ ಕಾಯ್ದೆ ಜಾರಿಗೆ ಬಂದ ನಂತರ ಅನರ್ಹಗೊಂಡ ಮೊದಲ ಸಂಸದ ಕಾಂಗ್ರೆಸ್‌ನ ಲಾಲ್ದುಹೋಮಾ. ಅವರು ಮಿಜೋರಾಂನವರು.
- ವಿ.ಪಿ.ಸಿಂಗ್ ನೇತೃತ್ವದ ಸರ್ಕಾರದ ಆಡಳಿತವಿದ್ದ 9ನೇ ಲೋಕಸಭಾ ಅವಧಿಯಲ್ಲಿ 9 ಸಂಸದರು ಅನರ್ಹಗೊಂಡಿದ್ದರು
- ಪಿ.ವಿ.ನರಸಿಂಹರಾವ್ ನೇತೃತ್ವದ ಸರ್ಕಾರವಿದ್ದ 10ನೇ ಲೋಕಸಭಾ ಅವಧಿಯಲ್ಲಿ ಪಕ್ಷಾಂತರ ನಿಷೇಧ ಕಾಯ್ದೆಯಡಿ ಶಿಕ್ಷೆಗೆ ಒಳಗಾಗಿದ್ದ 4 ಸಂಸದರನ್ನು ಅನರ್ಹಗೊಳಿಸಲಾಗಿತ್ತು.
- 4ನೇ ಲೋಕಸಭಾ ಅವಧಿಯಲ್ಲಿ (2004–2009) 19 ಸಂಸದರು ಅನರ್ಹಗೊಂಡಿದ್ದರು. ಸಂಸತ್ ಕಲಾಪದ ವೇಳೆ ಪ್ರಶ್ನೆಗಳನ್ನು ಕೇಳಲು ಲಂಚ ಪಡೆದಿದ್ದಕ್ಕಾಗಿ 10 ಮಂದಿ ಮಂದಿಯನ್ನು ಅನರ್ಹಗೊಳಿಸಲಾಗಿತ್ತು. ಬಿಜೆಪಿಯ 6, ಬಿಎಸ್‌ಪಿಯ ಇಬ್ಬರು, ಕಾಂಗ್ರೆಸ್ ಹಾಗೂ ಆರ್‌ಜೆಡಿಯ ತಲಾ ಒಬ್ಬರು ಸಂಸದರನ್ನು ಅನರ್ಹಗೊಳಿಸಲಾಗಿತ್ತು.
- 2008ರಲ್ಲಿ ಯುಪಿಎ ಮೊದಲ ಅವಧಿಯಲ್ಲಿ ನಡೆದ ವಿಶ್ವಾಸಮತ ಯಾಚನೆ ವೇಳೆ ಅಡ್ಡ ಮತದಾನ ಮಾಡಿದ್ದಕ್ಕಾಗಿ 9 ಸಂಸದರನ್ನು ಅನರ್ಹಗೊಳಿಸಲಾಗಿತ್ತು.
- ರಾಜ್ಯಸಭಾ ಸದಸ್ಯರಾಗಿದ್ದ ಮುಫ್ತಿ ಮೊಹಮ್ಮದ್ ಸಯೀದ್ (1989), ಸತ್ಯಪಾಲ್ ಮಲಿಕ್ (1989), ಶರದ್ ಯಾದವ್ (2017) ಹಾಗೂ ಅಲಿ ಅನ್ವರ್ (2017) ಅವರು ಪಕ್ಷಾಂತರ ನಿಷೇಧ ಕಾಯ್ದೆಯಡಿ ಅನರ್ಹಗೊಂಡಿದ್ದರು
- 2008ರಲ್ಲಿ ಎಐಸಿಸಿ ಅಧ್ಯಕ್ಷೆಯಾಗಿದ್ದ ಸೋನಿಯಾ ಗಾಂಧಿ, ರಾಷ್ಟ್ರೀಯ ಸಲಹಾ ಮಂಡಳಿ (ಎನ್‌ಎಸಿ) ಮುಖ್ಯಸ್ಥರೂ ಆಗಿದ್ದರು. ಲಾಭದಾಯಕ ಹುದ್ದೆ ಹೊಂದಿರುವ ಆರೋಪದ ಮೇಲೆ ಅವರನ್ನು ಸಂಸದೆ ಸ್ಥಾನದಿಂದ ಅನರ್ಹಗೊಳಿಸುವಂತೆ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಲಾಗಿತ್ತು. ಆಗ, ಅವರು ಲೋಕಸಭಾ ಸದಸ್ಯತ್ವವನ್ನು ತ್ಯಜಿಸಿದ್ದರಿಂದ ಅವರ ವಿರುದ್ಧದ ದೂರು ಫಲಪ್ರದವಾಗಲಿಲ್ಲ
- ಭ್ರಷ್ಟಾಚಾರ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾಗಿದ್ದ ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯ ರಶೀದ್ ಮಸೂದ್ ಅವರನ್ನು ಅನರ್ಹಗೊಳಿಸಲಾಗಿತ್ತು.
- ಮೇವು ಹಗರಣದಲ್ಲಿ ಶಿಕ್ಷೆಗೆ ಗುರಿಯಾಗಿದ್ದ ಹಿನ್ನೆಲೆಯಲ್ಲಿ ಲೋಕಸಭಾ ಸದಸ್ಯರಾಗಿದ್ದ ಆರ್‌ಜೆಡಿ ವರಿಷ್ಠ ಲಾಲು ಪ್ರಸಾದ್, ಜೆಡಿಯುನ ಜಗದೀಶ್ ಶರ್ಮಾ ಅವರನ್ನು ಅನರ್ಹಗೊಳಿಸಲಾಗಿತ್ತು.
- ಜೆಎಂಎಂ ಮುಖಂಡ ಶಿಬು ಸೊರೇನ್, ಸಮಾಜವಾದಿ ಪಕ್ಷದ ಜಯಾ ಬಚ್ಚನ್ ಅವರನ್ನು ಕ್ರಮವಾಗಿ 2001 ಹಾಗೂ 2006ರಲ್ಲಿ ರಾಜ್ಯಸಭಾ ಸದಸ್ಯ ಸ್ಥಾನದಿಂದ ಅನರ್ಹಗೊಳಿಸಲಾಗಿತ್ತು. ಲಾಭದಾಯಕ ಹುದ್ದೆ ಹೊಂದಿದ ಆರೋಪವನ್ನು ಅವರು ಎದುರಿಸುತ್ತಿದ್ದರು.

ಸುದ್ದಿ 2 ನಿಮಿಷ

ಸಲಿಂಗ ಮದುವೆ: ಆರ್‌ಎಸ್‌ಎಸ್ ಅಂಗ ಸಂಸ್ಥೆಯ ಸಮೀಕ್ಷೆಗೆ ವಿರೋಧ

ನವದೆಹಲಿ (ಪಿಟಿಐ): ಸಲಿಂಗ ವಿವಾಹದ ಕುರಿತು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಅಂಗ ಸಂಸ್ಥೆಯೊಂದು ನಡೆಸಿರುವ ಸಮೀಕ್ಷೆಗೆ ಎಲ್‌ಜಿಬಿಟಿಕ್ಯೂ ಸಮುದಾಯದ ಹಕ್ಕುಗಳ ಪರ ಹೋರಾಟಗಾರರು ವಿರೋಧ ವ್ಯಕ್ತಪಡಿಸಿದ್ದಾರೆ.

'ಇದು ಅಪಾಯಕಾರಿ ಹಾಗೂ ಸಮಾಜದ ದಾರಿ ತಪ್ಪಿಸುವಂತಹ ನಡೆ. ಆರ್‌ಎಸ್‌ಎಸ್‌ನ ಮಹಿಳಾ ವಿಭಾಗವಾದ ರಾಷ್ಟ್ರೀಯ ಸೇವಿಕಾ ಸಮಿತಿಯು ತನ್ನ ಅಂಗ ಸಂಸ್ಥೆ ಸಂವರ್ಧಿನಿ ನ್ಯಾಸ್ ಮೂಲಕ ನಡೆಸಿದ ಸಮೀಕ್ಷೆಯು ತಪ್ಪು ಮಾಹಿತಿಯನ್ನು ಪಸರಿಸುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಸಲಿಂಗ ಕಾಮವು ಒಂದು ವ್ಯಾಧಿ. ಸಲಿಂಗ ವಿವಾಹಕ್ಕೆ ಕಾನೂನಿನ ಮಾನ್ಯತೆ ಲಭಿಸಿದರೆ ಸಮಾಜದಲ್ಲಿ ಈ ರೋಗ ಇನ್ನಷ್ಟು ಉಲ್ಬಣಿಸುತ್ತದೆ' ಎಂದು ಸಮೀಕ್ಷೆಯಲ್ಲಿ ಭಾಗಿಯಾದ ವೈದ್ಯರು ಹಾಗೂ ವೈದ್ಯಕೀಯ ಕ್ಷೇತ್ರದ ವೃತ್ತಿಪರರು ಅಭಿಪ್ರಾಯಪಟ್ಟಿದ್ದಾರೆ ಎಂದು ಸಂವರ್ಧಿನಿ ನ್ಯಾಸ್ ಹೇಳಿತ್ತು.

'ಸಮೀಕ್ಷೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿರುವ ಈ ವೈದ್ಯರು ಯಾರು? ಇವರಿಗೆ ನೀಡಲಾಗಿರುವ ಪರವಾನಗಿಯನ್ನು ರದ್ದುಪಡಿಸಬೇಕು' ಎಂದು ಹೋರಾಟಗಾರರು ಆಗ್ರಹಿಸಿದ್ದಾರೆ.

'ಸಂವರ್ಧಿನಿ ನ್ಯಾಸ್ ಸಂಸ್ಥೆ ನಡೆಸಿರುವ ಸಮೀಕ್ಷೆಯು ಅಮಾನವೀಯ ಹಾಗೂ ಅವೈಜ್ಞಾನಿಕವಾದುದು. ಜೊತೆಗೆ ಮೂರ್ಖತನದಿಂದ ಕೂಡಿದೆ' ಎಂದು ಹೋರಾಟಗಾರ್ತಿ ಹಾಗೂ ಸಿಪಿಎಂ ನಾಯಕಿ ಸುಭಾಷಿನಿ ಅಲಿ ಟ್ವೀಟ್ ಮೂಲಕ ಕಿಡಿಕಾರಿದ್ದಾರೆ.

'ದೇಶದ ವಿವಿಧೆಡೆ ಇರುವ ವೈದ್ಯಕೀಯ ಕ್ಷೇತ್ರದ ಒಟ್ಟು 318 ಮಂದಿಯನ್ನು ಸಮೀಕ್ಷೆಗೆ ಒಳಪಡಿಸಲಾಗಿತ್ತು' ಎಂದು ರಾಷ್ಟ್ರೀಯ ಸೇವಿಕಾ ಸಮಿತಿಯ ಹಿರಿಯ ನಾಯಕಿ ಸ್ಪಷ್ಟನೆ ನೀಡಿದ್ದಾರೆ.



ಛತ್ತೀಸಗಢ ಮದ್ಯ ಅಕ್ರಮ: ಐಎಎಸ್ ಅಧಿಕಾರಿ ಶಾಮೀಲು

ನವದೆಹಲಿ (ಪಿಟಿಐ): ಛತ್ತೀಸಗಢದಲ್ಲಿ ಮದ್ಯ ಅಕ್ರಮ ವ್ಯವಹಾರವು ಅವ್ಯಾಹತವಾಗಿ ನಡೆಯುತ್ತಿದ್ದು, ಪ್ರತಿ ಬಾಟಲಿ ಮದ್ಯದ ಮೇಲೂ ಅಕ್ರಮವಾಗಿ ಹಣ ಸಂಗ್ರಹಿಸಲಾಗುತ್ತಿದೆ ಎಂದು ಜಾರಿ ನಿರ್ದೇಶನಾಲಯವು(ಇ.ಡಿ) ಭಾನುವಾರ ಹೇಳಿದೆ. ಐಎಎಸ್ ಅಧಿಕಾರಿ ಅನಿಲ್ ತುಟೇಜಾ ಕೂಡಾ ಈ ಅಕ್ರಮ ಜಾಲದ ಪ್ರಮುಖ ಸದಸ್ಯ ಎಂದು ಇ.ಡಿ ಹೇಳಿದೆ.

ರಾಜ್ಯದ ಮದ್ಯ ಅಕ್ರಮ ವ್ಯವಹಾರಗಳ ಕುರಿತು ತನಿಖೆ ನಡೆಸುತ್ತಿರುವ ಇ.ಡಿ, ಮದ್ಯ ವ್ಯಾಪಾರಿ ಅನ್ವರ್ ಢೇಬರ್ ಅವರನ್ನು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಲ್‌ಎಂಎ) ಅಡಿ ಶನಿವಾರ ಬಂಧಿಸಿದೆ. ಅನ್ವರ್ ಅವರು ರಾಯಪುರ ಮೇಯರ್ ಐಜಾಝ್ ಢೇಬರ್ ಅವರ ಅಣ್ಣ.

ಛತ್ತೀಸಗಢ, ಪಶ್ಚಿಮ ಬಂಗಾಳ ಮತ್ತು ದೆಹಲಿಯ ಸುಮಾರು 35 ಕಡೆಗಳಲ್ಲಿ ಮಾರ್ಚ್‌ನಲ್ಲಿ ದಾಳಿ ನಡೆಸಲಾಗಿತ್ತು. 2019ರಿಂದ 2022ರ ಅವಧಿಯಲ್ಲಿ ಸುಮಾರು ₹2,000 ಕೋಟಿ ಮೊತ್ತದ ವರೆಗಿನ ಹಣ ಅಕ್ರಮ ವರ್ಗಾವಣೆ ಮತ್ತು ಅವ್ಯವಹಾರ ನಡೆದಿದೆ ಎಂದು ಈ ವೇಳೆ ತಿಳಿದುಬಂದಿತ್ತು. ಇಷ್ಟು ದೊಡ್ಡ ಮೊತ್ತದ ಅಕ್ರಮ ವ್ಯವಹಾರ ನಡೆಯಲು ಅನ್ವರ್ ಮುಖ್ಯ ಕಾರಣ. ಆದರೆ, ಈ ಹಗರಣದಲ್ಲಿ ಇನ್ನೂ ಸಾಕಷ್ಟು ಜನ ಫಲಾನುಭವಿಗಳು ಇದ್ದಾರೆ ಎಂದು ಇ.ಡಿ ಹೇಳಿದೆ.

ಮುಂದಿನ ವರ್ಷವೇ ಜಾರಿ

2024ರ ಪರೇಡ್‌ನ ಯೋಜನೆ ಕುರಿತು ಮಾರ್ಚ್‌ನಲ್ಲಿಯೇ ರಕ್ಷಣಾಪಡೆಗಳು, ವಿವಿಧ ಸಚಿವಾಲಯಗಳಿಗೆ ಜ್ಞಾಪನಾ ಪತ್ರ ರವಾನಿಸಿದೆ

'ಗಣರಾಜ್ಯೋತ್ಸವ ಪರೇಡ್‌ನಲ್ಲಿ ಮಹಿಳಾ ಶಕ್ತಿ ಪ್ರದರ್ಶನ'

ನವದೆಹಲಿ: ಮುಂದಿನ ವರ್ಷ ಕರ್ತವ್ಯಪಥದಲ್ಲಿ ನಡೆಯಲಿರುವ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಪಥ ಸಂಚಲನ ಮತ್ತು ಬ್ಯಾಂಡ್ ಮತ್ತು ಇತರ ಕಾರ್ಯಕ್ರಮಗಳಲ್ಲಿ ಸಂಪೂರ್ಣ ನಾರಿ ಶಕ್ತಿ ಪ್ರದರ್ಶನವಾಗಲಿದೆ ಎಂದು ರಕ್ಷಣಾ ಸಚಿವಾಲಯದ ಮೂಲಗಳು ಹೇಳಿವೆ.

2024ರ ಪರೇಡ್‌ನ ಯೋಜನೆ ಕುರಿತು ಮಾರ್ಚ್‌ನಲ್ಲಿಯೇ ಮೂರೂ ರಕ್ಷಣಾಪಡೆಗಳು ಮತ್ತು ವಿವಿಧ ಸಚಿವಾಲಯ, ಇಲಾಖೆಗಳಿಗೆ ಜ್ಞಾಪನಾ ಪತ್ರವನ್ನು ರವಾನಿಸಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

'2024ರ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಮಹಿಳೆಯರು ಮಾತ್ರ ಭಾಗವಹಿಸುವ ಕುರಿತು ಚರ್ಚೆ ನಡೆಸಲಾಗಿದ್ದು, ಜನವರಿ 26ರಂದು ಕರ್ತವ್ಯಪಥದಲ್ಲಿ ನಡೆಯಲಿರುವ ಪರೇಡ್‌ನಲ್ಲಿ ಪಥಸಂಚಲನ, ಬ್ಯಾಂಡ್, ಸ್ತಬ್ಧಚಿತ್ರ ಮತ್ತು ಇತರ ಪ್ರದರ್ಶನಗಳಲ್ಲಿ ಮಹಿಳೆಯರು ಮಾತ್ರ ಭಾಗವಹಿಸಬೇಕು' ಎಂದು ನಿರ್ಧರಿಸಲಾಗಿದೆ ಎಂದೂ ಜ್ಞಾಪನಾ ಪತ್ರದಲ್ಲಿ ಹೇಳಲಾಗಿದೆ.

ಈ ವರ್ಷ ನಡೆದ 74ನೇ ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಭಾರತವು ತನ್ನ ಸೇನಾ ಶಕ್ತಿಯ ಜೊತೆಗೆ ಸಾಂಸ್ಕೃತಿಕ ಪರಂಪರೆಯನ್ನೂ ಪ್ರದರ್ಶಿಸಿತ್ತು. ಈ ಪರೇಡ್‌ನಲ್ಲಿ, ಕೇರಳ, ಕರ್ನಾಟಕ, ತಮಿಳುನಾಡು, ಮಹಾರಾಷ್ಟ್ರ ಮತ್ತು ತ್ರಿಪುರಾದ ಸ್ತಬ್ಧಚಿತ್ರಗಳಲ್ಲಿ 'ನಾರಿ ಶಕ್ತಿ'ಯೇ ಪ್ರಮುಖ ವಿಷಯವಾಗಿತ್ತು. ಇತ್ತೀಚಿನ ವರ್ಷಗಳಲ್ಲಿ ಸರ್ಕಾರವು ಸಶಸ್ತ್ರ ಪಡೆಗಳಲ್ಲಿ ಮಹಿಳೆಯರಿಗೆ ಹೆಚ್ಚಿನ ಅವಕಾಶ ನೀಡುತ್ತಿದೆ. ಈಚೆಗಷ್ಟೇ ಇದೇ ಪ್ರಥಮ ಬಾರಿಗೆ ಭಾರತೀಯ ಸೇನೆಯು ಐವರು ಮಹಿಳಾ ಅಧಿಕಾರಿಗಳನ್ನು ತನ್ನ ಫಿರಂಗಿ ದಳಕ್ಕೆ ನೇಮಕ ಮಾಡಿಕೊಂಡಿದೆ.

2023ರ ಪರೇಡ್‌ನಲ್ಲಿ ಭಾರತೀಯ ವಾಯುಪಡೆಯ ಕವಾಯತು ತಂಡವನ್ನು ಮಹಿಳಾ ಅಧಿಕಾರಿಯೊಬ್ಬರು ಮುನ್ನಡೆಸಿದ್ದರು.

ಕಾಂಗ್ರೆಸ್ ಅಧಿಕಾರಕ್ಕೆ: ಪವಾರ್

ಸೊಲ್ಲಾಪುರ (ಪಿಟಿಐ): ಕರ್ನಾಟಕ ವಿಧಾನಸಭೆಗೆ ನಡೆಯಲಿರುವ ಚುನಾವಣೆಯಲ್ಲಿ ಬಹುಮತ ಪಡೆಯುವ ಮೂಲಕ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲಿದೆ ಎಂದು ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷದ (ಎನ್‌ಸಿಪಿ) ಮುಖ್ಯಸ್ಥ ಶರದ್ ಪವಾರ್ ಅವರು ಭಾನುವಾರ ಹೇಳಿದ್ದಾರೆ.

ಸಮೀಪದ ಪಂಢರಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನನಗೆ ಬಂದಿರುವ ಮಾಹಿತಿಯಂತೆ ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ' ಎಂದು ಹೇಳಿದರು.

ಹೋರಾಟಕ್ಕೆ ಸಂಯುಕ್ತ ಕಿಸಾನ್ ಮೋರ್ಚಾ ಬೆಂಬಲ

ಬ್ರಿಜ್‌ಭೂಷಣ್ ಬಂಧನಕ್ಕೆ ಮೇ 21 ಗಡುವು



ಬ್ರಿಜ್‌ಭೂಷಣ್

ನವದೆಹಲಿ (ಪಿಟಿಐ): ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯದ ಆರೋಪ ಎದುರಿಸುತ್ತಿರುವ ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರನ್ನು ಇದೇ 21ರೊಳಗೆ ಬಂಧಿಸಬೇಕು ಎಂದು ಪ್ರತಿಭಟನನಿರತ ಕುಸ್ತಿಪಟುಗಳನ್ನು ಬೆಂಬಲಿಸಿರುವ ರೈತ ಸಂಘಟನೆಗಳು ಗಡುವು ನೀಡಿವೆ.

ಭಾರತೀಯ ಕಿಸಾನ್ ಯೂನಿಯನ್ ವಕ್ತಾರ ರಾಕೇಶ್ ಸಿಂಗ್ ಟಿಕಾಯತ್, ಖಾಪ್ ಮಹಾಮ್ 24 ಮುಖ್ಯಸ್ಥ ಮೆಹರ್ ಸಿಂಗ್ ಮತ್ತು ಸಂಯುಕ್ತ ಕಿಸಾನ್ ಮೋರ್ಚಾದ (ರಾಜಕೀಯೇತರ) ಬಲದೇವ್ ಸಿಂಗ್ ಸಿರ್ಸಾ ಅವರು ಭಾನುವಾರ ಪ್ರತಿಭಟನೆ ನಡೆಯುತ್ತಿರುವ ಸ್ಥಳಕ್ಕೆ ಬಂದು ಮಾಧ್ಯಮದವರೊಂದಿಗೆ ಮಾತನಾಡಿದರು.

'ಕುಸ್ತಿಪಟುಗಳ ಸಮಿತಿಯು ಪ್ರತಿಭಟನೆಯನ್ನು ಬಾಹ್ಯವಾಗಿ ಬೆಂಬಲಿಸಲಿದೆ. ನಾವೆಲ್ಲರೂ ಕುಸ್ತಿಪಟುಗಳನ್ನು ಬೆಂಬಲಿಸಲಿದ್ದೇವೆ. ಮೇ 21ರಂದು ನಾವು ಮತ್ತೆ ಸಭೆ ಸೇರುತ್ತವೆ. ಅಷ್ಟರಲ್ಲಿ ಸರ್ಕಾರವು ಆರೋಪಿಯನ್ನು ಬಂಧಿಸಬೇಕು. ಇಲ್ಲದಿದ್ದರೆ ಮುಂದಿನ ಹೋರಾಟದ ರೂಪುರೇಷೆ ಸಿದ್ಧಗೊಳಿಸುತ್ತೇವೆ' ಎಂದರು.

ಕಳೆದ ಎರಡು ವಾರಗಳಿಂದ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸುತ್ತಿರುವ ಕುಸ್ತಿಪಟುಗಳಿಗೆ ಬೆಂಬಲಿಸಲು 31 ಪ್ರಮುಖರ ಸಲಹಾ ಸಮಿತಿಯನ್ನು ರಚಿಸಲಾಗಿದೆ.

ಎಸ್‌ಕೆಎಂ ಬೆಂಬಲ: ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿರುವ ದೇಶದ ಕುಸ್ತಿಪಟುಗಳ ಹೋರಾಟಕ್ಕೆ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಕೈಜೋಡಿಸಿದೆ. ತಕ್ಷಣವೇ ಸಿಂಗ್ ಅವರನ್ನು ಬಂಧಿಸಬೇಕು ಎಂದು ಒತ್ತಾಯಿಸಿದೆ.

ಕುಸ್ತಿಪಟುಗಳು ಪ್ರತಿಭಟನೆ ನಡೆಸುತ್ತಿರುವ ಜಂತರ್‌ಮಂತರ್‌ಗೆ ನೂರಾರು ಸಂಖ್ಯೆಯಲ್ಲಿ ರೈತ ನಾಯಕರು ಭೇಟಿ ನೀಡುವ ಸಾಧ್ಯತೆ ಇರುವ ಕಾರಣಕ್ಕೆ ಭಾನುವಾರ ಪೊಲೀಸರು ಸ್ಥಳದಲ್ಲಿ ಭದ್ರತೆ ಬಿಗಿಗೊಳಿಸಿದರು.

ಪಂಜಾಬ್, ಹರಿಯಾಣ, ದೆಹಲಿ ಮತ್ತು ಪಶ್ಚಿಮ ಉತ್ತರಪ್ರದೇಶದ ಎಸ್‌ಕೆಎಂ ನಾಯಕರು, ನೂರಾರು ರೈತರೊಂದಿಗೆ ಜಂತರ್ ಮಂತರ್ ಭೇಟಿ ನೀಡುತ್ತಿದ್ದಾರೆ.

ದೆಹಲಿಯನ್ನು ಪ್ರವೇಶಿಸುವ ವಾಹನಗಳ ತಪಾಸಣೆ ಮತ್ತು ಗಸ್ತನ್ನು ದೆಹಲಿ-ಘಾಜಿಪುರ, ಟಿಕ್ರಿ ಮತ್ತು ಸಿಂಘು ಗಡಿಭಾಗಗಳಲ್ಲಿ ಹೆಚ್ಚಿಸಲಾಗಿದೆ. ಗಡಿ ಪ್ರದೇಶಗಳಲ್ಲಿ ಮತ್ತು ಪ್ರತಿಭಟನ ಸ್ಥಳಗಳಲ್ಲಿ ಹಲವು ಸ್ತರದ ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಭದ್ರತಾ ಸಿಬ್ಬಂದಿ ಕೂಡ ನಿಯೋಜಿಸಲಾಗಿದೆ.



ಪ್ರತಿಭಟನನಿರತ ಕುಸ್ತಿಪಟುಗಳಿಗೆ ಬೆಂಬಲ ಸೂಚಿಸಲು ಸಂಯುಕ್ತ ಕಿಸಾನ್ ಮೋರ್ಚಾ ರೈತ ಸಂಘಟನೆಯ ಸದಸ್ಯರು ದೆಹಲಿಯ ಜಂತರ್ ಮಂತರ್‌ಗೆ ಭಾನುವಾರ ಆಗಮಿಸಿದ ಹಿನ್ನೆಲೆಯಲ್ಲಿ ಸ್ಥಳಕ್ಕೆ ಭಾರಿ ಭದ್ರತೆ ಒದಗಿಸಲಾಗಿತ್ತು —ಪಿಟಿಐ ಚಿತ್ರ

ತನಿಖಾ ವರದಿಗೆ ಕಾಯಿರಿ: ಬ್ರಿಜ್ ಭೂಷಣ್ ಮನವಿ

ಗೊಂಡ (ಉತ್ತರಪ್ರದೇಶ) (ಪಿಟಿಐ): ಪ್ರತಿಭಟನನಿರತ ಕುಸ್ತಿಪಟುಗಳಿಗೆ ಬೆಂಬಲ ಘೋಷಿಸಿದ ಸಂಯುಕ್ತ ಕಿಸಾನ್ ಮೋರ್ಚಾ ರೈತ ನಾಯಕರಿಗೆ 'ತಪ್ಪು ಮಾಡಬೇಡಿ ಮತ್ತು ತನಿಖಾ ವರದಿ ಬರುವವರೆಗೂ ಕಾಯಿರಿ' ಎಂದು ಭಾರತೀಯ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಮುಖ್ಯಸ್ಥ ಬ್ರಿಜ್ ಭೂಷಣ್ ಶರಣ್ ಸಿಂಗ್ ಭಾನುವಾರ ಮನವಿ ಮಾಡಿದ್ದಾರೆ.

ಕುಸ್ತಿಪಟುಗಳ ಹೋರಾಟಕ್ಕೆ ಕೈಜೋಡಿಸಿರುವ ಸಂಯುಕ್ತ ಕಿಸಾನ್ ಮೋರ್ಚಾ ನಾಯಕರು, ತಕ್ಷಣವೇ ಸಿಂಗ್ ಅವರನ್ನು ಬಂಧಿಸಬೇಕು ಎಂದು ಒತ್ತಾಯಿಸಿ ಶನಿವಾರ ದೇಶದಾದ್ಯಂತ ಪ್ರತಿಭಟನೆಗೆ ಕರೆ ನೀಡಿದ್ದರು.

ಈ ಬೆಳವಣಿಗೆ ನಂತರ ಶನಿವಾರ ರಾತ್ರಿ ಸಾಮಾಜಿಕ ಜಾಲತಾಣದಲ್ಲಿ ಬಿಡುಗಡೆ ಮಾಡಿರುವ 25 ನಿಮಿಷಗಳ ವಿಡಿಯೊದಲ್ಲಿ ಕೈಸರ್‌ಗಂಜ್ ಕ್ಷೇತ್ರದ ಬಿಜೆಪಿ ಸಂಸದರೂ ಆದ ಬ್ರಿಜ್ ಭೂಷಣ್ ಶರಣ್ ಸಿಂಗ್ 'ನಾನು ಮುಗ್ಧ. ಕುಸ್ತಿಪಟುಗಳ ಆಯ್ಕೆ ಪ್ರಕ್ರಿಯೆಯಲ್ಲಿ ಸುಧಾರಣೆಗಳನ್ನು ತಂದಿದ್ದರಿಂದ ನನ್ನನ್ನು ಗುರಿಯಾಗಿಸಿ, ಆರೋಪ ಮಾಡಿದ್ದಾರೆ' ಎಂದು ಹೇಳಿದ್ದಾರೆ.

'ನನ್ನ ವಿರುದ್ಧದ ಆರೋಪ ಸಾಬೀತಾದರೆ ನಾನು ನೇಣು ಹಾಕಿಕೊಳ್ಳುತ್ತೇನೆ ಎಂದು, ನನ್ನ ಮೇಲೆ ಆರೋಪ ಹೊರಿಸಿದ ಮೊದಲ ದಿನವೇ ಹೇಳಿದ್ದೇನೆ. ಈಗ ನಿಮ್ಮಲ್ಲಿ ಕೈಮುಗಿದು ಕೇಳಿಕೊಳ್ಳುವುದೇನೆಂದರೆ, ತನಿಖೆ ಪೂರ್ಣವಾಗಲಿ. ನಿಮ್ಮ ಖಾಪ್ ಪಂಚಾಯತ್‌ಗೆ ಬರುತ್ತೇನೆ. ನಾನು ತಪ್ಪಿತಸ್ಥನಾಗಿದ್ದರೆ, ನೀವು ನಿಮ್ಮ ಶೂ ಕಾಲುಗಳಿಂದ ಒದ್ದು ನನ್ನನ್ನು ಕೊಲ್ಲಬಹುದು' ಎಂದು ಸಿಂಗ್ ಹೇಳಿದ್ದಾರೆ.

₹ 50 ಸಾವಿರಕ್ಕೆ ಬಾಲಕಿಯ ಮಾರಾಟ: ನಾಲ್ವರ ಬಂಧನ

ರಾಯ್‌ಸೇನ್ (ಮಧ್ಯಪ್ರದೇಶ) (ಪಿಟಿಐ): ಮಧ್ಯಪ್ರದೇಶದ ರಾಯ್‌ಸೇನ್ ಜಿಲ್ಲೆಯಲ್ಲಿ ವ್ಯಕ್ತಿಯೊಬ್ಬರಿಗೆ ₹ 50 ಸಾವಿರಕ್ಕೆ 17 ವರ್ಷದ ಬಾಲಕಿಯನ್ನು ಮಾರಾಟ ಮಾಡಿದ ಆರೋಪದಲ್ಲಿ ಒಬ್ಬ ಮಹಿಳೆ ಹಾಗೂ ಮೂವರು ಪುರುಷರನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಭಾನುವಾರ ಅಧಿಕಾರಿಗಳು ತಿಳಿಸಿದ್ದಾರೆ.

'ಮಂಡ್ಲಾ ಜಿಲ್ಲೆಯ ಘುಘ್ರಿ ಪೊಲೀಸ್ ಠಾಣೆ ವ್ಯಾಪ್ತಿಯ ನಿವಾಸಿಯಾಗಿರುವ ಬಾಲಕಿಯು, ಜಂಬಲ್‌ಪುರದ ಡೈರಿಯಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿಗಳಾದ ಪಹಲ್ವತಿ ಬಾಯಿ ಮತ್ತು ಸುನಿಲ್ ಕುಶ್ವಾಹ ಅವರನ್ನು ಭೇಟಿಯಾಗಿದ್ದರು. ಮುಂಬೈನಲ್ಲಿ ಒಳ್ಳೆಯ ಉದ್ಯೋಗ ಕೊಡಿಸುವುದಾಗಿ ಆಮಿಷ ಒಡ್ಡಿದ್ದರು. ಬಳಿಕ ಬಾಲಕಿಯನ್ನು ಪಟಾಯಿ ಗ್ರಾಮಕ್ಕೆ ಕರೆದೊಯ್ದಿದ್ದಾರೆ. ಅಲ್ಲಿ ವಿಷ್ಣು ಕುಶ್ವಾಹ ಎಂಬಾತನಿಗೆ ಮದುವೆ ಮಾಡಿಸಲು ₹ 50 ಸಾವಿರಕ್ಕೆ ಬಾಲಕಿಯನ್ನು ಮಾರಾಟ ಮಾಡಿದ್ದಾರೆ' ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಅಮೃತ್ ಮೀನಾ ತಿಳಿಸಿದ್ದಾರೆ.

ಇದೇ ಸಮಯಕ್ಕೆ ಬಾಲಕಿ ನಾಪತ್ತೆಯಾಗಿರುವ ಕುರಿತು ಆಕೆಯ ಪಾಲಕರು ಮಂಡ್ಲಾ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ. ಮಾನವ ಕಳ್ಳ ಸಾಗಣೆ ಪ್ರಕರಣದಲ್ಲಿ ಭಾಗಿಯಾಗಿದ್ದ ನಾಲ್ವರು ಆರೋಪಿಗಳನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ. 'ಮಂಡ್ಲಾ ಪೊಲೀಸರು ನೀಡಿದ ಮಾಹಿತಿ ಆಧರಿಸಿ ಪಟಾಯಿ ಗ್ರಾಮದಲ್ಲಿ ಆರೋಪಿಗಳನ್ನು ಬಂಧಿಸಲಾಗಿದ್ದು, ಬಾಲಕಿಯನ್ನು ರಕ್ಷಿಸಲಾಗಿದೆ' ಎಂದು ಡಿಯೊರಿ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಶ್ರದ್ಧಾ ಉಕೇಯ್ ಮಾಹಿತಿ ನೀಡಿದ್ದಾರೆ.

ಮಣಿಪುರ: ಹೈಕೋರ್ಟ್ ಆದೇಶ ಪ್ರಶ್ನಿಸಿ 'ಸುಪ್ರೀಂ'ಗೆ ಅರ್ಜಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೈತೇಯಿ ಸಮುದಾಯವನ್ನು ಪರಿಶಿಷ್ಟ ಪಂಗಡ (ಎಸ್.ಟಿ) ಪಟ್ಟಿಗೆ ಸೇರಿಸುವಂತೆ ನಿರ್ದೇಶನ ನೀಡಿ ಮಣಿಪುರ ಹೈಕೋರ್ಟ್ ಮಾರ್ಚ್ 27ರಂದು ಹೊರಡಿಸಿರುವ ಆದೇಶ ಪ್ರಶ್ನಿಸಿ ಬಿಜೆಪಿ ಶಾಸಕ ದಿಂಗಂಗ್ಲುಂಗ್ ಗ್ಯಾಂಗ್ಮೇಯಿ ಅವರು ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಗ್ಯಾಂಗ್ಮೇಯಿ ಅವರು ವಿಧಾನಸಭೆಯ ಗುಡ್ಡಗಾಡು ಪ್ರದೇಶ ಸಮಿತಿ ಅಧ್ಯಕ್ಷರೂ ಆಗಿದ್ದಾರೆ.

30 ಬುಡಕಟ್ಟು ಜನರ ಹತ್ಯೆ ಕುರಿತು ವಿಶೇಷ ತನಿಖಾ ತಂಡದಿಂದ (ಎಸ್‌ಐಟಿ) ತನಿಖೆಗೆ ಆದೇಶಿಸಬೇಕು ಎಂದು ಕೋರಿ ಮಣಿಪುರ ಬುಡಕಟ್ಟು ವೇದಿಕೆ (ಎಂಟಿಎಫ್) ಪ್ರತ್ಯೇಕ ಅರ್ಜಿ ಸಲ್ಲಿಸಿದೆ.

ಬುಡಕಟ್ಟು ಜನರ ಮೇಲೆ ನಡೆದ ದಾಳಿಗೆ ಕೇಂದ್ರ ಹಾಗೂ ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿಯ ಸಂಪೂರ್ಣ ಬೆಂಬಲ ಇದೆ ಎಂದು ವೇದಿಕೆ ಆರೋಪಿಸಿದೆ. ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲ ಮತ್ತು ಪಿ.ಎಸ್ ನರಸಿಂಹ ಅವರಿರುವ ನ್ಯಾಯಪೀಠ ಸೋಮವಾರ ಈ ಅರ್ಜಿಗಳ ವಿಚಾರಣೆ ನಡೆಸಲಿದೆ.

ಅರ್ಜಿದಾರರ ವಾದವೇನು: 'ಮೈತೇಯಿ ಸಮುದಾಯ ಆರ್ಥಿಕ, ರಾಜಕೀಯ ಹಾಗೂ ಶೈಕ್ಷಣಿಕವಾಗಿ ಮುಂದುವರಿದಿದ್ದು, ಪ್ರಭಾವ ಹೊಂದಿದೆ. ಮೈತೇಯಿ ಹಾಗೂ ಇತರ ಬುಡಕಟ್ಟುಗಳ ನಡುವೆ ಬಹು ಹಿಂದಿನಿಂದಲೂ ಸಂಘರ್ಷ ನಡೆಯುತ್ತಿದೆ' ಎಂದು ಶಾಸಕ ಗ್ಯಾಂಗ್ಮೇಯಿ ಅವರು ಅರ್ಜಿಯಲ್ಲಿ ವಿವರಿಸಿದ್ದಾರೆ.

'ಮೈತೇಯಿ ಸಮುದಾಯಕ್ಕೆ ಎಸ್.ಟಿ ಸ್ಥಾನಮಾನ ನೀಡುವುದು ರಾಜಕೀಯ ಸಮಸ್ಯೆ. ಈ ವಿಷಯದಲ್ಲಿ ತನ್ನ ಯಾವುದೇ ಪಾತ್ರ ಇಲ್ಲ. ರಾಜಕೀಯ ಸಮಸ್ಯೆಗಳಿಗೆ ರಾಜಕೀಯವಾಗಿಯೇ ಪರಿಹಾರ ಕಂಡುಕೊಳ್ಳಬೇಕು ಎಂಬುದನ್ನು ಹೈಕೋರ್ಟ್ ಮನಗಾಣಬೇಕಿತ್ತು' ಎಂಬ ನಿರ್ಣಯವನ್ನು ಗುಡ್ಡಗಾಡು ಪ್ರದೇಶ ಸಮಿತಿಯು ಏಪ್ರಿಲ್ 20ರಂದು ಅಂಗೀಕರಿಸಿತ್ತು. ಈ ನಿರ್ಣಯಕ್ಕೆ ಸಂಬಂಧಿಸಿ ಹೈಕೋರ್ಟ್ ತಮಗೆ ನ್ಯಾಯಾಂಗ ನಿಂದನೆ ನೋಟಿಸ್ ಜಾರಿ ಮಾಡಿದ್ದನ್ನು ಅವರು ಪ್ರಶ್ನಿಸಿದ್ದಾರೆ.

'ಬಜರಂಗದಳ ಬಜರಂಗಬಲಿ ಆಗಿದ್ದು ಹೇಗೆ'

ನವದೆಹಲಿ (ಪಿಟಿಐ): 'ನಮ್ಮ ಪಕ್ಷವು ಕರ್ನಾಟಕ ವಿಧಾನಸಭಾ ಚುನಾವಣಾ ಪ್ರಣಾಳಿಕೆಯಲ್ಲಿ ಬಜರಂಗದಳ ಸಂಘಟನೆ ನಿಷೇಧಿಸುವುದಾಗಿ ಹೇಳಿಲ್ಲ. ಆದರೆ, ದ್ವೇಷ ಬಿತ್ತುವ ಎಲ್ಲ ಸಂಘಟನೆಗಳಿಗೆ ಎಚ್ಚರಿಕೆ ಕೊಡುವ ರೀತಿ ಕಾನೂನಿನಡಿ ನಿರ್ಣಾಯಕ ಕ್ರಮದ ಭರವಸೆ ನೀಡಿದೆ' ಎಂದು ಕಾಂಗ್ರೆಸ್ ನಾಯಕ ಪಿ.ಚಿದಂಬರಂ ಹೇಳಿದ್ದಾರೆ.

ಕರ್ನಾಟಕ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ 'ಪಿಟಿಐ' ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಅವರು, 'ಒಂದು ಸಂಘಟನೆ ನಿಷೇಧಿಸುವುದು ನ್ಯಾಯಾಂಗ ಪ್ರಕ್ರಿಯೆ. ಬಜರಂಗದಳವು ಬಜರಂಗಬಲಿ ಆಗಿದ್ದೇಗೆ ಎನ್ನುವುದೇ ನನಗೆ ಅಚ್ಚರಿ. ಈ 'ಮಾಂತ್ರಿಕ ರೂಪಾಂತರ' ವಿವರಿಸಬಹುದೇ? ಬಜರಂಗದಳವನ್ನು ಬಜರಂಗಬಲಿಗೆ ಸಮೀಕರಿಸಿರುವುದು ಸರಿಯೇ' ಎಂದು ಬಿಜೆಪಿಯನ್ನು ಟೀಕಿಸಿದರು.

ಪ್ರಧಾನಿಯಿಂದಲೂ ಸಾಕ್ಷಿ ಕೇಳಿ: ಬಿಜೆಪಿ ವಿರುದ್ಧ ಭ್ರಷ್ಟಾಚಾರ ಆರೋಪದ ಜಾಹೀರಾತು ನೀಡಿರುವ ಬಗ್ಗೆ ಕಾಂಗ್ರೆಸ್‌ನಿಂದ ಇ.ಸಿ ಸಾಕ್ಷ್ಯ ಕೇಳಿದ ಮರು ದಿನವೇ, ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್, 'ಉಗ್ರರ ಜೊತೆ ಕಾಂಗ್ರೆಸ್ ಮೈತ್ರಿ ಮಾಡಿಕೊಂಡಿರುವುದಾಗಿ ಆರೋಪಿಸಿರುವ ಪ್ರಧಾನಿ ಮೋದಿ ಅವರಿಂದಲೂ ಸಾಕ್ಷ್ಯ ಕೇಳಬೇಕು' ಎಂದು ಒತ್ತಾಯಿಸಿದ್ದಾರೆ.

ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಹೇಳಿಕೆ

'ಕಾಂಗ್ರೆಸ್ ಸರ್ಕಾರ ಉಳಿಸಿದ್ದ ಬಿಜೆಪಿ ನಾಯಕರು'

ಧೋಲ್‌ಪುರ (ರಾಜಸ್ಥಾನ), (ಪಿಟಿಐ): '2020ರಲ್ಲಿ ನಮ್ಮ ಪಕ್ಷದ ಶಾಸಕರು ಬಂಡಾಯವೆದ್ದಿದ್ದಾಗ ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೇ ಹಾಗೂ ಬಿಜೆಪಿಯ ಇತರ ಇಬ್ಬರು ನಾಯಕರು ನನ್ನ ನೆರವಿಗೆ ಧಾವಿಸಿದ್ದರು. ಸರ್ಕಾರ ಉಳಿಸಲು ಅವರು ಸಹಾಯ ಮಾಡಿದ್ದರು' ಎಂದು ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಭಾನುವಾರ ಹೇಳಿದ್ದಾರೆ.

ಸಚಿನ್ ಪೈಲಟ್ ಹಾಗೂ ಕಾಂಗ್ರೆಸ್‌ನ ಇತರ 18 ಶಾಸಕರು ಗೆಹಲೋತ್ ನಾಯಕತ್ವದ ವಿರುದ್ಧ ಬಂಡಾಯ ಸಾರಿದ್ದರು. ಪಕ್ಷದ ವರಿಷ್ಠರ ಮಧ್ಯಪ್ರವೇಶದೊಂದಿಗೆ ಈ ಬಿಕ್ಕಟ್ಟು ಶಮನಗೊಂಡಿತ್ತು. ಪೈಲಟ್ ಅವರನ್ನು ಉಪ ಮುಖ್ಯಮಂತ್ರಿ ಹಾಗೂ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ಆಗ ವಜಾಗೊಳಿಸಲಾಗಿತ್ತು.

ಇಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಗೆಹಲೋತ್, 'ವಸುಂಧರಾ, ವಿಧಾನಸಭೆಯ ಮಾಜಿ ಸ್ಪೀಕರ್ ಕೈಲಾಶ್ ಮೇಘವಾಲ್ ಮತ್ತು ಶಾಸಕಿ ಶೋಭಾರಾಣಿ ಕುಶ್ವಾಹ ಅವರು ಸಂಕಷ್ಟದ ಪರಿಸ್ಥಿತಿಯಲ್ಲಿ ನನ್ನ ಬೆನ್ನಿಗೆ ನಿಂತಿದ್ದರು. ಹೀಗಾಗಿಯೇ ಆಗ ನನ್ನ ಸರ್ಕಾರ ಉಳಿದಿತ್ತು' ಎಂದಿದ್ದಾರೆ.

'ಚುನಾಯಿತ ಸರ್ಕಾರವನ್ನು ಕೆಡಹುವುದು ಸರಿಯಲ್ಲ. ಈ ಕಾರಣಕ್ಕಾಗಿಯೇ ಭೈರೋನ್ ಸಿಂಗ್ ಶೇಖಾವತ್ ನೇತೃತ್ವದ ಬಿಜೆಪಿ ಸರ್ಕಾರವನ್ನು ಉರುಳಿಸಲು ನಾನು ಮುಂದಾಗಿರಲಿಲ್ಲ. ವಸುಂಧರಾ ಹಾಗೂ ಮೇಘವಾಲ್ ಅವರೂ ನನ್ನಂತೆಯೇ ಯೋಚಿಸಿದ್ದರು. ಹೀಗಾಗಿ ಕಾಂಗ್ರೆಸ್ ಸರ್ಕಾರ ಬೀಳಿಸಲು ಅವರು ಪ್ರಯತ್ನಿಸಲಿಲ್ಲ' ಎಂದು ತಿಳಿಸಿದ್ದಾರೆ.

'ಕೇಂದ್ರ ಸಚಿವರಾದ ಅಮಿತ್ ಶಾ, ಗಜೇಂದ್ರ ಸಿಂಗ್ ಶೇಖಾವತ್ ಮತ್ತು ಧರ್ಮೇಂದ್ರ ಪ್ರಧಾನ್ ಅವರು ನನ್ನ ಸರ್ಕಾರ ಉರುಳಿಸಲು ಹುನ್ನಾರ ನಡೆಸಿದ್ದರು. ನಮ್ಮ ಪಕ್ಷದ ಶಾಸಕರಿಗೆ ಹಣ ಹಂಚಿದ್ದ ಅವರು ಈವರೆಗೂ ಅದನ್ನು ಹಿಂಪಡೆದಿಲ್ಲ. ಅವರು ಏತಕ್ಕಾಗಿ ಹಣ ವಾಪಸ್ ಪಡೆದಿಲ್ಲ ಎಂಬುದು ಆಶ್ಚರ್ಯ ಉಂಟುಮಾಡಿದೆ. ₹10 ಕೋಟಿ, ₹20 ಕೋಟಿ ಹೀಗೆ ಎಷ್ಟೇ ಮೊತ್ತ ಪಡೆದಿದ್ದರೂ ಅದನ್ನು ಹಿಂದಿರುಗಿಸಿಬಿಡಿ ಎಂದು ಪಕ್ಷದ ಶಾಸಕರಿಗೆ ತಿಳಿಸಿದ್ದೇನೆ. ಒಂದೊಮ್ಮೆ ಖರ್ಚು ಮಾಡಿದ್ದರೆ ಆ ಹಣವನ್ನು ನಾನೇ ನೀಡುತ್ತೇನೆ. ಇಲ್ಲವೇ ಎಐಸಿಸಿಯಿಂದ ಕೊಡಿಸುತ್ತೇನೆ ಎಂದೂ ಆ ಶಾಸಕರಿಗೆ ಸೂಚಿಸಿದ್ದೇನೆ' ಎಂದಿದ್ದಾರೆ.

'ಶಾಸಕರು ಹಣ ಹಿಂದಿರುಗಿಸದೇ ಹೋದರೆ ಅವರ ಮೇಲೆ ಅಮಿತ್ ಶಾ ಒತ್ತಡ ಹೇರಲಿದ್ದಾರೆ. ಅವರು ಕೇಂದ್ರದಲ್ಲಿ ಗೃಹ ಸಚಿವರಾಗಿರುವವರು. ಖಂಡಿತವಾಗಿಯೂ ಶಾಸಕರನ್ನು ಬೆದರಿಸುತ್ತಾರೆ. ಮಹಾರಾಷ್ಟ್ರದಲ್ಲಿ ಅವರು ಶಿವಸೇನಾವನ್ನೇ ಇಬ್ಭಾಗ ಮಾಡಿದ್ದಾರೆ' ಎಂದು ದೂರಿದ್ದಾರೆ.

'ಪಕ್ಷವು ಮೂರನೇ ಬಾರಿ ನನ್ನನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದೆ. ಹಳೆಯದ್ದನ್ನೆಲ್ಲಾ ಮರೆತು ಎಲ್ಲಾ ಶಾಸಕರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಿರುವುದು ನನ್ನ ಕರ್ತವ್ಯ. ರಾಜ್ಯದಲ್ಲಿ ಮತ್ತೊಮ್ಮೆ ಪಕ್ಷವನ್ನು ಅಧಿಕಾರಕ್ಕೆ ತರಬೇಕಾಗಿದೆ' ಎಂದಿದ್ದಾರೆ.



ವಸುಂಧರಾ ರಾಜೇ ಮತ್ತು ಅಶೋಕ್ ಗೆಹಲೋತ್

ಆರೋಪ ಅಲ್ಲಗಳೆದಿದ್ದರು

ವಸುಂಧರಾ ಅವರು ಗೆಹಲೋತ್ ಸರ್ಕಾರದೊಂದಿಗೆ ಕೈ ಜೋಡಿಸಿದ್ದಾರೆ ಎಂಬ ಆರೋಪ ಕೇಳಿಬಂದಿತ್ತು. ಈ ಕುರಿತು ಇತ್ತೀಚೆಗೆ ಪ್ರತಿಕ್ರಿಯಿಸಿದ್ದ ಅವರು 'ನಿಂಬೆಹಣ್ಣಿನ ಪಾನಕದೊಂದಿಗೆ ಹಾಲು ಬೆರೆಸಲು ಸಾಧ್ಯವೇ ಇಲ್ಲ' ಎಂದು ಹೇಳುವ ಮೂಲಕ ಇದನ್ನು ಅಲ್ಲಗಳೆದಿದ್ದರು.

ಧೋಲ್‌ಪುರ ಕ್ಷೇತ್ರದ ಶಾಸಕಿಯಾಗಿರುವ ಶೋಭಾರಾಣಿ ಅವರು ಕಳೆದ ವರ್ಷ ನಡೆದಿದ್ದ ರಾಜ್ಯಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರವಾಗಿ ಅಡ್ಡ ಮತದಾನ ಮಾಡಿದ್ದರು. ಹೀಗಾಗಿ ಅವರನ್ನು ಪಕ್ಷದಿಂದ ಅಮಾನತುಗೊಳಿಸಲಾಗಿತ್ತು.

ಸಂಕ್ಷಿಪ್ತ ಸುದ್ದಿ

ಅಮೃತಸರದಲ್ಲಿ ಸ್ಫೋಟ: ಒಬ್ಬನಿಗೆ ಗಾಯ

ಅಮೃತಸರ (ಪಿಟಿಐ): 'ಇಲ್ಲಿನ ಸ್ವರ್ಣಮಂದಿರ ಬಳಿಯ ಪಾರಂಪರಿಕ ಬೀದಿಯಲ್ಲಿ ಸಂಭವಿಸಿದ ಸ್ಫೋಟದಿಂದಾಗಿ ಒಬ್ಬ ವ್ಯಕ್ತಿ ಗಾಯಗೊಂಡಿದ್ದು, ಕೆಲವು ಕಟ್ಟಡಗಳ ಗಾಜುಗಳಿಗೆ ಹಾನಿಯಾಗಿದೆ' ಎಂದು ಪೊಲೀಸರು ಭಾನುವಾರ ಹೇಳಿದರು.

'ಶನಿವಾರ ರಾತ್ರಿ ತಿನಿಸಿನ ಅಂಗಡಿಯೊಂದರ ಬಳಿ ಈ ಸ್ಫೋಟ ಸಂಭವಿಸಿದೆ. ಸ್ಫೋಟದ ಸದ್ದು ಸ್ವರ್ಣ ಮಂದಿರದ ಸುತ್ತಮುತ್ತಲಿನ 1 ಕಿ.ಮೀ ವ್ಯಾಪ್ತಿಯವರೆಗೆ ಕೇಳಿಸಿದೆ. ಆದರೆ, ಸ್ಫೋಟಕ್ಕೆ ಕಾರಣ ಏನೆಂಬುದು ಇನ್ನೂ ತಿಳಿದುಬಂದಿಲ್ಲ. ವಿಧಿ ವಿಜ್ಞಾನ ತಂಡದವರು ಘಟನಾ ಸ್ಥಳಕ್ಕೆ ಧಾವಿಸಿದ್ದು, ತನಿಖೆ ಪ್ರಾರಂಭಿಸಿದ್ದಾರೆ' ಎಂದರು.

'ಸ್ವರ್ಣ ಮಂದಿರಕ್ಕೆ ಪ್ರಾರ್ಥನೆ ಸಲ್ಲಿಸಲು ಬಂದಿದ್ದ ಹರಿಯಾಣದ ಪಂಚಕುಲ ಜಿಲ್ಲೆಯಿಂದ ಬಂದಿದ್ದ ಮೂವರು ಯುವತಿಯರು ಆಟೊ ರಿಕ್ಷಾದಲ್ಲಿ ತೆರಳುತ್ತಿದ್ದಾಗಲೇ ಸ್ಫೋಟ ಸಂಭವಿಸಿತು. ಅವರಿಗೆ ಚಿಕ್ಕಪುಟ್ಟ ಗಾಯಗಳಾಗಿವೆ' ಎಂದು ಪ್ರತ್ಯಕ್ಷದರ್ಶಿ ಕರಣ್‌ದೀಪ್ ಸಿಂಗ್ ಎಂಬುವವರು ಹೇಳಿದರು.

ಮೈತ್ರಿಕೂಟ: ಗುಟ್ಟು ಬಿಟ್ಟುಕೊಡದ ಪಟ್ನಾಯಕ್

ನವದೆಹಲಿ: ಬಿಜೆಪಿ ವಿರುದ್ಧ ವಿರೋಧ ಪಕ್ಷಗಳನ್ನು ಒಗ್ಗೂಡಿಸುವ ಪ್ರಯತ್ನದ ಭಾಗವಾಗಿ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಮಂಗಳವಾರ ಭುವನೇಶ್ವರಕ್ಕೆ ಭೇಟಿ ನೀಡಲಿದ್ದಾರೆ. ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರನ್ನು ಭೇಟಿ ಮಾಡಿ, ಮಾತುಕತೆ ನಡೆಸುವುದು ಈ ಭೇಟಿಯ ಹಿಂದಿನ ಉದ್ದೇಶ.

ಆದರೆ, ವಿರೋಧ ಪಕ್ಷಗಳ ಮೈತ್ರಿಕೂಟ ರಚನೆ ಕುರಿತಂತೆ ಬಿಜೆಡಿ ಮುಖ್ಯಸ್ಥ ನವೀನ್ ಪಟ್ನಾಯಕ್ ಈ ವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಕಾಂಗ್ರೆಸ್, ಸಮಾಜವಾದಿ ಪಕ್ಷ, ಟಿಎಂಸಿ ವರಿಷ್ಠರೊಂದಿಗೆ ಈಗಾಗಲೇ ಒಂದು ಸುತ್ತಿನ ಮಾತುಕತೆ ನಡೆಸಿರುವ ನಿತೀಶ್ ಕುಮಾರ್ ಈಗ ನವೀನ್ ಪಟ್ನಾಯಕ್ ಅವರ ಮನವೊಲಿಸುವ ಪ್ರಯತ್ನಕ್ಕೆ ಕೈಹಾಕಿದ್ದಾರೆ. ಈಗ, ಪಟ್ನಾಯಕ್ ಅವರ ತಮ್ಮ ನಿಲುವನ್ನು ಬದಲಾಯಿಸಿದ್ದಾರೆಯೇ ಎಂಬುದನ್ನು ಕಾದು ನೋಡಬೇಕು ಎಂದು ರಾಜಕೀಯ ವಿಶ್ಲೇಷಕರು ಹೇಳುತ್ತಾರೆ.

ಮೇಘಾಲಯ: ಎನ್‌ಪಿಪಿ ಜೊತೆ ಪಿಡಿಎಫ್ ವಿಲೀನ

ಶಿಲ್ಲಾಂಗ್ (ಪಿಟಿಐ): ಮೇಘಾಲಯದ ಸ್ಥಳೀಯ ರಾಜಕೀಯ ಪಕ್ಷ ಪೀಪಲ್ಸ್ ಡೆಮಾಕ್ರೆಟಿಕ್ ಫ್ರಂಟ್ (ಪಿಡಿಎಫ್) ತನ್ನ ಇಬ್ಬರು ಶಾಸಕರ ಜೊತೆ ಆಡಳಿತಾರೂಢ ನ್ಯಾಷನಲ್ ಪೀಪಲ್ಸ್ ಪಾರ್ಟಿ(ಎನ್‌ಪಿಪಿ) ಜೊತೆ ಶನಿವಾರ ವಿಲೀನವಾಯಿತು. ಈ ಮೂಲಕ ಮೇಘಾಲಯ ವಿಧಾನಸಭೆಯಲ್ಲಿ ಎನ್‌ಪಿಪಿ ಸದಸ್ಯಬಲ 28ಕ್ಕೆ ಏರಿಕೆ ಆಗಿದೆ.

ಶಿಲ್ಲಾಂಗ್ ವಿಧಾನಸಭೆ ಉಪಚುನಾವಣೆ ಮೇ 10ರಂದು ನಡೆಯಲಿದ್ದು, ಅದಕ್ಕೂ ಮುನ್ನ ಈ ಬೆಳವಣಿಗೆ ನಡೆದಿದೆ.

ಪಿಡಿಎಫ್ ಮುಖ್ಯಸ್ಥ ಗಾಲ್ವಿನ್ ಮೈಲೀಯೆಂ ಅವರ ನೇತೃತ್ವದಲ್ಲಿ ಈ ವಿಲೀನ ಪ್ರಕ್ರಿಯೆ ನಡೆದಿದೆ ಎನ್ನಲಾಗಿದೆ.

ರೋಡ್ ಶೋ ಪರಿಣಾಮ: ಕೆಲವು ವಿದ್ಯಾರ್ಥಿಗಳಿಗೆ ಕೈತಪ್ಪಿದ ಪರೀಕ್ಷೆ?

‘ನೀಟ್’ ಸುಸೂತ್ರ, ಬಿಗಿ ಭದ್ರತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ರಾಜ್ಯದ 81 ಪರೀಕ್ಷಾ ಕೇಂದ್ರಗಳಲ್ಲಿ ಭಾನುವಾರ ರಾಷ್ಟ್ರೀಯ ಅರ್ಹತಾ ಹಾಗೂ ಪ್ರವೇಶ ಪರೀಕ್ಷೆ (ನೀಟ್) ನಡೆಯಿತು. ಪರೀಕ್ಷಾ ಅಕ್ರಮಗಳು ನಡೆದಿರುವ ಬಗ್ಗೆ ವರದಿಯಾಗಿಲ್ಲ.

ಬೆಂಗಳೂರಿನ ಟ್ರಿನಿಟಿ ವೃತ್ತ, ಹಳೇ ಮದ್ರಾಸ್ ರಸ್ತೆ, ನ್ಯೂ ತಿಪ್ಪಸಂದ್ರ ರಸ್ತೆಯಲ್ಲಿ ಭಾನುವಾರ ಪ್ರಧಾನಿ ನರೇಂದ್ರ ಮೋದಿ ಅವರ ರೋಡ್ ಶೋಗಾಗಿ ವಾಹನ ಸಂಚಾರದ ಮಾರ್ಗ ಬದಲಾವಣೆ ಮಾಡಲಾಗಿತ್ತು. ಇದರಿಂದ ತೊಂದರೆಯಾಗಲಿದೆ ಎಂದು ಭಾವಿಸಿದ್ದ ಕೆಲವು ವಿದ್ಯಾರ್ಥಿಗಳು ಬೆಳಿಗ್ಗೆಯೇ ಪರೀಕ್ಷಾ ಕೇಂದ್ರಕ್ಕೆ ತೆರಳಿದ್ದರು.

ಸರ್ಜಾಪುರ, ದೊಮ್ಮಲೂರು ಹಾಗೂ ಹಳೇ ಮದ್ರಾಸ್ ರಸ್ತೆ ಭಾಗದಲ್ಲಿ ಪರೀಕ್ಷಾ ಕೇಂದ್ರವಿದ್ದವರು ಶನಿವಾರ ಸಂಜೆ ಹಾಸ್ಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದರು. ಅಲ್ಲಿಂದ ನೇರವಾಗಿ ಪರೀಕ್ಷಾ ಕೇಂದ್ರ ತಲುಪಿದರು.

ಬೆಂಗಳೂರು ಆಸುಪಾಸಿನ ಪ್ರದೇಶಗಳಿಂದ ಪರೀಕ್ಷೆ ಬರೆಯಲು ಕೆಲವು ವಿದ್ಯಾರ್ಥಿಗಳು ಪೋಷಕರ ಜತೆ ನಾಲ್ಕು ಗಂಟೆ ಮೊದಲೇ ಹೊರಟಿದ್ದರು. ಮೋದಿಯವರ ರೋಡ್ ಶೋ ಕಾರಣಕ್ಕೆ ಕೆಲ ವಿದ್ಯಾರ್ಥಿಗಳು ಸಕಾಲದಲ್ಲಿ ಪರೀಕ್ಷಾ ಕೇಂದ್ರ ತಲುಪಲು ಸಾಧ್ಯವಾಗಿಲ್ಲ. ನಿಗದಿತ ಅವಧಿ ಮೀರಿ ಬಂದ ವಿದ್ಯಾರ್ಥಿಗಳಿಗೆ ಪ್ರವೇಶ ನಿರಾಕರಿಸಲಾಯಿತು. ಎಷ್ಟು ಬೇಡಿಕೊಂಡರೂ ಪರೀಕ್ಷೆ ಬರೆಯಲು ಅವಕಾಶ ಸಿಗಲಿಲ್ಲ ಎಂದು ಕೆಲವರು ದೂರಿದ್ದಾರೆ.

ಮಧ್ಯಾಹ್ನ 2ಕ್ಕೆ ಆರಂಭವಾದ ಪರೀಕ್ಷೆಯು ಸಂಜೆ 5.20ಕ್ಕೆ ಮುಕ್ತಾಯವಾಯಿತು.

‘ಭೌತವಿಜ್ಞಾನ ವಿಷಯ ಸಹಜವಾಗಿ ಕಠಿಣ ಹಾಗೂ ಸವಾಲಿನಿಂದ ಕೂಡಿರುತ್ತಿತ್ತು. ಈ ಬಾರಿ ಸರಳವಾಗಿತ್ತು’, ‘ಸಸ್ಯವಿಜ್ಞಾನಕ್ಕಿಂತ ಪ್ರಾಣಿವಿಜ್ಞಾನ ವಿಷಯ ಸುಲಭ ಎನಿಸಿತು’. ‘ಎನ್‌ಸಿಇಆರ್‌ಟಿ ಪಠ್ಯಕ್ರಮದ ಅನ್ವಯ ಬಹುತೇಕ ಪ್ರಶ್ನೆಗಳು ಇದ್ದವು’ ಎಂಬ ಅಭಿಪ್ರಾಯಗಳನ್ನು ವಿದ್ಯಾರ್ಥಿಗಳು ವ್ಯಕ್ತಪಡಿಸಿದರು.

ರಾಜ್ಯದಲ್ಲಿ 1.34 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಹೆಸರು ನೋಂದಾಯಿಸಿಕೊಂಡಿದ್ದರು. ದೇಶದಲ್ಲಿ 20.87 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆದರು. ಒಟ್ಟು 13 ಭಾಷೆಗಳಲ್ಲಿ ಪರೀಕ್ಷೆ ನಡೆಯಿತು. ಒಟ್ಟು 720 ಅಂಕಗಳಿಗೆ ಪರೀಕ್ಷೆಯಿತ್ತು.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ವೈದ್ಯಕೀಯ, ದಂತ ವೈದ್ಯಕೀಯ, ಆಯುರ್ವೇದ, ಪಶುವೈದ್ಯಕೀಯ, ಹೋಮಿಯೊಪತಿ ಕೋರ್ಸ್‌ಗಳ ಪ್ರವೇಶಕ್ಕೆ ಪರೀಕ್ಷೆ ನಡೆಸಿತು. ಎಲ್ಲ ಕೇಂದ್ರಗಳ ಬಳಿ ಪೊಲೀಸ್ ಭದ್ರತೆ ಇತ್ತು. ವಿದ್ಯಾರ್ಥಿಗಳು ಧರಿಸಿ ಬಂದಿದ್ದ ಶೂ, ಆಭರಣಗಳನ್ನು ತೆಗೆಸಿ ಕೇಂದ್ರಕ್ಕೆ ಪ್ರವೇಶ ನೀಡಲಾಯಿತು.



ಬೆಂಗಳೂರಿನ ಪರೀಕ್ಷಾ ಕೇಂದ್ರವೊಂದರಲ್ಲಿ ವಿದ್ಯಾರ್ಥಿಗಳ ದಾಖಲಾತಿ ಪರಿಶೀಲಿಸಿ ಪ್ರವೇಶ ನೀಡಲಾಯಿತು – ಪ್ರಜಾವಾಣಿ ಚಿತ್ರ ಕಿಶೋರ್ ಕುಮಾರ್ ಬೋಳಾರ್

ಬೆಂಕಿ: ₹ 4 ಕೋಟಿ ನಷ್ಟ

ಮಲಪ್ಪುರ (ಕೇರಳ)(ಪಿಟಿಐ): ಇಲ್ಲಿನ ಕಕ್ಕಾಡ್ ಸಮೀಪ ಕಟ್ಟಡವೊಂದರಲ್ಲಿ ಭಾನುವಾರ ಅಗ್ನಿ ಅನಾಹುತ ಸಂಭವಿಸಿದ್ದು, ನಾಲ್ಕು ಅಂಗಡಿಗಳು ಸುಟ್ಟು ಭಸ್ಮವಾಗಿವೆ. ಸುಮಾರು ₹4 ಕೋಟಿ ನಷ್ಟ ಉಂಟಾಗಿರುವ ಸಾಧ್ಯತೆ ಇದೆ ಎಂದು ಪೊಲೀಸರು ತಿಳಿಸಿದ್ದಾರೆ.

ಟೈರ್, ಪೇಂಟ್, ವಾಹನದ ಬಿಡಿಭಾಗಗಳನ್ನು ಮಾರಾಟ ಮಾಡುವ ಅಂಗಡಿಗಳು ಸುಟ್ಟುಹೋಗಿವೆ ಎಂದೂ ವಿವರಿಸಿದ್ದಾರೆ.

ಅಂಗಡಿಯೊಂದರ ಹಿಂಭಾಗದಲ್ಲಿ ಮೊದಲಿಗೆ ಬೆಂಕಿ ಹೊತ್ತಿಕೊಂಡಿದ್ದು, ಬಳಿಕ ಅದು ಉಳಿದ ಅಂಗಡಿಗಳಿಗೂ ವ್ಯಾಪಿಸಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ. ಮೊದಲಿಗೆ ಬೆಂಕಿ ಕಾಣಿಸಿಕೊಂಡ ಅಂಗಡಿಯ ಸಮೀಪ ಎಲೆಕ್ಟ್ರಿಕ್ ಸ್ಕೂಟರ್ ನಿಲ್ಲಿಸಲಾಗಿತ್ತು ಎಂದೂ ಹೇಳಿದ್ದಾರೆ.

ತೆಲಂಗಾಣ–ಛತ್ತೀಸಗಢ ಗಡಿ ಇಬ್ಬರು ನಕ್ಸಲರ ಹತ್ಯೆ

ಹೈದರಾಬಾದ್ (ಪಿಟಿಐ): ತೆಲಂಗಾಣದ ಭದ್ರಾದ್ರಿ– ಕೊತ್ತಗೂಡಂ ಜಿಲ್ಲೆ ಮತ್ತು ಛತ್ತೀಸಗಢದ ಗಡಿಗೆ ಹೊಂದಿಕೊಂಡಿರುವ ಅರಣ್ಯ ಪ್ರದೇಶದಲ್ಲಿ ಪೊಲೀಸರು ಮತ್ತು ನಕ್ಸಲರ ನಡುವೆ ಭಾನುವಾರ ನಡೆದ ಗುಂಡಿನ ಚಕಮಕಿಯಲ್ಲಿ ಇಬ್ಬರು ನಕ್ಸಲರು ಹತರಾದರು ಎಂದು ಪೊಲೀಸರು ತಿಳಿಸಿದ್ದಾರೆ.

ಪೊಲೀಸರ ಮೇಲೆ ದಾಳಿ ನಡೆಸಲು ಸಂಚು ರೂಪಿಸಿರುವ ನಕ್ಸಲರ ತಂಡವೊಂದು ಪುಟ್ಟಪದು ಅರಣ್ಯ ಪ್ರದೇಶದಲ್ಲಿ ಸಂಚರಿಸುತ್ತಿದೆ ಎಂಬ ಖಚಿತ ಮಾಹಿತಿ ಆಧರಿಸಿ ಪೊಲೀಸರು ಕಾರ್ಯಾಚರಣೆ ಗಿಳಿದರು. ಆ ವೇಳೆ ನಕ್ಸಲರು ಪೊಲೀಸರ ಮೇಲೆ ಗುಂಡು ಹಾರಿಸಿದರು. ಆಗ ಎರಡೂ ಕಡೆಯಿಂದ ಗುಂಡಿನ ಚಕಮಕಿ ನಡೆಯಿತು.

ಸ್ಥಳದಲ್ಲಿ ಶೋಧ ನಡೆಸಿದ ವೇಳೆ ಇಬ್ಬರು ನಕ್ಸಲರ ಮೃತದೇಹಗಳು ಪತ್ತೆಯಾಗಿವೆ. ಮೃತರಲ್ಲಿ ಒಬ್ಬನನ್ನು ರಾಜೇಶ್ ಎಂದು ಗುರುತಿಸಲಾಗಿದೆ. ಮತ್ತೊಬ್ಬನ ಗುರುತು ಪತ್ತೆ ಮಾಡಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

5 ಜಿಲ್ಲೆಗಳು ಕೋವಿಡ್ ಮುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೆಲ ದಿನಗಳಿಂದ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಗಣನೀಯ ಇಳಿಕೆ ಕಂಡಿದ್ದರಿಂದ ಐದು ಜಿಲ್ಲೆಗಳು ಕೋವಿಡ್ ಮುಕ್ತವಾಗಿದ್ದು, 18 ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣ ಒಂದಂಕಿಯಲ್ಲಿದೆ.

ಬಾಗಲಕೋಟೆ, ಬೆಳಗಾವಿ, ರಾಮನಗರ, ಉಡುಪಿ, ಯಾದಗಿರಿ ಜಿಲ್ಲೆಯಲ್ಲಿ ಕೋವಿಡ್ ಸಕ್ರಿಯ ಪ್ರಕರಣವಿಲ್ಲ. ರಾಜ್ಯದಲ್ಲಿ 670 ಸಕ್ರಿಯ ಪ್ರಕರಣಗಳಿದ್ದು, 400 ಪ್ರಕರಣ ಬೆಂಗಳೂರಿನಲ್ಲಿಯೇ ಇದೆ. ಶಿವಮೊಗ್ಗ (75), ಬೆಂಗಳೂರು ಗ್ರಾಮಾಂತರ (47), ಮೈಸೂರು (30), ಉತ್ತರ ಕನ್ನಡ (15), ಬಳ್ಳಾರಿ (14), ತುಮಕೂರು (11) ಹಾಗೂ ಚಾಮರಾಜನಗರ (11) ಜಿಲ್ಲೆಯಲ್ಲಿ ಪ್ರಕರಣಗಳು ಎರಡಂಕಿಯಲ್ಲಿದೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ ಒಂದಂಕಿಗೆ ಇಳಿದಿದೆ.

ರಾಜ್ಯದಲ್ಲಿ ವಾರದ ಸೋಂಕು ದೃಢ ಪ್ರಮಾಣ ಶೇ 1.16ರಷ್ಟಿದೆ. ಸೋಂಕಿತರಲ್ಲಿ ಸದ್ಯ 30 ಮಂದಿ ಮಾತ್ರ ಆಸ್ಪತ್ರೆ ಚಿಕಿತ್ಸೆಗೆ ಒಳಗಾಗಿದ್ದಾರೆ. ಇವರಲ್ಲಿ 9 ಮಂದಿ ಐಸಿಯು ಹಾಸಿಗೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಉಗ್ರರ ಆಸ್ತಿ ಜಪ್ತಿ ಎಚ್ಚರಿಕೆ ಸಂದೇಶ ರವಾನೆ

ಭದೇರ್‌ವಾಹ್ (ಜಮ್ಮು ಮತ್ತು ಕಾಶ್ಮೀರ) (ಪಿಟಿಐ): ಪಾಕಿಸ್ತಾನದಿಂದ ಕಾರ್ಯಾಚರಣೆ ನಡೆಸುತ್ತಿರುವ ಸ್ಥಳೀಯ ಭಯೋತ್ಪಾದಕರನ್ನು ಕಟ್ಟಿಹಾಕಲು ಕಾರ್ಯನಿರ್ವಹಿಸುತ್ತಿರುವ ಜಮ್ಮು ಮತ್ತು ಕಾಶ್ಮೀರದ ರಾಜ್ಯ ತನಿಖಾ ಸಂಸ್ಥೆ (ಎಸ್‌ಐಎ), ದೋಡಾ ಜಿಲ್ಲೆಯ ಹಿಜ್ಬುಲ್ ಮುಜಾಹಿದೀನ್ ಸಂಘಟನೆಯ ಉಗ್ರನ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಮುಂದಾಗಿದೆ.

ಪ್ರಸ್ತುತ ಪಾಕಿಸ್ತಾನದಲ್ಲಿ ನೆಲೆಸಿರುವ, ಭದೇರ್‌ವಾಹ್ ನಿವಾಸಿ ಮೊಹಮ್ಮದ್ ಹುಸೇನ್ ಖತೀಬ್ ವಿರುದ್ಧ ಈಗ ಅಧಿಕಾರಿಗಳು ಕ್ರಮ ಕೈಗೊಳ್ಳಲು ಮುಂದಾಗಿದ್ದಾರೆ. ಭಯೋತ್ಪಾದಕರಿಗೆ ಹಣ ನೀಡಿದ ಪ್ರಕರಣ ಸಂಬಂಧದ ವಿಚಾರಣೆಗೆ 30 ದಿನಗಳೊಳಗಾಗಿ ನ್ಯಾಯಾಲಯಕ್ಕೆ ಹಾಜರಾಗದಿದ್ದರೆ, ಆತನ ಆಸ್ತಿಯನ್ನು ಜಪ್ತಿ ಮಾಡುವ ಕಟು ಎಚ್ಚರಿಕೆಯ ಸಂದೇಶವನ್ನು ಅಧಿಕಾರಿಗಳು ಖತೀಬ್‌ಗೆ ನೀಡಿದ್ದಾರೆ.

ಭಯೋತ್ಪಾದಕರಿಗೆ ಹಣ ನೀಡಿದ ಪ್ರಕರಣದಲ್ಲಿ ಕಳೆದ ಒಂದು ವರ್ಷದಿಂದಲೂ ಖತೀಬ್ ಎಸ್‌ಐಎಗೆ ಬೇಕಾಗಿದ್ದಾನೆ. ಪ್ರಸ್ತುತ ಜಮ್ಮುವಿನ ಕೋಟ್ ಭಲಾವಲ್ ಜೈಲಿನಲ್ಲಿರುವ ಮಾಜಿ ಸಚಿವ ಜತೀಂದರ್ ಸಿಂಗ್ ಅಲಿಯಾಸ್ ಬಾಬು ಸಿಂಗ್ ಸಹ ಈ ಪ್ರಕರಣದಲ್ಲಿ ಭಾಗಿಯಾಗಿದ್ದಾನೆ.

ಜತೀಂದರ್ ಸಿಂಗ್ ನೇಚರ್ ಮ್ಯಾನ್‌ಕೈಂಡ್ ಫ್ರೆಂಡ್ಲಿ ಗ್ಲೋಬಲ್ ಪಾರ್ಟಿಯ ಅಧ್ಯಕ್ಷನೂ ಹೌದು. ಕಳೆದ ವರ್ಷ ಜಮ್ಮುವಿನಲ್ಲಿ ತನ್ನ ಕೆಲಸಗಾರನೊಬ್ಬನನ್ನು ₹ 6.90 ಲಕ್ಷ ಹವಾಲಾ ಹಣದೊಂದಿಗೆ ಬಂಧಿಸಿದಾಗ ಜತೀಂದರ್ ಸಿಂಗ್ ಭೂಗತನಾಗಿದ್ದ. ನಂತರ, ಕಳೆದ ವರ್ಷ ಏಪ್ರಿಲ್ 9ರಂದು ಈತನನ್ನು ಬಂಧಿಸಲಾಗಿತ್ತು.

ಬಳಿಕ, ಸೆಪ್ಟೆಂಬರ್ 24ರಂದು ಎಸ್‌ಐಎ ಜಮ್ಮುವಿನ ಮೂರನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದಲ್ಲಿ ಜತೀಂದರ್ ಹಾಗೂ ಖತೀಬ್ ಸೇರಿದಂತೆ ಮೂವರ ವಿರುದ್ಧ ಆರೋಪಪಟ್ಟಿ ಸಲ್ಲಿಸಿತ್ತು. ಇದಾದ ನಂತರ, ಇನ್ನೂ ಒಂಬತ್ತು ಆರೋಪಿಗಳ ವಿರುದ್ಧ ಮೂರು ಹೆಚ್ಚುವರಿ ಆರೋಪಪಟ್ಟಿಗಳನ್ನೂ ಎಸ್‌ಐಎ ನ್ಯಾಯಾಲಯಕ್ಕೆ ಸಲ್ಲಿಸಿತ್ತು.

ಪುಲ್ವಾಮ: ಕಚ್ಚಾ ಬಾಂಬ್ ವಶ

ಶ್ರೀನಗರ (ಪಿಟಿಐ): ‘ಜಮ್ಮು ಮತ್ತು ಕಾಶ್ಮೀರದ ಪುಲ್ವಾಮ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ಭಾನುವಾರ ಕಚ್ಚಾ ಬಾಂಬ್ ಅನ್ನು ವಶಪಡಿಸಿಕೊಂಡಿವೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಇಶ್ಫಾಕ್ ಅಹ್ಮದ್ ವಾನಿ ಎಂಬ ಉಗ್ರನ ವಿಚಾರಣೆ ನಡೆಸಿದ ಬಳಿಕ ತಿಳಿದುಬಂದ ಮಾಹಿತಿಯಂತೆ ಪುಲ್ವಾಮ–ಶೋಪಿಯಾನ್ ರಸ್ತೆಯಲ್ಲಿ 5 ಕೆ.ಜಿ. ತೂಕದ ಕಚ್ಚಾ ಬಾಂಬ್ ಅನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಹೇಳಿದ್ದಾರೆ.

‘ವಾನಿಯನ್ನು ಬೇರೊಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಬಂಧಿಸಲಾಗಿತ್ತು’ ಎಂದೂ ಅವರು ವಿವರಿಸಿದರು.

ಚಿನ್ನದ ಅಂಬಾರಿ ಹೊತ್ತಿದ್ದ ಆನೆ ‘ಬಲರಾಮ’ ಇನ್ನಿಲ್ಲ


ಪ್ರಜಾವಾಣಿ ವಾರ್ತೆ

ಮೈಸೂರು: ನಾಡಹಬ್ಬ ದಸರಾ ಜಂಬೂಸವಾರಿಯಲ್ಲಿ 13 ಬಾರಿ (1999ರಿಂದ 2011ರವರೆಗೆ) ಚಿನ್ನದ ಅಂಬಾರಿಯನ್ನು ಹೊತ್ತಿದ್ದ ಹೆಗ್ಗಳಿಕೆಯ ‘ಬಲರಾಮ’ ಆನೆ (65) ಅನಾರೋಗ್ಯದಿಂದ ಭಾನುವಾರ ಮೃತಪಟ್ಟಿದೆ.

‘ನಾಗರಹೊಳೆ ರಾಷ್ಟ್ರೀಯ ಉದ್ಯಾನದ ಭೀಮನಕಟ್ಟೆ ಆನೆ ಶಿಬಿರದಲ್ಲಿರುವ ಕೆಲವು ದಿನಗಳಿಂದ ಆಹಾರ ಸೇವಿಸುತ್ತಿರಲಿಲ್ಲ. ಆನೆಯ ಗಂಟಲಿನಲ್ಲಿ ಹುಣ್ಣಾಗಿದ್ದು, ಆಹಾರವನ್ನು ನಿರಾಕರಿಸುತ್ತಿರುವುದರಿಂದ ನಿತ್ರಾಣಗೊಂಡಿದೆ. ಎಂಡೊಸ್ಕೋಪಿ ಮಾಡಿ ರಕ್ತ ಹಾಗೂ ಅಂಗಾಂಗದ ಮಾದರಿಯನ್ನು ಪರೀಕ್ಷೆಗಾಗಿ ಸಂಶೋಧನಾ ಕೇಂದ್ರಕ್ಕೆ ಕಳುಹಿಸಲಾಗಿತ್ತು. ತಜ್ಞವೈದ್ಯರಿಂದ ಎಲ್ಲ ರೀತಿಯಿಂದಲೂ ಚಿಕಿತ್ಸೆ ನೀಡಲಾಗಿತ್ತು. ಉತ್ತಮವಾಗಿ ಸ್ಪಂದಿಸುತ್ತಿತ್ತು. ಆದರೆ, ಭಾನುವಾರ ಸಂಜೆ ಮೃತಪಟ್ಟಿದೆ’ ಎಂದು ಹುಣಸೂರು ವಲಯದ ಡಿಸಿಎಫ್ ಹರ್ಷಕುಮಾರ್ ತಿಳಿಸಿದ್ದಾರೆ.


ಕಳೇಬರದ ಅಂತ್ಯಕ್ರಿಯೆಯನ್ನು ಸೋಮವಾರ ಬೆಳಿಗ್ಗೆ 11ರ ಸುಮಾರಿಗೆ ಸರ್ಕಾರಿ ಗೌರವದೊಂದಿಗೆ ನಡೆಸಲಾಗುತ್ತದೆ. ಅರಣ್ಯ ಇಲಾಖೆಯ ಅಧಿಕಾರಿಗಳು, ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಪಾಲ್ಗೊಂಡು ಗೌರವ ಸಲ್ಲಿಸಲಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

1958ರಲ್ಲಿ ಜನಿಸಿದ ಈ ಆನೆಯು ಜಂಬೂಸವಾರಿಯಲ್ಲಿ ಪಾಲ್ಗೊಳ್ಳುತ್ತಿದ್ದ ವೇಳೆ, ವಿಶೇಷ ಆಕರ್ಷಣೆಯಾಗಿತ್ತು.



ಬಲರಾಮ (ಸಂಗ್ರಹ ಚಿತ್ರ)







ಸುಭಾಷಿತ

ಎಲ್ಲಾ ಬಗೆಯಲ್ಲಿ ಸ್ವಾವಲಂಬಿಯಾಗಿದ್ದರೂ ವಿನಮ್ರನೂ ಅಜ್ಞಾಧಾರಕನೂ ಆಗಿರುವುದೇ ಮನುಷ್ಯನ ನಿಜವಾದ ಲಕ್ಷಣ. -ಸ್ವಾಮಿ ವಿವೇಕಾನಂದ

ವಿಚ್ಛೇದನಕ್ಕೆ ಹೊಸ ಆಯಾಮ ತಾತ್ವಿಕ ಪರಿಧಿ ಹಿಗ್ಗಿಸಿದ ತೀರ್ಪು

ನಿರ್ದಿಷ್ಟ ಸಂದರ್ಭಗಳಲ್ಲಿ ತಾನು ವೈವಾಹಿಕ ಸಂಬಂಧವನ್ನು ಪರಿಸಮಾಪ್ತಿಗೊಳಿಸಬಹುದು ಎಂದು ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು ಈಚೆಗೆ ನೀಡಿರುವ ಮಹತ್ವದ ಆದೇಶವೊಂದರಲ್ಲಿ ಹೇಳಿದೆ. ಸಂಬಂಧವು ಇನ್ನು ಸರಿಪಡಿಸಲಾಗದ ಎಂಬಷ್ಟರಮಟ್ಟಿಗೆ ಹಾಳಾಗಿದ್ದರೆ, ಅದನ್ನು ಆಧಾರವಾಗಿ ಇಟ್ಟುಕೊಂಡು ವಿಚ್ಛೇದನಕ್ಕೆ ಆದೇಶ ಕೊಡಬಹುದು, ಸಂವಿಧಾನದ 142ನೆಯ ವಿಧಿಯ ಅಡಿಯಲ್ಲಿ ತನಗೆ ಆ ಅಧಿಕಾರ ಇದೆ ಎಂದು ಕೋರ್ಟ್ ಹೇಳಿದೆ. ಇದು ವಿವಾಹ ವಿಚ್ಛೇದನಕ್ಕೆ ಸಂಬಂಧಿಸಿದ ನ್ಯಾಯಶಾಸ್ತ್ರಕ್ಕೆ ಹೊಸ ಆಯಾಮವೊಂದನ್ನು ನೀಡಿದಂತೆ. ಯಾವುದೇ ಪ್ರಕರಣದಲ್ಲಿ ಸಂಪೂರ್ಣ ನ್ಯಾಯವನ್ನು ಒದಗಿಸಲು ಸೂಕ್ತವಾದ ಆದೇಶವನ್ನು ಹೊರಡಿಸುವ ಅಧಿಕಾರವು ಸುಪ್ರೀಂ ಕೋರ್ಟ್‌ಗೆ ಇದೆ ಎಂದು 142ನೆಯ ವಿಧಿಯು ಹೇಳುತ್ತದೆ. ಕಕ್ಷಿದಾರರನ್ನು ಕೌಟುಂಬಿಕ ನ್ಯಾಯಾಲಯಕ್ಕೆ ಕಳುಹಿಸದೆಯೂ ತಾನು ಅವರಿಗೆ ವಿಚ್ಛೇದನ ನೀಡಬಹುದು ಎಂದು ಐವರು ನ್ಯಾಯಮೂರ್ತಿಗಳಿದ್ದ ನ್ಯಾಯಪೀಠ ಸ್ಪಷ್ಟಪಡಿಸಿದೆ. ಕೌಟುಂಬಿಕ ನ್ಯಾಯಾಲಯದ ಮೂಲಕ ಸಹಮತದ ವಿಚ್ಛೇದನ ಪಡೆಯಲು ಪತಿ, ಪತ್ನಿ ಆರರಿಂದ ಹದಿನೆಂಟು ತಿಂಗಳವರೆಗೆ ಕಾಯಬೇಕಾಗುತ್ತದೆ. ಪತಿ, ಪತ್ನಿ ಪೈಕಿ ಯಾರಾದರೊಬ್ಬರು ವಿಚ್ಛೇದನಕ್ಕೆ ಒಪ್ಪಿಗೆ ನೀಡದೆ ಇದ್ದರೂ, ತಾನು ಅಂತಿಮ ನಿರ್ಣಯ ನೀಡುವ ಅಧಿಕಾರ ಹೊಂದಿದ್ದೇನೆ ಎಂದು ಕೋರ್ಟ್ ಹೇಳಿದೆ.



ಮದುವೆಯ ಸಂಬಂಧದ ವಿಚಾರದಲ್ಲಿ ಆಗಿರುವ ಹಲವು ಬದಲಾವಣೆಗಳನ್ನು ಕಾನೂನು ಕೂಡ ಗುರುತಿಸಬೇಕು ಎಂಬುದನ್ನು ಸುಪ್ರೀಂ ಕೋರ್ಟ್‌ನ ಆದೇಶವು ಹೇಳುತ್ತದೆ

ಸುಪ್ರೀಂ ಕೋರ್ಟ್‌ನ ನಿಲುವು, ವಿವಾಹ ವಿಚ್ಛೇದನ ಪ್ರಕರಣಗಳಲ್ಲಿ ಅನುಸರಿಸಲಾಗುವ 1955ರ ಹಿಂದೂ ವಿವಾಹ ಕಾಯ್ದೆಯಲ್ಲಿ ಹೇಳಿರುವ ನಿಯಮಗಳಿಗಿಂತ ಭಿನ್ನವಾಗಿದೆ. ಈ ಕಾಯ್ದೆಯ ನಿಯಮಗಳ ಅನ್ವಯ, ಪತಿ ಅಥವಾ ಪತ್ನಿಯ ಪೈಕಿ ಯಾರಾದರೊಬ್ಬರು ವೈವಾಹಿಕ ತಪ್ಪು ಎಸಗಿದ್ದರೆ ಮಾತ್ರ ವಿಚ್ಛೇದನ ನೀಡಲು ಅವಕಾಶ ಇದೆ. ಆದರೆ 1955ರ ಕಾಯ್ದೆ ಅನ್ವಯ, 'ವಿವಾಹ ಸಂಬಂಧವು ಸರಿಪಡಿಸಲಾಗದಷ್ಟು ಹಾಳಾಗಿದ್ದರೆ' ಎಂಬುದು ವಿಚ್ಛೇದನ ನೀಡಲು ಆಧಾರ ಅಲ್ಲ. ಪತಿ ಅಥವಾ ಪತ್ನಿಯ ಪೈಕಿ ಯಾರಾದರೊಬ್ಬರು ತಪ್ಪು ಮಾಡಿದ ಸಂದರ್ಭದಲ್ಲಿದ್ದರೆ: ಹಿಂಸೆ, ವಂಚನೆ ಅಥವಾ ಕ್ರೌರ್ಯದ ಆರೋಪ ಇಲ್ಲದಿದ್ದಾಗಲೂ, ವಿವಾಹ ವಿಚ್ಛೇದನಕ್ಕೆ ಆದೇಶ ನೀಡುವ ಬಗ್ಗೆ ಪರಿಗಣಿಸಲು ಅವಕಾಶ ಇದೆ ಎಂಬುದನ್ನು ಈಗ ಕೋರ್ಟ್ ಒಪ್ಪಿದೆ. ಕೋರ್ಟ್‌ನ ಈ ಆಲೋಚನೆಯು ಬಹಳ ಮುಖ್ಯವಾದುದು. ಸಾಮಾಜಿಕ ವ್ಯವಸ್ಥೆಯಲ್ಲಿ ಆಗಿರುವ ಬದಲಾವಣೆಗಳ ಕಾರಣದಿಂದಾಗಿ ಮೂಡಿದ ಪರಿಸ್ಥಿತಿಯನ್ನು ಅಂದಾಜಿಸಲು ಇಲ್ಲಿ ಕೋರ್ಟ್ ಯತ್ನಿಸಿದೆ. ಮದುವೆಯ ಸಂಬಂಧದ ವಿಚಾರದಲ್ಲಿ ಹಲವು ಬದಲಾವಣೆಗಳು ಈಗಾಗಲೇ ಉಂಟಾಗಿವೆ. ಆ ಬದಲಾವಣೆಗಳನ್ನು ಕಾನೂನು ಕೂಡ ಗುರುತಿಸಬೇಕು ಎಂಬುದನ್ನು ಸುಪ್ರೀಂ ಕೋರ್ಟ್‌ನ ಆದೇಶವು ಹೇಳುತ್ತಿದೆ. ಸುಪ್ರೀಂ ಕೋರ್ಟ್ ಇಲ್ಲಿ ಹೇಳುವ ಸಂದರ್ಭಗಳಲ್ಲಿ ಕೆಲವು ಎಚ್ಚರಿಕೆಯ ಮಾತುಗಳನ್ನು ಕೂಡ ಆಡಿದೆ. ವಿವಾಹ ಸಂಬಂಧವನ್ನು ಕೊನೆಗೊಳಿಸುವ ಸಂದರ್ಭದಲ್ಲಿ ಪಾಲನೆ ಮಾಡಬೇಕಿರುವ ನಿಯಮಗಳನ್ನು ಕೂಡ ಅದು ರೂಪಿಸಿದೆ. ಪತಿ ಮತ್ತು ಪತ್ನಿ ಎಷ್ಟು ಕಾಲ ಒಟ್ಟಿಗೆ ಬಾಳಿದ್ದರು, ಸಂಗಾತಿಯ ಮೇಲೆ ಇರುವ ಆರೋಪಗಳು ಏನು, ದಾಂಪತ್ಯದಲ್ಲಿನ ಸಮಸ್ಯೆಯನ್ನು ಪರಿಹರಿಸಲು ಎಷ್ಟು ಬಾರಿ ಯತ್ನ ನಡೆದಿತ್ತು ಎಂಬುದನ್ನೆಲ್ಲ ಪರಿಗಣಿಸಬೇಕು ಎಂದು ಕೋರ್ಟ್ ಹೇಳಿದೆ. ವಿಚ್ಛೇದನವನ್ನು ಹಕ್ಕಿನ ನೆಲೆಯಲ್ಲಿ ಕೊಡಲಾಗದು; ಬದಲಿಗೆ, ಅದನ್ನು ಬಹಳ ಎಚ್ಚರಿಕೆಯಿಂದ ಪರಿಗಣಿಸಿ ತೀರ್ಮಾನಿಸಬೇಕು ಎಂದು ಹೇಳಿದೆ.

ಜಾಗರೂಕತೆಯಿಂದ ಪರಿಗಣಿಸಬೇಕಿರುವ ಅಂಶಗಳು ಹಾಗೂ ಪಾಲಿಸಬೇಕಿರುವ ನಿಯಮಗಳು ಬಹಳ ಮುಖ್ಯವಾಗುತ್ತವೆ. ಏಕೆಂದರೆ, ಅಸಮಾನತೆ ಇರುವ ಈ ವ್ಯವಸ್ಥೆಯಲ್ಲಿ ವಿವಾಹ ವಿಚ್ಛೇದನಗಳನ್ನು ಅಸ್ತ್ರದ ರೂಪದಲ್ಲಿ ಬಳಕೆ ಮಾಡಿರುವುದೂ ಇದೆ. ಈಗ ಸುಪ್ರೀಂ ಕೋರ್ಟ್ ಹೇಳಿರುವ ಬಗೆಯಲ್ಲಿ ವಿವಾಹ ವಿಚ್ಛೇದನ ನೀಡಲು ಸುಪ್ರೀಂ ಕೋರ್ಟ್‌ಗೆ ಮಾತ್ರ ಅವಕಾಶ ಇದೆ. ಹೊಸ ತತ್ವವನ್ನು ಆಧರಿಸಿ ಕೌಟುಂಬಿಕ ನ್ಯಾಯಾಲಯಗಳು ವಿಚ್ಛೇದನ ನೀಡಲು ಅವಕಾಶ ಇಲ್ಲ. ಆದರೆ, ಈ ತೀರ್ಪು ವಿವಾಹ ವಿಚ್ಛೇದನಕ್ಕೆ ಸಂಬಂಧಿಸಿದ ತಾತ್ವಿಕತೆಯ ಪರಿಧಿಯನ್ನು ಹಿಗ್ಗಿಸಿದೆ ಎಂಬುದಂತೂ ನಿಜ.

ದಿನದ ಟ್ವೀಟ್

ನಕ್ಕು ಹಗುರಾಗೋಣ



ಅವರು: ಕಳೆದ ಸಲ ಶಿವಮೊಗ್ಗಕ್ಕೆ ಬಂದಾಗ ನಮ್ಮನೇಲಿ ಊಟ ಮಾಡಿ ಇಲ್ಲೇ ಉಳ್ಕೊಂಡಿದ್ರಿ. ಈ ಸಲ ಯಾಕೆ ಬರಲಿಲ್ಲ? ಮರೆತುಬಿಟ್ರಾ?
ನಾನು: ಅಯ್ಯೋ! ನಿಮ್ಮನೆ ಊಟ ಮರೆಯೋದು ಹೇಗೆ? ಚೆನ್ನಾಗಿ ನೆನಪಿದೆ. ಅದಕ್ಕೇ ಬರಲಿಲ್ಲ!
ವಿಶ್ವ ನಗು ದಿನದ ಶುಭಾಶಯಗಳು.

ಡುಂಡಿರಾಜ್ ಎಚ್., ಕವಿ

ಕಿಡಿನುಡಿ



'ನನ್ನ ವೋಟು ಮೋದಿಗೆ' ಎಂಬ ಹ್ಯಾಶ್‌ಟ್ಯಾಗ್ ಅನ್ನು ಟ್ರೆಂಡ್ ಮಾಡಲು ಬಿಜೆಪಿ ಪ್ರಯತ್ನಿಸುತ್ತಿದೆ. ಅವರೇನು ಕರ್ನಾಟಕಕ್ಕೆ ಬಂದು ಮುಖ್ಯಮಂತ್ರಿ ಆಗುತ್ತಾರೆಯೇ? ಪಕ್ಷದ ರಾಜ್ಯ ಘಟಕವು ಎಷ್ಟು ಸತ್ವಹೀನವಾಗಿದೆ ಎಂಬುದನ್ನು ಇದು ತೋರಿಸುತ್ತದೆ. ಅಷ್ಟಾದರೂ ಅವರು ಇಲ್ಲಿ ಸರ್ಕಾರವನ್ನು ರಚಿಸಲು ಬಯಸುತ್ತಿದ್ದಾರೆ!

ಅಜಯ್ ಕಾಮತ್, ನೇತ್ರತಜ್ಞ

25 ವರ್ಷಗಳ ಹಿಂದೆ

ಶುಕ್ರವಾರ, 8-5-1998

• ಆಟಿಕೆ ಪಿಸ್ತೂಲು ತೋರಿಸಿ ಆಂಧ್ರ ಬಸ್ ದರೋಡೆ

ಕೋಲಾರ, ಮೇ 7– ಬೆಂಗಳೂರಿನಿಂದ ಆಂಧ್ರಪ್ರದೇಶದ ಕಲ್ಯಾಣದುರ್ಗಕ್ಕೆ ಹೋಗುತ್ತಿದ್ದ ಆಂಧ್ರಪ್ರದೇಶ ರಾಜ್ಯ ರಸ್ತೆ ಸಾರಿಗೆ ಬಸ್‌ನಲ್ಲಿ ಪ್ರಯಾಣಿಕರಂತೆ ನಟಿಸಿದ ಮೂರು ಮಂದಿ, ಬಸ್ ಚಾಲಕ, ನಿರ್ವಾಹಕ ಮತ್ತು ಪ್ರಯಾಣಿಕರನ್ನು ಆಟಿಕೆ ಪಿಸ್ತೂಲಿನಿಂದ ಬೆದರಿಸಿ, 1,770 ರೂಪಾಯಿಗಳನ್ನು ದೋಚಿ ಪರಾರಿಯಾಗಿರುವ ಘಟನೆ ಬುಧವಾರ ರಾತ್ರಿ ವಿಧುರಾಶ್ವತ್ಥ ಬಳಿ ಸಂಭವಿಸಿದೆ.

ಬಸ್ ವಿದುರಾಶ್ವತ್ಥ ತಲುಪುವಷ್ಟರಲ್ಲಿ ಬಸ್ಸಿನಲ್ಲಿದ್ದ ಮೂವರು ದುಷ್ಕರ್ಮಿಗಳಲ್ಲಿ ಒಬ್ಬ, ಚಾಲಕನಿಗೆ ಪಿಸ್ತೂಲು ತೋರಿಸಿ ಬೆದರಿಸಿ ಬಸ್ ನಿಲ್ಲಿಸುವಂತೆ ಸೂಚಿಸಿದ ಎಂದು ತಿಳಿದುಬಂದಿದೆ.

ವಿಚಲಿತನಾದ ಚಾಲಕ ಬಸ್ಸು ನಿಲ್ಲಿಸುವಷ್ಟರಲ್ಲಿ ಇನ್ನಿಬ್ಬರು ದುಷ್ಕರ್ಮಿಗಳು ನಿರ್ವಾಹಕನನ್ನು ಸುತ್ತುವರಿದು ಮಚ್ಚು ತೋರಿಸಿ ಆತನ ಬಳಿಯಿದ್ದ 1620 ರೂಪಾಯಿ ಹಾಗೂ ಪ್ರಯಾಣಿಕ ಯಲ್ಲಪ್ಪ ಎಂಬುವರ ಬಳಿ ಇದ್ದ 150 ರೂಪಾಯಿಗಳನ್ನು ಕಸಿದಿದ್ದಾರೆ.

ಅಷ್ಟರಲ್ಲಿಯೇ ಚಾಲಕನಿಗೆ ತೋರಿಸಿರುವ ಪಿಸ್ತೂಲು ಆಟಿಕೆ ಪಿಸ್ತೂಲು ಎಂಬುದನ್ನು ಗಮನಿಸಿದ ಪ್ರಯಾಣಿಕನೊಬ್ಬ, ಅದು ನಿಜವಾದ ಪಿಸ್ತೂಲಲ್ಲ, ಆಟಿಕೆ ಪಿಸ್ತೂಲು ಎಂದು ಕೂಗಿಕೊಂಡದ್ದರಿಂದ ಗಾಬರಿಗೊಂಡ ಮೂವರು ದರೋಡೆಕೋರರು ಬಸ್ಸಿನಿಂದ ಇಳಿದು ತಪ್ಪಿಸಿಕೊಂಡು ಪರಾರಿಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಂಗಳೂರಿನಿಂದಲೇ ಈ ಮೂವರು ದುಷ್ಕರ್ಮಿಗಳು ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದು, ಸಮಯ ಸಾಧಿಸಿ ಈ ದುಷ್ಕೃತ್ಯವೆಸಗಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

50 ವರ್ಷಗಳ ಹಿಂದೆ

ಮಂಗಳವಾರ, 8-5-1973

• ಜೋರ್ಡಾನಿನಲ್ಲಿ ಕೊನೆಗೂ ಮಹಿಳೆಗೆ ಮತದಾನದ ಹಕ್ಕು

ಅಮ್ಮಾನ್, ಮೇ 7 (ಎಪಿ)– ಮಹಿಳಾ ವಿಮೋಚನಾ ಚಳವಳಿಗಾರರ ಒತ್ತಾಯಕ್ಕೆ ಜೋರ್ಡಾನಿನ ದೊರೆ ಹುಸೇನ್ ಅವರು ಕಡೆಗೂ ಒಪ್ಪಿ, ಮಹಿಳೆಯರಿಗೆ ಮತದಾನ ಹಾಗೂ ಸಂಸತ್ತಿಗೆ ಆಯ್ಕೆಯಾಗುವ ಹಕ್ಕನ್ನು ಕಲ್ಪಿಸಿಕೊಟ್ಟಿದ್ದಾರೆ.

ಮಹಿಳೆಯರಿಗೆ ಮತದಾನದ ಹಕ್ಕು ಕಲ್ಪಿಸಬೇಕೆಂದು ಪ್ರಧಾನಿ ಅಹ್ಮದ್ ಲಾವ್‌ಜಿ ಅವರಿಗೆ ಪತ್ರ ಬರೆದು, 1960ರ ಚುನಾವಣಾ ಕಾನೂನು ತಿದ್ದುಪಡಿ ಮಾಡಬೇಕೆಂದು 37 ವರ್ಷ ವಯಸ್ಸಿನ ದೊರೆ ಕೇಳಿದ್ದಾರೆ.

ಮಹಿಳೆಯರಿಗೆ ಮತದಾನದ ವಯೋಮಿತಿಯನ್ನು ಇನ್ನೂ ನಿರ್ಧರಿಸಿಲ್ಲ. ಪುರುಷರಿಗೆ ಮತದಾನದ ವಯೋಮಿತಿ ಹದಿನೆಂಟು ವರ್ಷ.

• ಕೃಷಿಯೇತರ ಆದಾಯ ತೆರಿಗೆ ದರದಲ್ಲಿ ವ್ಯತ್ಯಾಸ ಮಾಡಲು ಸಂಸತ್ ಮುಕ್ತ

ನವದೆಹಲಿ, ಮೇ 7 (ಯುಎನ್‌ಐ)– ಸಂವಿಧಾನದ ತಿದ್ದುಪಡಿ ಮಾಡದೆಯೇ ದೇಶದ ಕೃಷಿಕರ ಕೃಷಿಯೇತರ ವರಮಾನದ ಮೇಲೆ ವಿಧಿಸುವ ತೆರಿಗೆ ದರವನ್ನು ವ್ಯತ್ಯಾಸ-ಗೊಳಿಸುವ ಪೂರ್ಣ ಅಧಿಕಾರ ಸಂಸತ್ತಿಗೆ ಇದೆ.

ಮಾಜಿ ಶ್ರೇಷ್ಠ ನ್ಯಾಯಾಧೀಶ ಪಿ.ಬಿ. ಗಜೇಂದ್ರಗಡಕರ್ ಅವರು ಅಧ್ಯಕ್ಷರಾಗಿರುವ ದೇಶದ ಕಾನೂನು ಆಯೋಗ ಮಾಡಿರುವ ಶಿಫಾರಸಿನಲ್ಲಿ ಈ ಅಂಶವನ್ನು ಸ್ಪಷ್ಟಪಡಿಸಲಾ-ಗಿದೆ. ಇದನ್ನು ಕಾನೂನು ಖಾತೆ ರಾಜ್ಯ ಸಚಿವ ನಿಶಿರಾಜ ಸಿಂಗ್ ಅವರು ಇಂದು ರಾಜ್ಯಸಭೆ-ಯಲ್ಲಿ ಹೇಳಿದರು.

ಅಬ್ಬರದ ಪ್ರಚಾರದಲ್ಲಿ ಕಿವಿಗೆ ಬೀಳದ ಸಂವಿಧಾನದ ಆಶಯ

ಚುನಾವಣಾ ಸಂತೆಯಲ್ಲಿ ನಿಂತ ಮತದಾರ



ಅನುಸಂಧಾನ

ರವೀಂದ್ರ ಭಟ್ಟ

'ಕಬೀರ್ ಖಡಾ ಬಜಾರ್ ಮೆ' ಎನ್ನುವುದು ಹಿಂದಿಯ ಖ್ಯಾತ ಸಾಹಿತಿ ಭೀಷ್ಮ ಸಾಹನಿ ಅವರ ಪ್ರಮುಖ ನಾಟಕ. ಅದು ಕನ್ನಡದಲ್ಲಿ 'ಸಂತೆಯಲ್ಲಿ ನಿಂತ ಕಬೀರ' ಎಂಬ ಹೆಸರಿನಲ್ಲಿ ಪ್ರಕಟವಾಗಿದೆ. ಚಲನಚಿತ್ರವಾಗಿಯೂ ತೆರೆಗೆ ಬಂದಿದೆ. ಮನುಷ್ಯರ ನಡುವಿನ ಸಂಬಂಧವನ್ನು ಹೇಳುವ ಕತೆ ಅದು. ಧರ್ಮ ರಕ್ಷಣೆಗಿಂತ ಮಾನವೀಯತೆಯ ರಕ್ಷಣೆ ಮುಖ್ಯ ಎಂಬ ಸಂದೇಶವನ್ನು ಸಾರುವ ಕತೆ ಅದು. ಇಡೀ ನಾಟಕ ಜೀವಪರವಾಗಿ ನಿಲ್ಲುತ್ತದೆ. ಧರ್ಮ ರಕ್ಷಣೆಗೆ ನಿಂತವರ ನಡುವೆ ಕಬೀರ ಸಂತೆಯಲ್ಲಿ ನಿಂತುಬಿಡುತ್ತಾನೆ. ಅದೇ ರೀತಿ ಕರ್ನಾಟಕದ ಇಂದಿನ ಚುನಾವಣಾ ಪ್ರಚಾರದ ಭರಾಟೆಯನ್ನು ನೋಡಿದರೆ, ರಾಜಕಾರಣಿಗಳೆಲ್ಲರೂ ಧರ್ಮ ರಕ್ಷಣೆಗೆ ನಿಂತಂತೆ ಕಾಣುತ್ತಿದೆ. ಮತದಾರರು ಚುನಾವಣಾ ಸಂತೆಯಲ್ಲಿ ಬರಿಗೈಯಲ್ಲಿ ನಿಂತಂತೆಯೇ ಭಾಸವಾಗುತ್ತಿದೆ.

ವಿಧಾನಸಭಾ ಚುನಾವಣೆಯ ಪ್ರಚಾರದ ಭರಾಟೆಯನ್ನು ಒಮ್ಮೆ ನೋಡಿ. ಒಬ್ಬ ನಾಯಕ, ರಾಮ-ನಗರದಲ್ಲಿ ಅಯೋಧ್ಯಾ ಮಾದರಿಯ ರಾಮಮಂದಿರ ಕಟ್ಟುವುದಾಗಿ ಹೇಳುತ್ತಾರೆ. ಇನ್ನೊಂದು ಪಕ್ಷದ ನಾಯಕ, ರಾಜ್ಯದಲ್ಲಿ ಆಂಜನೇಯನ ನೂರು ದೇವಸ್ಥಾನಗಳನ್ನು ಕಟ್ಟುವುದಾಗಿ ಭರವಸೆ ನೀಡುತ್ತಾರೆ. ಪ್ರಧಾನಿ ರೋಡ್ ಶೋದಲ್ಲಿಯೂ ಹನುಮನ ಜಪವೇ ನಡೆಯುತ್ತದೆ. ಭಜರಂಗಿ ಜೈಕಾರ ಮೊಳಗುತ್ತದೆ. ಇದನ್ನೆಲ್ಲಾ ನೋಡಿದರೆ, ನಾವು ವಿಧಾನಸಭಾ ಚುನಾವಣೆಗೆ ಸಿದ್ಧವಾಗುತ್ತಿದ್ದೇವಾ ಅಥವಾ ಧಾರ್ಮಿಕ ಪರಿಷತ್ ಚುನಾವಣೆಗೆ ಸಿದ್ಧವಾಗುತ್ತಿದ್ದೇವಾ ಎಂಬ ಅನುಮಾನ ಕಾಡುತ್ತದೆ. ವಿಧಾನಸೌಧದ ಹೆಬ್ಬಾಗಿಲಿನ ಮೇಲೆ 'ಸರ್ಕಾರದ ಕೆಲಸ ದೇವರ ಕೆಲಸ' ಎಂಬ ಫಲಕ ಹಾಕಿದ್ದೇವೆ. ಆದರೆ ಈಗ ನಡೆಯುತ್ತಿರುವ ಚುನಾವಣೆಯ ಪ್ರಚಾರದ ಭರಾಟೆ ನೋಡಿದರೆ, 'ದೇವರ ಕೆಲಸ ಸರ್ಕಾರದ ಕೆಲಸ' ಎಂದು ಮಾಡಲು ಹೊರಟಂತೆ ಕಾಣುತ್ತಿದೆ.

ಸಂತೆಯಲ್ಲಿ ನಿಂತ ಕಬೀರನ ಕತೆ ಮನೋಜ್ಞವಾಗಿದೆ. 14 ಅಥವಾ 15ನೇ ಶತಮಾನದಲ್ಲಿ ಕಾಶಿಯಲ್ಲಿ ನಡೆಯುವ ಕತೆ ಅದು. ಮುಸ್ಲಿಂ ಹಾಗೂ ಹಿಂದೂ ಸಮುದಾಯದ ಹಲವು ಪಂಗಡಗಳ ಢಾಂಬಿಕತೆಯನ್ನು ಬಯಲು ಮಾಡುತ್ತದೆ. ಹಿಂದೂ ದೊರೆ, ಮುಸ್ಲಿಂ ಕೊತ್ವಾಲ ಮತ್ತು ದೆಹಲಿಯಿಂದ ರಾಜ್ಯಭಾರ ಮಾಡುವ ಸಿಕಂದರ್ ಲೋಧಿ ಎಲ್ಲರೂ ಧರ್ಮ ರಕ್ಷಕರೇ ವಿನಾ ಮನುಷ್ಯ ರಕ್ಷಕರಲ್ಲ, ಮನುಷ್ಯ ಮನುಷ್ಯರ ನಡುವಿನ ಸಂಬಂಧವನ್ನು ಗಟ್ಟಿ ಮಾಡುವವರೂ ಅಲ್ಲ, ಮಾನವೀಯತೆಯನ್ನು ಬೆಂಬಲಿಸುವವರೂ ಅಲ್ಲ ಎನ್ನುವುದನ್ನು ಅತ್ಯಂತ ಪ್ರಭಾವಿಯಾಗಿ ಈ ನಾಟಕ ಹೇಳುತ್ತದೆ.

ಕರ್ನಾಟಕದ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ವಿವಿಧ ರಾಜಕೀಯ ಪಕ್ಷಗಳ ಮುಖಂಡರ ಮಾತುಗಳನ್ನು ಕೇಳುತ್ತಿದ್ದರೆ, ಇವರೂ ಧರ್ಮ ರಕ್ಷಕರಂತೆಯೇ ಕಾಣುತ್ತಿದ್ದಾರೆ. ಯಾರು ಕೂಡ ಮತದಾರರನ್ನಾಗಲಿ, ರಾಜ್ಯವನ್ನಾಗಲಿ, ದೇಶವನ್ನಾಗಲಿ, ಸೌಹಾರ್ದವನ್ನಾಗಲಿ, ಸಂವಿಧಾನವನ್ನಾಗಲಿ ರಕ್ಷಣೆ ಮಾಡುತ್ತಿದ್ದಾರೆ ಎಂದು ಅನ್ನಿಸುವುದೇ ಇಲ್ಲ. ನಮ್ಮ ರಾಜಕೀಯ ನಾಯಕರ ಬಹುತೇಕ ಮಾತುಗಳು ಸಂವಿಧಾನ ವಿರೋಧಿಯಾಗಿವೆ. ಆದರೂ ಎಗ್ಗಿಲ್ಲದೆ ಅವರು ಮಾತನಾಡುತ್ತಲೇ ಇದ್ದಾರೆ. ಇಲ್ಲಿಯೂ ಹಾಗೆ, ಮುಖ್ಯಮಂತ್ರಿ, ದೇಶದ ಪ್ರಧಾನಿ ಎಲ್ಲರೂ ಧರ್ಮ ರಕ್ಷಣೆಗೇ ನಿಂತುಬಿಟ್ಟಿದ್ದಾರೆ. ರಾಜಧರ್ಮ ಎಂದರೆ ಅದು ಹಿಂದೂ ಧರ್ಮವೂ ಅಲ್ಲ, ಮುಸ್ಲಿಂ ಧರ್ಮವೂ ಅಲ್ಲ. ಇಷ್ಟು ಸಣ್ಣ ವಿಷಯ ನಮ್ಮ ಮುಖಂಡರಿಗೆ ಗೊತ್ತಾಗುತ್ತಿಲ್ಲವಲ್ಲ ಎಂಬ ಹತಾಶೆಯಲ್ಲಿ ಮತದಾರನಿದ್ದಾನೆ.

ಚುನಾವಣಾ ಕಣ ಎನ್ನುವುದೂ ಮಾರುಕಟ್ಟೆಯಂತೆಯೇ ಆಗಿದೆ. ಎಲ್ಲರೂ ಇಲ್ಲಿ ಕೊಡುವ ಮಾತುಗಳನ್ನೇ ಹೇಳುತ್ತಿದ್ದಾರೆ. ಸ್ವರ್ಗವನ್ನೇ ಧರೆಗಿಳಿಸುವ ಮಾತುಗಳೂ ಕೇಳುತ್ತಿವೆ. ರಾಜಕೀಯ ನಾಯಕರ ಮಾತುಗಳು ಎಷ್ಟು ಕರ್ಕಶವಾಗಿವೆ ಎಂದರೆ, ಮತದಾರರಿಗೆ ಯಾವುದನ್ನು ಕೇಳಿಸಿಕೊಳ್ಳಬೇಕು ಯಾವುದನ್ನು ಬಿಡಬೇಕು ಎನ್ನುವುದೇ ಅರ್ಥವಾಗದ ಸ್ಥಿತಿ ಇದೆ. ಮುಖಂಡರ ಭಾಷಣಗಳಲ್ಲಿ ನಮ್ಮ ಹಿತ ಏನಿದೆ ಎಂದು ಹೆಕ್ಕಿ ತೆಗೆಯುವುದು ಕೂಡ ಮತದಾರನಿಗೆ ಕಷ್ಟ-ವಾಗುತ್ತಿದೆ. ಮಾತುಗಳ ಆರ್ಭಟ ಅಷ್ಟು ಜೋರಾಗಿದೆ. ಪರಿಸ್ಥಿತಿ ಹೇಗಿದೆ ಎಂದರೆ, ಮತದಾರರು ಕಿವಿ ಮುಚ್ಚಿಕೊಳ್ಳುವುದೇ ಲೇಸು ಎಂದು ಭಾವಿಸುವಂತಿದೆ.

ನಮ್ಮದು ಹಿಂದೂ ದೇಶ, ನಾವು ಹಿಂದೂಗಳನ್ನು ರಕ್ಷಣೆ ಮಾಡುವುದಕ್ಕಾಗಿಯೇ ಬಂದಿದ್ದೇವೆ, ಹಿಂದೂಗಳ ರಕ್ಷಣೆಯೇ ನಮ್ಮ ಗುರಿ, ಹಿಂದುತ್ವದ ಆಧಾರದಲ್ಲಿಯೇ ಚುನಾವಣೆ ನಡೆಸುತ್ತೇವೆ, ಹಿಂದೂಗಳ ಒಳಿತಿಗಾಗಿ ನಾವು ಏನನ್ನು ಮಾಡಲೂ ಸಿದ್ಧ ಎಂದು ಒಂದು ಪಕ್ಷದ ನಾಯಕರು ಹೇಳುತ್ತಾರೆ. ಅಲ್ಲದೆ, ಇನ್ನೊಂದು ಪಕ್ಷ ಮುಸ್ಲಿಂ ಬೆಂಬಲಿಗರ ಪಕ್ಷ, ಆ ಪಕ್ಷ ಅಧಿಕಾರಕ್ಕೆ ಬಂದರೆ ಹಿಂದೂಗಳ ನಾಶವಾಗುತ್ತದೆ, ದೇವಾಲಯಗಳು ಬಾಗಿಲು ಮುಚ್ಚುತ್ತವೆ, ಹಿಂದೂ ದೇವಾಲಯಗಳ ಆದಾಯವನ್ನು ಸ್ವಂತ ಮಾಡಿಕೊಳ್ಳುತ್ತಾರೆ, ರಾಜ್ಯದ ಎಲ್ಲ ಭಾಗಗಳಲ್ಲಿಯೂ ಮಸೀದಿಗಳು ತಲೆ ಎತ್ತುತ್ತವೆ, ಮುಸ್ಲಿಮರು ಹಿಂಸಾಚಾರಕ್ಕೆ ಇಳಿಯುತ್ತಾರೆ, ಇಡೀ ರಾಜ್ಯ, ದೇಶ ಮುಸ್ಲಿಂಮಯವಾಗುತ್ತದೆ ಎಂಬ ಬೆದರಿಕೆಯನ್ನೂ ಒಡ್ಡುತ್ತಾರೆ.

ಜಾನುವಾರು ಹತ್ಯೆ ನಿಷೇಧ ಕಾಯ್ದೆಯನ್ನು ವಾಪಸು ತೆಗೆದುಕೊಳ್ಳುತ್ತೇವೆ, ಬಜರಂಗದಳವನ್ನು ನಿಷೇಧ ಮಾಡುತ್ತೇವೆ, ಮತಾಂತರ ನಿಷೇಧ ಕಾಯ್ದೆಯನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇವೆ ಎಂದು ಇನ್ನೊಂದು ಪಕ್ಷದವರು ಹೇಳುತ್ತಾರೆ. ಮತ್ತೊಂದು ಪಕ್ಷ ಕೂಡ ಇದಕ್ಕಿಂತ ಭಿನ್ನವಾಗಿಯೇನೂ ಇಲ್ಲ. ಎಲ್ಲರೂ ಇಲ್ಲಿ ಧರ್ಮ ರಕ್ಷಣೆಗೇ ನಿಂತುಬಿಟ್ಟಿದ್ದಾರೆ. ಅಸಲಿ ಮತದಾರರ ರಕ್ಷಣೆಯ ಪಾಡೇನು? ಧರ್ಮದ ಹೆಸರಿನಲ್ಲಿ ಮತ ಯಾಚನೆ ಸಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದ್ದರೂ ಯಾವ ಹಿಡಿತವೂ ಇಲ್ಲ. ಬಹುತೇಕ ನಾಯಕರು ಧರ್ಮದ ಹೆಸರಿನಲ್ಲಿಯೇ ಮತ ಕೇಳುತ್ತಿದ್ದಾರೆ. ಕೆಲವು ಮುಖಂಡರು ಮುಸ್ಲಿಂ ಧರ್ಮದವರ ಮತವೇ ಬೇಡ ಎಂದು ಬಹಿರಂಗವಾಗಿಯೇ ಹೇಳುತ್ತಾರೆ.

ಲಿಂಗಾಯತ ಮುಖ್ಯಮಂತ್ರಿ ಎಂಬ ವಿಷಯದಿಂದಲೇ ಎಲ್ಲವೂ ಆರಂಭವಾಯಿತು. ಲಿಂಗಾಯತರನ್ನು ಮುಖ್ಯಮಂತ್ರಿ ಮಾಡಿ ನೋಡುವಾ ಎಂದು ಒಬ್ಬರು ಸವಾಲು ಹಾಕಿದರೆ, ಇನ್ನೊಬ್ಬರು, ದಲಿತರನ್ನು ಮುಖ್ಯಮಂತ್ರಿ ಮಾಡಿ ಎಂದರು. ಮತ್ತೊಬ್ಬರು, ಮುಸ್ಲಿಂ ಸಮುದಾಯದವರನ್ನು ಮುಖ್ಯಮಂತ್ರಿ ಮಾಡಿ ಎಂದು ಸವಾಲು ಹಾಕಿದರು. ಇವೆಲ್ಲಾ ಸಂವಿಧಾನ ವಿರೋಧಿ ಮಾತುಗಳು. ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಎಲ್ಲ ಧರ್ಮಗಳ, ಎಲ್ಲ ಜನಾಂಗಗಳ ಹಿತ ಕಾಯುವ ವ್ಯಕ್ತಿ ಮುಖ್ಯಮಂತ್ರಿಯಾಗಬೇಕು. ಆತ ದಕ್ಷ ಆಡಳಿತಗಾರನಾಗಿರಬೇಕು. ರಾಜ್ಯದ ಆಗುಹೋಗುಗಳ ಬಗ್ಗೆ ಆತನಿಗೆ ಪ್ರಜ್ಞೆ ಇರಬೇಕು. ರಾಜ್ಯವನ್ನು ಅಭಿವೃದ್ಧಿಯ ಹಾದಿಯಲ್ಲಿ ತೆಗೆದುಕೊಂಡು ಹೋಗಬೇಕು. ಅಂತಹ ವ್ಯಕ್ತಿ ಮುಖ್ಯಮಂತ್ರಿಯಾಗಬೇಕು. ಆದರೆ ನಮ್ಮ ನಾಯಕರೊಬ್ಬರು 'ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಅಭಿವೃದ್ಧಿ ಎನ್ನುವುದು ತನ್ನಿಂದ ತಾನೇ ನಡೆಯುತ್ತದೆ. ಆದರೆ ನಾವು ಹುಟ್ಟಿದ ಧರ್ಮವನ್ನು ರಕ್ಷಿಸುವ ಕೆಲಸ ಮಾಡಬೇಕು' ಎಂದು ಅಪ್ಪಣೆ ಕೊಡಿಸಿಬಿಟ್ಟಿದ್ದಾರೆ. ಹೀಗೆ ಮಾತನಾಡುವುದು ಸಂವಿಧಾನ ವಿರೋಧಿಯಾಗುತ್ತದೆ ಎಂದು ಹೇಳಿದರೆ, 'ಸಂವಿಧಾನವನ್ನು ಬದಲಾಯಿಸುವುದಕ್ಕಾಗಿಯೇ ನಾವು ಬಂದಿದ್ದೇವೆ' ಎಂದೂ ಹೇಳುತ್ತಾರೆ ಅವರು.

'ಹಿಂದೂ ಸಂಸ್ಕೃತಿಯನ್ನು ಉಳಿಸುವ, ಬೆಳೆಸುವ ದಿಸೆಯಲ್ಲಿ ರಾಜ್ಯದ ಡಬಲ್ ಎಂಜಿನ್ ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ. ದೇವಾಲಯಗಳ ಕಾರಿಡಾರ್ ನಿರ್ಮಾಣಕ್ಕೆ ನಿರ್ಧಾರ, ದೇವಾಲಯಗಳ ರಕ್ಷಣೆಗೆ ಕಾನೂನು, ಪೂಜಾರಿಗಳ ವೇತನದಲ್ಲಿ ದಾಖಲೆ ಪ್ರಮಾಣದ ಹೆಚ್ಚಳ, ಗೋಶಾಲೆಗಳ ನಿರ್ಮಾಣದಂತಹವು ಹಿಂದೂ ಧರ್ಮ ರಕ್ಷಣೆಗೆ ನಮ್ಮ ಸರ್ಕಾರ ಕೈಗೊಂಡ ಕ್ರಮಗಳು. ಅದಕ್ಕಾಗಿ ನಮಗೆ ಮತ ಹಾಕಿ' ಎಂದು ಸ್ವತಃ ಮುಖ್ಯಮಂತ್ರಿ ಅವರೇ ಕೇಳಿಕೊಳ್ಳುತ್ತಿದ್ದಾರೆ. ಕೆಲವು ಮಾಧ್ಯಮಗಳು ಕೂಡ ಧರ್ಮ ರಕ್ಷಣೆಯ ಜವಾಬ್ದಾರಿ ವಹಿಸಿಕೊಂಡಿವೆ. ಧರ್ಮವನ್ನು ರಕ್ಷಿಸುತ್ತೇನೆ ಎಂದು ಹೇಳುವ ಅಭ್ಯರ್ಥಿಗಳ ಪರವಾಗಿಯೇ ಮಾಧ್ಯಮದವರೂ ಮಾತನಾಡುತ್ತಿದ್ದಾರೆ. ಚರ್ಚೆ ಮಾಡುತ್ತಾರೆ. ಫರ್ಮಾನು ಹೊರಡಿಸುತ್ತಾರೆ. ತೀರ್ಪು ಕೊಡುತ್ತಾರೆ. ಗೆಲ್ಲಿಸಿಯೇ ಬಿಟ್ಟಿದ್ದೇವೆ ಎಂಬಂತೆ ಸಮೀಕ್ಷೆಯ ಫಲಿತಾಂಶ ಪ್ರಕಟಿಸುತ್ತಾರೆ.

ಧರ್ಮ ರಕ್ಷಣೆಯ ಭರಾಟೆಯಲ್ಲಿ ಮನುಷ್ಯ ರಕ್ಷಣೆಯ ವಿಷಯ ಗೌಣವಾಗಿದೆ. ನಮಗೆ ಈಗ ಬೇಕಿರುವುದು ದೇವಮಾನವನಲ್ಲ. ಮನುಷ್ಯನನ್ನು ಮನುಷ್ಯನನ್ನಾಗಿಯೇ ನೋಡುವ ಅಪ್ಪಟ ಮನುಷ್ಯ. ಈ ಗೌಜಿಯಲ್ಲಿ ಅವನನ್ನು ಹುಡುಕುವುದು ಹೇಗೆ? ಕರೆದರೆ ಬಂದಾನೆಯೇ ಅವನು?



ಚುರುಮುರಿ



ಪಕ್ಷ-ಶಾಂತಿ ಐಡಿಯಾ

• ಸುಮಂಗಲಾ

ಬೆಕ್ಕಣ್ಣ ಕಳೆದ ವಾರ 'ನನಗೊಂದಿಷ್ಟು ರೊಕ್ಕ ಸಾಲ ಕೊಡು, ಹೂವಿನ ವ್ಯಾಪಾರ ಮಾಡತೀನಿ' ಎಂದು ವರಾತ ಹಚ್ಚಿತ್ತು.

'ಸಾಲ ಕೊಡಾಕೆ ನನ್ನ ಹತ್ರ ರೊಕ್ಕ ಎಲ್ಲೈತಿ. ಈಗ ಹಬ್ಬ, ಹುಣ್ಣಿಮಿ ಏನಿಲ್ಲ... ನಿನ್ ಹೂವು ಯಾರು ಕೊಂಡಕೋತಾರೆ' ಎಂದು ಬೈದಿದ್ದೆ.

ಶನಿವಾರ ಬಿಟ್ಟೂಬಿಡದೆ ಟಿ.ವಿ. ನೋಡಿದ ಬೆಕ್ಕಣ್ಣ, 'ನೋಡಿಲ್ಲಿ... ಮೋದಿಮಾಮನ 26 ಕಿ.ಮೀ. ರೋಡ್ ಶೋಗೆ 40 ಟನ್ ಹೂ ಖರ್ಚು ಮಾಡ್ಯಾರೆ. ದಾರಿಯುದ್ದಕ್ಕೂ ಹೂವಿನ ಮಳೆಗರೆದಾರೆ. ಮೋದಿಮಾಮ ಎಂಥಾ ಛಂದ ಮಹಾರಾಜನಂಗೆ ಕಾಣ್ತದಾನ. ನಾ ಹೂವಿನ ವ್ಯಾಪಾರ ಮಾಡಿದ್ರ ಎಷ್ಟ್ ಲಾಭ ಮಾಡಿಕೋಬೌದಿತ್ತು' ಎಂದು ನನ್ನ ಮೂತಿಗೆ ತಿವಿಯಿತು.

'ಆತೇಳು... ಚುನಾವಣೆ ಫಲಿತಾಂಶ ಬಂದಮ್ಯಾಗೂ ಹಿಂಗೆ ಏನರ ಮಾಡ್ತಾರಲ್ಲ, ಆವಾಗ ವ್ಯಾಪಾರ ಮಾಡಾಕಂತಿ' ಎಂದು ಸಮಾಧಾನಿಸಿದೆ.

'ಯಾವ ಪಕ್ಷಕ್ಕೆ ಬಹುಮತ ಸಿಗಬೌದು?' ಬೆಕ್ಕಣ್ಣ ಚುನಾವಣಾ ಸಮೀಕ್ಷೆ ನೋಡತೊಡಗಿತು.

'ಯಾವ ಪಕ್ಷಕ್ಕೂ ಸಿಗಂಗಿಲ್ಲ, ಖರೀದಿ ವ್ಯವಹಾರದಾಗೆ ಯಾರು ಗೆಲ್ತಾರೆ ಅವರಿಗೇ ಕುರ್ಚಿ'.

'ಕೈಪಕ್ಷ ಬಂದರೆ ಹೆಣ್‌ಮಕ್ಕಳಿಗೆ ಮನಿಖರ್ಚಿಗೆ 2 ಸಾವಿರ, ಬಸ್ ಟಿಕೇಟು ಫ್ರೀ, ನಿರುದ್ಯೋಗಿಗಳಿಗೆ ಅದೇನೋ ಭತ್ಯೆ, ಏನೇನೋ ಫ್ರೀ ಕೊಡ್ತಾರೆ. ಕುಮಾರಣ್ಣ ಅಧಿಕಾರಕ್ಕೆ ಬಂದರೆ ಪಂಚರತ್ನ ಯೋಜನೆ ಅಂತ, ಅವನೂ ಏನೇನೋ ಫ್ರೀ ಕೊಡ್ತಾನ...'

'ಕಮಲಕ್ಕನ ಪಕ್ಷ ಬಂದ್ರೆ ಮೂರು ಹಬ್ಬಕ್ಕೆ ಮೂರು ಸಿಲಿಂಡರ್, ನಂದಿನಿ ಹಾಲು, ಸಿರಿಧಾನ್ಯ ಇನ್ನೂ ಏನೇನೋ ಫ್ರೀ ಕೊಡ್ತಾರಂತೆ'.

'ಮೂರೂ ಪಕ್ಷ ಅಧಿಕಾರಕ್ಕೆ ಬಂದ್ರ ಎಷ್ಟ್ ಛಲೋ! ಮಂದಿಗಿ ಎಲ್ಲಾನೂ ಫ್ರೀಯಾಗಿ ಸಿಕ್ಕು, ಕಲ್ಯಾಣರಾಜ್ಯವಾಗತೈತಿ. ನನ್ನ ಕೇಳಿದ್ರ ಮೂರೂ ಪಕ್ಷದವ್ರು ನಾಕುನಾಕು ತಿಂಗಳು ಅಧಿಕಾರ ನಡೆಸಬಕು. ಆವಾಗ ಪಕ್ಷ-ಶಾಂತಿನೂ ಇರತೈತಿ' ಬೆಕ್ಕಣ್ಣ ತನ್ನ ಐಡಿಯಾ ಹೇಳಿತು.

'ಹೌದ್ದೌದು... ಆವಾಗ ಒಬ್ಬೊಬ್ಬರೂ ನಾಕು ತಿಂಗಳು ರಾಜ್ಯ ಕೊಳ್ಳೆಹೊಡೀಬೌದು!'

'ಅದೇ ಮತ್ತೆ... ಮೂರೂ ಪಕ್ಷಗಳು ಒಗ್ಗಟ್ಟಿನಿಂದ ಕೊಳ್ಳೆಹೊಡೀಬೌದು' ಬೆಕ್ಕಣ್ಣ ಕಿಸಕ್ಕನೆ ನಕ್ಕಿತು!

ಸಂಗತ

ಒದಗಿಬರುವ ಭಾಗ್ಯವಲ್ಲ, ಮೂಲಭೂತ ಹಕ್ಕು

ಬಡತನದಲ್ಲಿ ಇರುವವರಿಗೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನೀಡಲಾಗುವ ಉಚಿತ ಸೌಲಭ್ಯಗಳು ಅವರ ಹಕ್ಕುಗಳಾಗಿರುತ್ತವೆ ಎಂಬುದು ಗಮನಾರ್ಹ

• ಡಾ. ಶಿವಲಿಂಗಸ್ವಾಮಿ ಎಚ್.ಕೆ.


ಪ್ರಸಕ್ತ ವಿಧಾನಸಭಾ ಚುನಾವಣೆಯಲ್ಲಿ, ಸಾರ್ವಜನಿಕ-ರಿಗೆ ಕೆಲವು ಸೌಲಭ್ಯಗಳನ್ನು ಉಚಿತವಾಗಿ ಒದಗಿಸುವ ಅಮಿಷಗಳನ್ನು ರಾಜಕೀಯ ಪಕ್ಷಗಳು ಪೈಪೋಟಿಯಲ್ಲಿ ನೀಡಿವೆ. ಈ ಆಮಿಷಗಳತ್ತ ಬಹಳಷ್ಟು ಜನ ಆಸೆಗಣ್ಣಿಗಳಿಂದ ನೋಡುತ್ತಿದ್ದರೆ, ಒಂದುವೇಳೆ ಇವರು ಅಧಿಕಾರಕ್ಕೆ ಬಂದರೆ ಈ ಯೋಜನೆಗಳನ್ನು ಹೇಗೆ ಜಾರಿಗೆ ತರಬಹುದು ಎಂಬ ಜಿಜ್ಞಾಸೆಯಲ್ಲಿ ಕೆಲವರು ತೊಡಗುವುದು ಸಹಜ. ಹಾಗೆಯೇ ಈ ಹಂತದಲ್ಲಿ, ಒಂದು ರಾಜಕೀಯ ಪಕ್ಷ ತನ್ನ ಆಡಳಿತಾವಧಿಯನ್ನು ಪೂರ್ಣಗೊಳಿಸುವ ಸಮಯ ಬಂದಾಗ, ಅದರ ಸಾಧನೆಗಳ ಕುರಿತು ಚರ್ಚೆಯಾಗುವುದು ಸಹ ಅಷ್ಟೇ ಸಹಜ. ಇದರ ಜೊತೆಯಲ್ಲಿಯೇ ಅದೇ ಪಕ್ಷ ಪುನಃ ಅಧಿಕಾರಕ್ಕೆ ಏರುವ ದಿಸೆಯಲ್ಲಿ ತಂತ್ರ ಹೆಣೆಯುವುದು ಕೂಡ ಶುರುವಾಗುತ್ತದೆ.

ಬಡವರಾಗಲಿ, ಬಲ್ಲಿದರಾಗಲಿ ಒಟ್ಟಿನಲ್ಲಿ ಚುನಾವಣೆ ಸಮೀಪಿಸಿದಂತೆ ಪ್ರತಿಯೊಬ್ಬರ ನಿರೀಕ್ಷೆಯು ಅವರವರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ಅವಲಂಬಿಸಿರುತ್ತದೆ. ಒಬ್ಬ ವ್ಯಕ್ತಿಗೆ ಮೀನು ಹಿಡಿಯುವ ಕಲೆ ಮುಖ್ಯ ಎಂದು ಅನ್ನಿಸಿದರೆ, ಮತ್ತೊಬ್ಬನಿಗೆ, ಹಸಿದಾಗ ಮೀನು ಸಿಕ್ಕರೆ ಸಾಕು ಅನ್ನಿಸಬಹುದು. ಇವರಿಬ್ಬರಲ್ಲಿ ಯಾರು ವೋಟು ಹಾಕಲು ಖಂಡಿತ ಮುಂದೆ ಬರುವರೋ ಅವರ ನಿರೀಕ್ಷೆಗೆ ತಕ್ಕಂತೆ ರಾಜಕೀಯ ನಾಯಕರು ಸ್ಪಂದಿಸುತ್ತಾರೆ. ಬಹುಮತ ಪಡೆದು ಆಯ್ಕೆಯಾದ ಪಕ್ಷವು ಇಡೀ ದೇಶದ ಅಥವಾ ನಾಡಿನ ಹಿತ ಕಾಪಾಡಬೇಕು. ಅಂದರೆ, ಯಾವುದೇ ನಾಯಕ ತನ್ನ ಜಾತಿಯ ಕಾರಣದಿಂದಲೋ ಅಥವಾ ತನ್ನ ಪಕ್ಷ ಒಡ್ಡಿದ ಆಮಿಷಗಳ ಕಾರಣದಿಂದಲೋ ಅಧಿಕಾರಕ್ಕೆ ಬಂದರೆ, ತನಗೆ ವೋಟು ಹಾಕಿದವರಷ್ಟೇ ಮುಖ್ಯ ಎನ್ನಲು ಸಾಧ್ಯವಿಲ್ಲ. ತಮ್ಮ ಅಮೂಲ್ಯವಾದ ಮತ ಚಲಾಯಿಸಿ ತಮ್ಮನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದವರ ಹಿತ ಕಾಯುವುದು ಮುಖ್ಯ ಎಂದು ಆಯ್ಕೆಯಾದ ಪಕ್ಷಕ್ಕೆ ತೋರಬಹುದು. ಇದು ಅದರ ರಾಜಕೀಯ ಭವಿಷ್ಯದ ದೃಷ್ಟಿಯಿಂದ ನ್ಯಾಯಸಮ್ಮತ. ಆದರೆ ಪ್ರಜಾಪ್ರಭುತ್ವದ ದೃಷ್ಟಿಯಿಂದ ಅಲ್ಲ.

ಜಸ್ವಂತ್ ಸಿಂಗ್ ತಮ್ಮ 'ವಾಟ್ ಏಯ್ಲ್ಸ್ ಇಂಡಿಯಾ' ಎಂಬ ಲೇಖನದಲ್ಲಿ, 'ದೇಶದ ಜನಸಂಖ್ಯೆಯ ಅರ್ಧದಷ್ಟು ಜನ ಮತ ಹಾಕಲು ಅರ್ಹರಿದ್ದಾರೆ. ಅಂತಹವರಲ್ಲಿ ಅರ್ಧದಷ್ಟು ಜನ ಮತ ಚಲಾಯಿಸಲು ಮುಂದೆ ಬರುತ್ತಾರೆ. ಹೀಗೆ ಬರುವ ಈ ಅಲ್ಪಸಂಖ್ಯೆಯ ಜನರು ಮತ ಚಲಾಯಿಸದ ಉಳಿದ ಬಹುಸಂಖ್ಯೆಯ ಜನರನ್ನು ಆಳುವ ಸರ್ಕಾರವನ್ನು ಆಯ್ಕೆ ಮಾಡುತ್ತಾರೆ' ಎಂದು ಆತಂಕ ವ್ಯಕ್ತಪಡಿಸುತ್ತಾರೆ.

ಸಿಂಗ್ ಅವರ ಲೇಖನದ ಜಾಡಿನಲ್ಲಿಯೇ ಹೇಳುವುದಾದರೆ, ಯಾವುದೇ ರಾಜಕೀಯ ಪಕ್ಷವು ಮತ ಚಲಾಯಿಸಲು ಮುಂದೆ ಬರುವವರ ನಿರೀಕ್ಷೆಗಳಿಗೆ ಅನುಸಾರವಾಗಿಯೇ ಸಹಜವಾಗಿ ತನ್ನ ಯೋಜನೆಗಳನ್ನು ರೂಪಿಸುತ್ತದೆ. ಇವರನ್ನು ವೋಟ್ ಬ್ಯಾಂಕ್ ಎಂದು ಕರೆಯುತ್ತಾರೆ. ಹಾಗಾಗಿ ಮತ ಚಲಾಯಿಸದ ಬಹುಮಂದಿಗೆ ಯಾವುದೇ ಪಕ್ಷದ ಚುನಾವಣಾ ಪ್ರಣಾಳಿಕೆ ಮುಖ್ಯ ಎನ್ನಿಸುವುದಿಲ್ಲ. ಇದನ್ನು ದೃಷ್ಟಿಯಲ್ಲಿಟ್ಟು ನೋಡಿದರೆ, ಚುನಾವಣೆ ಎಂಬ ಮಹತ್ತರ ಪ್ರಕ್ರಿಯೆಯು ಮತ ಚಲಾಯಿಸುವ ದೇಶದ ಅಥವಾ ನಾಡಿನ ಕಾಲುಭಾಗದಷ್ಟು ಜನ ಮತ್ತು ಅವರನ್ನಷ್ಟೇ ಆಧರಿಸುವ ಜನನಾಯಕರ ನಡುವೆ ನಡೆಯುತ್ತದೆ. ಈ ಪ್ರಕ್ರಿಯೆಯ ನಡುವೆ ಉಚಿತ ಕೊಡುಗೆಯ ಯೋಜನೆಗಳು ರೂಪುಗೊಳ್ಳುತ್ತವೆ. ಆ ಯೋಜನೆಗಳನ್ನು ಬಡವರ ಅಭ್ಯುದಯಕ್ಕಾಗಿ ರೂಪಿಸುವುದರಿಂದ, ಅವು ಬಡವರ ಪಾಲಿನ ಭಾಗ್ಯಗಳು ಎನಿಸಿಕೊಳ್ಳುತ್ತವೆ.

ನಾಗರಿಕರ ತೆರಿಗೆ ಹಣವನ್ನು ಬಳಸಿ ರೂಪಿಸುವ ಈ ನೀತಿಗಳು 'ಭಾಗ್ಯ'ಗಳು ಹೇಗೆ ಆಗುತ್ತವೆ, ಅವು ಅವರ ಹಕ್ಕುಗಳು ಅಲ್ಲವೇ ಎಂಬುದು ಇಲ್ಲಿ ಪ್ರತಿಯೊಬ್ಬ ನಾಗರಿಕನೂ ಕೇಳಬೇಕಿರುವ ಪ್ರಶ್ನೆ. ಈ ಸೌಲಭ್ಯಗಳ ಫಲಾನುಭವಿಗಳಿಗೆ ಅವಮಾನವಾಗುವ ಹಾಗೆ ಬಳಕೆಯಲ್ಲಿರುವ ಮತ್ತೊಂದು ಪದವೆಂದರೆ 'ಪುಕ್ಕಟೆ ಭಾಗ್ಯ'. ಅಧಿಕಾರದಲ್ಲಿರುವ ಪ್ರತಿ ರಾಜಕೀಯ ಪಕ್ಷವೂ ಈ ಸೌಲಭ್ಯಗಳನ್ನು ಒದಗಿಸುವುದು ತನ್ನ ಜವಾಬ್ದಾರಿ ಎಂಬುದನ್ನು ಅರಿತು ನೆರವೇರಿಸಬೇಕಿರುವ ಸಂದರ್ಭದಲ್ಲಿ, ಇವನ್ನು ಪುಕ್ಕಟೆ ಭಾಗ್ಯ ಎಂದು ಕರೆಯುವುದು ತಪ್ಪಾಗುತ್ತದೆ.



ಯುರೋಪಿನ ಫಿನ್ಲೆಂಡ್, ಡೆನ್ಮಾರ್ಕ್, ಬೆಲ್ಜಿಯಂನಂತಹ ದೇಶಗಳಲ್ಲಿ ಶಿಕ್ಷಣ ಹಾಗೂ ಆರೋಗ್ಯ ಸೇವೆ ದೇಶದ ಎಲ್ಲ ನಾಗರಿಕರಿಗೂ ಉಚಿತವಾಗಿ ಸಿಗುವ ವ್ಯವಸ್ಥೆ ಇದೆ. ಉದ್ಯೋಗಸ್ಥ ನಾಗರಿಕರು ತಮ್ಮ ಆದಾಯದಲ್ಲಿ ಸ್ವಲ್ಪ ಪ್ರಮಾಣವನ್ನು ದೇಶದ ರಾಷ್ಟ್ರೀಯ ಯೋಜನೆಗಳಿಗೆ ಮೀಸಲಿಡುತ್ತಾರೆ. ತೆರಿಗೆದಾರರ ಹಣದ ಸದ್ಬಳಕೆ ಇದಾಗಿರುತ್ತದೆ. ಶಿಕ್ಷಣ ಮತ್ತು ಆರೋಗ್ಯ ಸೇವೆಯನ್ನು ದೇಶದ ಎಲ್ಲ ನಾಗರಿಕರಿಗೆ ಉಚಿತವಾಗಿ ಒದಗಿಸಿ ನಂತರ ಅವುಗಳನ್ನು ತಮ್ಮ ಅಪ್ರತಿಮ ಸಾಧನೆ ಎಂಬಂತೆ ಅಲ್ಲಿನ ಸರ್ಕಾರಗಳು ಬೀಗುವುದಿಲ್ಲ. ಏಕೆಂದರೆ, ಮೂಲ ಜವಾಬ್ದಾರಿಗಳು ಸಾಧನೆಗಳಾಗುವುದಿಲ್ಲ.

ಈ ರೀತಿ ಉಚಿತ ಸೌಲಭ್ಯ ಪಡೆದ ಜನ ಸೋಮಾರಿಗಳಾಗುತ್ತಾರೆ ಎಂಬ ಭಾವನೆಯೂ ಕೆಲವರಲ್ಲಿದೆ. ಅನ್ನಕ್ಕೆ ಸುಗಮ ದಾರಿಯಾದರೆ ತಾನು ಗೌರವಯುತವಾದ ಬೇರೆ ಕೆಲಸಗಳಲ್ಲಿ ತೊಡಗಿಕೊಳ್ಳ-ಬಹುದು ಎಂದು ಸಹ ಫಲಾನುಭವಿ ಚಿಂತಿಸಬಹುದು ಎಂದು ಅರ್ಥೈಸುವುದು ಪ್ರಜಾಪ್ರಭುತ್ವದ ಆಶಯ.

ಈ ಹಂತದಲ್ಲಿ ನಮ್ಮಲ್ಲಿ ಆಗಬೇಕಿರುವ ಪ್ರಮುಖ ಬದಲಾವಣೆ ಎಂದರೆ, ಪದ ಬಳಕೆಯ ಬಗ್ಗೆ ಎಚ್ಚರ. ಮೂಲಭೂತ ಹಕ್ಕುಗಳನ್ನು ಪುಕ್ಕಟೆ ಭಾಗ್ಯ ಎಂದು ಕರೆಯುವುದು ಮೊದಲು ನಿಲ್ಲಬೇಕು. ಹಾಗೆಯೆ ಇಂತಹ ಯೋಜನೆಗಳನ್ನು ತಮ್ಮ ಅಭೂತಪೂರ್ವ ಯೋಜನೆಗಳು ಎಂದು ಪ್ರಣಾಳಿಕೆಗಳಲ್ಲಿ ಸೇರಿಸಿಕೊಳ್ಳುವ ರಾಜಕೀಯ ಪಕ್ಷಗಳು ಸಹ ಫಲಾನುಭವಿಗಳಿಗೆ ಅವಮಾನವಾಗುವ ರೀತಿ ಬೀಗಬಾರದು.

ವಾಚಕರ ವಾಣಿ

ಕಾಣೆಯಾಗುತ್ತಿದೆ ಸಾಮಾನ್ಯ ತಿಳಿವಳಿಕೆ

'ಚುನಾವಣೆ, ಪ್ರಚಾರ, ಕಿರಿಕಿರಿ' ಎಂಬ ಪ.ರಾಮಕೃಷ್ಣ ಶಾಸ್ತ್ರಿ ಅವರ ಲೇಖನ (ಸಂಗತ, ಮೇ 6) ಪ್ರಸ್ತುತ ನಡೆಯುತ್ತಿರುವ ಅಬ್ಬರದ ಚುನಾವಣಾ ಪ್ರಚಾರ ಕುರಿತ ಜನಾಭಿಪ್ರಾಯವನ್ನೇ ಕಣ್ಣಿಗೆಟ್ಟು ತೋರಿಸಿದೆ. ನಾವು ಸಣ್ಣವರಿದ್ದಾಗ ಜಾತ್ರೆ, ಸಂತೆಗಳಲ್ಲಿ ಸೇರುತ್ತಿದ್ದ ದೊಡ್ಡ ಮಟ್ಟದ ಜನಸಮೂಹವನ್ನು ನೋಡಿ ಗಾಬರಿಯೂ ಜೊತೆಗೊಂದಿಷ್ಟು ಸಂಭ್ರಮವೂ ಇರುತ್ತಿತ್ತು. ಈಗ ಈ ರೋಡ್ ಶೋಗಳ ಅಬ್ಬರ ನೋಡುತ್ತಿದ್ದರೆ, ಗಾಬರಿ ಮಾತ್ರ ಆಗುತ್ತದೆ! ಕಚೇರಿಗಳಿಗೆ ತೆರಳುವ ನೌಕರರು, ಪರೀಕ್ಷೆ ಬರೆಯಲು ತೆರಳುವ ವಿದ್ಯಾರ್ಥಿಗಳು, ಔಷಧಕ್ಕಾಗಿ ಬರುವ ರೋಗಿಗಳ ಕಡೆಯವರು, ಸಮಯದ ತುರ್ತು ಇದ್ದಂತಹವರಿಗೆ ಇದರಿಂದ ಅನನುಕೂಲವಾಗದೇ ಇರದು. ಈ ಸಾಮಾನ್ಯ ತಿಳಿವಳಿಕೆ ಈಗೀಗ ನಾಗರಿಕ ಸಮಾಜದಿಂದ ಕಾಣೆಯಾಗುತ್ತಿರುವುದು ದೊಡ್ಡ ದುರಂತ.

ವೇಣು ಜಾಲಿಬೆಂಚಿ, ರಾಯಚೂರು

ಏನಾಗಲಿದೆ ಸಿಲಿಂಡರ್ ರಾಜಕೀಯ?

ರಾಜ್ಯದ ಮೂರೂ ಪ್ರಮುಖ ಪಕ್ಷಗಳು ಪ್ರಸ್ತಾಪಿಸುತ್ತಿರುವ ಪ್ರಮುಖ ಸಂಗತಿಗಳಲ್ಲಿ ಅಡುಗೆ ಅನಿಲ ಸಿಲಿಂಡರ್ ವಿಷಯ ಸೇರಿದೆ. ಬಹುತೇಕ ಕುಟುಂಬಗಳು ಅಡುಗೆ ಅನಿಲವನ್ನು ಅವಲಂಬಿಸಿದ್ದು, ಕೊರೊನೋತ್ತರ ಸನ್ನಿವೇಶದಲ್ಲಿ ಸಿಲಿಂಡರ್ ಬೆಲೆ ಏರಿಕೆ ಹಲವರನ್ನು ಆರ್ಥಿಕ ಸಂಕಷ್ಟಕ್ಕೆ ಒಡ್ಡಿರುವುದು ವಾಸ್ತವ. ಸಹಜವಾಗಿ ಇದೇ ರಾಜಕೀಯ ಸರಕಾಗಿದೆ. ಆದರೆ ಯಾವ ಪಕ್ಷದಲ್ಲೂ ಉಚಿತ ವಿತರಣೆಗೆ ತಗಲುವ ವೆಚ್ಚ, ಖರ್ಚು ಸರಿದೂಗಿಸುವುದು ಹೇಗೆ ಎಂಬ ಬಗ್ಗೆ ಯಾವುದೇ ಲೆಕ್ಕಾಚಾರವಾಗಲೀ ಯೋಜನೆಯಾಗಲೀ ಇದ್ದಂತೆ ಕಾಣುತ್ತಿಲ್ಲ.

ಅಡುಗೆ ಅನಿಲ ದರ ಹೆಚ್ಚಳ ಈಗಾಗಲೇ ವರ್ಷದಿಂದಲೂ ಸರ್ಕಾರವನ್ನು ಹಳಿಯಲು ವಿರೋಧ ಪಕ್ಷಗಳ ಅಸ್ತ್ರವಾಗಿ ಮಾರ್ಪಟ್ಟಿತ್ತು. ಈ ಸಂಬಂಧ ಜನರ ಅಸಮಾಧಾನದ ಲಾಭ ಪಡೆಯಲು ಕಾಂಗ್ರೆಸ್ ಮತ್ತು ಜೆಡಿಎಸ್ ಪ್ರಯತ್ನಿಸುತ್ತಲೇ ಇದ್ದವು. ಕಾಂಗ್ರೆಸ್ ಹಾಗೂ ಎಎಪಿ ನಾಯಕರಂತೂ ಸಿಲಿಂಡರ್ ಹಿಡಿದು ಬೀದಿಗಿಳಿದು ಪ್ರತಿಭಟಿಸಿದ್ದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಸಿಲಿಂಡರ್‌ಗೆ ಕೈ ಮುಗಿದು ಪ್ರಚಾರ ಕಾರ್ಯ ಆರಂಭಿಸಿದ್ದರು. ಪ್ರತಿಭಟನೆ, ಟೀಕೆಯಿಂದ ಶುರುವಾದ 'ಸಿಲಿಂಡರ್ ರಾಜಕೀಯ' ಎಷ್ಟರ ಮಟ್ಟಿಗೆ ಜನರ ಸಿಲಿಂಡರ್ ಅಗತ್ಯವನ್ನು ಪೂರೈಸಲಿದೆ ಎಂಬುದನ್ನು ಕಾದು ನೋಡಬೇಕಿದೆ.

ಬೇ.ನ.ಶ್ರೀನಿವಾಸಮೂರ್ತಿ, ತುಮಕೂರು

ಮದ್ಯದಂಗಡಿ ಮುಚ್ಚಿದರಷ್ಟೇ ಸಾಲದು...

ಚುನಾವಣೆಯ ದಿನ ಮತ್ತು ಅದರ ಹಿಂದಿನ ದಿನ ನೀತಿ ಸಂಹಿತೆಯಂತೆ ಮದ್ಯದ ಅಂಗಡಿಗಳನ್ನು ಮುಚ್ಚಲಾಗುತ್ತದೆ. ಇದರ ಉದ್ದೇಶ ಚುನಾವಣೆಗೆ ಮದ್ಯದ ಆಮಿಷ ಒಡ್ಡುವುದನ್ನು ಕಡಿಮೆ ಮಾಡುವುದು. ವಿಪರ್ಯಾಸವೆಂದರೆ, ಆ ಎರಡು ದಿನಗಳಲ್ಲಿ ಸಾಮಾನ್ಯ ದಿನಗಳಿಗಿಂತ ಹೆಚ್ಚಿಗೆ ಮದ್ಯದ ಲಭ್ಯತೆ ಇರುತ್ತದೆ. ಅದರಲ್ಲೂ ಉಚಿತವಾಗಿ ಸಿಗುವುದೇ ಹೆಚ್ಚು. ಚುನಾವಣಾ ಆಯೋಗವು ಬರೀ ಮದ್ಯದ ಅಂಗಡಿಗಳನ್ನು ಮುಚ್ಚುವುದರ ಬದಲಾಗಿ ಮದ್ಯದ ಅಲಭ್ಯತೆಯನ್ನು ಖಚಿತಪಡಿಸಿಕೊಳ್ಳುವ ಪ್ರಯತ್ನ ಮಾಡಬೇಕು.

ಸುನಿಲ್ ಟಿ.ಪಿ., ತಳಗವಾದಿ, ಮಳವಳ್ಳಿ

ಡಿಜಿಟಲ್ ಇಂಡಿಯಾಕ್ಕೆ ಒತ್ತು ಕೊಟ್ಟವರಿವರು!

ಪ್ರಧಾನಿಯವರು ಯಾವುದೇ ಒಂದು ಪಕ್ಷದ ರೂವಾರಿಯಲ್ಲ. ದೇಶದ ಒಟ್ಟು ಒಳಿತನ್ನು ಮುನ್ನಡೆಸಬೇಕಾದವರು. ಒಂದು ರಾಜ್ಯದ ಚುನಾವಣೆಯ ಸಂದರ್ಭದಲ್ಲಿ ತಮ್ಮ ಅಮೂಲ್ಯವಾದ ಸಮಯವನ್ನು ಪದೇ ಪದೇ ಪ್ರಚಾರಕ್ಕೆ ವ್ಯಯಿಸುವುದು ಆ ರಾಜ್ಯದ ಪ್ರಾದೇಶಿಕ ನಾಯಕತ್ವದ ಅಸಮರ್ಥತೆಯನ್ನು ಮತ್ತು ವೈಫಲ್ಯವನ್ನು ಎತ್ತಿ ತೋರಿಸುತ್ತದೆ. ಅದೂ ಅಲ್ಲದೆ, ಯಾವುದೇ ಪಕ್ಷವು ಸಾರ್ವಜನಿಕ ಹಿತಾಸಕ್ತಿಯ ನೆಲೆಯಲ್ಲಿ ವೈಭವೀಕೃತ ರೋಡ್ ಶೋಗಳನ್ನು ನಡೆಸುವುದು ಸೂಕ್ತವೂ ಅಲ್ಲ. ಮೊದಲೇ ಸಂಚಾರ ದಟ್ಟಣೆ, ಬಿರುಬಿಸಿಲಿನಿಂದ ಜನ ಹೈರಾಣಾಗಿದ್ದು, ಭದ್ರತಾ ವ್ಯವಸ್ಥೆಯ ನೆಪದಲ್ಲಿ ಸಂಚಾರ ನಿಷೇಧ ಮಾಡಿ ಜನಸಾಮಾನ್ಯರ ಬದುಕಿಗೆ ತೊಂದರೆ ಉಂಟು ಮಾಡುವುದು ಎಷ್ಟು ಸರಿ?

ಈ ರೀತಿ ಪ್ರಚಾರ ಮಾಡುವುದನ್ನು ಬಿಟ್ಟು, ಯಾವುದಾದರೂ ಮೈದಾನದಲ್ಲಿ ಸಭೆ ನಡೆಸಲಿ. ಪ್ರಚಾರ ಕಾರ್ಯ ಸಾಮಾಜಿಕ ಮಾಧ್ಯಮಗಳ ಮೂಲಕವೂ ಜೋರಾಗಿ ನಡೆಯುತ್ತಿದೆ. ಡಿಜಿಟಲ್ ಇಂಡಿಯಾಕ್ಕೆ ಒತ್ತು ಕೊಟ್ಟ ಪ್ರಧಾನಿ ಈ ರೀತಿ ರೋಡ್ ಶೋಗಳಿಗೆ ತಮ್ಮನ್ನು ಒಡ್ಡಿಕೊಳ್ಳುವುದು ಸರಿಯೆನಿಸುವುದಿಲ್ಲ. ಚುನಾವಣಾ ಪ್ರಕ್ರಿಯೆಗಳನ್ನು ನಿರ್ವಹಿಸುತ್ತಿರುವ ಸ್ವಾಯತ್ತ ಸಾಂವಿಧಾನಿಕ ಸಂಸ್ಥೆಯಾದ ಚುನಾವಣಾ ಆಯೋಗವು ಜನಸಾಮಾನ್ಯರ ಹಿತದೃಷ್ಟಿಯಿಂದ ಈ ಬಗ್ಗೆ ಆಲೋಚಿಸಬೇಕಿತ್ತು.

ರಾಜೇಂದ್ರ ಕೇದಿಗೆ, ಮಂಗಳೂರು

ಸೈದ್ಧಾಂತಿಕ ವ್ಯತ್ಯಾಸ ಅರಿಯಬೇಕಾದುದು ಅಗತ್ಯ

'ಚುನಾವಣೆ ಯುದ್ಧ ಅಲ್ಲ, ಸ್ಪರ್ಧೆ ಅಷ್ಟೇ' ಎಂದಿದ್ದಾರೆ ನಟ ಶಿವರಾಜ್‌ಕುಮಾರ್ (ಪ್ರ.ವಾ., ಮೇ 6). ಇದು ಸರಿ. ಆದರೆ 'ಬಿಜೆಪಿಯವರು ನನ್ನನ್ನು ಸಂಪರ್ಕ ಮಾಡಿಲ್ಲ, ಕರೆದರೆ ಹೋಗುತ್ತಿದ್ದೆ' ಎಂದವರು ಹೇಳಿರುವುದು ಸರಿಯಲ್ಲ. ಏಕೆಂದರೆ ಅವರೀಗ ಕಾಂಗ್ರೆಸ್ ಪಕ್ಷದ ಪರವಾಗಿ ಮತ ಯಾಚಿಸಿದ್ದಾರೆ. ಅದು ಅವರ ವೈಯಕ್ತಿಕ ನಿರ್ಧಾರ. ಆದರೆ ಹಾಗೆಂದು ಅವರು ನಾಳೆ ಬಿಜೆಪಿ ಪರವಾಗಿ ಸಹ ಮತ ಯಾಚಿಸಿದರೆ ಅದರಿಂದ ಅವರ ವೈಯಕ್ತಿಕ ವರ್ಚಸ್ಸಿಗೆ ಧಕ್ಕೆ ಒದಗುತ್ತದೆ. ಏಕೆಂದರೆ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳಿಗೆ ತಮ್ಮದೇ ಆದ ಪ್ರತ್ಯೇಕ ತತ್ವ, ಸಿದ್ಧಾಂತಗಳಿವೆ. ಅವು ಪರಸ್ಪರ ವಿರುದ್ಧಾಂಶಗಳನ್ನು ಸಹ ಒಳಗೊಂಡಿವೆ. ಆದ್ದರಿಂದ ಸಾಮಾನ್ಯ ಮತದಾರರು ಸಹ ಈ ಸೈದ್ಧಾಂತಿಕ ವ್ಯತ್ಯಾಸವನ್ನು ಗ್ರಹಿಸಿ ಮತ ನೀಡಬೇಕಾದ ತುಂಬ ಎಚ್ಚರದ ಕಾಲವಿದು. ಅಂಥದ್ದರಲ್ಲಿ ಶಿವರಾಜ್‌ಕುಮಾರ್ ಅವರಂಥ ಹಿರಿಯ ನಟರು ಎರಡು ಪಕ್ಷಗಳ ಪರವಾಗಿ, ಅದೂ ಪರಸ್ಪರ ವಿರುದ್ಧದ ಸೈದ್ಧಾಂತಿಕ ದೃಷ್ಟಿಕೋನ ಹೊಂದಿರುವ ಪಕ್ಷಗಳ ಪರವಾಗಿ ಮತ ಯಾಚನೆಗೆ ಮುಂದಾಗುವುದು ಸರಿಯಲ್ಲ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಅಂದಿನಿಂದ ಇಂದಿನವರೆಗೆ ಸಿನಿಮಾ ನಂಟು



ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ಪ್ರಮುಖ ಚಲನಚಿತ್ರೋತ್ಸವಗಳು ದೇಶದ ವಿವಿಧ ನಗರಗಳಲ್ಲಿ ನಡೆಯತೊಡಗಿದಾಗ, ವರದಿಗಾರಿಕೆಗೆ ಹಿರಿಯ ಸಿಬ್ಬಂದಿಯನ್ನು ಕಳುಹಿಸುವುದನ್ನು ಅನೂಚಾನವಾಗಿ ಪಾಲಿಸಿಕೊಂಡು ಬಂದಿರುವ ಪತ್ರಿಕೆ 'ಪ್ರಜಾವಾಣಿ'. ಕೋಲ್ಕತ್ತ, ದೆಹಲಿಯ ಚಲನಚಿತ್ರೋತ್ಸವಗಳ ವರದಿಗಳಿಗೆ ಮುಖಪುಟದಲ್ಲಿ ಸ್ಥಳಾವಕಾಶ ಸಿಕ್ಕಿದ್ದೇ ಇದಕ್ಕೆ ಉದಾಹರಣೆ. ಈಗ 'ಸಿನಿ ಸಮ್ಮಾನ'ದ ಮೂಲಕ ಮತ್ತೊಂದು ಮೈಲುಗಲ್ಲು ಸ್ಥಾಪಿಸಲು ಹೊರಟಿದೆ. ಪತ್ರಿಕೆಯ 75 ವರ್ಷಗಳ ಸಿನಿಮಾ ನಂಟಿನ ಕುರಿತಾದ ಕಿರುನೋಟ ಇಲ್ಲಿದೆ...

ಪ್ರಜಾವಾಣಿಯು ಕನ್ನಡ ಚಲನಚಿತ್ರರಂಗದ ಸುದ್ದಿಯನ್ನಷ್ಟೆ ಅಲ್ಲದೆ ಬೇರೆ ಭಾಷೆಗಳ ಸಿನಿಮಾ ಚಟುವಟಿಕೆಗಳನ್ನು ಮೊದಲಿನಿಂದಲೂ ದಾಖಲಿಸುತ್ತಾ ಬಂದಿದೆ. ಅಂತರರಾಷ್ಟ್ರೀಯ ಸಿನಿಮೋತ್ಸವಗಳಿಗೆ ಸಂಬಂಧಿಸಿದ ಸುದ್ದಿಯನ್ನು1950ರ ದಶಕದಿಂದಲೂ ಗಂಭೀರವಾಗಿ ಪರಿಗಣಿಸಿಯೇ ಇದೆ.

ಪ್ರಮುಖ ಚಲನಚಿತ್ರೋತ್ಸವಗಳು ದೇಶದ ವಿವಿಧ ನಗರಗಳಲ್ಲಿ ನಡೆಯತೊಡಗಿದಾಗ, ವರದಿಗಾರಿಕೆಗೆ ಹಿರಿಯ ಸಿಬ್ಬಂದಿಯನ್ನು ಕಳುಹಿಸುವುದನ್ನು ಅನೂಚಾನವಾಗಿ ಪಾಲಿಸಿಕೊಂಡು ಬಂದಿರುವ ಪತ್ರಿಕೆ ಇದು. ಕೋಲ್ಕತ್ತ, ದೆಹಲಿಯ ಚಲನಚಿತ್ರೋತ್ಸವಗಳ ವರದಿಗಳಿಗೆ ಮುಖಪುಟದಲ್ಲಿ ಸ್ಥಳಾವಕಾಶ ಸಿಕ್ಕಿದ್ದೇ ಇದಕ್ಕೆ ಉದಾಹರಣೆ. ಗೋವಾದಲ್ಲಿ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ನಡೆಯತೊಡಗಿದಾಗಲೂ ಅಲ್ಲಿನ ವರದಿಗಳಿಗೆ ಆದ್ಯತೆಯನ್ನು ನೀಡಲಾಯಿತು. ಅಲ್ಲಿನ ಹತ್ತೂ ದಿನಗಳ ಪ್ರಮುಖ ಸಿನಿಮಾಗಳಿಗೆ ಸಂಬಂಧಿಸಿದ ವರದಿಗಳನ್ನಷ್ಟೆ ಅಲ್ಲದೆ, ವಿಶ್ಲೇಷಣೆ, ಸಂವಾದದಂತಹ ಸುದ್ದಿಯೂ ನಿಯಮಿತವಾಗಿ ಪ್ರಕಟವಾದವು. ಈಗಲೂ ಚಿತ್ರೋತ್ಸವದ ಸುದ್ದಿಗೆ ಪತ್ರಿಕೆ ಸಾಕಷ್ಟು ಸ್ಥಳಾವಕಾಶ ಕಲ್ಪಿಸುತ್ತಿದೆ.

ಗಾಂಭೀರ್ಯದ ವಿಷಯವಾಯಿತು. ಇನ್ನು ಗ್ಲಾಮರ್ ಸಮಾಚಾರ. 1985ರಿಂದಲೇ ನಾಯಕಿಯರ ಬೋಲ್ಡ್ ಎನಿಸುವಂತಹ ಛಾಯಾಚಿತ್ರಗಳನ್ನೂ ಪತ್ರಿಕೆ ಮುದ್ರಿಸಲಾರಂಭಿಸಿತು. 1985ರ ಸಂಚಿಕೆಯ ಒಂದೇ ಪುಟದಲ್ಲಿ 'ಎರಡು ದಂಡೆಯ ಮೇಲೆ' ಸಿನಿಮಾದಲ್ಲಿನ ಜಯಮಾಲಿನಿ ಚಿತ್ರ ಹಾಗೂ 'ಮನ ಗೆದ್ದ ಮಗ' ಚಲನಚಿತ್ರದಲ್ಲಿನ ಅನುರಾಧಾ ಅವರ ಬೋಲ್ಡ್ ಎನ್ನಬಹುದಾದ ಫೋಟೊ ಪ್ರಕಟವಾಗಿದ್ದವು. ಆ ಕಾಲಘಟ್ಟದಲ್ಲಿ ಕ್ಯಾಬರೆ ನೃತ್ಯದ ಮೂಲಕ ಸಿನಿಮಾಗೆ ಬೇಕಾದ ಗ್ಲಾಮರ್‌ಗೆ ಈ ನಟಿಯರು ಕಾಣ್ಕೆ ಸಲ್ಲಿಸಿದ್ದನ್ನು ಸ್ಮರಿಸಬಹುದು.

ಮುಂಬೈ ವರದಿಗಾರರಿಂದಲೂ ಹಿಂದಿ ಚಿತ್ರರಂಗದ ಪ್ರಮುಖ ವಿದ್ಯಮಾನಗಳನ್ನು ಗ್ಲಾಮರ್ ಸಂಗತಿಗಳ ಸಮೇತ ಪತ್ರಿಕೆ ಪ್ರಕಟಿಸುತ್ತಿತ್ತು. 1954ರಲ್ಲಿ ಭಾರತದ ಸಿನಿಮಾದವರ ನಿಯೋಗ ಸೋವಿಯೆತ್ ರಷ್ಯಾಗೆ ಭೇಟಿ ನೀಡಿತ್ತು. ರಾಜ್ ಕಪೂರ್, ನರ್ಗೀಸ್, ವಿಜಯ್ ಭಟ್, ಸಲೀಲ್ ಚೌಧರಿ, ಬಲರಾಜ್ ಸಹಾನಿ, ಹೃಷಿಕೇಶ್ ಮುಖರ್ಜಿ ಅವರಂತಹ ಘಟಾನುಘಟಿಗಳನ್ನು ಒಳಗೊಂಡಿದ್ದ ನಿಯೋಗ ಅದು. ಅಲ್ಲಿಗೆ ನಿಯೋಗ ಭೇಟಿ ನೀಡಿ ಬಂದಮೇಲೆ, ಅವರೆಲ್ಲರ ಅನುಭವ-ಸಾರವನ್ನು ಪತ್ರಿಕೆ ಸವಿವರವಾಗಿ ಪ್ರಕಟಿಸಿತ್ತು.

ಬಾಲಿವುಡ್ ನಟಿ ಮಂದಾಕಿನಿ ನೀಡಿದ್ದ ಸಂದರ್ಶನ ಕೂಡ ಆ ಕಾಲಘಟ್ಟದಲ್ಲಿ ಸಂಚಲನ ಮೂಡಿಸಿತ್ತೆಂದು ಹಿರಿಯ ವರದಿಗಾರರು ಸ್ಮರಿಸಿಕೊಳ್ಳುತ್ತಾರೆ. 'ಸೌಂದರ್ಯ ಪ್ರದರ್ಶನ ಅಶ್ಲೀಲವಲ್ಲ' ಎನ್ನುವುದು ಮಂದಾಕಿನಿ ಸಂದರ್ಶನದ ಶೀರ್ಷಿಕೆ. ಮುಂಬೈನ ವರದಿಗಾರರು ಆ ಸಂದರ್ಶನವನ್ನು ಮಾಡಿದ್ದರು. ಭಾರತೀಯ ಚಿತ್ರರಂಗವು 1970ರ ದಶಕದಲ್ಲಿ ಕರ್ನಾಟಕದ ಕಡೆಗೆ ನೋಡತೊಡಗಿತು.

ಹೊಸ ಅಲೆಯ ಸಿನಿಮಾಗಳು ಸದ್ದುಮಾಡಿದ್ದು ಆಗಲೇ. 'ಸಂಸ್ಕಾರ', 'ಘಟಶ್ರಾದ್ಧ' ರೀತಿಯ ಸಿನಿಮಾಗಳನ್ನು ದೇಶದ ವಿವಿಧ ಭಾಷೆಗಳ ಸಿನಿಮಾ ವಿದ್ಯಾರ್ಥಿಗಳೂ ಗಮನಿಸತೊಡಗಿದ್ದರು. ಆಗ ಸಿನಿಮಾ ಸಂಸ್ಕೃತಿ ಕುರಿತ ಸಂವಾದಗಳನ್ನೆಲ್ಲ ಪತ್ರಿಕೆ ವ್ಯಾಪಕವಾಗಿ ಪ್ರಕಟಿಸಿತ್ತು. ಇದು ಕನ್ನಡ ಚಿತ್ರರಂಗವನ್ನು ಇನ್ನೂ ಒಂದು ಹಂತ ಮೇಲಕ್ಕೆ ಕೊಂಡೊಯ್ಯಲು ಕಾರಣವಾಗಿತ್ತು ಎಂದು ಖುದ್ದು ಗಿರೀಶ ಕಾಸರವಳ್ಳಿ ಗುರುತಿಸುತ್ತಾರೆ.


ಈಗ 'ಪ್ರಜಾವಾಣಿ ಸಿನಿ ಸಮ್ಮಾನ'ವನ್ನು ಪತ್ರಿಕೆ ಪ್ರಾರಂಭಿಸುತ್ತಿದೆ. ಪ್ರಮುಖ ತೀರ್ಪುಗಾರರಲ್ಲಿ ಗಿರೀಶ ಕಾಸರವಳ್ಳಿ ಅವರೂ ಇರುವುದು ಹೆಗ್ಗಳಿಕೆ. ಜೂನ್ 3ರಂದು ಸಿನಿ ಸಮ್ಮಾನದ ಅದ್ದೂರಿ ಸಮಾರಂಭ ನಡೆಯಲಿದೆ. ಚಿತ್ರರಂಗದ ಪ್ರಮುಖರೆಲ್ಲ ಕಾರ್ಯಕ್ರಮಕ್ಕೆ ಸಾಕ್ಷಿಯಾಗಲಿದ್ದಾರೆ.



ಇದು ಸಿಹಿಯ ಸಮ್ಮಾನ


ನನ್ನ 'ಪ್ರಜಾವಾಣಿ'ಯ ಸಂಬಂಧ ಅವಿನಾಭಾವವಾದದ್ದು. ಚಿತ್ರರಂಗದಲ್ಲಿ ನಾನು ಏನೂ ಅಲ್ಲದ ಸಮಯದಲ್ಲಿ ನನ್ನನ್ನು ಗುರುತಿಸಿದ್ದು 'ಪ್ರಜಾವಾಣಿ'. ಇದು ನನ್ನ ಪಾಲಿಗೆ ಕೇವಲ ಒಂದು ಪತ್ರಿಕೆಯಲ್ಲ. ನನ್ನ ಒಡನಾಡಿ, ಬಂಧು. ಬೆಳಗಿನ ವೇಳೆ ಪತ್ರಿಕೆ ತಿರುವಿ ಹಾಕದಿದ್ದರೆ ಒಂದು ರೀತಿ ಅಪೂರ್ಣ ಬೆಳಗು. ಹೊರಗಡೆ ಚಿತ್ರೀಕರಣದಲ್ಲಿದ್ದಾಗ ಕೇವಲ ಸಿನಿಮಾ ಸುದ್ದಿಗಳಲ್ಲದೆ, ಹೊರಜಗತ್ತಿನ ಅರಿವು ಮೂಡಿಸುವುದು ಇದೇ ಪತ್ರಿಕೆ. ನಾಡಿನ ಹೆಮ್ಮೆಯ ಪತ್ರಿಕೆ 75 ವರ್ಷಗಳನ್ನು ಪೂರೈಸಿರುವುದಕ್ಕೆ ಮೊದಲಿಗೆ ಅಭಿನಂದನೆಗಳು. ಈ ಸಮಯದಲ್ಲಿ 'ಸಿನಿ ಸಮ್ಮಾನ' ಕಾರ್ಯಕ್ರಮ ಪ್ರಾರಂಭಿಸಿ ಕನ್ನಡ ಚಿತ್ರರಂಗದ ಪ್ರತಿಭೆಗಳನ್ನು ಗುರುತಿಸಿ, ಗೌರವಿಸಲು ಹೊರಟಿರುವುದು ಖುಷಿಯ ವಿಷಯ. ನನ್ನ ಎಲ್ಲ ಸಿನಿಮಾಗಳಿಗೂ ಪತ್ರಿಕೆ ಉತ್ತಮ ಬೆಂಬಲ ನೀಡಿದೆ. ಚಿತ್ರರಂಗದ ಅನೇಕ ಮೈಲುಗಲ್ಲುಗಳಿಗೆ ಪತ್ರಿಕೆ ಸಾಕ್ಷಿಯಾಗಿದೆ. ಹೀಗಾಗಿ ಪತ್ರಿಕೆಯ ಚಿತ್ರರಂಗದ ನಂಟಿಗೂ ದೊಡ್ಡ ಇತಿಹಾಸವಿದೆ. ನಾಡಿನ ವಿಶ್ವಾಸಾರ್ಹ ಪತ್ರಿಕೆ 'ಪ್ರಜಾವಾಣಿ' ನೀಡುವ ಸಮ್ಮಾನಕ್ಕೆ ಅದರದ್ದೇ ಆದ ಗೌರವ, ಘನತೆ ಇರುತ್ತದೆ ಎಂಬ ನಂಬಿಕೆ ನನ್ನದು. ಇಲ್ಲಿನ ಬಹುಹಂತದ ಆಯ್ಕೆ ಪ್ರಕ್ರಿಯೆ, ತೀರ್ಪುಗಾರರ ಮಂಡಳಿಯನ್ನು ನೋಡಿದರೆ ಆಯ್ಕೆಯ ಗಾಂಭೀರ್ಯ ತಿಳಿಯುತ್ತದೆ. ಇದು ಹತ್ತರಲ್ಲಿ ಹನ್ನೊಂದನೆಯ ಪ್ರಶಸ್ತಿ ಆಗದೆ ಪ್ರತಿಭಾವಂತರನ್ನು ಗುರುತಿಸಿ, ಗೌರವಿಸುವ ವೇದಿಕೆಯಾಗಲಿದೆ ಎಂಬ ಭರವಸೆಯಿದೆ. ಪ್ರತಿ ವರ್ಷವೂ ಈ ಸಿಹಿಯ ಸಮ್ಮಾನ ನಡೆಯಲಿ.

ಗಣೇಶ್, ನಟ




1989ರಲ್ಲಿ ತೆರೆಕಂಡ ಕನ್ನಡದ ಮೊದಲ 3ಡಿ ಚಿತ್ರ

ನ್ಯಾಯಬದ್ಧವಾಗಿರುತ್ತದೆ



ಚಿಕ್ಕ ಮಗುವಾಗಿರುವಾಗಿನಿಂದ ನೋಡಿಕೊಂಡು ಬಂದ ಮೊದಲ ಪತ್ರಿಕೆ 'ಪ್ರಜಾವಾಣಿ'. ಆವತ್ತಿನಿಂದ ಇವತ್ತಿನ ತನಕ ಅದೇ ಮಾನದಂಡ, ನಂಬಿಕೆ ಉಳಿಸಿಕೊಂಡು ಬಂದಿದೆ. ಪತ್ರಿಕೆ ಕುರಿತಾಗಿ, ಅದರಲ್ಲಿನ ಸುದ್ದಿಗಳ ಕುರಿತಾಗಿ ಸಾಕಷ್ಟು ನಂಬಿಕೆ ಇದೆ. ಇಂತಹ ಪತ್ರಿಕೆ 'ಸಿನಿ ಸಮ್ಮಾನ' ಎನ್ನುವ ಚಿತ್ರರಂಗವನ್ನು ಗೌರವಿಸುವ ಕಾರ್ಯಕ್ರಮ ನಡೆಸುತ್ತಿರುವುದು ಬಹಳ ಒಳ್ಳೆಯ ವಿಷಯ. ಈ ಸಮ್ಮಾನ ನ್ಯಾಯಬದ್ಧ ಮತ್ತು ತೂಕ ಬದ್ಧವಾಗಿರುತ್ತದೆ ಎಂಬ ನಂಬಿಕೆ. ಇಂತಹ ಪ್ರಶಸ್ತಿಗಳನ್ನು ತೆಗೆದುಕೊಳ್ಳುವುದಕ್ಕೆ ಕಲಾವಿದರಿಗೆ ಖುಷಿಯಾಗುತ್ತದೆ. ಯಾಕೆಂದರೆ ಒಂದು ಪತ್ರಿಕೆ ಈ ರೀತಿಯ ನಂಬಿಕೆ ಉಳಿಸಿಕೊಂಡಿದೆ. ತೀರ್ಪುಗಾರರ ಮಂಡಳಿ ಗಮನಿಸಿದರೆ ಎಲ್ಲರೂ ಚಿತ್ರರಂಗದ ಕುರಿತು ತಿಳಿದಿರುವವರು, ಹಿರಿಯರೇ ಇದ್ದಾರೆ. ಅರ್ಹರು ಕುಳಿತಿದ್ದಾರೆ. ಅಂಥವರು ಮಾಡುವ ಆಯ್ಕೆಗಳು ಖಂಡಿತವಾಗಿಯೂ ಸಮಂಜಸವಾಗಿರುತ್ತದೆ. ಬಹುಶಃ 'ಪ್ರಜಾವಾಣಿ'ಗೆ 50 ವರ್ಷ ತುಂಬಿದಾಗಲೇ ಈ ಸಮ್ಮಾನ ಶುರುವಾಗಬೇಕಿತ್ತು. ಈಗಲಾದರೂ ಆಗಿದೆ. ಚಿತ್ರರಂಗಕ್ಕೆ ಪ್ರೋತ್ಸಾಹ ಸಿಗುತ್ತದೆ. ಇಂತಹ ಹೆಜ್ಜೆ ಇಟ್ಟ ಪತ್ರಿಕೆಗೆ ಅಭಿನಂದನೆಗಳು.

ದೇವರಾಜ್, ನಟ



ಪ್ರೋತ್ಸಾಹದಾಯಕ ಹೆಜ್ಜೆ

ನಾಡಿನ ಅತ್ಯಂತ ಹಳೆಯ ಮತ್ತು ವಿಶ್ವಾಸಾರ್ಹ ಪತ್ರಿಕೆ 'ಪ್ರಜಾವಾಣಿ'. ಸಿನಿಮಾ ವಿಷಯದಲ್ಲಿ, ಕಲಾವಿದರನ್ನು ಪ್ರೋತ್ಸಾಹಿಸುವಲ್ಲಿ ಪತ್ರಿಕೆ ಕೊಡುಗೆ ಅಪಾರವಾದುದು. ಇಂತಹ ಪತ್ರಿಕೆ ಚಿತ್ರರಂಗವನ್ನು ಸಮ್ಮಾನಿಸುತ್ತಿರುವುದು ಪ್ರೋತ್ಸಾಹದಾಯಕ ಹೆಜ್ಜೆಯಾಗಿದೆ. ಪ್ರತಿಭೆಗಳನ್ನು ಗುರುತಿಸಿ, ಗೌರವಿಸುವ ನಿಟ್ಟಿನಲ್ಲಿ ಹಮ್ಮಿಕೊಂಡಿರುವ ಈ ಕಾರ್ಯಕ್ರಮ ನಿಜವಾಗಿಯೂ ಚಿತ್ರರಂಗಕ್ಕೆ ಖುಷಿಯ ಸಂಗತಿಯಾಗಿದೆ. ಅತ್ಯಂತ ಅರ್ಹ ತೀರ್ಪುಗಾರರೊಂದಿಗೆ, ಉತ್ತಮ ಮಾನದಂಡಗಳೊಂದಿಗೆ, ಹಲವು ಸ್ತರಗಳಲ್ಲಿ ಆಯ್ಕೆ ಪ್ರಕ್ರಿಯೆ ನಡೆಸುತ್ತಿರುವುದು ಸಮ್ಮಾನದ ಮೌಲ್ಯವನ್ನು ತಿಳಿಸುತ್ತದೆ. ಅನೇಕ ತಂತ್ರಜ್ಞರು, ಕಲಾವಿದರ ಪಾಲಿಗೆ ಇದೊಂದು ಆಶಾದಾಯಕ ಬೆಳವಣಿಗೆ. ಕಾರ್ಯಕ್ರಮ ಯಶಸ್ವಿಯಾಗಿ, ಪ್ರತಿ ವರ್ಷವೂ ನಡೆಯುವಂತಾಗಲಿ. ಇನ್ನಷ್ಟು ಹೊಸ ಪ್ರತಿಭೆಗಳಿಗೆ ವೇದಿಕೆಯಾಗಲಿ. ಇಂತಹ ಮೌಲ್ಯಯುತ ಕಾರ್ಯಕ್ರಮಗಳಿಗೆ ನಮ್ಮೆಲ್ಲರ ಸಹಕಾರ ಸದಾ ಇರುತ್ತದೆ.

ಮಾಲಾಶ್ರೀ, ನಟಿ

ಕಲಾವಿದರಿಗೆ ಮೈಲುಗಲ್ಲು




ಮೊದಲನೆಯದಾಗಿ 'ಪ್ರಜಾವಾಣಿ' 75 ವರ್ಷಗಳನ್ನು ಪೂರೈಸಿರುವುದಕ್ಕೆ ವೈಯಕ್ತಿಕವಾಗಿ ಅಭಿನಂದನೆಗಳು. ಚಿತ್ರರಂಗದೊಂದಿಗೆ, ಚಿತ್ರರಂಗದ ಹೊಸಬರೊಂದಿಗೆ 'ಪ್ರಜಾವಾಣಿ'ಯ ನಂಟು ಅನ್ಯೋನ್ಯವಾಗಿದೆ. 'ಪ್ರಜಾವಾಣಿ'ಯಲ್ಲಿ ಹೊಸಬರಿಗೆ ಬೆಂಬಲ, ಪ್ರೋತ್ಸಾಹ ನೀಡುವ ಲೇಖನಗಳು ಸಾಕಷ್ಟು ಬಂದಿವೆ. ನನ್ನ ಎಷ್ಟೋ ಸಿನಿಮಾ ವಿಷಯಗಳನ್ನು ಪತ್ರಿಕೆ ಜನಕ್ಕೆ ತಲುಪಿಸಿದೆ. ನನ್ನಂತಹ ಅದೆಷ್ಟೋ ಹೊಸ ಕಲಾವಿದರ ವೃತ್ತಿ ಬೆಳವಣಿಗೆಗೆ ಪತ್ರಿಕೆ ಒಂದು ರೀತಿಯಲ್ಲಿ ಅಡಿಪಾಯವಾಗಿದೆ. ಅದಕ್ಕಾಗಿ ಪತ್ರಿಕೆಗೆ ಧನ್ಯವಾದಗಳು. ಈ ವರ್ಷದಿಂದ ಸಿನಿ ಸಮ್ಮಾನ ಎಂಬ ಕಾರ್ಯಕ್ರಮ ನಡೆಸುತ್ತಿರುವುದು ಬಹಳ ಉತ್ತಮವಾದ ಹೆಜ್ಜೆ. ಇದು ಕಲಾವಿದರ ಬದುಕಿನಲ್ಲಿ ಮೈಲುಗಲ್ಲಾಗುವ ಪ್ರಶಸ್ತಿ. ಇಲ್ಲಿ ಪ್ರಶಸ್ತಿ ತೆಗೆದುಕೊಳ್ಳುವುದು, ಕಾರ್ಯಕ್ರಮದಲ್ಲಿ ಭಾಗಿಯಾಗುವುದು ಕಲಾವಿದರಿಗೆ ಜೀವನ ಪೂರ್ತಿ ನೆನಪಿನಲ್ಲಿ ಉಳಿಯುವ ಸಂಗತಿಗಳು. ಹುಟ್ಟಿನಿಂದಲೇ ಈ ಪತ್ರಿಕೆ ಹೆಸರು ಕೇಳಿಕೊಂಡು, ಓದಿಕೊಂಡು ಬೆಳೆದಿದ್ದೇವೆ. ಇಂಥ ಪತ್ರಿಕೆ ನಮ್ಮಂತಹ ಅನೇಕ ಹೊಸ ಪ್ರತಿಭೆಗಳನ್ನು ಗುರುತಿಸಿ, ಗೌರವಿಸುತ್ತಿದೆ ಎಂಬುದಕ್ಕಿಂತ ಹೆಮ್ಮೆಯ ಸಂಗತಿ ಮತ್ತೇನಿದೆ? ಇದು ಖಂಡಿತ ನಮ್ಮ ಕಾರ್ಯಕ್ರಮ.

ಅಂಕಿತಾ ಅಮರ್, ನಟಿ

ಸಿನಿ ಬಿಟ್ಸ್

ಮತ್ತೆ ಬಂದ 'ಹುಲಿಯಾ'



ಚಂದ್ರಕೀರ್ತಿ

ಚಂದನವನದಲ್ಲಿ ಸೂಪರ್‌ಹಿಟ್ ಚಿತ್ರಗಳ ಶೀರ್ಷಿಕೆ ಮರುಬಳಕೆ ಆಗುವುದು ಹೊಸದೇನಲ್ಲ. ಈಗ ಡೈನಾಮಿಕ್ ಸ್ಟಾರ್ ದೇವರಾಜ್ ನಟನೆಯ 'ಹುಲಿಯಾ' ಚಿತ್ರದ ಶೀರ್ಷಿಕೆ ಮರುಬಳಕೆ ಮಾಡಿಕೊಂಡು ಹೊಸ ಚಿತ್ರವೊಂದು ತಯಾರಾಗುತ್ತಿದೆ. 'ತೂತುಮಡಿಕೆ' ಸಿನಿಮಾ ಮೂಲಕ ಭರವಸೆ ಮೂಡಿಸಿದ್ದ ನಿರ್ದೇಶಕ, ನಟ ಚಂದ್ರಕೀರ್ತಿ ಎರಡನೇ ಸಿನಿಮಾಗೆ 'ಹುಲಿಯಾ' ಎಂಬ ಶೀರ್ಷಿಕೆ ಇಡಲಾಗಿದೆ.

'ಸಿಲಿಕಾನ್ ಸಿಟಿ', 'ಕಿಸ್', 'ಮೂಕವಿಸ್ಮಿತ', 'ಬೆಂಕಿ' ಸೇರಿದಂತೆ ಹಲವು ಚಿತ್ರಗಳಲ್ಲಿ ನಟಿಸಿರುವ ಚಂದ್ರಕೀರ್ತಿ 'ತೂತುಮಡಿಕೆ' ಸಿನಿಮಾ ಮೂಲಕ ನಿರ್ದೇಶಕರಾಗಿ ಬಡ್ತಿ ಪಡೆದಿದ್ದರು. 'ಹುಲಿಯಾ' ಚಿತ್ರದ ಮೂಲಕ ಪ್ರೀತಿ ಹಾಗೂ ಆ್ಯಕ್ಷನ್ ಕಥೆಯನ್ನು ಆಯ್ಕೆ ಮಾಡಿಕೊಂಡಿದ್ದು, ನಿರ್ದೇಶನದ ಜೊತೆಗೆ ಚಂದ್ರಕೀರ್ತಿ ನಾಯಕನಾಗಿಯೂ ನಟಿಸುತ್ತಿದ್ದಾರೆ.

'ಹುಲಿಯಾ' ಪೋಸ್ಟರ್‌ನಲ್ಲಿ ಅವರು ರಗಡ್ ಆಗಿ ಕಾಣಿಸಿಕೊಂಡಿದ್ದು, 'ತೂತುಮಡಿಕೆ' ಸಿನಿಮಾ ನಿರ್ಮಾಣ ಮಾಡಿದ್ದ ಸರ್ವತಾ ಸಿನಿ ಗ್ಯಾರೇಜ್, ಮಧು ರಾವ್ ಹಾಗೂ ವಸಂತ್ ವಲ್ಲಭ್ ನಿರ್ಮಾಪಕರು. ಸ್ವಾಮಿನಾಥನ್ ಆರ್. ಕೆ. ಸಂಗೀತ, ಭಜರಂಗಿ, ವೇದ ಹಾಗೂ 'ಬೆಲ್ ಬಾಟಂ' ಸಂಭಾಷಣೆಗಾರ ರಘು ನಿಡುವಳ್ಳಿ ಮಾತು ಚಿತ್ರಕ್ಕಿದೆ.



ಗುಳಿಗ ದೈವಕ್ಕೆ ಕ್ಷೇತ್ರ ನಿರ್ಮಾಣ

ಕಾಂತಾರ ಚಿತ್ರದ ಯಶಸ್ಸಿನ ಬಳಿಕ ದೈವ, ನೇಮ, ಕೋಲದತ್ತ ಚಿತ್ರರಂಗ ದೃಷ್ಟಿ ಹಾಯಿಸುತ್ತಿರುವುದು ಹೆಚ್ಚಾಗಿದೆ. 'ಕರಿ ಹೈದ ಕೊರಗಜ್ಜ' ಕೂಡ ದೈವದ ಕಥೆಯನ್ನು ಹೊಂದಿರುವ ಚಿತ್ರ. ನಟ ಕಬೀರ್ ಬೇಡಿ, ನಟಿ ಶ್ರುತಿ, ಭವ್ಯ ಅಭಿನಯದ ಚಿತ್ರದ ಸೆಟ್‌ನಲ್ಲಿ ದೈವದ ಒಂದಷ್ಟು ಪವಾಡಗಳು ನಡೆದಿದೆ ಎಂದು ಈ ಹಿಂದೆ ಚಿತ್ರತಂಡ ಹೇಳಿಕೊಂಡಿತ್ತು. 'ಚಿತ್ರೀಕರಣಕ್ಕಾಗಿ ಸೆಟ್ ಹಾಕಿದ್ದ ಜಾಗ 'ಗುಳಿಗ' ದೈವದ ನೆಲೆಯಾಗಿತ್ತು. ಹೀಗಾಗಿ ಸೆಟ್‌ನಲ್ಲಿ ಸಾಕಷ್ಟು ಪವಾಡಗಳು ನಡೆದು, ಇದೀಗ ಚಿತ್ರತಂಡ ದೈವಕ್ಕೆ ಕ್ಷೇತ್ರ ನಿರ್ಮಾಣ ಮಾಡಿಕೊಟ್ಟಿದೆ. ದೈವಸ್ಥಾನದ ಕಾರ್ಯ ಮುಗಿಸಿ, ಗುಳಿಗ ಹಾಗೂ ಕಲ್ಲುರ್ಟಿ ದೈವಗಳಿಗೆ ಅದ್ದೂರಿಯ ಕೋಲ ಸೇವೆಯನ್ನು ನಡೆಸಲಾಗಿದೆ' ಎಂದು ಚಿತ್ರದ ನಿರ್ದೇಶಕ ಸುಧೀರ್ ಅತ್ತಾವರ್ ಹೇಳಿದ್ದಾರೆ. ಚಿತ್ರದಲ್ಲಿ ಗುಳಿಗ ದೈವದ ಪಾತ್ರವನ್ನು ಹಾಲಿವುಡ್- ಬಾಲಿವುಡ್ ನಟ ಹಾಗೂ ಕೊರಿಯೋಗ್ರಾಫರ್ ಸಂದೀಪ್ ಸೋಪರ್ಕರ್ ನಿರ್ವಹಿಸಿದ್ದು, ಮಂಗಳೂರಿನ ಸೋಮೇಶ್ವರ ಸಮುದ್ರ ಕಿನಾರೆಯಲ್ಲಿ ಗುಳಿಗ ದೈವದ ಚಿತ್ರೀಕರಣಗೊಂಡಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಗೀತಾ' ಹೆಸರಿನ ತೆಲುಗು ಭಾಷೆಯ ಪುಸ್ತಕವನ್ನು ವಿತರಣೆ ಮಾಡುತ್ತಿದ್ದ ಹುಡುಗನೊಬ್ಬನನ್ನು ಕೆಲವರು ಹಿಡಿದು ಪ್ರಶ್ನಿಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಇತ್ತೀಚೆಗೆ ಹರಿದಾಡುತ್ತಿದೆ. ಸುರಜಿತ್ ದಾಸ್‌ಗುಪ್ತಾ ಎಂಬ ಟ್ವಿಟರ್ ಬಳಕೆದಾರರು ಈ ವಿಡಿಯೊ ಹಂಚಿಕೊಂಡಿದ್ದಾರೆ. 'ಭಗವದ್ಗೀತೆ ಹೆಸರಿನ ನಕಲಿ ಪುಸ್ತಕವನ್ನು ಕ್ರಿಶ್ಚಿಯನ್ನರು ಮಾರಾಟ ಮಾಡುವಾಗ ಸಿಕ್ಕಿಬಿದ್ದಿದ್ದಾರೆ. ಮುಖಪುಟದಲ್ಲಿ ಗೀತಾ ಎಂದಿದ್ದು, ಒಳಪುಟಗಳಲ್ಲಿ ಪವಿತ್ರ ಕುರ್‌ಆನ್ ಮತ್ತು ಪವಿತ್ರ ಬೈಬಲ್‌ನ ಅಧ್ಯಾಯಗಳಿವೆ' ಎಂದು ಅವರು ಬರೆದಿದ್ದಾರೆ. ಕೋಲ್ಕತ್ತ ಇಸ್ಕಾನ್‌ನ ಉಪಾಧ್ಯಕ್ಷ ರಾಧಾರಮಣ ದಾಸ್ ಅವರು 'ಹಿಂದೂಗಳೇ ಎಚ್ಚರ. ಸನಾತನ ಧರ್ಮ ಕೆಟ್ಟದ್ದು ಎಂಬುದಾಗಿ ಬಿಂಬಿಸುವ ಪುಸ್ತಕಗಳನ್ನು ಹಿಂದೂಯೇತರರು ಪ್ರಕಟಿಸುತ್ತಿದ್ದಾರೆ' ಎಂದು ಟ್ವೀಟ್ ಮಾಡಿದ್ದಾರೆ. ಆದರೆ ಈ ಆರೋಪಗಳು ಸುಳ್ಳು.

ವಿಡಿಯೊದಲ್ಲಿರುವ ಪುಸ್ತಕವು ಸ್ವಯಂಘೋಷಿತ ದೇವಮಾನವ ರಾಮ್‌ಪಾಲ್ ಮಹಾರಾಜ್ ಅವರು ಬರೆದಿರುವ ಪುಸ್ತಕವೇ ಹೊರತು ಭಗವದ್ಗೀತೆ ಪುಸ್ತಕ ಅಲ್ಲ ಎಂದು 'ದಿ ಲಾಜಿಕಲ್ ಇಂಡಿಯನ್' ಫ್ಯಾಕ್ಟ್ ಚೆಕ್ ಪ್ರಕಟಿಸಿದೆ. 'ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಎಂಬ ಪ್ರತ್ಯೇಕ ಧರ್ಮಗಳಿಲ್ಲ. ಮಾನವೀಯತೆಯೇ ನಮ್ಮ ಧರ್ಮ' ಎಂದು ಅವರು ಪುಸ್ತಕದಲ್ಲಿ ಹೇಳುತ್ತಾರೆ. ರಾಮ್‌ಪಾಲ್ ಅವರ ವೆಬ್‌ಸೈಟ್‌ನಲ್ಲಿ ಮಾತ್ರ ಈ ಪುಸ್ತಕಗಳು ಮಾರಾಟಕ್ಕಿವೆ. ತೆಲುಗು ಸೇರಿದಂತೆ ಎಲ್ಲ ಭಾಷೆಗಳಲ್ಲಿಯೂ ಲಭ್ಯವಿವೆ. ಈ ಪುಸ್ತಕದಲ್ಲಿ ಎಲ್ಲಿಯೂ ಹಿಂದೂ ಧರ್ಮವನ್ನು ಅವಹೇಳನ ಮಾಡುವ ಅಂಶಗಳು ಇಲ್ಲ. ಕ್ರಿಶ್ಚಿಯನ್ನರು ಅಥವಾ ಮುಸ್ಲಿಮರು ಈ ಪುಸ್ತಕದ ಲೇಖಕರಲ್ಲ ಎಂದು 'ದಿ ಲಾಜಿಕಲ್ ಇಂಡಿಯನ್' ತನ್ನ ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ದುಡುಕಿಲ್ಲದ ತಿದ್ದುವಿಕೆ

ಒಡೆಯದಿರು ತಳಹದಿಯ ಸರಿಪಡಿಪೆನದನೆಂದು |
ಸಡಲಿಸುವ ನೀಂ ಮರಳಿ ಕಟ್ಟಲರಿತವನೇಂ? ||
ಗಿಡವ ಸರಿ ಬೆಳೆಯಿಸಲು ಬುಡವ ಕೀಳ್ವುದು ಸರಿಯೆ?
ದುಡುಕದಿರು ತಿದ್ದಿಕೆಗೆ – ಮಂಕುತಿಮ್ಮ || 878 ||


ಪದ-ಅರ್ಥ: ಸರಿಪಡಿಪೆನದನೆಂದು = ಸರಿಪಡಿಪೆನು(ಸರಿಮಾಡುವೆನು) + ಅದನು + ಎಂದು, ನೀಂ = ನೀನು, ಕಟ್ಟಲರಿತವನೇಂ = ಕಟ್ಟಲು + ಅರಿತವನೇಂ(ತಿಳಿಯದವನೇ), ತಿದ್ದಿಕೆಗೆ = ತಿದ್ದುವಿಕೆಗೆ

ವಾಚ್ಯಾರ್ಥ: ಕಟ್ಟಡದ ತಳಹದಿಯ ಸರಿ ಮಾಡುತ್ತೇನೆ ಎಂದುಕೊಂಡು ಅದನ್ನು ಒಡೆಯಬೇಡ. ತಳಹದಿಯನ್ನು ಸಡಿಲ ಮಾಡಿದ ನಿನಗೆ ಅದನ್ನು ಮರಳಿ ಕಟ್ಟುವುದು ತಿಳಿದಿದೆಯೆ? ಗಿಡವನ್ನು ಸರಿಯಾಗಿ ಬೆಳೆಸುತ್ತೇನೆಂದು ಅದನ್ನು ಬೇರುಸಹಿತ ಕೀಳುವುದು ಸರಿಯೆ? ತಿದ್ದುವಿಕೆಗೆ ದುಡುಕಬೇಡ.

ವಿವರಣೆ: ಸ್ವಾಮಿ ವಿವೇಕಾನಂದರು ಹೇಳುತ್ತಾರೆ, ನಮ್ಮಲ್ಲಿ ಎರಡು ತರಹದ ಸಮಾಜೋದ್ಧಾರಕರಿದ್ದಾರೆ. ಮೊದಲನೆಯವರು ಕ್ರಾಂತಿಯನ್ನು ಬಯಸುವವರು. ಪ್ರಪಂಚದಲ್ಲಿ ಯಾವುದೂ ಸರಿಯಿಲ್ಲ, ಯಾರೂ ಸರಿಯಿಲ್ಲ, ಎಲ್ಲವನ್ನು ಅಮೂಲಾಗ್ರವಾಗಿ ಬದಲಿಸಲೇಬೇಕು, ಮೊದಲು ಇರುವುದನ್ನು ಕಿತ್ತಿ ಹಾಕಿ, ನೆಲಸಮ ಮಾಡಿ, ನಂತರ ಹೊಸ ಸ್ವರ್ಗವನ್ನು ಕಟ್ಟೋಣ ಎನ್ನುವವರು ಇವರು. ಎರಡನೆಯವರು, ಪ್ರಪಂಚ ಒಂದು ಅಶ್ವತ್ಥವೃಕ್ಷವಿದ್ದಂತೆ. ಅಷ್ಟು ವರ್ಷಗಳಿಂದ ಬೆಳೆದು ಬಂದಿದೆ, ಅದನ್ನು ಕ್ಷಣ ಮಾತ್ರದಲ್ಲಿ ತೆಗೆದು ಹಾಕುವುದು ಅಸಾಧ್ಯ ಮತ್ತು ಅನವಶ್ಯಕ, ಅದನ್ನು ಕ್ರಮಕ್ರಮವಾಗಿ ಬದಲಿಸೋಣ, ಅದರಲ್ಲಿ ಆತುರತೆ ಬೇಡ, ಮೊದಲು ಒಂದು ಪರ್ಯಾಯ ವ್ಯವಸ್ಥೆಯನ್ನು ಮಾಡಿ, ಅದು ಭದ್ರವಾದ ಮೇಲೆ ಮೊದಲಿನದನ್ನು ತೆಗೆಯೋಣ ಎನ್ನುವಂಥವರು. ವಿವೇಕಾನಂದರು ತಿಳಿಸುತ್ತಾರೆ,

ಎರಡನೆಯವರು ನಿಜವಾದ ಬದಲಾವಣೆಯನ್ನು ತರುತ್ತಾರೆ. ಮೊದಲನೆಯವರು ಅಶಾಂತಿ, ದಂದುಗವನ್ನುಂಟು ಮಾಡುತ್ತಾರೆ. ಅವರಿಂದ ಪರಿಹಾರ ಅಸಾಧ್ಯ. ಅದೊಂದು ಶಿಕ್ಷಣ ಸಂಸ್ಥೆ. ಆವರಣದಲ್ಲಿ ನೀರಿಗಾಗಿ ಒಂದು ಬಾವಿ. ಆ ಪ್ರದೇಶಕ್ಕೆ ಬರಗಾಲ ಬಂತು. ನೀರಿಗೆ ಹಾಹಾಕಾರ. ನಾಲ್ಕೈದು ಕಿಲೋಮೀಟರ್ ದೂರದಿಂದ ಹೆಣ್ಣುಮಕ್ಕಳು ಈ ಬಾವಿಯಿಂದ ನೀರು ಪಡೆಯಲು ಬರತೊಡಗಿದರು. ಬಾವಿಯ ನೀರನ್ನು ಕೊಡಕ್ಕೆ ಹಗ್ಗ ಕಟ್ಟಿ ಎಳೆದು ಪಡೆಯಬೇಕು. ಅಲ್ಲಿ ಸಣ್ಣಪುಟ್ಟ ಜಗಳಗಳು, ಕಿರಿಚಾಟಗಳು ನಡೆಯುತ್ತಿದ್ದವು. ಇದು ಕಲಿಕೆಯ ವಾತಾವರಣಕ್ಕೆ ಅಡ್ಡಿಮಾಡುತ್ತಿದ್ದವು. ಸಂಸ್ಥೆಯ ಮುಖ್ಯಸ್ಥರು ಮ್ಯಾನೇಜರ್‌ರಿಗೆ ಇದನ್ನು ಸರಿಪಡಿಸಲು ಹೇಳಿದರು. ಆತನ ಉಪಾಯ ಸುಲಭವಾಗಿತ್ತು. ಈ ಹೆಣ್ಣುಮಕ್ಕಳ ಗದ್ದಲವೇ ಬೇಡ. ಬಾವಿಯನ್ನು ಮುಚ್ಚಿಸಿಬಿಡೋಣ. ಮತ್ತೊಬ್ಬರು ಹೇಳಿದರು, ಹೇಗೂ ನೀರಿಗೊಂದು ಪಂಪ್ ಇದೆ. ಒಂದು ಪೈಪನ್ನು ದೂರ ಎಳೆದು, ಅಲ್ಲಿ ಹತ್ತಾರು ನಲ್ಲಿ ಹಾಕಿ ಬಿಡೋಣ, ಹೆಣ್ಣುಮಕ್ಕಳಿಗೂ ಅನುಕೂಲ, ಗದ್ದಲವೂ ಇರುವುದಿಲ್ಲ. ಈ ಪರಿಹಾರ ಒಪ್ಪಿತವಾಯಿತು. ಮೊದಲನೆಯದು ಕ್ರಾಂತಿ, ಎರಡನೆಯದು ಬದಲಾವಣೆ. ಕಗ್ಗ ಹೇಳತ್ತದೆ, ಏನೋ ಬದಲಾವಣೆಯನ್ನು ಮಾಡಿಬಿಡುತ್ತೇನೆಂದು ತಳಹದಿಯನ್ನೇ ಒಡೆಯಬೇಡ. ಮತ್ತೆ ಹೊಸದಾಗಿ, ಭದ್ರವಾಗಿ ಕಟ್ಟುವುದು ನಿನಗೆ ತಿಳಿದಿದೆಯೆ? ಗಿಡವನ್ನು ಸರಿಯಾಗಿ ಬೆಳೆಸುತ್ತೇನೆಂದುಕೊಂಡು ಅದನ್ನು ಬೇರು ಸಹಿತ ಕಿತ್ತಿ ಹಾಕುವುದು ಸರಿಯೆ? ಅದರಿಂದ ಗಿಡ ಸರಿಯಾದೀತೇ? ತಿದ್ದುವಿಕೆ ಅವಶ್ಯವಾದದ್ದು. ಆದರೆ ಹಾಗೆ ತಿದ್ದುವಾಗ ದುಡುಕು, ಅವಸರ ಬೇಡ. ತಾಳ್ಮೆ ಇರಲಿ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಮೇ 8, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ವೈಶಾಖ ಕೃಷ್ಣ ತೃತೀಯಾ ಗಂ. 18-19 ನಕ್ಷತ್ರ: ಜ್ಯೇಷ್ಠ ಗಂ. 19-10, ಯೋಗ: ಶಿವ ಗಂ. 24-09 ಕರಣ: ವಣಿಜ ಗಂ. 07-20, ಮೇಷ ಮಾಸದ 24 ನೇ ದಿನ, ಮಳೆನಕ್ಷತ್ರ: ಭರಣಿ 4. ರಾಹುಕಾಲ : ಬೆಳಿಗ್ಗೆ 07-30 – 09-00 ಸೂರ್ಯೋದಯ : 06-10 ಸೂರ್ಯಾಸ್ತ : 06-44 ಮುಸ್ಲಿಂ ದಿನಾಂಕ : 17 ಶವ್ವಾಲ್
ಅದೃಷ್ಟ ಸಂಖ್ಯೆ : 10, 7

ಮೇಷ: ಕಣ್ಣೆದುರೇ ದುಷ್ಕರ್ಮಗಳು ನಡೆಯುತ್ತಿದ್ದರೂ ಏನೂ ಮಾಡಲಾಗದ ದುಸ್ಥಿತಿ ನಿಮ್ಮದಾಗಬಹುದು. ಆಹಾರದ ವ್ಯತ್ಯಾಸದಿಂದಾಗಿ ಚರ್ಮದಲ್ಲಿ ದಡಾರಗಳು ಅಥವಾ ತುರಿಕೆಯಂತಹ ಕಾಯಿಲೆಗಳು ಉಂಟಾಗಬಹುದು.

ವೃಷಭ: ಸಂಗೀತಗಾರರಿಗೆ ಕಂಠ ಸಿರಿಗೆ ಉತ್ತಮ ಪ್ರಶಂಸೆಗಳು ಕೇಳಿಬರುತ್ತವೆ. ವಿದ್ಯಾರ್ಥಿಗಳಿಗೆ ಈ ಸಮಯದ ಅನಿವಾರ್ಯದ ತರಗತಿ ಹೊರೆಯಂತೆ ಕಾಣುತ್ತದೆ. ಸಂತುಷ್ಟವಾಗಿ ಜೀವಿಸುತ್ತಿರುವ ಬೇರೆಯವರ ಮಾತಿಗೆ ಬೆಲೆ ಕೊಡದಿರಿ.

ಮಿಥುನ: ಸ್ವಂತ ಊರಿನಲ್ಲಿ ಉತ್ತಮ ಸ್ಥಾನಮಾನದಿಂದಾಗಿ ಹೆಚ್ಚಿನ ಗೌರವ ದೊರೆಯುವುದು. ಹತ್ತಿ ಬಟ್ಟೆಯ ತಯಾರಕರಿಗೆ ಹಾಗೂ ವ್ಯಾಪಾರಸ್ಥರಿಗೆ ಹೆಚ್ಚಿನ ಗ್ರಾಹಕರು ದೊರಕಲಿದ್ದಾರೆ. ಕೆಲಸಗಳಿಗೆ ಸಮಯದ ಅಭಾವವಾಗಲಿದೆ.

ಕರ್ಕಾಟಕ: ಸಣ್ಣ ಮಗುವಿನ ಜೊತೆಗೆ ದೂರದ ಪ್ರಯಾಣವನ್ನು ಯೋಚಿಸಿದ್ದರೆ ಆದಷ್ಟು ಅದನ್ನು ಬಿಡುವ ಪ್ರಯತ್ನ ಮಾಡಿ. ಸಿದ್ಧಿಸಿದ ಎರಡನೇ ಕೆಲಸಗಳಿಂದ ಸಂಪಾದನೆ ಮಾಡುವಿರಿ. ಸಂಗಾತಿಯಿಂದ ಉಡುಗೊರೆ ದೊರೆಯಬಹುದು.

ಸಿಂಹ: ವಾತ್ಸಲ್ಯ ಹಾಗೂ ಪ್ರೀತಿಯಿಂದಾಗಿ ಕುಟುಂಬದವರ ಮನಸ್ಸನ್ನು ಗೆಲ್ಲುವಿರಿ. ಸಮಸ್ಯೆಗಳು ಏನೇ ಇದ್ದರೂ ಸಮಾಧಾನವಾಗಿ ಇಂದು ಎಲ್ಲರ ಬಳಿ ನಗು ಮೊಗದಿಂದ ವರ್ತಿಸುವುದು ಪ್ರಮುಖವಾದ ಕರ್ತವ್ಯವಾಗಿರುತ್ತದೆ.

ಕನ್ಯಾ: ವಾತಾವರಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಕೆಲಸವನ್ನು ಉಳಿಸಿಕೊಳ್ಳಲು ಸಾಹಸ ಮಾಡಬೇಕಾಗಬಹುದು. ವೈದ್ಯರು ಹೊಸ ಖಾಸಗಿ ಕಾರ್ಯಾಲಯವನ್ನು ಮಾಡುವ ಉತ್ತಮ ಯೋಚನೆ ಮಾಡುವಿರಿ.

ತುಲಾ: ಹಳೆಯ ಶಾಲೆಗೆ ಭೇಟಿ ನೀಡುವುದರ ಜೊತೆಗೆ ಈಗಿನ ವಿದ್ಯಾರ್ಥಿಗಳ ಜೊತೆ ಸಂವಾದ ನಡೆಸುವ ಮೂಲಕ ಅವರಿಗೆ ಮಾರ್ಗದರ್ಶನ ಮಾಡುವಿರಿ. ಉದಯೋನ್ಮುಖ ಕವಿಗಳಿಗೆ ಛಂದೋಬದ್ಧ ಕೃತಿಗೆ ಪ್ರಶಂಸೆ ದೊರೆಯುವುದು.

ವೃಶ್ಚಿಕ: ಅದ್ಭುತವಾದ ಉಪನಿಷತ್ ವಾಕ್ಯಗಳ ಬಳಕೆ ಮಾಡಿ ಪತ್ರಿಕೆಗೆ ಬರೆದ ಲೇಖನಕ್ಕೆ ಓದುಗರಿಂದ ಉತ್ತಮ ಪ್ರತಿಕ್ರಿಯೆಯನ್ನು ಪಡೆಯುವಿರಿ. ನಿಮ್ಮ ಅತಿಯಾದ ಸರಳತೆಯು ಸಮಾಜದಲ್ಲಿನ ಗೌರವಕ್ಕೆ ಕಾರಣವಾಗುತ್ತದೆ.

ಧನು: ದೇಹದಲ್ಲಿನ ಉಷ್ಣತೆ ನೀವಾಗಿಯೆ ಆಹಾರದ ಮೂಲಕ ನಿವಾರಿಸಿಕೊಳ್ಳದಿದ್ದರೆ ವೈದ್ಯರ ದರ್ಶನ ಅನಿವಾರ್ಯವಾಗುವುದು. ಊರಿನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಅದರಲ್ಲು ಸುಗಮ ಸಂಗೀತದಲ್ಲಿ ಭಾಗವಹಿಸುವಿರಿ.

ಮಕರ: ಸ್ಥಿರವಾಗಿ ನಡೆಯುತ್ತಿದ್ದ ಉದ್ಯೋಗದಲ್ಲಿ ಅಭದ್ರತೆ ಕಾಡಬಹುದು. ಮುಜುಗರವನ್ನು ಮೀರಿ ಭಾವಿ ಜೀವನ ಸಂಗಾತಿಯಲ್ಲಿ ನಿಮ್ಮ ಮನಸ್ಸಿನ ಮಾತನ್ನು ಆಡುವುದರಿಂದ ಜೀವನದ ಅಡಿಪಾಯ ನಿಮ್ಮದಾಗುವುದು.

ಕುಂಭ: ಕೆಲವಾರು ದಿನಗಳ ಬಿಡುವಿಲ್ಲದ ದಿನಚರಿಯ ನಂತರ ಸ್ವಲ್ಪ ಬಿಡುವಿನ ದಿನ ಇಂದಾಗುವುದು. ಉತ್ತಮ ಆಹಾರವನ್ನು ಸವಿಯುವಿರಿ. ತವರು ಮನೆಯಲ್ಲಿನ ಜಗಳವು ಗಂಡನ ಮನೆಯಲ್ಲಿರುವ ಮನಶ್ಶಾಂತಿ ಕೆಡಿಸುತ್ತದೆ.


ಮೀನ: ಸ್ತ್ರೀಸಂಬಂಧಿತ ಸಮಸ್ಯೆಗಳು ಕೋರ್ಟು ಕಚೇರಿಗಳ ಮೆಟ್ಟಿಲನ್ನು ಹತ್ತುವಂತೆ ಮಾಡುವುದು. ದೂಳಿನಿಂದಾಗಿ ಕಣ್ಣಿನ ಸಮಸ್ಯೆ ಉಂಟಾಗಬಹುದು. ಕಂಕಣ ಭಾಗ್ಯ ಕೂಡಿಬಂದಾಗ ತಳ್ಳಿಹಾಕುವುದು ತರವಲ್ಲ.

ಪದಬಂಧ 5312

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ವ್ಯಾಕರಣ ಶಾಸ್ತ್ರವನ್ನು ತಿಳಿಸುವವನು (3)
2. ಅದೇ ತಾನೆ ಮೂಡುತ್ತಿರುವ ಸೂರ್ಯ (4)
4. ತಾಯಿ ನುಡಿಯಿದು (4)
6. ಘಟನೆಯನ್ನು ಹೀಗೆ ಹೇಳಿ (3)
7. ಕನಸಲ್ಲಿ ಕಾಣಿಸಿದ ಕೊಳೆ (2)
9. ತಪರಾಕು ಕೊಟ್ಟವನು ಮಾಡಿದ ಸ್ತುತಿ! (3)
11. ಉರಗದ ಎದೆಯಿಲ್ಲಿ ಉಲ್ಟಾ ಕಾಣುತ್ತಿದೆ (2)
13. ವಿರುದ್ಧವಾದುದನ್ನು ಹೀಗೆನ್ನಿ (3)
14. ಇದು ಕನ್ನಡಿಗನ ಚಾಳೀಸು! (4)
16. ಹೂವಿನಲ್ಲಿರುವ ಸಿಹಿ ರಸ (4)
17. ಸೂರ್ಯನ ಸಾರಥಿಯ ಹೆಸರು (3)

ಮೇಲಿಂದ ಕೆಳಕ್ಕೆ
1. ಉಷ್ಣದ ಪ್ರಮಾಣವನ್ನು ಕಂಡು ಹಿಡಿಯುವಸಾಧನ (5)
2. ಕೂಪ ಇಲ್ಲಿ ಕಾಣುತ್ತಿದೆ (2)
3. ನೆತ್ತರು ಪ್ರವಹಿಸುವಿಕೆ (5)
5. ತಿರುಗಿದಾಗ ಜಾತ್ರೆ ಕಾಣಿಸಿತಲ್ಲಾ! (3)
8. ಜೊತೆಯಲ್ಲಿ ಆಲೋಚಿಸುವವನು (5)
10. ಕಪಟ ಅಥವಾ ವಂಚನೆ (3)
12. ಕೆಲಸ ಮಾಡಲು ಬೇಕಾದ ಸಲಕರಣೆ (5)
15. ಪ್ರತ್ಯಯ ಸಹಿತವಾದ ಶಬ್ದ (2)



5311ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜಠರ 6.ಜವಾಬುದಾರಿ
7.ನಗಾರಿ 10.ಉಪಕರಣ
14.ನರಕ 16.ಮಾರ್ಗದರ್ಶಕ
17.ಕವನ

ಮೇಲಿಂದ ಕೆಳಕ್ಕೆ:
1.ಜಯಶಾಲಿ 2.ರಸನ
3.ಗುಜರಿ 4.ಅಂಬುಧಿ
5.ಹರಿವಾಣ 8.ಗಾಳಿಪಟ
9.ಸರದಾರ 11.ಅನುಮಾನ
12.ಮತಿಹೀನ 13.ವಂದರಿ
14.ನಕಲಿ 15.ಕನಕ

ಸುಡೊಕು 5698

					7		1	4
8		7	6		4	2		9
			3					
2	4			1		9		
							7	
7	5			9		3	4	
	8							3
			4		8	5		
9		4			2		6	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5697 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ಜಾಗತಿಕ ಆರ್ಥಿಕ ಅನಿಶ್ಚಿತತೆಯ ಪರಿಣಾಮ

ಚಿನ್ನ ಆಮದು ಶೇ 24 ಇಳಿಕೆ



ನವದೆಹಲಿ (ಪಿಟಿಐ): ಜಾಗತಿಕ ಆರ್ಥಿಕ ಅನಿಶ್ಚಿತತೆಯ ಕಾರಣದಿಂದಾಗಿ ಭಾರತದ ಚಿನ್ನದ ಆಮದು 2022–23ನೇ ಹಣಕಾಸು ವರ್ಷದಲ್ಲಿ ಶೇಕಡ 24.15ರಷ್ಟು ಇಳಿಕೆ ಕಂಡಿದ್ದು, ಮೌಲ್ಯದ ಲೆಕ್ಕದಲ್ಲಿ ₹2.87 ಲಕ್ಷ ಕೋಟಿಗೆ ತಲುಪಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಹೇಳಿದೆ.

2021–22ರಲ್ಲಿ ₹3.78 ಲಕ್ಷ ಕೋಟಿ ಮೌಲ್ಯದ ಚಿನ್ನ ಆಮದಾಗಿತ್ತು. 2022ರ ಆಗಸ್ಟ್‌ನಿಂದ 2023ರ ಫೆಬ್ರುವರಿ ಅವಧಿಯಲ್ಲಿ ಚಿನ್ನದ ಆಮದು ಪ್ರಮಾಣದಲ್ಲಿ ಕುಸಿತ ಆಗಿದೆ. 2022ರ ಮಾರ್ಚ್‌ನಲ್ಲಿ ಆಮದು ಮೌಲ್ಯ ₹8,200 ಕೋಟಿಯಷ್ಟು ಇತ್ತು. ಇದಕ್ಕೆ ಹೋಲಿಸಿದರೆ 2023ರ ಮಾರ್ಚ್‌ನಲ್ಲಿ ಆಮದು ಮೌಲ್ಯ ₹27,060 ಕೋಟಿಗೆ ಏರಿಕೆ ಕಂಡಿದೆ ಎಂದು ತಿಳಿಸಿದೆ.

ಕಳೆದ ಹಣಕಾಸು ವರ್ಷದಲ್ಲಿ ಬೆಳ್ಳಿ ಆಮದು ಶೇ 6.12ರಷ್ಟು ಹೆಚ್ಚಾಗಿ ₹43,378 ಕೋಟಿಗೆ ಏರಿಕೆ ಆಗಿದೆ.

ಚಿನ್ನದ ಆಮದು ಪ್ರಮಾಣವು ಗಣನೀಯವಾಗಿ ಇಳಿಕೆ ಕಾಣುತ್ತಿದ್ದರೂ ಅದು ವ್ಯಾಪಾರ ಕೊರತೆಯನ್ನು ತಗ್ಗಿಸಲು ನೆರವಾಗಿಲ್ಲ. ಸರಕುಗಳ ವ್ಯಾಪಾರ ಕೊರತೆಯು 2022–23ರಲ್ಲಿ ₹21.89 ಲಕ್ಷ ಕೋಟಿಯಷ್ಟು ಆಗುವ ಅಂದಾಜು ಮಾಡಲಾಗಿದೆ. 2021–22ರಲ್ಲಿ ವ್ಯಾಪಾರ ಕೊರತೆಯು ₹15.66 ಲಕ್ಷ ಕೋಟಿಯಷ್ಟು ಇತ್ತು.

ಅಮೆರಿಕದಲ್ಲಿ ಹಣದುಬ್ಬರ ಹೆಚ್ಚಿಗೆ ಇರುವುದು, ಬಡ್ಡಿದರ ಹೆಚ್ಚಾಗಿರುವುದು, ರಷ್ಯಾ–ಉಕ್ರೇನ್ ಬಿಕ್ಕಟ್ಟು ಮತ್ತು ಚೀನಾದ ಆರ್ಥಿಕತೆಯು ಸಂಪೂರ್ಣವಾಗಿ ಚೇತರಿಕೆ ಕಾಣದೇ ಇರುವುದು ಉದ್ಯಮಕ್ಕೆ ಸವಾಲಾಗಿವೆ ಎಂದು ಹರಳು ಮತ್ತು ಚಿನ್ನಾಭರಣ ರಫ್ತು ಉತ್ತೇಜನ ಮಂಡಳಿಯ (ಜಿಜೆಇಪಿಸಿ) ಅಧ್ಯಕ್ಷ ಕೋಲಿನ್ ಶಾ ಹೇಳಿದ್ದಾರೆ.

ಕಾರಣಗಳೇನು?

- ಚಿನ್ನದ ಆಮದು ಸುಂಕ ಗರಿಷ್ಠ ಮಟ್ಟದಲ್ಲಿ ಇರುವುದು
- ರಷ್ಯಾ–ಉಕ್ರೇನ್ ನಡುವಣ ಯುದ್ಧ

ಇ–ಇನ್‌ವಾಯ್ಸ್ ಅಪ್‌ಲೋಡ್ ಕಾಲಮಿತಿ ಮುಂದೂಡಿಕೆ



ನವದೆಹಲಿ (ಪಿಟಿಐ): ವಾರ್ಷಿಕ ₹100 ಕೋಟಿಗೂ ಅಧಿಕ ಮೊತ್ತದ ವಹಿವಾಟು ನಡೆಸುವ ಉದ್ದಿಮೆಗಳಿಗೆ ಇ–ಇನ್‌ವಾಯ್ಸ್ ಅಪ್‌ಲೋಡ್ ಮಾಡಲು ವಿಧಿಸಿದ್ದ ಕಾಲಮಿತಿಯನ್ನು ಮೂರು ತಿಂಗಳವರೆಗೆ ಮುಂದೂಡಲಾಗಿದೆ.

ಮೇ 1 ರಿಂದ ಜಾರಿಗೆ ಬರುವಂತೆ ಇ–ಇನ್‌ವಾಯ್ಸ್ ಪಡೆದ ಒಂದು ವಾರದ ಒಳಗಾಗಿ ಅದನ್ನು ಪೋರ್ಟಲ್‌ಗೆ (ಐಆರ್‌ಪಿ) ಅಪ್‌ಲೋಡ್ ಮಾಡಬೇಕು ಎಂದು ಜಿಎಸ್‌ಟಿ ನೆಟ್‌ವರ್ಕ್ (ಜಿಎಸ್‌ಟಿಎನ್) ಕಳೆದ ತಿಂಗಳು ಹೇಳಿತ್ತು.

ಇ–ಇನ್‌ವಾಯ್ಸ್ ಪಡೆದ ಒಂದು ವಾರದ ಒಳಗಾಗಿ ಅದನ್ನು ಪೋರ್ಟಲ್‌ಗೆ ಅಪ್‌ಲೋಡ್ ಮಾಡಬೇಕು. ಏಳು ದಿನಗಳು ಕಳೆದಿದ್ದರೆ ಅಂತಹ ಇನ್‌ವಾಯ್ಸ್ ಅಪ್‌ಲೋಡ್ ಮಾಡಲು ಅವಕಾಶ ಇರುವುದಿಲ್ಲ ಎಂದು ಹೇಳಿತ್ತು.

ಈ ಮೊದಲು ಪೋರ್ಟಲ್‌ಗೆ ಇ–ಇನ್‌ವಾಯ್ಸ್ ಅಪ್‌ಲೋಡ್ ಮಾಡಲು ಯಾವುದೇ ನಿರ್ಬಂಧ ವಿಧಿಸಿರಲಿಲ್ಲ.

ಜಿಎಸ್‌ಟಿ ಕಾಯ್ದೆಯ ಪ್ರಕಾರ, ಐಆರ್‌ಪಿಗೆ ಇನ್‌ವಾಯ್ಸ್ ಅಪ್‌ಲೋಡ್ ಮಾಡದೇ ಇದ್ದರೆ ಉದ್ದಿಮೆಗಳಿಗೆ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನ (ಐಟಿಸಿ) ಪ್ರಯೋಜನ ಪಡೆಯಲು ಸಾಧ್ಯವಾಗುವುದಿಲ್ಲ.

ಕಾಲಮಿತಿಯನ್ನು ಮೂರು ತಿಂಗಳವರೆಗೆ ಮುಂದೂಡಿರುವುದರಿಂದ ವ್ಯವಸ್ಥೆಯನ್ನು ಸುಗಮವಾಗಿ ಜಾರಿಗೊಳಿಸುವುದಕ್ಕೆ ಸಾಧ್ಯವಾಗಲಿದೆ ಎಂದು ಎಎಂಆರ್‌ಜಿ ಆ್ಯಂಡ್ ಅಸೋಸಿಯೇಟ್ಸ್‌ನ ಹಿರಿಯ ಪಾಲುದಾರ ರಜತ್ ಮೋಹನ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕೋಲ್ ಇಂಡಿಯಾ ಲಾಭ ಶೇ 17ರಷ್ಟು ಇಳಿಕೆ

ನವದೆಹಲಿ (ಪಿಟಿಐ): ನೌಕರರ ವೇತನ ಪರಿಷ್ಕರಣೆಗೆ ಹೆಚ್ಚಿನ ಮೊತ್ತವನ್ನು ತೆಗೆದಿರಿಸಿರುವ ಕಾರಣ, ಕೋಲ್ ಇಂಡಿಯಾ ಕಂಪನಿಯ ಮಾರ್ಚ್ ತ್ರೈಮಾಸಿಕದ ಲಾಭವು ಶೇಕಡ 17.7ರಷ್ಟು ಕಡಿಮೆ ಆಗಿದೆ.

ಕಂಪನಿಯ ನಿವ್ವಳ ಲಾಭವು ₹5,527 ಕೋಟಿ ಆಗಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದ ಅವಧಿಯಲ್ಲಿ ಕಂಪನಿಯು ₹6,715 ಕೋಟಿ ಲಾಭ ಗಳಿಸಿತ್ತು.

ಮಾರ್ಚ್ ತ್ರೈಮಾಸಿಕದಲ್ಲಿ ಕಲ್ಲಿದ್ದಲು ಉತ್ಪಾದನೆಯು ಶೇ 7ರಷ್ಟು ಹೆಚ್ಚಾಗಿದೆ. ಕಂಪನಿಯು ಷೇರುದಾರರಿಗೆ ಪ್ರತಿ ಷೇರಿಗೆ ₹4ರ ಅಂತಿಮ ಲಾಭಾಂಶ ಘೋಷಿಸಿದೆ. ಈ ಹಿಂದೆ ಕಂಪನಿಯು ಪ್ರತಿ ಷೇರಿಗೆ ₹15ರಷ್ಟು ಮತ್ತು ₹5.25ರಷ್ಟು ಮಧ್ಯಂತರ ಲಾಭಾಂಶ ಪ್ರಕಟಿಸಿತ್ತು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	100 ಮೊಟ್ಟೆಗೆ	₹490
	12 ಮೊಟ್ಟೆಗೆ	₹66
ಮೈಸೂರು	100 ಮೊಟ್ಟೆಗೆ	₹495

ಗಮನಿಸಿ, ತಾಳಿದವನು ಬಾಳಿಯಾನು



ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

‘ತಾಳಿದವನು ಬಾಳಿಯಾನು’ ಎನ್ನುವುದು ನಮ್ಮ ಹಿರಿಯರಿಗೆ ಜೀವನದ ಅನುಭವವು ಕಲಿಸಿಕೊಟ್ಟ ವಿವೇಕ. ಷೇರು ಮಾರುಕಟ್ಟೆಯಲ್ಲಿ ಹಣ ತೊಡಗಿಸುವವರಿಗೂ ಈ ಮಾತು ಬಹಳ ಅನ್ವಯಿಸುತ್ತದೆ. ಹೂಡಿಕೆ ಮಾಡುವಾಗ ತಾಳ್ಮೆ ಇಲ್ಲದಿದ್ದರೆ ಸಂಪತ್ತು ಸೃಷ್ಟಿ ಸಾಧ್ಯವಾಗುವುದಿಲ್ಲ.

‘ಒಂದು ಷೇರನ್ನು ನೀವು ಕನಿಷ್ಠ ಹತ್ತು ವರ್ಷ ಇಟ್ಟುಕೊಳ್ಳುವಷ್ಟು ತಾಳ್ಮೆ ಹೊಂದಿಲ್ಲ ಎಂದಾದರೆ, ಆ ಷೇರನ್ನು ಹತ್ತು ನಿಮಿಷ ಇಟ್ಟುಕೊಳ್ಳುವ ಯೋಚನೆಯನ್ನೂ ಮಾಡಬೇಡಿ’ ಎಂದು ಹೂಡಿಕೆ ತಜ್ಞ ವಾರನ್ ಬಫೆಟ್ ಪ್ರತಿಪಾದಿಸುತ್ತಾರೆ. ಈ ಹಿನ್ನೆಲೆಯೊಂದಿಗೆ ಷೇರುಪೇಟೆಯಲ್ಲಿ ದೀರ್ಘಾವಧಿ ಹೂಡಿಕೆಯ ಮಹತ್ವ ಏನು ತಿಳಿಯೋಣ ಬನ್ನಿ.

ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಬೇಕಾದರೆ ಎರಡು ನಿಯಮಗಳನ್ನು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು ಎಂದು ಬಫೆಟ್ ಹೇಳುತ್ತಾರೆ. ನಿಯಮ 1: ಷೇರು ಮಾರುಕಟ್ಟೆಯಲ್ಲಿ ಎಂದಿಗೂ ಹಣ ಕಳೆದುಕೊಳ್ಳಬೇಡಿ; ನಿಯಮ 2: ಒಂದನೇ ನಿಯಮವನ್ನು ಎಂದಿಗೂ ಮರೆಯಬೇಡಿ.

ಆದರೆ ವಾಸ್ತವದಲ್ಲಿ ಷೇರು ಟ್ರೇಡಿಂಗ್‌ನಲ್ಲಿ ಬಹುತೇಕರು ಹಣ ಕಳೆದುಕೊಳ್ಳುತ್ತಿದ್ದಾರೆ ಎಂಬ ವರದಿಗಳು ಇವೆ. ಸಣ್ಣ ಹೂಡಿಕೆದಾರರು ಷೇರು ಖರೀದಿಸಿದ ಮರುದಿನವೇ ಲಾಭ ನಿರೀಕ್ಷಿಸುತ್ತಾರೆ. ಖರೀದಿ ಬೆಲೆಗಿಂತ ಷೇರಿನ ಬೆಲೆ ಕೊಂಚ ಕೆಳಗಿಳಿದರೂ ಆತಂಕಕ್ಕೆ ಒಳಗಾಗುತ್ತಾರೆ. ನಷ್ಟವಾಗುವ ಭೀತಿಯಿಂದ ಅದನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿ, ಒಟ್ಟಾರೆ ನಷ್ಟ ಅನುಭವಿಸುತ್ತಾರೆ. ಷೇರುಪೇಟೆಯಲ್ಲಿ ಆತುರಕ್ಕೆ ಬಿದ್ದು ನಷ್ಟಕ್ಕೆ ಸಿಲುಕುವವರು ದೊಡ್ಡ ಸಂಖ್ಯೆಯಲ್ಲಿ ಇದ್ದಾರೆ.

ವಾರನ್ ಬಫೆಟ್ ಹೇಳುತ್ತಾರೆ, ಒಂದು ಕಂಪನಿಯ ಷೇರು ಖರೀದಿಸುವಾಗ, ‘ಆ ಕಂಪನಿಯನ್ನೇ ಖರೀದಿಸುತ್ತಿದ್ದೇನೆ’ ಎನ್ನುವ ಮನಃಸ್ಥಿತಿ ಇರಬೇಕು. ಒಂದು ಕಂಪನಿ ಖರೀದಿಸುವಾಗ ಯಾವ ಬಗೆಯಲ್ಲಿ ಲೆಕ್ಕಾಚಾರ ಮಾಡುತ್ತೇವೆಯೋ ಹಾಗೆಯೇ ಒಂದು ಷೇರು ಖರೀದಿಸುವ ಮುನ್ನವೂ ಪೂರ್ವಾಪರ ಅರಿತು ಮುನ್ನಡೆಯಬೇಕು. ಆಗ ಮಾತ್ರ ಷೇರು ಮಾರುಕಟ್ಟೆ ಹೂಡಿಕೆಯಿಂದ ಸಂಪತ್ತು ವೃದ್ಧಿ ಸಾಧ್ಯ. ಉದಾಹರಣೆಗೆ, ‘ನನ್ನ ಮಾಲೀಕತ್ವದ ಕಂಪನಿಯ ಮೌಲ್ಯ ₹50 ಕೋಟಿ’ ಎಂದು ಹೇಳುತ್ತೇನೆ ಎಂದಿಟ್ಟುಕೊಳ್ಳಿ. ನೀವು ಸುಮ್ಮನೇ ನನ್ನ ಮಾತು ಒಪ್ಪುವಿರಾ?

ಕಂಪನಿ ಹೇಗೆ ಪ್ರಗತಿ ಸಾಧಿಸಿದೆ, ಎಷ್ಟು ಲಾಭ ಮಾಡಿದೆ, ಎಷ್ಟು ಸಾಲ ಬಾಕಿ ಇದೆ, ಭವಿಷ್ಯದಲ್ಲಿ ಏನೆಲ್ಲ ವಹಿವಾಟು ನಡೆಸುವ ಆಲೋಚನೆ ಹೊಂದಿದೆ ಎಂಬ ಪ್ರಶ್ನೆಗಳನ್ನು ಕೇಳುತ್ತೀರಿ ಅಲ್ಲವೇ? ಹೂಡಿಕೆಯ ಮೂದಲು, ಹಣ ತೊಡಗಿಸುವ ಷೇರು ವಿಚಾರದಲ್ಲಿಯೂ ಇದೇ ಬಗೆಯಲ್ಲಿ ಆಲೋಚನೆ ಮಾಡಿದಾಗ ಮಾತ್ರ ದುಡ್ಡನ್ನು ಬೆಳೆಸಲು ಸಾಧ್ಯವಾಗುತ್ತದೆ.



ಷೇರು ಮಾರುಕಟ್ಟೆಯಲ್ಲಿ ನಿರ್ದಿಷ್ಟ ಷೇರು ಅತ್ಯಂತ ಕನಿಷ್ಠ ಮಟ್ಟಕ್ಕೆ ಕುಸಿದಾಗ ಅದನ್ನು ಖರೀದಿಸುತ್ತೇವೆ, ಷೇರಿನ ಬೆಲೆ ಗರಿಷ್ಠ ಮಟ್ಟಕ್ಕೆ ಏರಿದಾಗ ಮಾರಾಟ ಮಾಡುತ್ತೇವೆ ಎಂದು ಖಚಿತವಾಗಿ ಹೇಳಲು ಯಾರಿಂದಲೂ ಸಾಧ್ಯವಿಲ್ಲ. ಮಾರುಕಟ್ಟೆಯಲ್ಲಿ ನೀವು ಯಾವಾಗ ಹೂಡಿಕೆ ಮಾಡಿದಿರಿ ಎನ್ನುವುದಕ್ಕಿಂತ ಏರಿಳಿತಗಳಿಗೆ ಹೆಚ್ಚು ತಲೆಕೆಡಿಸಿಕೊಳ್ಳದೆ ಎಷ್ಟು ಕಾಲ ಮಾರುಕಟ್ಟೆಯಲ್ಲಿ ಉಳಿದುಕೊಂಡಿದ್ದೀರಿ ಎನ್ನುವುದು ಮುಖ್ಯವಾಗುತ್ತದೆ.

2000ನೇ ಇಸವಿಯಿಂದ ಇಲ್ಲಿಯತನಕ, ಅಂದರೆ ಸುಮಾರು 22 ವರ್ಷಗಳಲ್ಲಿ ಷೇರು ಮಾರುಕಟ್ಟೆ ಸೂಚ್ಯಂಕಗಳು ಹಲವು ಏರಿಳಿತಗಳನ್ನು ಕಂಡಿವೆ. ಆದರೆ ಸರಾಸರಿಯನ್ನು ಪರಿಗಣಿಸಿದರೆ, ಸೂಚ್ಯಂಕಗಳು ಪ್ರತಿ ಐದು ತಿಂಗಳಿಗೊಮ್ಮೆ ಹೊಸ ಮಟ್ಟವನ್ನು ತಲುಪಿವೆ. ಅಂದರೆ ಷೇರುಪೇಟೆ ಸಕಾರಾತ್ಮಕ ಹಾದಿಯಲ್ಲಿ ನಡೆದಿದೆ. ಹಾಗಾಗಿಯೇ, ಷೇರು ಮಾರುಕಟ್ಟೆಯಲ್ಲಿ ದೀರ್ಘಕಾಲದ ಹೂಡಿಕೆ ಬಹಳ ಮುಖ್ಯ.

ಷೇರು ಮಾರುಕಟ್ಟೆಯಲ್ಲಿ ಗೂಳಿ ಓಟವಿರುವಾಗ ಹೂಡಿಕೆದಾರರಲ್ಲಿ ಹಲವರು, ಷೇರಿನ ವಾಸ್ತವ ಮೌಲ್ಯಕ್ಕಿಂತ ಹೆಚ್ಚು ಬೆಲೆ ಕೊಟ್ಟು ಖರೀದಿಸಲು ತಯಾರಿರುತ್ತಾರೆ. ಷೇರುಪೇಟೆಯಲ್ಲಿ ಕರಡಿ ಹಿಡಿತವಿದ್ದು ಕುಸಿತ ಹೆಚ್ಚಾದಾಗ ದೊಡ್ಡ ಮೌಲ್ಯಯುತ ಕಂಪನಿಗಳ ಷೇರುಗಳು ರಿಯಾಯಿತಿ ದರದಲ್ಲಿ ಸಿಗುತ್ತವೆ. ಆದರೆ ಹೂಡಿಕೆದಾರರು ಸೂಚ್ಯಂಕಗಳ ಕುಸಿತಕ್ಕೆ ಹೆದರಿ ಉತ್ತಮ ಕಂಪನಿಗಳ ಷೇರುಗಳು ಕಡಿಮೆ ಬೆಲೆಗೆ ಸಿಕ್ಕರೂ ಖರೀದಿಗೆ ಮುಂದಾಗುವುದಿಲ್ಲ. ವಾರನ್ ಬಫೆಟ್ 2008ರ ಆರ್ಥಿಕ ಕುಸಿತದ ಸಂದರ್ಭದಲ್ಲಿ ಬ್ಯಾಂಕ್ ಆಫ್ ಅಮೆರಿಕ, ಗೋಲ್ಡ್‌ಮನ್ ಸ್ಯಾಕ್ಸ್, ಜಿಇ, ಡೋ ಕಂಪನಿಗಳಲ್ಲಿ ಹೂಡಿಕೆ ಮಾಡಿ ನಂತರದಲ್ಲಿ ಉತ್ತಮ ಲಾಭ ಮಾಡಿಕೊಂಡರು.

ದೀರ್ಘಾವಧಿ ಸಂಪತ್ತು ಸೃಷ್ಟಿಗೆ ಉದಾಹರಣೆಗಳು: ಉತ್ತಮ ಕಂಪನಿಗಳಲ್ಲಿ ದೀರ್ಘಾವಧಿಗೆ ಹೂಡಿಕೆ ಮಾಡಿದಾಗ ಸಂಪತ್ತು ಬೆಳೆಯುತ್ತದೆ ಎನ್ನುವುದಕ್ಕೆ ಸೂಕ್ತ ಉದಾಹರಣೆಗಳು ಟೈಟನ್ ಮತ್ತು ಅವೆನ್ಯೂ ಸೂಪರ್‌ಮಾರ್ಟ್ಸ್ (ಡಿ-ಮಾರ್ಟ್) ಕಂಪನಿ ಷೇರುಗಳು. ಮಾರ್ಚ್ 2017ರಲ್ಲಿ ಐಪಿಒ ನಡೆದಾಗ ಅವೆನ್ಯೂ ಸೂಪರ್‌ಮಾರ್ಟ್ಸ್ ಷೇರಿನ ಬೆಲೆ ₹299 ಇತ್ತು. ಆರು ವರ್ಷಗಳಲ್ಲಿ ಆ ಷೇರಿನ ಬೆಲೆ ₹3,594 ಆಯಿತು. 2002ರಲ್ಲಿ ಟೈಟನ್ ಷೇರಿನ ಬೆಲೆ ₹3ರ ಆಸುಪಾಸಿನಲ್ಲಿತ್ತು. ಈಗ ಟೈಟನ್ ಷೇರಿನ ಬೆಲೆ ₹2,732ರ ಆಸುಪಾಸಿನಲ್ಲಿದೆ. ಅಷ್ಟೇ ಅಲ್ಲ, ದೀರ್ಘಾವಧಿಗೆ ಹೂಡಿಕೆ ಮಾಡಿದವರಿಗೆ ಉತ್ತಮ ಲಾಭದ ಜೊತೆಗೆ ಬೋನಸ್ ಷೇರುಗಳು, ಡಿವಿಡೆಂಡ್ ಕೂಡ ಸಿಕ್ಕಿದೆ. ಈ ಕಾರಣಕ್ಕಾಗಿಯೇ, ಉತ್ತಮ ಕಂಪನಿಗಳಲ್ಲಿ ದೀರ್ಘಾವಧಿಗೆ ಹೂಡಿಕೆ ಮಾಡುವುದು ಬಹಳ ಮುಖ್ಯ. (ಉದಾಹರಣೆಗೆ ಮಾತ್ರ ಕೆಲವು ಕಂಪನಿಗಳ ಹೆಸರು ಬಳಸಲಾಗಿದೆ. ಇದು ಹೂಡಿಕೆ ಶಿಫಾರಸು ಅಲ್ಲ)

(ಲೇಖಕಿ ಚಾರ್ಟರ್ಡ್ ಅಕೌಂಟೆಂಟ್)

ಯಥಾಸ್ಥಿತಿ ಕಾಯ್ದುಕೊಂಡ ಷೇರುಪೇಟೆ

ಮೇ 5ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಬಹುತೇಕ ಯಥಾಸ್ಥಿತಿ ಕಾಯ್ದುಕೊಂಡಿವೆ. 61,054 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 0.1ರಷ್ಟು ಕುಸಿದಿದೆ. 18,069 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 0.2ರಷ್ಟು ಜಿಗಿದಿದೆ. ಕಂಪನಿಗಳ ತ್ರೈಮಾಸಿಕ ಫಲಿತಾಂಶಗಳಲ್ಲಿ ಕಂಡುಬಂದ ಮಿಶ್ರ ಫಲ, ವಿದೇಶಿ ಸಾಂಸ್ಥಿಕ ಹೂಡಿಕೆದಾರರ ಖರೀದಿ ಭರಾಟೆ, ವಾಹನ ಮಾರಾಟ ಅಂಕಿ-ಅಂಶ, ಕೈಗಾರಿಕಾ ಉತ್ಪಾದನೆಯಲ್ಲಿ ಹೆಚ್ಚಳ ಮತ್ತು ಉತ್ತಮ ಜಿಎಸ್‌ಟಿ ಸಂಗ್ರಹ ಮಾರುಕಟ್ಟೆ ಯಥಾಸ್ಥಿತಿ ಕಾಯ್ದುಕೊಳ್ಳಲು ನೆರವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ವಾಹನ ಸೂಚ್ಯಂಕ ಶೇ 1.19ರಷ್ಟು, ಮಿಡ್ ಕ್ಯಾಪ್ 100 ಶೇ 1.11ರಷ್ಟು, ಎಫ್‌ಎಂಸಿಜಿ ಶೇ 0.78ರಷ್ಟು, ನಿಫ್ಟಿ ಸ್ಮಾಲ್ ಕ್ಯಾಪ್ 100 ಸೂಚ್ಯಂಕ ಶೇ 0.59ರಷ್ಟು, ನಿಫ್ಟಿ ಲೋಹ ಶೇ 0.13ರಷ್ಟು, ನಿಫ್ಟಿ ಐಟಿ ಶೇ 0.04ರಷ್ಟು ಜಿಗಿದಿವೆ. ನಿಫ್ಟಿ ಬ್ಯಾಂಕ್ ಶೇ 1.32ರಷ್ಟು, ಮಾಧ್ಯಮ ಶೇ 0.42ರಷ್ಟು, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 0.34ರಷ್ಟು, ನಿಫ್ಟಿ ಫಾರ್ಮಾ ಶೇ 0.04ರಷ್ಟು ಕುಸಿದಿವೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಇಂಟರ್ ಗ್ಲೋಬ್ ಏವಿಯೇಷನ್, ನೈಕಾ, ಪೇಟಿಎಂ, ಸೀಮನ್ಸ್ ಮತ್ತು ಹ್ಯಾವೆಲ್ಸ್ ಇಂಡಿಯಾ ಗಳಿಸಿಕೊಂಡಿವೆ. ಇಂಡಸ್ ಇಂಡ್ ಬ್ಯಾಂಕ್, ಡಾಬರ್ ಇಂಡಿಯಾ, ಎಚ್‌ಡಿಎಫ್‌ಸಿ ಬ್ಯಾಂಕ್ ಅದಾನಿ ವಿಲ್ಮರ್ ಮತ್ತು ಯುಪಿಎಲ್ ಕುಸಿತವಾಗಿವೆ.

ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹5,527.76 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹2,735.25 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಮುನ್ನೋಟ: ಈ ವಾರ ಕೆನರಾ ಬ್ಯಾಂಕ್, ಟಾಟಾ ಮೋಟರ್ಸ್, ನಜಾರಾ ಟೆಕ್ನಾಲಜೀಸ್, ರೇಮಂಡ್, ರೆಲಿಗೇರ್, ಅಗ್ರಿಟೆಕ್, ಡಿಶ್ ಟಿವಿ, ಎಚ್‌ಎಎಲ್, ಹೋಂಡಾ ಪವರ್, ರಿಲ್ಯಾಕ್ಸೊ, ಐಷರ್ ಮೋಟರ್ಸ್, ಯುಪಿಎಲ್, ಜೆಎಂ ಫೈನಾನ್ಸಿಯಲ್, ಎಸ್ಕಾರ್ಟ್ಸ್, ಬಾಷ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಮತ್ತು ದೇಶಿಯ ಬೆಳವಣಿಗೆಗಳು ಷೇರುಪೇಟೆ ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

ಗುಂಡಿನ ದಾಳಿ 9 ಜನರು ಸಾವು

ಹ್ಯೂಸ್ಟನ್ (ಪಿಟಿಐ): ಅಮೆರಿಕದ ಟೆಕ್ಸಾಸ್‌ನಲ್ಲಿ ಜನದಟ್ಟಣೆ ಇದ್ದ ಮಾಲ್‌ನಲ್ಲಿ ಶನಿವಾರ ವ್ಯಕ್ತಿಯೊಬ್ಬ ಗುಂಡಿನ ದಾಳಿ ನಡೆಸಿದ್ದು, 8 ಜನ ಮೃತರಾಗಿದ್ದಾರೆ. ಪೊಲೀಸರ ಪ್ರತಿದಾಳಿಯಲ್ಲಿ ದಾಳಿಕೋರನೂ ಮೃತಪಟ್ಟಿದ್ದಾನೆ.

ಅಲೆನ್ ಪ್ರೀಮಿಯಂ ಔಟ್‌ಲೆಟ್ಸ್ ಮಾಲ್‌ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರಿದ್ದು, ಮಧ್ಯಾಹ್ನ 3.30ರ ವೇಳೆಗೆ ಏಕಾಏಕಿಯಾಗಿ ಗನ್‌ಮ್ಯಾನ್ ಗುಂಡಿನ ದಾಳಿ ನಡೆಸಿದ್ದಾನೆ. ದಾಳಿಯಲ್ಲಿ 7 ಜನ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಕಾಂಗೊದ ಪೂರ್ವ ಭಾಗದಲ್ಲಿ ಪ್ರಾಕೃತಿಕ ವಿಕೋಪ: ಹಲವರು ನಾಪತ್ತೆ

ಪ್ರವಾಹ, ಭೂಕುಸಿತ: 400 ಸಾವು



ಕಾಂಗೊದ ಸೌತ್ ಕಿವು ಪ್ರಾಂತ್ಯದ ನ್ಯಾಮುಕುಬಿ ಗ್ರಾಮದಲ್ಲಿ ಪ್ರವಾಹದಿಂದ ಹಾನಿಗೊಂಡಿರುವ ಮನೆಯ ಬಳಿ ನಿವಾಸಿಗಳು ಗುಂಪುಗೂಡಿರುವುದು –ಎಪಿ ಚಿತ್ರ

ಕಲೆಹೆ (ಕಾಂಗೊ) (ಎಪಿ): ಕಾಂಗೊದ ಪೂರ್ವಭಾಗದಲ್ಲಿ ಸಂಭವಿಸಿರುವ ಹಠಾತ್ ಪ್ರವಾಹ ಮತ್ತು ಭೂಕುಸಿತದ ಅವಘಡದಿಂದಾಗಿ ಸುಮಾರು 400 ಜನರು ಮೃತಪಟ್ಟಿದ್ದಾರೆ. ಹಲವರು ನಾಪತ್ತೆಯಾಗಿದ್ದಾರೆ.

ಸೌತ್ ಕಿವು ಪ್ರಾಂತ್ಯದ ಸ್ಥಳೀಯ ಅಧಿಕಾರಿಗಳ ಪ್ರಕಾರ, ಇತ್ತೀಚಿನ ವರ್ಷಗಳಲ್ಲಿ ಸಂಭವಿಸಿದ ತೀವ್ರ ಸ್ವರೂಪದ ಪ್ರಾಕೃತಿಕ ಅವಘಡ ಇದಾಗಿದೆ. 394 ಶವಗಳು ಪತ್ತೆಯಾಗಿವೆ. ನಾಪತ್ತೆಯಾದವರಿಗೆ ಶೋಧ ಮುಂದುವರಿದಿದೆ.

ನ್ಯಾಮುಕುಬಿ ಗ್ರಾಮದಲ್ಲಿ ನೂರಾರು ಮನೆಗಳು ಪ್ರವಾಹದಲ್ಲಿ ಕೊಚ್ಚಿ ಹೋಗಿವೆ. ಸಿಲುಕಿಕೊಂಡಿರುವವರ ರಕ್ಷಣೆಗೆ ಅವಶೇಷಗಳ ನಡುವೆ ತೀವ್ರ ಹುಡುಕಾಟ ನಡೆದಿದೆ. ಮಣ್ಣಿನಡಿಯೂ ಹಲವರು ಸಿಲುಕಿರುವ ಸಾಧ್ಯತೆಗಳಿವೆ.

ತೀವ್ರ ಜಖಂಗೊಂಡಿರುವ, ನಾಮಾವಶೇಷಗೊಂಡ ಮನೆಗಳ ಸ್ಥಳದಲ್ಲಿ ಗುಂಪುಗೂಡಿ ನಿವಾಸಿಗಳು ರೋದಿಸುತ್ತಿರುವ ಮತ್ತು ನಾಪತ್ತೆಯಾಗಿರುವ ತಮ್ಮವರಿಗಾಗಿ ಆತಂಕದಿಂದ ಹುಡುಕಾಟ ನಡೆಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಸ್ಥಳೀಯ ನಿವಾಸಿ ಅನೌರಿಟೆ ಜಿಕುಜುವಾ ಅವರು, ‘ನನ್ನ ಇಡೀ ಕುಟುಂಬ ಕಳೆದುಹೋಗಿದೆ. ನೆರೆಹೊರೆಯವರು ನಾಪತ್ತೆಯಾಗಿದ್ದಾರೆ ಗ್ರಾಮವಿಡೀ ಪಾಳುಭೂಮಿಯಾಗಿದೆ. ಮಣ್ಣು, ಕಲ್ಲುಗಳು ಆವರಿಸಿವೆ. ನಮ್ಮ ಭೂಮಿ, ಮನೆ ಎಲ್ಲಿತ್ತು ಎಂದು ಹೇಳುವುದೂ ದುಸ್ತರವಾದ ಸ್ಥಿತಿ ಇದೆ’ ಎಂದು ಪರಿಸ್ಥಿತಿಯ ಚಿತ್ರಣವನ್ನು ನೀಡಿದರು.

ಧಾರಾಕಾರ ಮಳೆಯಿಂದಾಗಿ ನದಿ ಉಕ್ಕಿ ಹರಿದಿದ್ದು, ನದಿಪಾತ್ರದಲ್ಲಿದ್ದ ಗ್ರಾಮಗಳು ತೀವ್ರ ಪರಿಣಾಮಕ್ಕೆ ತುತ್ತಾಗಿವೆ. ಏನಾಗುತ್ತಿದೆ ಎಂದು ತಿಳಿಯುವಷ್ಟರಲ್ಲಿ ಪ್ರವಾಹ ಆವರಿಸಿತ್ತು. ಹಲವು ರಸ್ತೆಗಳು ಕೊಚ್ಚಿಹೋದವು ಎಂದರು.

ರಕ್ಷಣಾ ಕಾರ್ಯದಲ್ಲಿ ತೊಡಗಿದ್ದ ಮಿಚಾಕೆ ಟಮಾನ ಅವರು, ಬದುಕುಳಿದವರು ತಮ್ಮವರ ಶವಗಳ ಹುಡುಕಾಟದಲ್ಲಿದ್ದಾರೆ. ಕೆಲವರು ಪ್ರವಾಹದಲ್ಲಿ ಕೊಚ್ಚಿಹೋಗಿರುವ ಸಾಧ್ಯತೆ ಇದೆ ಎಂದು ತಿಳಿಸಿದರು.

ರಾಷ್ಟ್ರೀಯ ಶೋಕ ಘೋಷಣೆ

ಕಾಂಗೊ ಅಧ್ಯಕ್ಷ ಫೆಲಿಕ್ಸ್ ಶಿಸೆಕೆಡಿ, ಮೃತರ ಗೌರವಾರ್ಥ ಸೋಮವಾರ ದೇಶದಾದ್ಯಂತ ರಾಷ್ಟ್ರೀಯ ಶೋಕ ಘೋಷಿಸಿದ್ದರು. ಪರಿಹಾರ ಕಾರ್ಯಗಳಿಗೆ ಸರ್ಕಾರ ತಂಡಗಳನ್ನು ಕಳುಹಿಸಿದೆ ಎಂದು ತಿಳಿಸಿದರು.

ಉಗಾಂಡಾ, ಕೆನ್ಯಾದ ಕೆಲವೆಡೆ ಧಾರಾಕಾರ ಮಳೆಯಾಗಿದ್ದು, ಪೂರ್ವ ಆಫ್ರಿಕಾದ ಹಲವೆಡೆ ಸಮಸ್ಯೆಯಾಗಿದೆ. ಈ ವಾರದ ಆರಂಭದಲ್ಲಿ ಕಾಂಗೊದ ಗಡಿ ರ್‍ವಾಂಡಾದಲ್ಲಿ ಪ್ರವಾಹ, ಭೂಕುಸಿತದಿಂದ 129 ಮಂದಿ ಸತ್ತಿದ್ದರು.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸಂಕ್ಷಿಪ್ತ ಸುದ್ದಿ

ನೇಪಾಳ ಹಿಮಕುಸಿತ ಮೂವರ ಸಾವು

ಕಠ್ಮಂಡು (ಪಿಟಿಐ): ನೇಪಾಳದ ಮುಗು ಜಿಲ್ಲೆಯ ಚ್ಯಾರ್ಕು ಪಾಸ್‌ನಲ್ಲಿ ಸಂಭವಿಸಿದ ಹಿಮಕುಸಿತದಲ್ಲಿ ಮೂವರು ಮೃತಪಟ್ಟಿದ್ದು, 9 ಮಂದಿ ಗಾಯಗೊಂಡಿದ್ದಾರೆ ಎಂದು ಸ್ಥಳೀಯ ಮಾಧ್ಯಮ ಭಾನುವಾರ ವರದಿ ಮಾಡಿದೆ.

‘ಯರ್ಶಗುಂಬಾ’ (ಕಂಬಳಿಹುಳ ಶಿಲೀಂಧ್ರ) ಹೆಸರಿನ ಗಿಡ ಮೂಲಿಕೆ ಸಂಗ್ರಹಿಸಲು ಪಟರಸಿ ಮುನಿಸಿಪಾಲಿಟಿಯ 14 ಜನರು ಎತ್ತರದ ಪ್ರದೇಶಕ್ಕೆ ತೆರಳಿದ್ದರು. ಇವರಲ್ಲಿ ಮೂವರು ಮೃತಪಟ್ಟಿದ್ದು, ಉಳಿದ 9 ಜನರಿಗೆ ಸಣ್ಣ ಪುಟ್ಟ ಗಾಯಗಳಾಗಿವೆ. ಉಳಿದವರಿಗಾಗಿ ಶೋಧ ಕಾರ್ಯ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಲ್ಲಿ ಯರ್ಶಗುಂಬಾ ಗಿಡಮೂಲಿಕೆ ಸಂಗ್ರಹಿಸುವುದನ್ನು ಸ್ಥಳೀಯ ಆಡಳಿತ ನಿರ್ಬಂಧಿಸಿದೆ.

ಪಶ್ಚಿಮ ಪಂಜಾಬ್‌ನಲ್ಲಿ ಸೇನೆ ಸಮರಾಭ್ಯಾಸ

ಚಂಡೀಗಢ (ಪಿಟಿಐ): ಸೇನಾ ಸಾಮರ್ಥ್ಯ ಉನ್ನತೀಕರಿಸುವ ಸಲುವಾಗಿ ಈ ತಿಂಗಳ ಕೊನೆಯಲ್ಲಿ ಪಶ್ಚಿಮ ಪಂಜಾಬ್‌ನಲ್ಲಿ ಸಮರಾಭ್ಯಾಸ ನಡೆಸಲು ತೀರ್ಮಾನಿಸಲಾಗಿದೆ ಎಂದು ಭಾನುವಾರ ಸೇನಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

‘ಪುನರ್‌ನಿರ್ಮಾಣ ಮಾಡಲಾಗಿರುವ ಸೇನಾ ನೆಲೆಗಳು, ಹೊಸ ನೇಮಕಾತಿ, ಹೊಸ ಸುಧಾರಿತ ಶಸ್ತ್ರಗಳು ಮತ್ತು ಉಪಕರಣಗಳ ಸಾಮರ್ಥ್ಯವನ್ನು ಈ ವೇಳೆ ಪರೀಕ್ಷಿಸಲಾಗುವುದು. ಜೊತೆಗೆ, ಮುಂಜಾಗ್ರತಾ ಕ್ರಮವಾಗಿ ಪಶ್ಚಿಮ ಭಾಗದ ಮುಂಚೂಣಿ ನೆಲೆಗಳಲ್ಲಿ ಸೇನಾ ಪಡೆ ಅನುಪಾತವನ್ನು ಹೆಚ್ಚಿಸುವ ಕುರಿತೂ ಪರೀಕ್ಷೆಗಳನ್ನು ನಡೆಸಲಾಗುವುದು’ ಎಂದು ಪ್ರಕಟಣೆ ಹೇಳಿದೆ.

‘ಭಾರತದಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಹತ್ತಿಕ್ಕುತ್ತಿಲ್ಲ’

ಲಂಡನ್ (ಪಿಟಿಐ): ‘ಭಾರತದಲ್ಲಿ ಯಾವುದೇ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಹತ್ತಿಕ್ಕಲಾಗುತ್ತಿಲ್ಲ. ಅವು ಹಿಂದಿಗಿಂತಲೂ ಹೆಚ್ಚು ಬೆಳಗುತ್ತಿವೆ ಮತ್ತು ಪ್ರವರ್ಧಮಾನಗೊಳ್ಳುತ್ತಿವೆ’ ಎಂದು ಉಪ ರಾಷ್ಟ್ರಪತಿ ಜಗದೀಪ್ ಧನ್‌ಕರ್ ಹೇಳಿದ್ದಾರೆ.

ರಾಜ 3ನೇ ಚಾರ್ಲ್ಸ್ ಅವರ ಪಟ್ಟಾಭಿಷೇಕ ಸಮಾರಂಭದಲ್ಲಿ ಪಾಲ್ಗೊಳ್ಳಲು ಇಲ್ಲಿಗೆ ಆಗಮಿಸಿರುವ ಅವರು, ಸ್ವದೇಶಕ್ಕೆ ಮರಳುವ ಮುನ್ನ ಭಾರತ ಮೂಲದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

‘ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಹತ್ತಿಕ್ಕಲಾಗುತ್ತಿದೆ ಎಂದು ಭಾರತದ ಬಗ್ಗೆ ನಡೆದಿರುವ ಅಪಪ್ರಚಾರವನ್ನು, ಬ್ರಿಟನ್‌ನಲ್ಲಿ ನೆಲೆಸಿರುವ ಭಾರತ ಮೂಲದ ವಿದ್ಯಾರ್ಥಿಗಳು ಎದುರಿಸಿ ಪ್ರತ್ಯುತ್ತರ ನೀಡಬೇಕು’ ಎಂದು ಧನಕರ್ ಸಲಹೆ ಮಾಡಿದರು.

‘ತನ್ನ ಸಾಧನೆ, ದೇಶದ ಪ್ರತಿಭೆ ಕುರಿತು ಭಾರತಕ್ಕೆ ಹೆಮ್ಮೆ ಇದೆ. ವಿದ್ಯಾರ್ಥಿಗಳು ಇದನ್ನು ಸರಿಯಾಗಿ ಬಿಂಬಿಸುವ ರಾಯಭಾರಿಗಳಂತೆ ಇರಬೇಕು’ ಎಂದು ಕರೆ ನೀಡಿದರು.

‘ಭಾರತದಲ್ಲಿ ಇರುವಂತೆ ಅಭಿವ್ಯಕ್ತಿ ಸ್ವಾತಂತ್ರ್ಯ ಬೇರೆ ಯಾವುದೇ ದೇಶದಲ್ಲಿಯೂ ಇಲ್ಲ. ಪ್ರಜಾಸತ್ತಾತ್ಮಕ ಮೌಲ್ಯಗಳು ವಿಕಸನಗೊಳ್ಳುತ್ತಿವೆ. ಪ್ರಧಾನಿ ಮೋದಿ ನೇತೃತ್ವದಲ್ಲಿ ಪ್ರಜಾಪ್ರಭುತ್ವವು ಬಲಗೊಳ್ಳುತ್ತಿದೆ’ ಎಂದು ಪ್ರತಿಪಾದಿಸಿದರು.

‘ಭಾರತವು ತನ್ನ ಅರಿವಿನ ಮಿತಿಯಲ್ಲಿ, ದೇಶದ ಅಭಿವೃದ್ಧಿ ಹಾಗೂ ಜಗತ್ತಿನ ಶಾಂತಿಗಾಗಿ ಜಾಗತಿಕ ವ್ಯವಹಾರಗಳಲ್ಲಿ ಮುಂಚೂಣಿ ಸ್ಥಾನವನ್ನು ವಹಿಸುತ್ತಿದೆ’ ಎಂದು ಅವರು ಹೇಳಿದರು.

ಭಾರತದ ಗಡಿಯಲ್ಲಿ ಪಾಕ್ ವಿಮಾನ

ಲಾಹೋರ್ (ಪಿಟಿಐ): ಪಾಕಿಸ್ತಾನ್ ಇಂಟರ್‌ನ್ಯಾಷನಲ್ ಏರ್‌ಲೈನ್ಸ್‌ನ ವಿಮಾನವೊಂದು ಭಾನುವಾರ ಭಾರತದ ವಾಯುಗಡಿಯಲ್ಲಿ ಸುಮಾರು 10 ನಿಮಿಷ ಹಾರಾಟ ನಡೆಸಿದೆ ಎಂದು ಮಾಧ್ಯಮವೊಂದು ವರದಿ ಮಾಡಿದೆ.

ಮಸ್ಕತ್‌ನಿಂದ ಬಂದ ಪಿಕೆ248 ವಿಮಾನವು ಲಾಹೋರ್ ವಿಮಾನ ನಿಲ್ದಾಣದಲ್ಲಿ ಇಳಿಯಬೇಕಿತ್ತು. ಭಾರಿ ಮಳೆಯ ಕಾರಣ ಇಳಿಸಲು ಸಾಧ್ಯವಾಗಿರಲಿಲ್ಲ. ನಿಲ್ದಾಣದ ಸಿಬ್ಬಂದಿ ಕೆಲ ಹೊತ್ತು ಹಾರಾಟ ನಡೆಸಲು ಸೂಚಿಸಿದ್ದರು. ಅದರಂತೆ ಹಾರಾಟ ನಡೆಸುವಾಗ ಮಾರ್ಗ ತಿಳಿಯದೆ ಭಾರತದ ವಾಯುಗಡಿ ಪ್ರವೇಶಿಸಲಾಗಿತ್ತು ಎಂದು ವರದಿ ವಿವರಿಸಿದೆ.

ಭಾರತದ ವಾಯುಗಡಿ ಪ್ರವೇಶಿಸುವಾಗ 13,500 ಅಡಿ ಎತ್ತರದಲ್ಲಿ, ಬಳಿಕ 20,000 ಅಡಿ ಎತ್ತರದಲ್ಲಿ ವಿಮಾನ ಹಾರಾಟ ನಡೆಸಿತು. ಭಾರತದ ವಾಯುಗಡಿಯಲ್ಲಿ 10 ನಿಮಿಷದಲ್ಲಿ 120 ಕಿ.ಮೀ. ಕ್ರಮಿಸಿತು ಎನ್ನಲಾಗಿದೆ.

ಕಾಶ್ಮೀರ ವಿವಾದ: ಚೀನಾ ಪ್ರತಿಪಾದನೆ

ವಿಶ್ವಸಂಸ್ಥೆ ನಿರ್ಣಯದಂತೆ ಪರಿಹಾರ

ಇಸ್ಲಾಮಾಬಾದ್ (ಪಿಟಿಐ): ಏಕಪಕ್ಷೀಯ ಕ್ರಮಗಳಿಗೆ ಅವಕಾಶವಿಲ್ಲದಂತೆ, ವಿಶ್ವಸಂಸ್ಥೆಯ ನಿರ್ಣಯಕ್ಕೆ ಅನುಸಾರವಾಗಿ ಭಾರತ–ಪಾಕ್ ನಡುವಿನ ಕಾಶ್ಮೀರ ವಿವಾದಕ್ಕೆ ಪರಿಹಾರ ಕಂಡುಕೊಳ್ಳಬೇಕು ಎಂದು ಚೀನಾ ಪ್ರತಿಪಾದಿಸಿದೆ.

ಎರಡು ದಿನದ ಭೇಟಿಗಾಗಿ ಶನಿವಾರ ಇಲ್ಲಿಗೆ ಆಗಮಿಸಿರುವ ಚೀನಾದ ವಿದೇಶಾಂಗ ಸಚಿವ ಕ್ವಿನ್ ಗಾಂಗ್ ಅವರು, ಪಾಕಿಸ್ತಾನದ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೊ ಅವರ ಜೊತೆಗೆ ಚರ್ಚಿಸಿದರು. ನಾಲ್ಕು ಸುತ್ತಿನ ಚರ್ಚೆಯ ಬಳಿಕ ಉಭಯ ಸಚಿವರು ಈ ಕುರಿತು ಜಂಟಿ ಹೇಳಿಕೆ ನೀಡಿದರು.

ದ್ವಿಪಕ್ಷೀಯ ಬಾಂಧವ್ಯ, ಸಹಕಾರ, ರಾಜಕೀಯ, ಆರ್ಥಿಕ ಮತ್ತು ರಕ್ಷಣಾ ಕ್ಷೇತ್ರದ ಭದ್ರತೆ, ಶಿಕ್ಷಣ ಒಳಗೊಂಡು ಹಲವು ವಿಷಯಗಳು ಚರ್ಚೆಯಲ್ಲಿ ಬಂದವು. ದಕ್ಷಿಣ ಏಷ್ಯಾದಲ್ಲಿ ಶಾಂತಿ, ಸ್ಥಿರತೆ ಕಾಯ್ದುಕೊಳ್ಳುವ ಮಹತ್ವದ ಹಿನ್ನೆಲೆಯಲ್ಲಿ ಬಾಕಿ ಉಳಿದಿರುವ ಎಲ್ಲ ವಿವಾದಗಳನ್ನು ಇತ್ಯರ್ಥಪಡಿಸಿಕೊಳ್ಳಬೇಕು ಎಂದು ಉಭಯತ್ರರು ಅಭಿಪ್ರಾಯಪಟ್ಟರು.


ಭಾರತ ಮತ್ತು ಪಾಕ್ ನಡುವಣ ಕಾಶ್ಮೀರ ವಿವಾದಕ್ಕೆ ಇತಿಹಾಸವೇ ಇದೆ. ವ್ಯವಸ್ಥಿತ ಮತ್ತು ಶಾಂತಿಯುತವಾಗಿ, ವಿಶ್ವಸಂಸ್ಥೆಯ ನಿರ್ಣಯಕ್ಕೆ ಅನುಗುಣವಾಗಿ ಇದನ್ನು ಬಗೆಹರಿಸಿಕೊಳ್ಳಬೇಕು ಎಂದು ಚೀನಾದ ಸಚಿವರು ಹೇಳಿದರು.

ಭಾರತದ ಜಮ್ಮು ಮತ್ತು ಕಾಶ್ಮೀರ ಕುರಿತು ಚೀನಾ ಮತ್ತು ಪಾಕಿಸ್ತಾನ ಅನಗತ್ಯವಾಗಿ ವಿಶ್ವಸಂಸ್ಥೆಯ ಸಭೆಯಲ್ಲಿ ಉಲ್ಲೇಖಿಸುತ್ತಿವೆ ಎಂದು ಭಾರತ ಈಗಾಗಲೇ ಚೀನಾ ಮತ್ತು ಪಾಕಿಸ್ತಾನದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿತ್ತು.


ಮುಖ್ಯಾಂಶಗಳು

- ಭಾರತ–ಪಾಕಿಸ್ತಾನ ನಡುವಣ ವಿವಾದ
- ಕ್ವಿನ್ ಗಾಂಗ್–ಬಿಲಾವಲ್ ಭುಟ್ಟೊ ಮಾತುಕತೆ
- ಉಭಯ ಸಚಿವರಿಂದ ಜಂಟಿ ಹೇಳಿಕೆ ಬಿಡುಗಡೆ

ಶಿಕ್ಷಣ



ಸಿಎಂಎಂ, ಸಿಎಫ್‌ಎ ಕೋರ್ಸ್ ಕಲಿಕೆ ಹೇಗೆ?



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

1. ನಾನು ಬಿಕಾಂ ಅಂತಿಮ ವರ್ಷದಲ್ಲಿದ್ದು, ಎಂಬಿಎ ಮಾಡಬೇಕೆಂದುಕೊಂಡಿದ್ದೇನೆ. ಹಾಗೆಯೇ ಸಿಎಂಎ ಮತ್ತು ಸಿಎಫ್‌ಎ ಕೋರ್ಸ್‌ಗಳ ಬಗ್ಗೆಯೂ ಆಸಕ್ತಿಯಿದೆ. ಈ ಕೋರ್ಸ್‌ಗಳ ಬಗ್ಗೆ ಮಾಹಿತಿ ನೀಡಿ.

ಅದಿತಿ ದೇಶ್‌ಪಾಂಡೆ, ಕೊಪ್ಪಳ.

ಎಂಬಿಎ ಕೋರ್ಸ್ ಜೊತೆಗೆ ನಿಮ್ಮ ಆದ್ಯತೆಯಂತೆ, ಹೆಚ್ಚಿನ ತಜ್ಞತೆಗಾಗಿ ಸಿಎಂಎ ಅಥವಾ ಸಿಎಫ್‌ಎ ಕೋರ್ಸ್ ಮಾಡಬಹುದು. ಹೆಚ್ಚಿನ ಮಾಹಿತಿಗಾಗಿ ಗಮನಿಸಿ:https://www.getmyuni.com/articles/cfa-vs-cma

2. ನಾನು ದ್ವಿತೀಯ ಪಿಯುಸಿ ಮುಗಿಸಿ ಕೆಸಿಇಟಿ ಪರೀಕ್ಷೆ ಬರೆಯುತ್ತಿದ್ದೇನೆ. ಯಾವ ವೃತ್ತಿಪರ ಕೋರ್ಸ್ ಆರಿಸಿದರೆ ಉತ್ತಮ?

ಕುಸುಮ, ತುಮಕೂರು.

ಬದುಕಿನಲ್ಲಿ ಯಶಸ್ಸು ಗಳಿಸಲು ಇಂತದ್ದೇ ಕೋರ್ಸ್ ಅಥವಾ ವೃತ್ತಿಯನ್ನು ಅನುಸರಿಸಬೇಕೆಂಬ ನಿಯಮವೇನಿಲ್ಲ. ಆದರೆ, ನಿಮಗೆ ಆಸಕ್ತಿಯಿರುವ, ಅಭಿರುಚಿಯಿರುವ, ಸ್ವಾಭಾವಿಕ ಪ್ರತಿಭೆಯಿರುವ ವೃತ್ತಿಯನ್ನು ಅನುಸರಿಸಿದರೆ ಯಶಸ್ಸು ಸುಲಭವೆನ್ನುವುದು ನಿರ್ವಿವಾದ. ಹಾಗಾಗಿ, ನಿಮ್ಮ ಸಾಮರ್ಥ್ಯ ಅರಿಯಲು ಆಪ್ಟಿಟ್ಯೂಡ್ ಟೆಸ್ಟ್ ಮಾಡಿ, ಅದನ್ನು ಆಧರಿಸಿ ಸೂಕ್ತ ವೃತ್ತಿ ಮತ್ತು ಕೋರ್ಸ್ ಆಯ್ಕೆ ಮಾಡುವುದು ಸೂಕ್ತ.

ಇನ್ನಷ್ಟು ಪ್ರಶ್ನೋತ್ತರಗಳಿಗಾಗಿ https://www.prajavani.net/education-career/education **ಜಾಲ ತಾಣಕ್ಕೆ ಭೇಟಿ ನೀಡಿ**

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಪಿಯುಸಿ- ಸಿಇಟಿ ಪರೀಕ್ಷೆ ದಿಕ್ಸೂಚಿ

BIOLOGY

MULTIPLE CHOICE QUESTIONS

89. Identify the DNA segment which is not a palindromic sequence

Ans:- (……Contd)

Expln:- Palindromic sequence is a nucleic acid sequence that is the same whether read from $5'$-$3'$ of on strand or $3'$-$5'$ on the complementary strand with which each forms a double helix or they are inverted repeats of nucleotides on dsDNA and the restriction sites of restriction endonucleases.

Thus, according to this out of all the sequences given in the options, only sequence which palindromic is

$5'$ - GGATCC –$3'$
$3'$ – GGTACC–$5'$

90. During somatic hybridization in plants,

(a) somaclones are produced in large numbers

(b) The apical meristems are cultured to get virus-free plants

(c) The cell walls and the middle lamella are digested before fusing the cells

(d) Crop plants with higher levels of vitamins, proteins and minerals are hybridized.

Ans:(c) Somatic hybridization is the technique used in laboratories in which protoplasts of two different plant species are fused together on a suitable nutrient medium to develop a hybrid known as somatic hybrid. During this process, cell walls and middle lamella of the single cells are digested by the enzymes like pectinases and cellulases to expose the marked protoplasts.

After which these isolated protoplasts are fused to obtain hybrid protoplast under sterile condition. This fusion is induced by Polyethylene Glycol (PEG).

91. Statement (A) The secretion of collateral gland forms the egg case in cockroach.

Statement (B) The development in cockroach in hemimetabolous.

(a) Both the statements 'A' and B are correct and 'B' is the reason for 'A'

(b) Both the statement 'A' and 'B' are correct and 'B' is not the reason for 'A'

(c) Statement 'A' is correct and statement 'B' is wrong

(d) Statement 'B' is correct and statement 'A' is wrong

Ans:(b) Collaterial glands are organs associated with female genital apparatus. In cockroaches these glands are present between the third and fourth abdominal segment of female that secretes egg case of ootheca. And hemimetabolous (incomplete metamorphosis) is the type of development in which young ones does not resemble the adult. Their life cycles includes three stages, i,e., there is no pupal stage.

The nymph of ten somewhat resembles the adults in many features. They gradually become adult under the parental care. Thus, this shows that of ten both statements are correct they are related to each other.

92. if a plant produces flowers when exposed only to alternating periods of 5 hours light and 3 hours dark in a 24-hour cycle, then the plant should be a

(a) Short day plant (b) Long day plant
(c) Short-long day plant (d) Day neutral plant

Ans:(b) Long day plants are those which begin to flower when the day length exceeds the normal or critical length. They requires long day light period. Thus, according to the condition given in the question, if a plant is producing flowers when it is exposed to light and dark periods for 5 and 3 hrs respectively, in a 24 hrs peiod alternatively, then the plant is a long day plant because here plant is exposed to a light for a period of 15 hrs and darkness for 9 hrs (total 24 hrs).

Thus, due to this the day length is more than darkness, the plant is said a long day plant.

93. If there was no carbon dioxide in the earth's atmosphere, the temperature of the earth's surface would be

(a) Same as the present level
(b) More than the present level
(c) Less than the present level
(d) Dependent on the oxygen content in the atmosphere

Ans:(c) Carbon dioxide (CO_2) in a greenhouse gas present in the upper atmosphere. It is called greenhouse gas because it is responsible for the greenhouse effect (a naturally occurring phenomenon responsible for heating of earth's surface and atmosphere).

If there was no CO_2 in the earth's atmosphere, the temperature of the earth's surface would be less than the present level because CO_2 has the property of trapping heat on earth surface.

Hence, CO_2, as a green house gas has made the earth habitable by maintaining the adequate amount of temperature on earth's surface.

ಮಾಹಿತಿ: ಬ್ಲೂಸ್ಟಾರ್ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

CHEMISTRY

130) Power alcohol is a mixture of ……………

a) 80% Petrol + 20% Benzene + Small quantity of Ethanol
b) 80% Petrol + 20% Ethanol + Small quantity of Benzene
c) 80% Ethanol + 20% Benzene + Small quantity of Petrol
d) 50% Petrol + 50% Ethanol + Small quantity of Benzene

Ans:- b

131) Dalda is prepared from oils by -

a) oxidation b) reduction
c) hydrolysis d) distillation

Ans:- b

132) In the brown ring test, the brown colour of the ring is due to ……….

a) ferrous nitrate b) a mixture of NO and NO_2
c) ferric nitrate d) nitrosoferrous sulphate

Ans:- d

133) On heating with concentrated NaOH solution in an inert atmosphere of CO_2, white phosphorus gives a gas. Which of the following statement is incorrect about gas?

a) It is highly poisonous and has smell like fish.
b) It's solution in water decomposes in the presence of light.
c) It is more basic than NH_3.
d) It is less basic than NH_3.

Ans:- c

134) During osmosis, flow of water through a semipermeable membrane is:

a) from both sides of the semipermeable membrane with equal flow rates
b) from both sides of semipermeable membrane with unequal flow rate
c) from solution having lower concentration only
d) from solution having higher concentration only.

Ans:- c

135) Negative deviation from Raoult's Law is observed in which of the following binary liquid mixtures:

a) ethanol and acetone **b) benzene and toluene**
c) acetone and chloroform
d) chloroethane and bromoethane

Ans:- c

136) The sharp melting point of crystalline solids is due to ……………

a) a regular arrangement of constituent particles observed over a short distance in the crystal lattice.
b) a regular arrangement of constituent particles observed over a long distance in the crystal lattice.
c) Same arrangement of constituent particles in different directions.
d) different arrangement of constituent particles in different directions.

Ans:- b

137) Which of the following is not the characteristic of ionic solids?

a) Very low value of electrical conductivity in the molten state.
b) Brittle nature. c) Anisotropic nature.
d) very strong forces of interactions.

Ans:- a

138) The correct arrangement for the ions in the increasing order of their radii is

a) Na^+, Cl^-, Ca^{2+} b) Ca^{2+}, K^+, S^{2-}
c) Na^+, Al^{3+}, Be^{2+} d) Cl^-, F^-, S^{2-}

Ans:- b

Species	At No.	No. of e^-
Ca^{2+}	20	18
K^+	19	18
S^{2-}	16	18

The species Ca^{2+}, K^+ and S^{2-} are isoelectronic. For isoelectronic ions, the radius decreases as the nuclear charge increases. Hence, the increasing order of their radii is $Ca^{2+} < K^+ < S^{2-}$

139) The factors that influence the rate of a reaction are ………………………

a) Nature of the reactants
b) Concentration of the reactants
c) Temperature of the reaction d) all of these

Ans:- d

140) Silicon doped with electron-rich impurity forms …………. semiconductor.


a) p-type b) n-type
c) intrinsic d) insulator

Ans:- b

141) The statement that is not correct is

a) Aldose or ketose sugars in alkaline medium to not isomerise
b) Carbohydrates are optically active.
c) Pentaacetate of glucose does not react with hydroxylamine.
d) Lactose has glycosidic linkage between C_4 of glucose and C_1 of galactose unit.

Ans:- a





'ಎಐ' ಕೋರ್ಸ್

ಸಿಬಂತಿ ಪದ್ಮನಾಭ ಕೆ. ವಿ.

ಕಂಪ್ಯೂಟರ್‌ಗಳು ಮನುಷ್ಯರಂತೆ ಯೋಚಿಸುವುದನ್ನು ಕಲಿಯಲಾರಂಭಿಸಿ ಬಹಳ ವರ್ಷಗಳಾದವು. ಹೀಗೆ ಯೋಚಿಸುವಂತಾಗುವುದಕ್ಕೆ ಹಲವು ತಂತ್ರಾಂಶ-ತಂತ್ರಜ್ಞಾನಗಳು ಕಾರಣ. ಅಂತಹ ತಂತ್ರಜ್ಞಾನಗಳಲ್ಲಿ ಒಂದಾದ 'ಕೃತಕ ಬುದ್ಧಿಮತ್ತೆ'(ಎಐ) ಈಗ ಬಹುತೇಕ ರಂಗಗಳಿಗೆ ಕಾಲಿಟ್ಟಿದೆ. ಈ 'ಎಐ' ಕಾರಣದಿಂದಾಗಿ ಜಾಲತಾಣಗಳು ನಮಗಿಂತ ಒಂದು ಹೆಜ್ಜೆ ಮುಂದೆ ಹೋಗಿ ನಮ್ಮನ್ನೇ ಚಕಿತಗೊಳಿಸುವಂತೆ ವರ್ತಿಸುತ್ತಿವೆ. ಚಾಲಕನಿಲ್ಲದೆ ಚಲಿಸುವ ಕಾರುಗಳ ಕನಸು ನನಸಾಗಿದೆ. ಮಾನವ ಸಹಜ ಭಾವನೆಗಳನ್ನು ವ್ಯಕ್ತಪಡಿಸುವ ರೊಬೋಟ್‌ಗಳು ಬಂದಿವೆ. ಚಾಟ್‌ಜಿಪಿಟಿ ಇತ್ತೀಚೆಗೆ ಹೆಚ್ಚು ಚರ್ಚೆಯಲ್ಲಿರುವ ವಿದ್ಯಮಾನ. ಇವೆಲ್ಲ 'ಎಐ' ತಂತ್ರಜ್ಞಾನದ ಭಾಗ. ಭವಿಷ್ಯದ ಶೇ 80ರಷ್ಟು ತಂತ್ರಜ್ಞಾನಗಳು ಕೃತಕ ಬುದ್ಧಿಮತ್ತೆಯನ್ನು ಅವಲಂಬಿಸಲಿವೆ ಎನ್ನುತ್ತಾರೆ ವಿಜ್ಞಾನಿಗಳು.

ಸಹಜವಾಗಿಯೇ ಈ ಕ್ಷೇತ್ರಕ್ಕೆ ಅಗತ್ಯವಿರುವ ಮಾನವ ಸಂಪನ್ಮೂಲದ ಹುಡುಕಾಟ ಹೆಚ್ಚಾಗಿದೆ. ಇಷ್ಟೊಂದು ವೇಗವಾಗಿ ಬೆಳೆಯುತ್ತಿರುವ ರಂಗದಲ್ಲಿ ಕೆಲಸ ಮಾಡಲು ಕೃತಕ ಬುದ್ಧಿಮತ್ತೆಯ ಕೌಶಲಗಳನ್ನು ಅಭ್ಯಾಸ ಮಾಡಿದ ಯುವಕರ ಅಗತ್ಯವಿದೆ. ಇದಕ್ಕೆ ತಕ್ಕಂತೆ ಎಐ ಕುರಿತಾದ ಹೊಸಹೊಸ ಕೋರ್ಸ್‌ಗಳೂ ಶಿಕ್ಷಣಕ್ರಮದ ವ್ಯಾಪ್ತಿಯಲ್ಲಿ ಕಾಣಿಸಿಕೊಂಡಿವೆ. ಪ್ರಾಥಮಿಕ ಹಂತದ ಕೋರ್ಸ್‌ಗಳಿಂದ ಉನ್ನತ ಅಧ್ಯಯನದವರೆಗೆ ಹಲವು ಹಂತಗಳ ಕೋರ್ಸ್‌ಗಳು ಈಗ ಔಪಚಾರಿಕ ಪದವಿಗಳ ಭಾಗವಾಗಿ ಮತ್ತು ಆನ್‌ಲೈನ್ ವಿಧಾನಗಳಲ್ಲಿ ಲಭ್ಯವಾಗುತ್ತಿವೆ.

ಏನಿದು ಕೋರ್ಸ್?

'ಆರ್ಟಿಫಿಶಿಯಲ್ ಇಂಟೆಲಿಜೆನ್ಸ್'ನ ಕಲಿಕೆಗೆ ಹಲವು ಆಯಾಮಗಳು. ಮಷಿನ್ ಲರ್ನಿಂಗ್, ನ್ಯೂಟ್ರಲ್ ನೆಟ್‌ವರ್ಕ್ಸ್, ಡೀಪ್ ಲರ್ನಿಂಗ್, ಕಂಪ್ಯೂಟರ್ ವಿಷನ್, ನ್ಯಾಚುರಲ್ ಲ್ಯಾಂಗ್ವೇಜ್ ಪ್ರಾಸೆಸಿಂಗ್- ಹೀಗೆ ಅನೇಕ ವಿಭಾಗಗಳನ್ನು ಅಭ್ಯಾಸ ಮಾಡಬೇಕಾಗುತ್ತದೆ. ನಾವು ಆರಿಸಿ ಕೊಳ್ಳುವ ಕೋರ್ಸ್‌ಗಳು ಯಾವುದಾದರೂ ಒಂದು ಆಯಾಮವನ್ನು ಅಥವಾ ಹೆಚ್ಚು ಆಯಾಮಗಳನ್ನು ಒಳಗೊಂಡಿರಬಹುದು. ಎಐ ಕುರಿತ ಪ್ರಾಥಮಿಕ ತಿಳುವಳಿಕೆ ನೀಡುವ ಕೋರ್ಸ್‌ಗಳು, ಸರ್ಟಿಫಿಕೇಟ್ ಕೋರ್ಸ್‌ಗಳು, ಪದವಿ ಹಾಗೂ ಸ್ನಾತಕೋತ್ತರ ಕೋರ್ಸುಗಳೂ ಲಭ್ಯವಿವೆ. ಪ್ರಾಥಮಿಕ ಜ್ಞಾನ ಹಾಗೂ ಕೌಶಲಗಳನ್ನು ಒದಗಿಸುವ ಕೋರ್ಸ್‌ಗಳನ್ನು ಆರಂಭದಲ್ಲಿ ಆಯ್ದುಕೊಳ್ಳುವುದು ಸೂಕ್ತ.

ಯಾರು ಕಲಿಯಬಹುದು?

ಇದು ಕೊಂಚ ತಾಂತ್ರಿಕ ವಿಷಯವಾಗಿರುವುದರಿಂದ ಪಿಯುಸಿ ಅಥವಾ ಪದವಿಯಲ್ಲಿ ವಿಜ್ಞಾನ ವಿಷಯಗಳನ್ನು ವ್ಯಾಸಂಗ ಮಾಡಿರುವವರು ಅಥವಾ ಮಾಡುತ್ತಿರುವವರಿಗೆ ಆಸಕ್ತಿಕರ ಎನಿಸಬಹುದು. ಪಿಯುಸಿ ಇಲ್ಲವೇ ಪದವಿಯಲ್ಲಿ ಕಂಪ್ಯೂಟರ್ ಸೈನ್ಸ್ ಅಥವಾ ಕಂಪ್ಯೂಟರ್ ಅಪ್ಲಿಕೇಶನ್ಸ್ ಅನ್ನು ಒಂದು ವಿಷಯವಾಗಿ ಅಧ್ಯಯನ ಮಾಡುತ್ತಿರುವವರು ಅದರ ಜೊತೆಗೆ 'ಎಐ' ಕುರಿತ ಕೋರ್ಸ್‌ಗಳನ್ನು ತೆಗೆದುಕೊಂಡರೆ ಭವಿಷ್ಯಕ್ಕೆ ಉಪಯುಕ್ತ. ಇಂಗ್ಲಿಷ್ ಓದುವ, ಅರ್ಥಮಾಡಿಕೊಳ್ಳುವ ಪ್ರಾಥಮಿಕ ಸಾಮರ್ಥ್ಯ ಅಗತ್ಯ. ಎಂಜಿನಿಯರಿಂಗ್‌ನಲ್ಲೇ ಇಂದು ಎಐ ಸ್ಪೆಷಲೈಸೇಶನ್ ಶಾಖೆಗಳು ಬಂದಿವೆ.

ಎಲ್ಲೆಲ್ಲಿವೆ ಅವಕಾಶಗಳು: ಹಣಕಾಸು ಸೇವಾಸಂಸ್ಥೆಗಳು, ಆರೋಗ್ಯ, ತಂತ್ರಜ್ಞಾನ, ಮಾಧ್ಯಮ, ಮಾರ್ಕೆಟಿಂಗ್, ಸರ್ಕಾರ, ಮಿಲಿಟರಿ, ಭದ್ರತೆ, ಕೃಷಿ, ಗೇಮಿಂಗ್- ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಎಐ ಬಳಕೆಯಾಗುತ್ತಿದೆ. ಹೀಗಾಗಿ ಎಐ ಉದ್ಯೋಗಾವಕಾಶಗಳು ವೇಗವಾಗಿ ಬೆಳೆಯುತ್ತಿವೆ.

(ಮುಂದಿನ ವಾರ: ವೆಬ್ ಡಿಸೈನಿಂಗ್ ಕೋರ್ಸ್)

(ಲೇಖಕರು: ಸಹಾಯಕ ಪ್ರಾಧ್ಯಾಪಕ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ತುಮಕೂರು ವಿವಿ)

ಎಲ್ಲಿ ಲಭ್ಯ?

- ಇನ್ಫೋಸಿಸ್ ಸ್ಪ್ರಿಂಗ್ ಬೋರ್ಡ್ ಯೋಜನೆಯ ಮೂಲಕ ನೂರಕ್ಕೂ ಹೆಚ್ಚು ಎಐ ಕುರಿತಾದ ಕೋರ್ಸುಗಳನ್ನು ಒದಗಿಸುತ್ತಿದೆ. ಇವುಗಳಲ್ಲಿ ಪ್ರಾಥಮಿಕ, ಮಾಧ್ಯಮಿಕ ಹಾಗೂ ಉನ್ನತ ಮಟ್ಟದ ಕೋರ್ಸ್‌ಗಳಿದ್ದು, ಉಚಿತವಾದವೂ ಸಾಕಷ್ಟು ಇವೆ. ಕೊಂಡಿ: https://infyspringboard.onwingspan.com/
- ಗೂಗಲ್ ಕಂಪೆನಿಯು 'ಎಲಿಮೆಂಟ್ಸ್ ಆಫ್ ಎಐ' ಎಂಬ 30 ಗಂಟೆಗಳ ಉಚಿತ ಕೋರ್ಸನ್ನು ನೀಡುತ್ತಿದೆ. ಇದು ಆರಂಭಿಕ ಹಂತದಲ್ಲಿರುವವರಿಗೆ ಸೂಕ್ತ. ಫಿನ್ಲೆಂಡಿನ ಹೆಲ್ಸಿಂಕಿ ವಿಶ್ವವಿದ್ಯಾನಿಲಯವು ಈ ಕೋರ್ಸನ್ನು ಅಭಿವೃದ್ಧಿಪಡಿಸಿದೆ. ಕೊಂಡಿ: https://learndigital.withgoogle.com/digitalgarage/
- ಭಾರತ ಸರ್ಕಾರದ ಶಿಕ್ಷಣ ಸಚಿವಾಲಯ ರೂಪಿಸಿರುವ 'ಸ್ವಯಂ' ಕೆಲವು ಎಐ ಕೋರ್ಸ್‌ಗಳನ್ನು ಸಿದ್ಧಪಡಿಸಿದ್ದು ಉಚಿತವಾಗಿ ಕಲಿಯಬಹುದು. ಇವುಗಳಲ್ಲಿ ಮದ್ರಾಸ್ ಹಾಗೂ ದೆಹಲಿ ಐಐಟಿಗಳು ರೂಪಿಸಿರುವ ಕೋರ್ಸ್‌ಗಳೂ ಇವೆ. ಪದವಿ ಹಂತದಲ್ಲಿರುವವರು ಈ ಆನ್‌ಲೈನ್ ಕೋರ್ಸ್‌ಗಳ ಪ್ರಯೋಜನ ಪಡೆಯಬಹುದು. ಕೊಂಡಿ: https://onlinecourses.swayam2.ac.in/
- ಗ್ರೇಟ್ ಲರ್ನಿಂಗ್ ಎಂಬ ಸಂಸ್ಥೆ ಎಐಗೆ ಸಂಬಂಧಿಸಿದ ಅನೇಕ ಸಣ್ಣ ಅವಧಿಯ ಕೋರ್ಸ್‌ಗಳನ್ನು ನೀಡುತ್ತಿದೆ. ಡಿಜಿಟಲ್ ಇಮೇಜ್ ಪ್ರಾಸೆಸಿಂಗ್, ಮಲ್ಟಿ ಲೇಯರ್ ಪರ್‌ಸೆಪ್ಷನ್, ಡೀಪ್ ಲರ್ನಿಂಗ್, ಮಶಿನ್ ಲರ್ನಿಂಗ್ ಮುಂತಾದ ವಿಷಯಗಳಿಗೆ ಪ್ರತ್ಯೇಕ ಕೋರ್ಸ್‌ಗಳಿವೆ. ಕೊಂಡಿ: https://www.mygreatlearning.com/ai/free-courses



ಗುಜರಾತ್ ಟೈಟನ್ಸ್‌ಗೆ ಮಣಿದ ಲಖನೌ ಸೂಪರ್ ಜೈಂಟ್ಸ್; ವೃದ್ಧಿಮಾನ್ ಸಹಾ ಅರ್ಧಶತಕ

ಗಿಲ್ ಅಬ್ಬರ, ಮೋಹಿತ್ ಬಿರುಗಾಳಿ



ಗುಜರಾತ್ ಟೈಟನ್ಸ್ ಆರಂಭಿಕ ಜೋಡಿ ವೃದ್ಧಿಮಾನ್ ಸಹಾ ಹಾಗೂ ಶುಭಮನ್ ಗಿಲ್ –ಎಎಫ್‌ಪಿ ಚಿತ್ರ

ಅಹಮದಾಬಾದ್ (ಪಿಟಿಐ): ಹಾಲಿ ಚಾಂಪಿಯನ್ ಗುಜರಾತ್ ಟೈಟನ್ಸ್ ತಂಡವು ಭಾನುವಾರ ಲಖನೌ ಸೂಪರ್ ಜೈಂಟ್ಸ್ ಎದುರು ಜಯಿಸಿ, ಐಪಿಎಲ್ ಪ್ಲೇಆಫ್ ಹೊಸ್ತಿಲಿಗೆ ಬಂದು ನಿಂತಿತು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 56 ರನ್‌ಗಳ ಭಾರಿ ಅಂತರದಿಂದ ಗುಜರಾತ್ ಜಯಿಸಿತು. ಅಣ್ಣ ಹಾಗೂ ತಮ್ಮನ ಹಣಾಹಣಿಯೆಂದೇ ಈ ಪಂದ್ಯ ಗಮನ ಸೆಳೆದಿತ್ತು. ಇದರಲ್ಲಿ ಹಾರ್ದಿಕ್ ಬಳಗವು ಅಣ್ಣ ಕೃಣಾಲ್ ಪಡೆಯನ್ನು ಸೋಲಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ತಂಡಕ್ಕೆ ಆರಂಭಿಕ ಜೋಡಿ ಶುಭಮನ್ ಗಿಲ್ (ಅಜೇಯ 94) ಹಾಗೂ ವೃದ್ಧಿಮಾನ್ ಸಹಾ (81 ರನ್) ಗಟ್ಟಿ ಅಡಿಪಾಯ ಹಾಕಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 2 ವಿಕೆಟ್‌ಗೆ 227 ರನ್‌ಗಳನ್ನು ಗಳಿಸಿತು.

ಅನುಭವಿ ವೇಗಿ ಮೋಹಿತ್ ಶರ್ಮಾ (4–0–29–4) ಅವರ ಶಿಸ್ತಿನ ಬೌಲಿಂಗ್ ಎದುರು ಲಖನೌ ತಂಡಕ್ಕೆ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 171 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಗುಜರಾತ್ ತಂಡವು ಒಟ್ಟು 16 ಅಂಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿಯಿತು.

ಗುರಿ ಬೆನ್ನಟ್ಟಿದ್ದ ಲಖನೌ ತಂಡಕ್ಕೂ ಭರ್ಜರಿ ಆರಂಭ ದೊರೆಯಿತು. ಕೈಲ್ ಮೇಯರ್ಸ್ (48 ರನ್) ಹಾಗೂ ಕ್ವಿಂಟನ್ ಡಿ ಕಾಕ್ (70 ರನ್) ಭರ್ಜರಿ ಬ್ಯಾಟಿಂಗ್ ಮಾಡಿದರು. ಇದರಿಂದಾಗಿ ಮೊದಲ ಎಂಟು ಓವರ್‌ಗಳಲ್ಲಿ 88 ರನ್‌ಗಳು ಸೇರಿದವು. ಇದರಿಂದಾಗಿ ತಂಡವು ಗೆಲ್ಲುವ ಭರವಸೆ ಮೂಡಿಸಿತ್ತು.

ಆದರೆ ಒಂಬತ್ತನೇ ಓವರ್‌ನಲ್ಲಿ ಮೋಹಿತ್ ಎಸೆತವನ್ನು ಸಿಕ್ಸರ್‌ಗೆತ್ತಲು ಪ್ರಯತ್ನಿಸಿದ ಕೈಲ್ ಮೇಯರ್ಸ್ ಅವರ ಕ್ಯಾಚ್ ಅನ್ನು ಚುರುಕಾಗಿ ಡೈವ್ ಮಾಡಿ ಪಡೆದ ಫೀಲ್ಡರ್ ರಶೀದ್ ಖಾನ್ ಮಿಂಚಿದರು. ಇಲ್ಲಿಂದ ಲಖನೌ ಪತನವೂ ಆರಂಭವಾಯಿತು.

ಮೋಹಿತ್ ಸ್ವಿಂಗ್ ಎಸೆತಗಳಿಗೆ ಮಾರ್ಕಸ್ ಸ್ಟೊಯಿನಿಸ್, ಆಯುಷ್ ಬಡೋಣಿ (21; 11ಎ) ಹಾಗೂ ಕೃಣಾಲ್ ಪಾಂಡ್ಯ ಅವರ ವಿಕೆಟ್‌ಗಳು ಉರುಳಿದವು. ಇದರಿಂದಾಗಿ ಲಖನೌ ಬ್ಯಾಟಿಂಗ್ ಬೆನ್ನೆಲುಬು ಮುರಿದಂತಾಯಿತು.

ಇನ್ನೊಂದೆಡೆಯಿಂದ ಸ್ಪಿನ್ನರ್ ನೂರ್ ಅಹಮದ್ ಹಾಗೂ ರಶೀದ್ ಖಾನ್ ಕೂಡ ಪರಿಣಾಮಕಾರಿ ದಾಳಿ ನಡೆಸಿದರು. ದೊಡ್ಡ ಜೊತೆಯಾಟಗಳಾಗದಂತೆ ನೋಡಿಕೊಂಡರು. ಇದರಿಂದಾಗಿ ಕೇವಲ 99 ರನ್‌ಗಳ ಅಂತರದಲ್ಲಿ ಏಳು ವಿಕೆಟ್‌ಗಳು ಪತನವಾದವು.

ಸಹಾ, ಗಿಲ್ ಮಿಂಚು: ಟಾಸ್ ಗೆದ್ದ ಲಖನೌ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ, ಮೊದಲ ವಿಕೆಟ್ ಜೊತೆಯಾಟದಲ್ಲಿ ಸಹಾ ಹಾಗೂ ಗಿಲ್ 142 ರನ್‌ಗಳನ್ನು ಸೇರಿಸಿ ಬೌಲರ್‌ಗಳನ್ನು ಕಾಡಿದರು. 12 ಓವರ್‌ಗಳವರೆಗೂ ಲಖನೌ ಬೌಲರ್‌ಗಳಿಗೆ ವಿಕೆಟ್ ಲಭಿಸಲಿಲ್ಲ.

ಸಹಾ ಹತ್ತು ಬೌಂಡರಿ ಹಾಗೂ ನಾಲ್ಕು ಸಿಕ್ಸರ್ ಸಿಡಿಸಿದರು. ಗಿಲ್ ಕೇವಲ 51 ಎಸೆತಗಳನ್ನು ಎದುರಿಸಿ 94 ರನ್ ಗಳಿಸಿದರು. ಅದರಲ್ಲಿ ಎರಡು ಬೌಂಡರಿ ಹಾಗೂ ಏಳು ಸಿಕ್ಸರ್‌ಗಳಿದ್ದವು.

ನಾಯಕ ಹಾರ್ದಿಕ್ (25; 15ಎ) ಹಾಗೂ ಡೇವಿಡ್ ಮಿಲ್ಲರ್ (ಔಟಾಗದೆ 21) ಕೂಡ ಕಾಣಿಕೆ ನೀಡಿದರು. ಇದರಿಂದಾಗಿ ತಂಡವು ಬೃಹತ್ ಮೊತ್ತ ಗಳಿಸಿತು.

ಸ್ಕೋರ್ ಕಾರ್ಡ್

ಗುಜರಾತ್ ಟೈಟನ್ಸ್ 2ಕ್ಕೆ 227 (20 ಓವರ್)
ವೃದ್ಧಿಮಾನ್ ಸಿ ಪ್ರೇರಕ್ (ಬದಲಿ) ಬಿ ಆವೇಶ್ 81 (43ಎ, 4X10, 6X4)
ಶುಭಮನ್ ಔಟಾಗದೆ 94 (51ಎ, 4X2, 6X7)
ಹಾರ್ದಿಕ್ ಸಿ ಕೃಣಾಲ್ ಬಿ ಮೊಹಸಿನ್ 25 (15ಎ, 4X1, 6X2)
ಮಿಲ್ಲರ್ ಔಟಾಗದೆ 21 (12ಎ, 4X2, 6X1)
ಇತರೆ: 6 (ಲೆಗ್‌ಬೈ 1, ನೋಬಾಲ್ 1, ವೈಡ್ 4)
ವಿಕೆಟ್ ಪತನ: 1-142 (ವೃದ್ಧಿಮಾನ್ ಸಹಾ, 12.1), 2-184 (ಹಾರ್ದಿಕ್ ಪಾಂಡ್ಯ, 15.6)
ಬೌಲಿಂಗ್: ಮೊಹಸಿನ್ ಖಾನ್ 3–0–42–1, ಆವೇಶ್ ಖಾನ್ 4–0–34–1, ಕೃಣಾಲ್ ಪಾಂಡ್ಯ 4–0–38–0, ಯಶ್ ಠಾಕೂರ್ 4–0–48–0, ರವಿ ಬಿಷ್ಣೋಯಿ 2–0–21–0, ಕೈಲ್ ಮೇಯರ್ಸ್ 1–0–16–0, ಸ್ವಪ್ನಿಲ್ ಸಿಂಗ್ 1–0–7–0, ಮಾರ್ಕಸ್ ಸ್ಟೊಯಿನಿಸ್ 1–0–20–0

ಲಖನೌ ಸೂಪರ್ ಜೈಂಟ್ಸ್ 7ಕ್ಕೆ 171 (20 ಓವರ್)
ಮೇಯರ್ಸ್ ಸಿ ರಶೀದ್ ಬಿ ಮೋಹಿತ್ 48 (32ಎ, 4X7, 6X2)
ಡಿಕಾಕ್ ಬಿ ರಶೀದ್ 70 (41ಎ, 4X7, 6X3)
ಹೂಡಾ ಸಿ ತೆವಾಟಿಯಾ ಬಿ ಶಮಿ 11 (11ಎ)
ಸ್ಟೊಯಿನಿಸ್ ಸಿ ಶಮಿ ಬಿ ಮೋಹಿತ್ 4 (9ಎ)
ಪೂರನ್ ಸಿ ಶಮಿ ಬಿ ನೂರ್ 3 (6ಎ)
ಆಯುಷ್ ಸಿ ನೂರ್ ಬಿ ಮೋಹಿತ್ 21 (11ಎ, 4X1, 6X2)
ಸ್ವಪ್ನಿಲ್ ಔಟಾಗದೆ 2 (4ಎ)
ಕೃಣಾಲ್ ಸಿ ಮಿಲ್ಲರ್ ಬಿ ಮೋಹಿತ್ 0 (1ಎ)
ರವಿ ಔಟಾಗದೆ 4 (5ಎ, 4X1)
ಇತರೆ: 8 (ಲೆಗ್‌ಬೈ 3, ವೈಡ್ 5)
ವಿಕೆಟ್ ಪತನ: 1-88 (ಕೈಲ್ ಮೇಯರ್ಸ್, 8.2), 2-114 (ದೀಪಕ್ ಹೂಡಾ, 12.2), 3-130 (ಮಾರ್ಕಸ್ ಸ್ಟೊಯಿನಿಸ್, 14.5), 4-140 (ಕ್ವಿಂಟನ್ ಡಿಕಾಕ್, 15.6), 5-153 (ನಿಕೊಲಸ್ ಪೂರನ್, 17.2), 6-166 (ಆಯುಷ್ ಬಡೋಣಿ, 18.5), 7-166 (ಕೃಣಾಲ್ ಪಾಂಡ್ಯ, 18.6)
ಬೌಲಿಂಗ್: ಮೊಹಮ್ಮದ್ ಶಮಿ 4–0–37–1, ಹಾರ್ದಿಕ್ ಪಾಂಡ್ಯ 3–0–37–0, ರಶೀದ್ ಖಾನ್ 4–0–34–1, ನೂರ್ ಅಹಮದ್ 4–0–26–1, ಮೋಹಿತ್ ಶರ್ಮಾ 4–0–29–4, ಅಲ್ಜರಿ ಜೋಸೆಫ್ 1–0–5–0

ಫಲಿತಾಂಶ: ಗುಜರಾತ್ ಟೈಟನ್ಸ್‌ಗೆ 56 ರನ್‌ಗಳ ಜಯ

ಸನ್‌ರೈಸರ್ಸ್‌ಗೆ ರೋಚಕ ಜಯ

ಕೊನೆಯ ಎಸೆತ ನೋಬಾಲ್: ರಾಜಸ್ಥಾನಕ್ಕೆ ಆಘಾತ



ರಾಹುಲ್ ತ್ರಿಪಾಠಿ ಹಾಗೂ ಅಭಿಷೇಕ್ ಶರ್ಮಾ– ಪಿಟಿಐ ಚಿತ್ರ

ಜೈಪುರ (ಪಿಟಿಐ): ನಾಟಕೀಯ ತಿರುವು ಕಂಡ ಪಂದ್ಯದ ಕೊನೆಯ ಓವರ್‌ನಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡಕ್ಕೆ ರೋಚಕ ಗೆಲುವು ಒಲಿಯಿತು.

ಜೈಪುರದ ಸವಾಯ್ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಐಪಿಎಲ್ ಪಂದ್ಯದ ಕೊನೆಯ ಎಸೆತ ನೋಬಾಲ್ ಆಗಿತ್ತು. ಮರು ಎಸೆತದಲ್ಲಿ ಚೆಂಡನ್ನು ಸಿಕ್ಸರ್‌ಗೆತ್ತಿದ ಅಬ್ದುಲ್ ಸಮದ್ ಹೈದರಾಬಾದ್ ತಂಡವು 4 ವಿಕೆಟ್‌ಗಳಿಂದ ರಾಜಸ್ಥಾನ ರಾಯಲ್ಸ್‌ಗೆ ಸೋಲುಣಿಸಲು ಕಾರಣರಾದರು.

ಮೊದಲು ಬ್ಯಾಟ್ ಮಾಡಿದ ರಾಯಲ್ಸ್, ನಿಗದಿತ ಓವರ್‌ಗಳಲ್ಲಿ 2 ವಿಕೆಟ್‌ಗೆ 214 ರನ್ ಗಳಿಸಿತು. ಹೈದರಾಬಾದ್ 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು ಗೆಲುವು ಸಾಧಿಸಿತು.

ರೋಚಕ ತಿರುವು: ಪಂದ್ಯದ ಕೊನೆಯ ಎರಡು ಓವರ್‌ಗಳಲ್ಲಿ ಹೈದರಾಬಾದ್ ತಂಡದ ಗೆಲುವಿಗೆ 41 ರನ್ ಬೇಕಿತ್ತು. ಕುಲದೀಪ್ ಯಾದವ್ ಎಸೆದ 19ನೇ ಓವರ್‌ನಲ್ಲಿ ಬ್ಯಾಟರ್ ಗ್ಲೆನ್ ಫಿಲಿಪ್ಸ್ (7 ಎಸೆತಗಳಲ್ಲಿ 25) ಹ್ಯಾಟ್ರಿಕ್ ಸಿಕ್ಸರ್ ಸೇರಿದಂತೆ 22 ರನ್ ಗಳಿಸಿ 5ನೇ ಎಸೆತದಲ್ಲಿ ಔಟಾದರು. ಕೊನೆಯ ಎಸೆತದಲ್ಲಿ ಮಾರ್ಕೊ ಜೆನ್ಸನ್ 2 ರನ್ ಗಳಿಸಿದರು.

ಕೊನೆಯ ಓವರ್ ಎಸೆಯಲು ರಾಜಸ್ಥಾನ ನಾಯಕ ಸಂಜು ಸ್ಯಾಮ್ಸನ್ ಅವರು ಸಂದೀಪ್ ಶರ್ಮಾ ಕೈಗೆ ಚೆಂಡು ನೀಡಿದರು. ಹೈದರಾಬಾದ್ ಗೆಲುವಿಗೆ 17 ರನ್ ಬೇಕಿತ್ತು. ಮೊದಲ ಎಸೆತ ಆಡಿದ ಅಬ್ದುಲ್ ಸಮದ್ ಥರ್ಡ್‌ಮ್ಯಾನ್‌ನತ್ತ ಬಾರಿಸಿದ ಚೆಂಡನ್ನು ಹಿಡಿತಕ್ಕೆ ಪಡೆಯುವಲ್ಲಿ ಒಬೆದ್ ಮೆಕಾಯ್ ವಿಫಲರಾದರು. ಸಮದ್ ಎರಡು ರನ್ ಕಲೆಹಾಕಿದರು. ಎರಡನೇ ಎಸೆತವನ್ನು ಸಿಕ್ಸರ್‌ಗೆ ಅಟ್ಟಿದರು. ಮೂರು ಮತ್ತು ನಾಲ್ಕನೇ ಎಸೆತಗಳಲ್ಲಿ ಕ್ರಮವಾಗಿ ಎರಡು ಮತ್ತು ಒಂದು ರನ್ ಬಂದವು. ಐದನೇ ಎಸೆತದಲ್ಲಿ ಜೆನ್ಸನ್ ಒಂದು ರನ್ ಗಳಿಸಿದರು. ಆರನೇ ಎಸೆತದಲ್ಲಿ ಸಂದೀಪ್, ಅಬ್ದುಲ್ ಅವರನ್ನು ಜೋಸ್ ಬಟ್ಲರ್ ಅವರಿಗೆ ಕ್ಯಾಚ್ ನೀಡುವಂತೆ ಮಾಡಿದ್ದರು. ಆದರೆ ಈ ಎಸೆತ ನೋಬಾಲ್ ಆಗಿತ್ತು. ಆಗ ತಂಡದ ಗೆಲುವಿಗೆ ನಾಲ್ಕು ರನ್ ಬೇಕಿತ್ತು. ಮರು ಎಸೆತದಲ್ಲಿ ಚೆಂಡನ್ನು ಸಿಕ್ಸರ್‌ಗೆತ್ತಿದ ಸಮದ್ ಹೈದರಾಬಾದ್ ಪಾಳಯದಲ್ಲಿ ಸಂಭ್ರಮಕ್ಕೆ ಕಾರಣರಾದರು.

ಇದಕ್ಕೂ ಮೊದಲು ಹೈದರಾಬಾದ್ ತಂಡಕ್ಕೆ ಅನ್ಮೋಲ್‌ಪ್ರೀತ್ ಸಿಂಗ್ (33), ಅಭಿಷೇಕ್ ಶರ್ಮಾ (55), ರಾಹುಲ್ ತ್ರಿಪಾಠಿ (47) ಬಿರುಸಿನ ಆಟದ ಮೂಲಕ ಉತ್ತಮ ಅಡಿಪಾಯ ಹಾಕಿಕೊಟ್ಟಿದ್ದರು. ರಾಜಸ್ಥಾನದ ಯಜುವೇಂದ್ರ ಚಾಹಲ್ 4 ವಿಕೆಟ್ ಗಳಿಸಿದರು.

ಬಟ್ಲರ್– ಸಂಜು ಸವಾರಿ: ಟಾಸ್ ಗೆದ್ದ ಸಂಜು ಬ್ಯಾಟಿಂಗ್ ಆಯ್ದು ಕೊಂಡರು. ಹೈದರಾಬಾದ್ ಬೌಲರ್‌ಗಳ ಮೇಲೆ ಸವಾರಿ ಮಾಡಿದ ಬಟ್ಲರ್ (95 ರನ್, 59 ಎ., 4X10, 6X4) ಮತ್ತು ಸಂಜು (ಔಟಾಗದೆ 66, 38 ಎ., 4X4, 5X6) ಅವರು ರಾಯಲ್ಸ್ ಮೊತ್ತವನ್ನು ದ್ವಿಶತಕದ ಗಡಿ ದಾಟಿಸಿದ್ದರು. ಯಶಸ್ವಿ ಜೈಸ್ವಾಲ್ (35, 18 ಎ., 4X5, 6X2) ಕೂಡ ಬೃಹತ್ ಮೊತ್ತಕ್ಕೆ ಕಾಣಿಕೆ ನೀಡಿದ್ದರು. ಈ ಪಂದ್ಯದ ಮೂಲಕ ಜೈಸ್ವಾಲ್ ಐಪಿಎಲ್‌ನಲ್ಲಿ 1000 ರನ್ ಪೂರೈಸಿದರು.

ಸಂಕ್ಷಿಪ್ತ ಸ್ಕೋರ್: ರಾಜಸ್ಥಾನ ರಾಯಲ್ಸ್ 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 214 (ಯಶಸ್ವಿ ಜೈಸ್ವಾಲ್ 35, ಜೋಸ್ ಬಟ್ಲರ್ 95, ಸಂಜು ಸ್ಯಾಮ್ಸನ್ ಔಟಾಗದೆ 66; ಭುವನೇಶ್ವರ್ ಕುಮಾರ್ 44ಕ್ಕೆ 1, ಮಾರ್ಕೊ ಜೆನ್ಸನ್ 44ಕ್ಕೆ 1). ಸನ್‌ರೈಸರ್ಸ್ ಹೈದರಾಬಾದ್: 20 ಓವರ್‌ಗಳಲ್ಲಿ 6 ವಿಕೆಟ್‌ಗೆ 217 (ಅನ್ಮೋಲ್‌ಪ್ರೀತ್ ಸಿಂಗ್ 33, ಅಭಿಷೇಕ್ ಶರ್ಮಾ 55, ರಾಹುಲ್ ತ್ರಿಪಾಠಿ 47, ಹೆನ್ರಿಚ್ ಕ್ಲಾಸೆನ್ 26, ಗ್ಲೆನ್ ಫಿಲಿಪ್ಸ್ 25, ಅಬ್ದುಲ್ ಸಮದ್ ಔಟಾಗದೆ 17; ಕುಲದೀಪ್ ಯಾದವ್ 50ಕ್ಕೆ1, ಆರ್.ಅಶ್ವಿನ್ 35ಕ್ಕೆ1, ಯಜು ವೇಂದ್ರ ಚಾಹಲ್ 29ಕ್ಕೆ 4). ಫಲಿತಾಂಶ: ಸನ್‌ರೈಸರ್ಸ್ ಹೈದರಾಬಾದ್‌ಗೆ 4 ವಿಕೆಟ್‌ಗಳ ಜಯ

ಏಷ್ಯನ್ ಚಾಂಪಿಯನ್‌ಷಿಪ್: ಸ್ನ್ಯಾಚ್ ವಿಭಾಗದಲ್ಲಿ ಸಾಧನೆ

ವೇಟ್‌ಲಿಫ್ಟಿಂಗ್: ಬೆಳ್ಳಿ ಜಯಿಸಿದ ಜೆರೆಮಿ



ಜೆರೆಮಿ ಲಾಲ್‌ರಿನುಂಗಾ– ಟ್ವಿಟರ್ ಚಿತ್ರ

ಜಿಂಜು, ಕೊರಿಯಾ (ಪಿಟಿಐ): ಭಾರತದ ವೇಟ್‌ಲಿಫ್ಟರ್ ಜೆರೆಮಿ ಲಾಲ್‌ರಿನುಂಗಾ ಅವರು ಇಲ್ಲಿ ನಡೆಯುತ್ತಿರುವ ಏಷ್ಯನ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನ ಪುರುಷರ 67 ಕೆ.ಜಿ. ವಿಭಾಗದ ಸ್ನ್ಯಾಚ್‌ನಲ್ಲಿ ಬೆಳ್ಳಿ ಗೆದ್ದರು. ಆದರೆ ಕ್ಲೀನ್ ಮತ್ತು ಜರ್ಕ್‌ನಲ್ಲಿ ಎಡವಿದ ಅವರು ಒಟ್ಟಾರೆ ಭಾರ ಎತ್ತುವಲ್ಲಿ ವಿಫಲರಾದರು.

ಭಾನುವಾರ ನಡೆದ ಸ್ಪರ್ಧೆಯಲ್ಲಿ ಕಣದಲ್ಲಿದ್ದ 12 ಲಿಫ್ಟರ್‌ಗಳ ಪೈಕಿ ಒಟ್ಟಾರೆ ಭಾರ ಎತ್ತುವಲ್ಲಿ ವಿಫಲರಾದದ್ದು ಜೆರೆಮಿ ಮಾತ್ರ. 2022ರ ಕಾಮನ್‌ವೆಲ್ತ್ ಕೂಟದ ಬಳಿಕ ಅವರು ಪಾಲ್ಗೊಂಡ ಮೊದಲ ಸ್ಪರ್ಧೆ ಇದಾಗಿತ್ತು. 20 ವರ್ಷದ ಅವರು ಸ್ನ್ಯಾಚ್‌ನಲ್ಲಿ 141 ಕೆ.ಜಿ. ಭಾರ ಎತ್ತಿ, ವೈಯಕ್ತಿಕ ಶ್ರೇಷ್ಠ ಸಾಧನೆ ಸರಿಗಟ್ಟುವುದರೊಂದಿಗೆ ಎರಡನೆಯವರಾದರು.

ಆರು ಪ್ರಯತ್ನಗಳಲ್ಲಿ (ಸ್ನ್ಯಾಚ್‌ನಲ್ಲಿ ಮೂರು, ಕ್ಲೀನ್ ಮತ್ತು ಜರ್ಕ್‌ನಲ್ಲಿ ಮೂರು) ಎರಡು ಸಲ ಮಾತ್ರ ಭಾರ ಎತ್ತುವಲ್ಲಿ ಜೆರೆಮಿ ಯಶ ಕಂಡರು. ಇತರ ನಾಲ್ಕು ಪ್ರಯತ್ನಗಳಲ್ಲಿ ವಿಫಲರಾದರು.

ಸ್ನ್ಯಾಚ್‌ನಲ್ಲಿ ಮೊದಲ ಪ್ರಯತ್ನದಲ್ಲಿ 137 ಕೆ.ಜಿ ಎತ್ತಲು ವಿಫಲರಾದ ಅವರು ಎರಡನೇ ಪ್ರಯತ್ನದಲ್ಲಿ ಯಶಸ್ಸು ಸಾಧಿಸಿದರು. ಮೂರನೇ ಪ್ರಯತ್ನದಲ್ಲಿ 141 ಕೆ.ಜಿ.ಗೆ ಹೆಚ್ಚಿಸಿ, ಯಶ ಕಂಡರು.

ಕ್ಲೀನ್ ಮತ್ತು ಜರ್ಕ್‌ನಲ್ಲಿ ಮೊದಲ ಎರಡು ಪ್ರಯತ್ನಗಳಲ್ಲಿ 165 ಕೆ.ಜಿ. ಭಾರ ಎತ್ತಲು ಸಾಧ್ಯವಾಗಲಿಲ್ಲ. ಆದರೂ ಮೂರನೇ ಪ್ರಯತ್ನದಲ್ಲಿ ಭಾರವನ್ನು 168 ಕೆ.ಜಿ.ಗೆ ಹೆಚ್ಚಿಸುವ ಧೈರ್ಯ ತೋರಿದರು. ಅಲ್ಲೂ ವಿಫಲರಾದ್ದರಿಂದ ಒಟ್ಟಾರೆಯಾಗಿ ಅವರು ಸ್ಪರ್ಧೆ ಕೊನೆಗೊಳಿಸಲು ವಿಫಲರಾದರು.

ಒಟ್ಟು 320 ಕೆ.ಜಿ. ಭಾರ ಎತ್ತಿದ ಚೀನಾದ ಹಿ ಯುಯಿಜಿ (147 ಕೆ.ಜಿ + 173 ಕೆ.ಜಿ) ಚಿನ್ನ ಗೆದ್ದರು. ಸ್ಥಳೀಯ ಲಿಫ್ಟರ್ ಲೀ ಸಾಂಗ್‌ಯೊನ್ (139 + 175) ಅವರು ಬೆಳ್ಳಿ ಹಾಗೂ ಉಜ್ಬೆಕಿಸ್ತಾನದ ಎರ್ಗಶೆವ್ ಅದ್ಕಮ್‌ಜೋನ್ (138 + 174) ಕಂಚು ತಮ್ಮದಾಗಿಸಿಕೊಂಡರು.

ನೈಟ್‌ರೈಡರ್ಸ್‌ಗೆ ಕಿಂಗ್ಸ್ ಸವಾಲು ಇಂದು



ಶಿಖರ್ ಧವನ್

ಕೋಲ್ಕತ್ತ (ಪಿಟಿಐ): ಆತಿಥೇಯ ಕೋಲ್ಕತ್ತ ನೈಟ್ ರೈಡರ್ಸ್ ಹಾಗೂ ಪಂಜಾಬ್ ಕಿಂಗ್ಸ್ ತಂಡಗಳು ಸೋಮವಾರ ಇಲ್ಲಿ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಎರಡೂ ತಂಡಗಳಿಗೆ ಪ್ಲೇ ಆಫ್ ಪ್ರವೇಶಿಸುವ ಹಾದಿ ಕಠಿಣವಾಗಿದೆ. ಶಿಖರ್ ಧವನ್ ನಾಯಕತ್ವದ ಪಂಜಾಬ್ ತಂಡವು 10 ಪಂದ್ಯಗಳನ್ನು ಆಡಿ ಹತ್ತು ಅಂಕಗಳನ್ನು ಗಳಿಸಿದೆ. ಇಷ್ಟೇ ಸಂಖ್ಯೆಯ ಪಂದ್ಯಗಳನ್ನಾಡಿರುವ ಕೋಲ್ಕತ್ತ ತಂಡವು 8 ಅಂಕ ಗಳಿಸಿದೆ. ಇದರಿಂದಾಗಿ ಪಂಜಾಬ್‌ಗಿಂತಲೂ ನಿತೀಶ್ ರಾಣಾ ನಾಯಕತ್ವದ ಕೋಲ್ಕತ್ತಕ್ಕೆ ಪ್ಲೇ ಆಫ್ ಪ್ರವೇಶ ಇನ್ನೂ ಕಷ್ಟವಿದೆ.

ಅದರಿಂದಾಗಿ ಈ ಪಂದ್ಯದಲ್ಲಿ ಉಭಯ ತಂಡಗಳು ತುರುಸಿನ ಹಣಾಹಣಿ ನಡೆಸುವ ನಿರೀಕ್ಷೆ ಇದೆ. ಮೊದಲ ಸುತ್ತಿನಲ್ಲಿಯೂ ಕೆಕೆಆರ್ ಹಾಗೂ ಪಂಜಾಬ್ ತಂಡಗಳು ಮುಖಾಮುಖಿಯಾಗಿದ್ದವು. ಆಗ ಪಂಜಾಬ್ ಗೆದ್ದಿತ್ತು. ಕೋಲ್ಕತ್ತ ತಂಡದಲ್ಲಿರುವ ಆಲ್‌ರೌಂಡರ್ ಸುನಿಲ್ ನಾರಾಯಣ್, ಬ್ಯಾಟರ್ ಜೇಸನ್ ರಾಯ್, ಆ್ಯಂಡ್ರೆ ರಸೆಲ್, ಗುರ್ಬಾಜ್ ಹಾಗೂ ರಿಂಕು ಸಿಂಗ್ ಅವರ ಮೇಲೆ ಬ್ಯಾಟಿಂಗ್ ವಿಭಾಗ ಅವಲಂಬಿತವಾಗಿದೆ.

ಬೌಲರ್‌ಗಳಾದ ವರುಣ ಚಕ್ರವರ್ತಿ, ಸುಯಶ್ ಶರ್ಮಾ, ಮಧ್ಯಮವೇಗಿ ಶಾರ್ದೂಲ್ ಠಾಕೂರ್ ಹಾಗೂ ವೈಭವ್ ಅರೋರಾ ಅವರು ಉತ್ತಮ ಲಯದಲ್ಲಿದ್ದಾರೆ. ಇವರ ಮುಂದೆ ಪಂಜಾಬ್ ತಂಡದ ಬ್ಯಾಟರ್‌ಗಳಾದ ಶಿಖರ್, ಜಿತೇಶ್ ಶರ್ಮಾ, ಲಿಯಾಮ್ ಲಿವಿಂಗ್‌ಸ್ಟೋನ್ ಮತ್ತು ಶಾರೂಕ್ ಖಾನ್ ಅವರಿಗೆ ತಡೆಯೊಡ್ಡುವ ಸವಾಲು ಇದೆ. ಸ್ಯಾಮ್ ಕರನ್, ಅರ್ಷದೀಪ್ ಸಿಂಗ್, ಕಗಿಸೊ ರಬಾಡ ಪಂಜಾಬ್ ತಂಡದ ಬೌಲಿಂಗ್ ಶಕ್ತಿಯಾಗಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನಿಮಾ ಆ್ಯಪ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಗುಜರಾತ್	11	8	3	0	16	0.951
ಚೆನ್ನೈ	11	6	4	1	13	0.409
ಲಖನೌ	11	5	5	1	11	0.294
ರಾಜಸ್ಥಾನ	11	5	6	0	10	0.388
ಬೆಂಗಳೂರು	10	5	5	0	10	-0.209
ಮುಂಬೈ	10	5	5	0	10	-0.454
ಪಂಜಾಬ್	10	5	5	0	10	-0.472
ಕೋಲ್ಕತ್ತ	10	4	6	0	8	-0.103
ಹೈದರಾಬಾದ್	10	4	6	0	8	-0.472
ಡೆಲ್ಲಿ	10	4	6	0	8	-0.529

ಭಾನುವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	511

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಶಮಿ	ಗುಜರಾತ್	19

‘ಸಿರಾಜ್ ತಂತ್ರ ವಿಫಲಗೊಳಿಸಿದ್ದೇ ಜಯದ ಗುಟ್ಟು’

ನವದೆಹಲಿ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮೊಹಮ್ಮದ್ ಸಿರಾಜ್ ಈ ಸಲದ ಐಪಿಎಲ್‌ನಲ್ಲಿ ಮೊದಲ ಪವರ್‌ಪ್ಲೇ ಹಂತದಲ್ಲಿ ಅತ್ಯಂತ ಯಶಸ್ವಿ ಬೌಲರ್ ಆಗಿದ್ದಾರೆ.


ಆದರೆ ಶನಿವಾರ ಫಿರೋಜ್ ಶಾ ಕೋಟ್ಲಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಫೀಲ್ ಸಾಲ್ಟ್ ಅವರನ್ನು ಕೆಣಕಿದ ಸಿರಾಜ್ ದಂಡ ತೆತ್ತರು. ಸಾಲ್ಟ್ ಅವರ ಅಬ್ಬರಕ್ಕೆ ಸಿರಾಜ್ ಸುಸ್ತಾದರು. ಸಿರಾಜ್ ಅವರ ಎಸೆತಗಳಿಗೆ ಬೌಂಡರಿಯಾಚೆ ಕಳಿಸಿದ ಸಾಲ್ಟ್ ಡೆಲ್ಲಿ ತಂಡಕ್ಕೆ ಗೆಲುವಿನ ಕಾಣಿಕೆ ನೀಡಿದರು. ಆರಂಭಿಕ ಓವರ್‌ಗಳಲ್ಲಿ ಸಿರಾಜ್ ಹಾಗೂ ಸಾಲ್ಟ್ ನಡುವೆ ಮಾತಿನ ಚಕಮಕಿ ನಡೆದಿತ್ತು. ಡೆಲ್ಲಿ ತಂಡದ ನಾಯಕ ಡೇವಿಡ್ ವಾರ್ನರ್ ಹಾಗೂ ಅಂಪೈರ್ ಮಧ್ಯಪ್ರವೇಶಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದ್ದರು.

ಪಂದ್ಯದ ನಂತರ ಈ ಕುರಿತು ಮಾತನಾಡಿದ ಸಾಲ್ಟ್, ‘ಎದುರಾಳಿ ತಂಡದ ಅತ್ಯಂತ ಯಶಸ್ವಿ ಬೌಲರ್ ಎಸೆತಗಳನ್ನು ದಂಡಿಸಿದಾಗ ನಮ್ಮ ಬಳಗದ ಡಗ್‌ಔಟ್‌ನಲ್ಲಿರುವ ಆಟಗಾರರ ಆತ್ಮವಿಶ್ವಾಸ ಹೆಚ್ಚುತ್ತದೆ. ನಮ್ಮ ತಂಡದ ಬ್ಯಾಟರ್‌ಗಳ ಆಟವೇ ಇದಕ್ಕೆ ಉತ್ತಮ ಉದಾಹರಣೆ. ಮಿಚೆಲ್ ಮಾರ್ಷ್ ತಾವೆದುರಿಸಿದ ಎರಡನೇ ಎಸೆತವನ್ನೇ ಸಿಕ್ಸರ್‌ಗೆತ್ತಿದರು. ರಿಲಿ ರುಸೊ ಅಪಾರ ಆತ್ಮವಿಶ್ವಾಸದೊಂದಿಗೆ ಕ್ರೀಸ್‌ಗೆ ಬಂದರು’ ಎಂದರು.

ಇಂಗ್ಲೆಂಡ್‌ನ ವಿಕೆಟ್‌ಕೀಪರ್ ಬ್ಯಾಟರ್ ಸಾಲ್ಟ್, 45 ಎಸೆತಗಳಲ್ಲಿ 87 ರನ್ ಗಳಿಸಿದರು. ಇದೇ ಮೊದಲ ಸಲ ಅವರು ಐಪಿಎಲ್‌ನಲ್ಲಿ ಆಡುತ್ತಿದ್ದಾರೆ.

ಮೊಹಮ್ಮದ್ ಸಿರಾಜ್ ತಮ್ಮ ಆರಂಭಿಕ ಎರಡು ಓವರ್‌ಗಳಲ್ಲಿ 28 ರನ್‌ಗಳನ್ನು ಕೊಟ್ಟರು. ವಿಕೆಟ್ ಗಳಿಸಲಿಲ್ಲ. ಅವರಿಗೆ ಎರಡನೇ ಸ್ಪೆಲ್ ಬೌಲಿಂಗ್ ಮಾಡುವ ಅವಕಾಶವನ್ನು ನಾಯಕ ಫಫ್ ಡುಪ್ಲೆಸಿ ನೀಡಲಿಲ್ಲ. ಆರ್‌ಸಿಬಿ ತಂಡವು ನೀಡಿದ್ದ 181 ರನ್‌ಗಳ ಗುರಿಗೆ ಉತ್ತರವಾಗಿ ಡೆಲ್ಲಿ ತಂಡವು 16.4 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 187 ರನ್ ಗಳಿಸಿ ಗೆದ್ದಿತು.

ಬಾಕ್ಸಿಂಗ್: ಸಕೆನ್‌ಗೆ ಆಘಾತ ನೀಡಿದ ದೀಪಕ್



ಹುಸಾಮುದ್ದೀನ್– ಬಿಎಫ್ಐ ಟ್ವಿಟರ್ ಚಿತ್ರ

ತಾಷ್ಕೆಂಟ್, ಉಜ್ಬೆಕಿಸ್ತಾನ (ಪಿಟಿಐ): ಅಮೋಘ ಸಾಮರ್ಥ್ಯ ತೋರಿದ ಭಾರತದ ದೀಪಕ್ ಬೋರಿಯಾ ಅವರು, ಒಲಿಂಪಿಕ್ ಪದಕವಿಜೇತ ಕಜಕಸ್ತಾನದ ಸಕೆನ್ ಬಿಬೊಸಿನೊವ್ ಅವರಿಗೆ ಸೋಲುಣಿಸಿ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಪ್ರೀಕ್ವಾರ್ಟರ್‌ಫೈನಲ್ ತಲುಪಿದರು.

ಇಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ 51 ಕೆ.ಜಿ ವಿಭಾಗದ ಎರಡನೇ ಸುತ್ತಿನ ಬೌಟ್‌ನಲ್ಲಿ ಭಾರತದ ಬಾಕ್ಸರ್ 5–2ರಿಂದ ಟೋಕಿಯೊ ಒಲಿಂಪಿಕ್ ಕಂಚಿನ ಪದಕ ವಿಜೇತ ಸಕೆನ್ ಅವರನ್ನು ಮಣಿಸಿದರು. ಸಕೆನ್ ಅವರು 2021ರ ವಿಶ್ವ ಚಾಂಪಿಯನ್ ಕೂಡ ಆಗಿದ್ದಾರೆ.

ಬೌಟ್‌ನ ಆರಂಭದಲ್ಲಿ ಹಿನ್ನಡೆಯಲ್ಲಿದ್ದ ದೀಪಕ್ ಬಳಿಕ ಪುಟಿದೆದ್ದರು. ಕೊನೆಯ ಮೂರು ನಿಮಿಷಗಳಲ್ಲಿ ನಿಖರ ಪಂಚ್‌ಗಳನ್ನು ನೀಡಿ ಎದುರಾಳಿಗೆ ಸೋಲಿನ ರುಚಿ ತೋರಿಸಿದರು.

ಮುಂದಿನ ಬೌಟ್‌ನಲ್ಲಿ ದೀಪಕ್ ಅವರು ಚೀನಾದ ಜಾಂಗ್ ಜಿಯಮವೊ ಎದುರು ಕಣಕ್ಕಿಳಿಯುವರು.

ಎಂಟರಘಟ್ಟಕ್ಕೆ ಹುಸಾಮುದ್ದೀನ್: ಉತ್ತಮ ಲಯದಲ್ಲಿರುವ ಮೊಹಮ್ಮದ್ ಹುಸಾಮುದ್ದೀನ್ ಅವರು ಚಾಂಪಿಯನ್‌ಷಿಪ್‌ನ ಕ್ವಾರ್ಟರ್‌ಫೈನಲ್ ತಲುಪಿದರು.

57 ಕೆಜಿ ವಿಭಾಗದ 16ರ ಘಟ್ಟದ ಬೌಟ್‌ನಲ್ಲಿ ಭಾನುವಾರ ಹುಸಾಮುದ್ದೀನ್ 5–0ಯಿಂದ ರಷ್ಯಾದ ಸವಿನ್ ಎಡ್ವರ್ಡ್ ಸವಾಲು ಮೀರಿದರು.

ಸ್ಪರ್ಧೆಯ ಆರಂಭದಿಂದಲೂ ಪಾರಮ್ಯ ಮೆರೆದ ಭಾರತದ ಬಾಕ್ಸರ್, ಯಾವುದೇ ಹಂತದಲ್ಲೂ ಎದುರಾಳಿ ಚೇತರಿಸಿಕೊಳ್ಳಲು ಅವಕಾಶ ಮಾಡಿಕೊಡಲಿಲ್ಲ. ಎರಡು ಮತ್ತು ಮೂರನೇ ಸುತ್ತುಗಳಲ್ಲಿ ಜಾಣತನ ಮತ್ತು ಚುರುಕಿನ ಪಂಚ್‌ಗಳಿಂದ ಹುಸಾಮುದ್ದೀನ್, ರಷ್ಯಾ ಸ್ಪರ್ಧಿಯನ್ನು ಕಂಗೆಡಿಸಿದರು.

ಎಂಟರಘಟ್ಟದ ಬೌಟ್‌ನಲ್ಲಿ ಹುಸಾಮುದ್ದೀನ್ ಅವರಿಗೆ ಬಲ್ಗೇರಿಯಾದ ಜೇವಿಯರ್ ಡಿಯಜ್ ಇಬನೆಜ್ ಸವಾಲು ಎದುರಾಗಿದೆ.

ಸುಮಿತ್ ಕುಂದು (75 ಕೆಜಿ) ಮತ್ತು ನರೇಂದ್ರ ಗೆಹ್ಲೋಟ್ (92 + ಕೆಜಿ) ತಮ್ಮ ಎರಡನೇ ಸುತ್ತಿನ ಬೌಟ್‌ಗಳಲ್ಲಿ ಸೋತರು.

ಬ್ಯಾಡ್ಮಿಂಟನ್: ಏಷ್ಯನ್ ಕ್ರೀಡಾಕೂಟದ ಆಯ್ಕೆ ಟ್ರಯಲ್ಸ್

ಕಿದಂಬಿ ಶ್ರೀಕಾಂತ್, ಅಶ್ಮಿತಾಗೆ ಅಗ್ರಸ್ಥಾನ

ಹೈದರಾಬಾದ್ (ಪಿಟಿಐ): ಕಿದಂಬಿ ಶ್ರೀಕಾಂತ್ ಮತ್ತು ಅಶ್ಮಿತಾ ಚಲಿಹಾ ಅವರು ಮುಂಬರುವ ಏಷ್ಯನ್ ಕ್ರೀಡಾಕೂಟಕ್ಕೆ ಭಾರತ ತಂಡದ ಆಯ್ಕೆಗಾಗಿ ಭಾರತ ಬ್ಯಾಡ್ಮಿಂಟನ್ ಸಂಸ್ಥೆ (ಬಿಎಐ) ಆಯೋಜಿಸಿದ್ದ ಟ್ರಯಲ್ಸ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗಗಳಲ್ಲಿ ಅಗ್ರಸ್ಥಾನ ಪಡೆದುಕೊಂಡರು.

ಶ್ರೀಕಾಂತ್ ಮತ್ತು ಅಶ್ಮಿತಾ ಅವರು ನಾಲ್ಕು ದಿನ ನಡೆದ ಟ್ರಯಲ್ಸ್‌ನಲ್ಲಿ ತಾವಾಡಿದ ಆರೂ ಪಂದ್ಯಗಳನ್ನು ಗೆದ್ದು ಅಜೇಯ ಸಾಧನೆ ಮಾಡಿದರು. ಭಾನುವಾರ ನಡೆದ ಪಂದ್ಯದಲ್ಲಿ ಶ್ರೀಕಾಂತ್ 21–13, 21–16 ರಲ್ಲಿ ಸಿದ್ಧಾರ್ಥ್ ಗುಪ್ತಾ ವಿರುದ್ಧವೂ, 21–15, 21–14 ರಲ್ಲಿ ಲಕ್ಷ್ಯ ಸೇನ್ ವಿರುದ್ಧವೂ ಗೆದ್ದರು. ಶನಿವಾರ ನಡೆದಿದ್ದ ಪಂದ್ಯದಲ್ಲಿ ಅವರು 22-24, 21-13, 21-14 ರಲ್ಲಿ ಮಿಥುನ್ ಮಂಜುನಾಥ್ ಅವರನ್ನು ಮಣಿಸಿದ್ದರು.

ಒಂದು ಪಂದ್ಯವನ್ನು ಸೋತ ಲಕ್ಷ್ಯ ಸೇನ್ ಟ್ರಯಲ್ಸ್‌ನಲ್ಲಿ ಎರಡನೇ ಸ್ಥಾನ ಪಡೆದರೆ, ಎರಡು ಪಂದ್ಯಗಳನ್ನು ಸೋತ ಮಿಥುನ್ ಮೂರನೇ ಸ್ಥಾನ ಗಳಿಸಿದರು.

ಮಹಿಳೆಯರ ವಿಭಾಗದಲ್ಲಿ ಅಶ್ಮಿತಾ ಮತ್ತು ಅನುಪಮಾ ಉಪಾಧ್ಯಾಯ ಅವರು ಕ್ರಮವಾಗಿ ಮೊದಲ ಎರಡು ಸ್ಥಾನಗಳನ್ನು ಪಡೆದುಕೊಂಡರು. ಮಾಳವಿಕಾ ಬನ್ಸೋದ್ ಮೂರನೇ ಹಾಗೂ ಉನ್ನತಿ ಹೂಡಾ ನಾಲ್ಕನೇ ಸ್ಥಾನ ಗಳಿಸಿದರು.

ಟ್ರಯಲ್ಸ್‌ನಲ್ಲಿ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಒಂಬತ್ತು ಹಾಗೂ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಎಂಟು ಮಂದಿ ಕಣಕ್ಕಿಳಿದಿದ್ದರು. ಪ್ರತಿ ವಿಭಾಗದಲ್ಲಿ ತಲಾ ಮೂವರು ತಂಡಕ್ಕೆ ಆಯ್ಕೆಯಾಗಲಿದ್ದಾರೆ.

ಅಗ್ರಮಾನ್ಯ ಆಟಗಾರ ಎಚ್‌.ಎಸ್.ಪ್ರಣಯ್, ಮಾಜಿ ವಿಶ್ವ ಚಾಂಪಿಯನ್ ಪಿ.ವಿ.ಸಿಂಧು, ಏಷ್ಯನ್ ಚಾಂಪಿಯನ್ನರಾದ ಚಿರಾಗ್ ಶೆಟ್ಟಿ–ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ, ಮಹಿಳಾ ಡಬಲ್ಸ್ ಆಟಗಾರ್ತಿಯರಾದ ಗಾಯತ್ರಿ ಗೋಪಿಚಂದ್ ಮತ್ತು ಟ್ರೀಸಾ ಜೋಳಿ ಅವರು ವಿಶ್ವ ರ‍್ಯಾಂಕಿಂಗ್‌ನ ಆಧಾರದಲ್ಲಿ ಏಷ್ಯನ್ ಕ್ರೀಡಾಕೂಟದ ತಂಡಕ್ಕೆ ನೇರವಾಗಿ ಆಯ್ಕೆಯಾಗಿದ್ದಾರೆ.

ಅಥ್ಲೆಟಿಕ್ಸ್: ದಾಖಲೆ ಉತ್ತಮಪಡಿಸಿಕೊಂಡ ಅವಿನಾಶ್ ಸಬ್ಳೆ

ಪ್ರವೀಣ್, ಪಾರುಲ್ ರಾಷ್ಟ್ರೀಯ ದಾಖಲೆ





ಪಾರುಲ್ ಚೌಧರಿ, ಅವಿನಾಶ್ ಸಬ್ಳೆ ಮತ್ತು ಪ್ರವೀಣ್ ಚಿತ್ರವೇಲ್– ಟ್ವಿಟರ್ ಚಿತ್ರ

ನವದೆಹಲಿ (ಪಿಟಿಐ): ಭಾರತದ ಅಥ್ಲೀಟ್‌ಗಳಾದ ಪಾರುಲ್ ಚೌಧರಿ ಮತ್ತು ಅವಿನಾಶ್ ಸಬ್ಳೆ ಅವರು ಕ್ರಮವಾಗಿ ಮಹಿಳೆಯರ ಮತ್ತು ಪುರುಷರ 5000 ಮೀಟರ್ಸ್ ಓಟದಲ್ಲಿ ರಾಷ್ಟ್ರೀಯ ದಾಖಲೆ ಸ್ಥಾಪಿಸಿದರೆ, ಪ್ರವೀಣ್ ಚಿತ್ರವೇಲ್ ಅವರು ಟ್ರಿಪಲ್ ಜಂಪ್‌ನಲ್ಲಿ ಹೊಸ ದಾಖಲೆ ಬರೆದರು.

ಕ್ಯೂಬಾದ ಹವಾನಾದಲ್ಲಿ ಶನಿವಾರ ನಡೆದ ಅಥ್ಲೆಟಿಕ್ ಕೂಟದಲ್ಲಿ ಪ್ರವೀಣ್ 17.37 ಮೀ. ದೂರ ಜಿಗಿದು ಅಗ್ರಸ್ಥಾನ ಪಡೆದರು. ವಿಶ್ವ ಅಥ್ಲೆಟಿಕ್ಸ್‌ನಲ್ಲಿ ‘ಎಫ್’ ಕೆಟಗರಿಯ ಸ್ಪರ್ಧೆ ಇದಾಗಿದೆ.

ರಂಜಿತ್ ಮಹೇಶ್ವರಿ 2016 ರಲ್ಲಿ ಮಾಡಿದ್ದ ದಾಖಲೆಯನ್ನು (17.30 ಮೀ.) ಪ್ರವೀಣ್ ಮುರಿದರು. ಮಾತ್ರವಲ್ಲ, 2023 ರಲ್ಲಿ ಬುಡಾಪೆಸ್ಟ್‌ನಲ್ಲಿ ನಡೆಯಲಿರುವ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆದರು. ವಿಶ್ವ ಅಥ್ಲೆಟಿಕ್ ಕೂಟಕ್ಕೆ ಅರ್ಹತಾ ಮಟ್ಟವನ್ನು 17.20 ಮೀ.ಗೆ ನಿಗದಿಪಡಿಸಲಾಗಿದೆ.

21 ವರ್ಷದ ಪ್ರವೀಣ್ ಅವರ ಈ ಹಿಂದಿನ ವೈಯಕ್ತಿಕ ಶ್ರೇಷ್ಠ ಸಾಧನೆ 17.18 ಮೀ. ಆಗಿತ್ತು. ಕಳೆದ ವರ್ಷ ಚೆನ್ನೈನಲ್ಲಿ ನಡೆದಿದ್ದ ಅಂತರರಾಜ್ಯ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಈ ದೂರ ಕಂಡುಕೊಂಡಿದ್ದರು. ಚಿತ್ರವೇಲ್ ಅವರು ಕ್ಯೂಬಾದಲ್ಲಿ ಅದೇ ದೇಶದ ಕೋಚ್ ಯೊಯಂಡ್ರಿ ಬೆತನ್ಸೊಸ್ ಅವರ ಮಾರ್ಗದರ್ಶನದಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಇದೇ ವಿಭಾಗದಲ್ಲಿ ಸ್ಪರ್ಧಿಸಿದ ಭಾರತದ ಟಿ. ಸೆಲ್ವ ಪ್ರಭು 16.58 ಮೀ. ಸಾಧನೆಯೊಂದಿಗೆ ನಾಲ್ಕನೇ ಸ್ಥಾನ ಪಡೆದರು. 20 ವರ್ಷದೊಳಗಿನವರ ವಿಭಾಗದಲ್ಲಿ ಇದು ರಾಷ್ಟ್ರೀಯ ದಾಖಲೆಯಾಗಿದೆ. ಅವಿನಾಶ್ ಮತ್ತು ಪಾರುಲ್ ಅವರು ಲಾಸ್ ಏಂಜಲೀಸ್‌ನಲ್ಲಿ ಶನಿವಾರ ನಡೆದ ಸೌಂಡ್ ರನ್ನಿಂಗ್ ಟ್ರ್ಯಾಕ್ ಕೂಟದಲ್ಲಿ ಹೊಸ ದಾಖಲೆ ಬರೆದರು.

ಅವಿನಾಶ್ 13 ನಿ. 19.30 ಸೆ.ಗಳಲ್ಲಿ ಗುರಿ ತಲುಪಿದರಲ್ಲದೆ, ತಮ್ಮದೇ ಹೆಸರಿನಲ್ಲಿದ್ದ ದಾಖಲೆಯನ್ನು ಆರು ಸೆಕೆಂಡುಗಳಿಂದ ಉತ್ತಮಪಡಿಸಿಕೊಂಡರು. 13 ನಿ. 25.65 ಸೆ. ಅವರ ಈ ಹಿಂದಿನ ಶ್ರೇಷ್ಠ ಸಾಧನೆಯಾಗಿತ್ತು. 3,000 ಮೀ. ಸ್ಟೀಪಲ್ ಚೇಸ್ ಸ್ಪರ್ಧೆಯ ರಾಷ್ಟ್ರೀಯ ದಾಖಲೆ ಕೂಡಾ ಸಬ್ಳೆ ಹೆಸರಿನಲ್ಲಿದೆ.

ಮಹಿಳೆಯರ ವಿಭಾಗದಲ್ಲಿ 28 ವರ್ಷದ ಪಾರುಲ್ 15 ನಿ. 10.35 ಸೆ.ಗಳಲ್ಲಿ ಗುರಿ ತಲುಪಿದರು. ಪ್ರೀಜಾ ಶ್ರೀಧರನ್ 13 ವರ್ಷಗಳ ಹಿಂದೆ ಮಾಡಿದ್ದ ದಾಖಲೆಯನ್ನು ಅವರು ಮುರಿದರು. 2010ರ ಏಷ್ಯನ್ ಕ್ರೀಡಾಕೂಟದಲ್ಲಿ ಪ್ರೀಜಾ 15 ನಿ. 15.89 ಸೆ.ಗಳಲ್ಲಿ ಗುರಿ ತಲುಪಿದ್ದು ಇದುವರೆಗಿನ ದಾಖಲೆಯಾಗಿತ್ತು. ಪಾರುಲ್ ಮತ್ತು ಸಬ್ಳೆ ಅವರು ಇನ್‌ಸ್ಪೈರ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೋರ್ಟ್ಸ್ (ಐಐಎಸ್) ಪ್ರಾಯೋಜಕತ್ವದಲ್ಲಿ ಅಮೆರಿಕದಲ್ಲಿ ತರಬೇತಿ ಪಡೆಯುತ್ತಿದ್ದಾರೆ.

‘13 ವರ್ಷಗಳ ಹಿಂದಿನ ರಾಷ್ಟ್ರೀಯ ದಾಖಲೆ ಮುರಿಯಲು ಸಾಧ್ಯವಾಗಿರುವುದು ಸಂತಸದ ವಿಷಯ. ಏಪ್ರಿಲ್‌ನಿಂದಲೂ ಅಮೆರಿಕದಲ್ಲಿ ತರಬೇತಿ ಪಡೆಯುತ್ತಿದ್ದೇನೆ. ಇಲ್ಲಿನ ತರಬೇತಿ ನನ್ನ ಪ್ರದರ್ಶನ ಉತ್ತಮಪಡಿಸಿಕೊಳ್ಳುವ ನಿಟ್ಟಿನಲ್ಲಿ ಹೆಚ್ಚಿನ ನೆರವು ನೀಡಿದೆ’ ಎಂದು ಪಾರುಲ್ ಪ್ರತಿಕ್ರಿಯಿಸಿದ್ದಾರೆ

ಮ್ಯಾಡ್ರಿಡ್ ಓಪನ್ ಟೆನಿಸ್: ಸಬಲೆಂಕಾ ಚಾಂಪಿಯನ್



ಟ್ರೋಫಿಯೊಂದಿಗೆ ಅರಿನಾ ಸಬಲೆಂಕಾ –ಎಎಫ್‌ಪಿ ಚಿತ್ರ

ಮ್ಯಾಡ್ರಿಡ್ (ಎಪಿ): ಬೆಲಾರೂಸ್‌ನ ಅರಿನಾ ಸಬಲೆಂಕಾ ಅವರು ಮ್ಯಾಡ್ರಿಡ್ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಚಾಂಪಿಯನ್ ಆದರು.

ಶನಿವಾರ ನಡೆದ ಫೈನಲ್‌ನಲ್ಲಿ ವಿಶ್ವದ ಎರಡನೇ ರ‍್ಯಾಂಕ್‌ನ ಆಟಗಾರ್ತಿ ಸಬಲೆಂಕಾ 6–3, 3–6, 6–3 ರಲ್ಲಿ ಅಗ್ರ ರ‍್ಯಾಂಕ್‌ನ ಆಟಗಾರ್ತಿ ಪೋಲೆಂಡ್‌ನ ಇಗಾ ಶ್ವಾಂಟೆಕ್ ಅವರನ್ನು ಮಣಿಸಿದರು. 2021ರಲ್ಲೂ ಅವರು ಇಲ್ಲಿ ಪ್ರಶಸ್ತಿ ಜಯಿಸಿದ್ದರು. ಎರಡು ವಾರಗಳ ಹಿಂದೆ ಸ್ಟಟ್‌ಗರ್ಟ್‌ನಲ್ಲಿ ನಡೆದಿದ್ದ ಟೂರ್ನಿಯ ಫೈನಲ್‌ನಲ್ಲಿ ತಮಗೆ ಎದುರಾಗಿದ್ದ ಸೋಲಿಗೆ ಸಬಲೆಂಕಾ ಮುಯ್ಯಿ ತೀರಿಸಿಕೊಂಡರು. ಕ್ಲೇ ಕೋರ್ಟ್‌ನಲ್ಲಿ ಈ ಹಿಂದೆ ಇವರು ಮೂರು ಸಲ ಎದುರಾಗಿದ್ದು, ಬೆಲಾರೂಸ್‌ನ ಆಟಗಾರ್ತಿ ಒಂದೂ ಸೆಟ್ ಗೆದ್ದಿರಲಿಲ್ಲ. ಆದರೆ ಶನಿವಾರ ಶಿಸ್ತಿನ ಆಟವಾಡಿ ಗೆಲುವು ಒಲಿಸಿಕೊಂಡರು.

‘ಡಬ್ಲ್ಯುಟಿಎ 1000’ ಟೂರ್ನಿಯ ಫೈನಲ್‌ನಲ್ಲಿ ವಿಶ್ವದ ಮೊದಲ ಎರಡು ರ‍್ಯಾಂಕ್‌ನ ಆಟಗಾರ್ತಿಯರು ಪೈಪೋಟಿ ನಡೆಸಿದ್ದು 2014ರ ಬಳಿಕ ಇದೇ ಮೊದಲು. 2014 ರ ಮಿಯಾಮಿ ಓಪನ್ ಫೈನಲ್‌ನಲ್ಲಿ ಅಂದಿನ ಅಗ್ರ ರ‍್ಯಾಂಕ್‌ನ ಆಟಗಾರ್ತಿ ಸೆರೆನಾ ವಿಲಿಯಮ್ಸ್ ಅವರು ಎರಡನೇ ರ‍್ಯಾಂಕ್‌ನ ಲಿ ನಾ ವಿರುದ್ಧ ಸೆಣಸಾಡಿದ್ದರು.

ಪುರುಷರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಕಾರ್ಲೋಸ್ ಅಲ್ಕರಾಜ್ ಮತ್ತು ಜಾನ್ ಲೆನಾರ್ಡ್ ಸ್ಟ್ರಫ್ ಎದುರಾಗಲಿದ್ದಾರೆ.

ಟೈಗರ್ ಕಪ್ ಡಿಪಿಎಸ್‌ಗೆ ಜಯ

ಬೆಂಗಳೂರು: ಡಿಪಿಎಸ್ ಈಸ್ಟ್ ತಂಡವು, ಆರುಷ್ ಜೈನ್ (52) ಅವರ ಅರ್ಧಶತಕದ ನೆರವಿನಿಂದ ಟೈಗರ್ ಕಪ್ 14 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯಲ್ಲಿ ಗೆದ್ದಿತು. ಅಲ್ಟಾಯರ್ ಸ್ಪೋರ್ಟ್ಸ್ ಗ್ರೀನ್ ಪಾರ್ಕ್ ಅಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಡಿಪಿಎಸ್ 26 ರನ್‌ಗಳಿಂದ ಕ್ರೀಡಾ ಕ್ಷೇತ್ರ ತಂಡವನ್ನು ಮಣಿಸಿತು.

ಸಂಕ್ಷಿಪ್ತ ಸ್ಕೋರ್: ಡಿಪಿಎಸ್ ಈಸ್ಟ್ 30 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 148 (ಆರುಷ್ ಜೈನ್ 52, ಶಹಾನ್ ಶಾದಾಬ್ 28, ಅಭಿನವ್ ಕುಲಕರ್ಣಿ 22, ಸರ್ವಾರ್ಥ 33ಕ್ಕೆ 2, ಗೋಕುಲ್ ಸಾಯ್ 33ಕ್ಕೆ 2) ಕ್ರೀಡಾ ಕ್ಷೇತ್ರ 29.4 ಓವರ್‌ಗಳಲ್ಲಿ 122. ಫಲಿತಾಂಶ: ಡಿಪಿಎಸ್‌ಗೆ 26 ರನ್‌ಗಳ ಗೆಲುವು

ಪಿಇಎಸ್‌ಸಿಎ 30 ಓವರ್‌ಗಳಲ್ಲಿ 5 ವಿಕೆಟ್‌ಗೆ 149 (ಕೃಷ್ಣಕುಮಾರ್ 40, ಅಕ್ಷಜ್ ಕಥೂರಿಯಾ 29) ಸಿಸಿಇ 21.3 ಓವರ್‌ಗಳಲ್ಲಿ 66 (ಅಕ್ಷಜ್ ಕಥೂರಿಯಾ 13ಕ್ಕೆ 4, ಫಹೀಂ 13ಕ್ಕೆ 4) ಫಲಿತಾಂಶ: ಪಿಇಎಸ್‌ಸಿಎಗೆ 83 ರನ್‌ಗಳ ಗೆಲುವು